ಸ್ಥಾಪನೆ : ೧೮೬೫

1966

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೬೯



ಶತಮಾನೋತ್ಸವ ಸಂಪುಟ

(ಎಪ್ರಿಲ್ ೧೯೬೫ ರಿಂದ)

ವರ್ಷ 1966

ಶ್ರೀ ಚನ್ನಬಸಪ್ಪನವರು

(ಗದಿಗಿಪ್ಪ–ಗಲಗಿ)

ಪೆಯ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಶರಬೇತಿ ವಿದ್ಯಾಲಯ

ಪೆಪ್ಪೂಟಿ ಚನ್ನಬಸಪ್ಪ ವೃತ್ತ, ರೊದ್ದರಪ್ಪ, ಧಾರವಾಡ – ೮

ಶಾಲಾ ಪತ್ರಿಕೆ.

ಪದ್ಯ.

ಶ್ರೀಯುವಿದ್ಯಾಗುರುವರ್ಯರಂಘ್ರಿ ಶಯಂ ಸಚ್ಛಿಕ್ಷಣೋತ್ಥ ಪ್ರಜಾಂ
ಪ್ರಸುತ್ಯಂ ಪ್ರತಿಮಾಸದಾವಿಗೊಲವಿಂದೀಪತ್ರಮಂ ಮುದ್ರಿಸಿ ॥
ಎಂದಿತ್ತಪ್ಪೋದುವರ್ಗಸುಗುಣಂ ಹೋರಲ್ಕೆ ಕೈಕೊಂಬುದೈ(೧)॥
ಎದುಂದೋಷವತಿದ್ದ ವೇಳ್ವುದುಧರಜ್ಞಾನಾಭಿವೃದ್ಧಿಪ್ರಯಾ

ಪುಸ್ತಕ ೪೨೩] ಜನವರಿ ೧೯೦೬. [ಸಂಚಿಕೆ ೧

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾತ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳ ಒಂಬತ್ತನೇ ತಾರೀಖಿನ ದಿವಸ ನಮ್ಮ ಲಾಖೆಯ ಡೈರೆಕ್ಟರ ದೊರೆಗಳಾದ ಮೆಹಬ್ಬಾನ ಜಾ ಎಲಸ ಸಾಹೇಬರು ಧಾರವಾಡಕ್ಕೆ ಬಂದಿದ್ದರು. ಧಾರ ಡದಲ್ಲಿಯು ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಈ ರುವ ಇಮಾರತು ವಿದ್ಯಾರ್ಥಿಗಳಿಗೆ ಇರಲಿಕ್ಕೂ ಇತರ ಕೆ ಸಗಳಿಗೂ ಸಾಲುವದಿಲ್ಲವಾದ್ದರಿಂದ ಅದರ ಹೊಂದಿಗಿರು ಜಕಾತಿಯವರ ಬಂಗಲೆಯನ್ನು ತೆಗೆದುಕೊಳ್ಳುವದೆಂದು ತಾತ್ಪಾಗಿರುವದು. ಹಾಗು ಹೆಣ್ಣು ಮಕ್ಕಳ ಟ್ರೇನಿಂಗಕಾ ಜದ ಹೊಸ ಕಟ್ಟಡವನ್ನು ಕಟ್ಟುವ ಸ್ಥಳವನ್ನು ಗೊ ಪಡಿಸಬೇಕಾಗಿತ್ತು. ಇವೆರಡೂ ಕೆಲಸಗಳಿಗಾಗಿ ಸಾಹೇ ಬಹಾದೂರವರು ಬಂದಿದ್ದರು. ಅವೆರಡು ಕೆಲಸಗಳ ತೀರಿಸಿಕೊಂಡು ಕಾಲೇಜಕ್ಕೆ ಜೋಡಿಸಲ್ಪಟ್ಟ ಹೊಲ ನ್ನು ನೋಡಿಕೊಂಡು ಮರಳಿ ಪುಣೆಗೆ ದಯಮಾಡಿಸಿದ ಇನ್ನು ತೀವ್ರವೇ ಇಮಾರತುಗಳನ್ನು ಕಟ್ಟುವ ಕೆಲಸ ನಡೆಯುವದೆಂದು ತೋರುವದು.

ಈ ಸಾರೆ ಟ್ರೇನಿಂಗಕಾಲೇಜದಲ್ಲಿ ಪಗಾರೀ ಬಿನ್ನ ಪ

ಗೌರೀ ಕೂಡಿ ಸುಮಾರು ಎಂಬತ್ತೈದು ಜನ ಉಮೇದಿವಾರರನ್ನು ತೆಗೆದು ಕೂಂಡರು.

ಧಾರವಾಡದಲ್ಲಿ ಸರಕಾರದವರು ರೈತರ ಎಂಬತ್ತು ಎಕರೆ ಭೂಮಿಯನ್ನು ಲಾವಣಿ ಹಿಡಿದು ಸ್ವಂತ ಕಮತವಿಟ್ಟು ಒಕ್ಕಲತನ ನಡಿಸುವದು ಎಲ್ಲರಿಗೂ ಗೊತ್ತುಂಟಷ್ಟೆ. ಒಕ್ಕಲತನವನ್ನು ಕೈಕೊಂಡಂಥ ಅಥವಾ ದೇಶದ ಸಾಂಪತ್ತಿ ಕ ಸ್ಥಿತಿಯನ್ನು ಸುಧಾರಿಸಲಪೇಕ್ಷಿಸುವವರು ಈ ಪಾರ್ಕಿಗೆ ಬಂದು ಅಲ್ಲಿ ನಡೆದಿರುವ ಕೆಲಸವನ್ನು ಕಣ್ಮುಟ್ಟಿ ನೋಡಿ ಹೋಗಬೇಕು. ನಾವು ಒಂದು ದಿವಸ ಸಮಗ್ರ ಹೋಗಿ ನೋಡಿದಾಗ ಕಂಡು ಬಂದ ಒಂದು ಸೋಜಿಗದ ಪ್ರಯೋಗವನ್ನು ಇದರಡಿಯಲ್ಲಿ ಬರೆದಿದ್ದೇವೆ ಇದು ಒಕ್ಕಲಿಗರಿಗೂ ಮಾಸ್ತರರಿಗೂ ಸರಿಯಾಗಿ ಪ್ರಯೋಜನಕರವಾಗಿರುವದು.

ಒಟ್ಟಿಗೆ ಇಪ್ಪುವ ಎಂಬತ್ತು ಎಕರೆಗಳಲ್ಲಿ ಅರ್ಧ ಅರ್ಧ ಎಕರೆಗಳ ತುಂಡುಗಳನ್ನು ಮಾಡಿರುವರು. ಅವುಗಳಲ್ಲಿ. ಅರ್ಧ ತುಂಡುಗಳನ್ನು ಒಳಿತಾಗಿ ಉತ್ತು ಹೆಕ್ಕಿ ಮಣ್ಣು ಮಾಡಿದ್ದಾರೆ. ಉಳಿದ ಅರ್ಧ ತುಂಡುಗಳನ್ನು ಸಾಧಾರಣ ಮಣ್ಣಾಗುವಂತೆ ಮಾಡಿರುವರು. ಒಂದು ಪದಾರ್ಥವನ್ನು ಹೆಚ್ಚು ಮಣ್ಣಾದ ಒಂದು ತುಂಡನಲ್ಲಿಯೂ, ಕಡಿಮೆ ಮಣ್ಣಾದ ಒಂದು ತುಂಡಿನಲ್ಲಿಯೂ ಬಿತ್ತುವರು. ಯಾವ ತುಂಡಿನಲ್ಲಿ ಹೆಚ್ಚು ಬೆಳೆಯುವದೆಂಬದನ್ನು ಪರೀಕ್ಷಿಸುವರು. ಹತ್ತಿ, ಜೋಳ, ಅಗಸಿ, ಕಡ್ಲಿ ಮುಂತಾದವುಗಳ ಹಲವು ಜಾತಿಗಳನ್ನು ಈ ಫಾರ್ಮಿನಲ್ಲಿ ನೋಡಬಹುದು. ಅದರಲ್ಲಿ ಹತ್ತಿಯ ಜಾತಿಗಳು ಅನೇಕ ಉಂಟು ಈ ಅನೇಕಜಾತಿಯ ಹತ್ತಿಯ ಗುಣಧರ್ಮಗಳಾದರೂ ಭಿನ್ನವಿರಬೇಕೆಂಬದು ಸಹಜವು. ಕೆಲವು ಜಾತಿಯ ಹತ್ತಿಯು ಹೆಚ್ಚು ಬಿಳುಪಾಗಿ ಇರುವದು. ಕೆಲವು ಜಾತಿಯ ಹತ್ತಿಯ ಎಳೆಗಳು ಉದ್ದವಾಗಿರುವವು. ಕೆಲವು ಜಾತಿಯ ಹತ್ತಿಯು ಮಿದುವಾಗಿರುವದು. ಒಂದರಲ್ಲಿದ ಗುಣಗಳು ಮತ್ತೊಂದರಲ್ಲಿರುವದಿ

ಲ್ಲ. ಇವೆಲ್ಲ ಗುಣಗಳನ್ನು ವಿಕೀಕರಿಸುವದಕ್ಕಾಗಿ ಅವರು ಯತ್ನಿಸುತ್ತಾರೆ ಆದಕ್ಕಾಗಿ ಅವರು ಈಗ ನಡಿಸಿರುವ ಪ್ರಯೋಗವು ಯಾವದೆಂದರೆ:—

ಒಂದು ಜಾತಿಯ ಹತ್ತಿಯು ಹೂವಾದ ಕೂಡಲೆ, ಅದರೊಳಗಿನ ಪುಂಕೇಸರಗಳನ್ನೆಲ್ಲಾ ಹೂವಿನ ಇತರ ಭಾಗಕ್ಕೂ ಸ್ತ್ರೀಕೇಸರಕ್ಕೂ ಬಕ್ಕಿ ಹತ್ತದಂತೆ ತೆಗದು ಬಿಡುತ್ತಾರೆ. ಬಳಿಕ ಬೇರೊಂದು ಜಾತಿಯ ಹತ್ತಿಯ ಹೂವಿನೊಳಗಿನ ಪುಂಕೇಸರದ ಎಳಗಳನ್ನು ತಂದು ಮೊದಲಿನ ಜಾತಿಯ ಹತ್ತಿಯ ಪಕ್ವವಾದ ಸ್ತ್ರೀಕೇಸರದ ಮೇಲಿಟ್ಟು ಆ ಎಲ್ಲ ಭಾಗಕ್ಕೂ ಗಾಳಿ ತಗಲದಂತೆ ಒಂದು ಕಾಗದದ ಲಕೋಟೆಯನ್ನು ಜಬ್ಬು ಹಾಕಿ ಮುಚ್ಚುತ್ತಾರೆ. ಮಕರಂದವು ಹಾರಿ ಹೋಗಬಾರದೆಂಬದೇ ಈ ಕೃತಿಯ ಮುಖ್ಯೋದ್ದೇಶವು. ಬಳಿಕ ಮೂರು ದಿವಸ ಆ ಕಾಗದದ ಚೀಲಕ್ಕೆ ಕೈ ಹಚ್ಚುವದಿಲ್ಲ. ನಾಲ್ಕನೇ ದಿವಸ ಅದರ ತಳವನ್ನು ಹರಿದು ಅದರೊಳಗೆವಾಯುವಿಗೆ ಸಂಚರಿಸಲಿಕ್ಕೆ ಅನುವು ಮಾಡಿಕೊಡುತ್ತಾರೆ. ತರುವಾಯ ನಾಲ್ಕು ದಿವಸ ಬಿಡಲು, ಆ ಹೂವಿನಲ್ಲಿ ಕಾಯಾಗುವವು. ಆ ಮೇಲೆ ಆ ಕಾಗದದ ಚೀಲದ ಪ್ರಯೋಜನವೇನೂ ಉಳಿಯುವದಿಲ್ಲಾದ್ದರಿಂದ ಅದನ್ನು ಹರಿದು ಬಿಡುವರು. ಹೀಗೆ ಮಿಶ್ರ ಬೀಜದಿಂದ ತಯಾರಾದ ಕಾಯಿಗಳಿಗೆ ಚೀಟೀ ಕಟ್ಟುವರು. ಬಳಿಕ ಯಾವ ಎರಡು ಜಾತಿಯ ಮಿಶ್ರಣದಿಂದ ಫಲವಾಗಿರುವದೋ, ಅಂಥ ಜಾತಿಯ ತೊಳಿಗಳನ್ನೇ ಬೇರೆ ತೆಗೆಯುವರು. ಈ ತೊಳಿಗಳೊಳಗಿನ ಹತ್ತಿಯು ಇವುಗಳ ಮೂಲಗಳಿಗಿಂತ ಗಟ್ಟಿಯಾಗಿರಬೇಕೆಂದು ಇವರ ಮನೋದಯವು. ಆದರೆ ಇನ್ನೂ ತೊಳಿಗಳು ಕೈಗೆ ಬಂದಿಲ್ಲವಾದ ಕಾರಣ ಈ ಮಿಶ್ರ ಹತ್ತಿಯ ಗುಣಧರ್ಮಗಳನ್ನು ಕುರಿತು ನಿರ್ಣಯಿಸಲಿಕ್ಕೆ ಇನ್ನೂ ಅವಕಾಶವುಂಟು. ಆದರೂ ಕತ್ತೆ ಕುದುರೆಗಳ ಸಂಬಂಧದಿಂದ ಉಂಟಾದ ಹೇಸರಗತ್ತೆಯಂಬ

ಜಾತಿಯು ವಿಶೇಷ ಗಟ್ಟಮುಟ್ಟಯಾದದ್ದಿರುವಿಗೆಂಬದು ಅನುಭವಿಸಿದ್ದ ಸಂಗತಿಯಾಗಿದೆ.

ಮುಂದೆ ಉತ್ಪನ್ನವಾಗುವ ಹತ್ತಿಯು ಗುಣಧರ್ಮಗಳಲ್ಲಿ ಮಿಶ್ರವಾದ ಎರಡೂ ಜಾತಿಯ ಗುಣಧರ್ಮಗಳ ಸಂಗ, ಹವಾಗಿದ್ದರೆ ನಮ್ಮ ಲಾಭಕ್ಕೆ ಎನೆಯೇ ಇಲ್ಲ ಈ ಮಾ ತಂತೂ ಸತ್ಯವೇ ಸರಿ. ಆದರೆಅಧ್ಯಾಪಕರುವಿಶೇಷವಾಗಿಹಳಿ ಯಲ್ಲಿರುವವರು ಒಕ್ಕಲತನಜಲಗರದಲ್ಲಿ ಕಾಲಕಳೆಯುತ್ತಿ ರುತ್ತಾರೆ. ಅವರು ವಿದ್ಯಾರ್ಥಿಗಳಿಗೆ ಪುಂಕೇಸರ ಸ್ತ್ರೀಕೇಸ ರಗಳ ಭೇದವನ್ನು ತಿಳಿಸಿ ಕೊಡಲಿಕ್ಕೂ ಫಲೋತ್ಪತ್ತಿಯು ಕಾ ರ್ಯವನ್ನು ಅವರ ಕೈಯಿಂದಲೆ ಪ್ರಯೋಗ ಮಾಡಿಸಿ ಅವ ರಿಗೆ ಮನಗಾಣಿಸಿ ಕೊಡಲಿಕ್ಕೂ ವಿಶೇಷ ಅನುಕೂಲವುಂಟು ವೆಚ್ಚವಂತೂ ಏನೂ ಇಲ್ಲ. ಆದ್ದರಿಂದ ಅಧ್ಯಾಪಕರಿಗಾಗಿ ಯೇ ಈ ಪ್ರಯೋಗವನ್ನು ನಾವು ಇಲ್ಲಿ ಬರೆದಿರುತ್ತೇವೆ.

ಇದೇ ಮೇರೆಗೆ ಒಂದೇ ಜಾತಿಯ ಬೇಕಾದ ಎರಡು ತ ರದ ಗಿಡಗಳ ಹೂವುಗಳಲ್ಲಿಯೂ ಮೇಲಿನ ಪ್ರಯೋಗದಿಂ ಫಲೋತ್ಪತ್ತಿಯನ್ನು ಮಾಡಬಹುದು.

ಹೊಸದಾಗಿ ತಯಾರಾದ ಒಂದನೇ ಎರಡನೇ ಪುಸ್ತಕಗ ಳನ್ನು ಹಚ್ಚತಕ್ಕದೆಂದು ಹುಕುಮು ಆಗಿರುವುದಷ್ಟೇ ಈಗ ಮೂರನೇ ಪುಸ್ತಕವನ್ನು ಸಹ ಹಚ್ಚಬೇಕೆಂದು ಹುಕುಮು ಆಗಿದೆ.

SULFURIC ACID.

ಗಂಧಕಧೃತಿ

ಸಲ್ಫ್ಯೂರಿಕ್ ಆಸಿಡ್ ಅಥವಾ ಗಂಧಕಧೃತಿ ಎಂಬ ಪ್ರ ವಾಹೀ ಪದಾರ್ಥವನ್ನು ಎಲ್ಲರೂ ಬಲ್ಲರು. ಆದರೆ ಕೈಗಾರಿ ಕೆಯ ಕೆಲಸದಲ್ಲಿ ಈ ವಸ್ತುವಿನ ಉಪಯೋಗವೆಷ್ಟಾಗುತ್ತ ದೆಂಬದನ್ನು ಯಾರೂ ಅರಿಯರು. ಈ ಆಮ್ಲವನ್ನು ಅನೇಕ ರಸಾಯನ ಕಾರ್ಯಗಳಲ್ಲಿ ಉಪಯೋಗಿಸುತ್ತಾರೆ. ಕೆಲವು ದೇಶಗಳಲ್ಲಿ ಈ ಆಮ್ಲವನ್ನು ಅಪ್ರಮಾಣವಾಗಿ ತೆಗೆಯು

ತ್ತಾರೆ. ಇವರ ಅಸಾಧಾರಣವಾದ ಗುಣಗಳ ಮೂಲಕ ವಾಗಿ ಇದು ಕಲಾಕೌಶಲ್ಯದ ಜೀವನವೆನಿಸುವದು. ಆದ್ದರಿಂ ದ ಇದು ಯಾವ ಯಾವ ಕಾರ್ಯಕ್ಕೆ ಜೇಕಾಗುತ್ತದೆಂಬುದ ನ್ನು ಇದರಡಿಯಲ್ಲಿ ದಿಗ್ದರ್ಶನ ಮಾಡಿದರೆ ಓಳಿತಾಗುವದೆಂ ದು ನಂಬಿ ಆ ಕೆಲಸಕ್ಕೆ ಕೈ ಹಚ್ಚಿದ್ದೇವೆ.

೧. ಭೂಮಿಯ ಕಸುವು ಕಡಿಮೆಯಾದರೆ ಅದನ್ನು ಪೂರ್ವಸ್ಥಿತಿಗೆ ತರಲಿಕ್ಕೆ ಗೊಬ್ಬರವನ್ನು ಉಪಯೋಗಿ ಸುವದುಂಟು ಗೊಬ್ಬರಗಳಲ್ಲಿ ಅನೇಕ ತರಗಳುಂಟು ಸ ಮ್ಮಲ್ಲಿ ಸೆಗಣಿ, ಕಸ ಕಡ್ಡಿಗಳ ಗೊಬ್ಬರವೇ ವಿಶೇಷ. ಓಳಗ ಡೆಯಲ್ಲಿ ಹಿಂದುಸ್ಥಾನದಿಂದ ಪ್ರಾಣಿಗಳ ಎಲುಬುಗಳು ಪ್ರತಿವ ರ್ಷ ಪರಸ್ಥಳಕ್ಕೆ ಹೋಗುತ್ತವೆಂಬದು ವಾಚಕರಿಗೆ ಗೊತ್ತಿ ರಬಹುದು ಮೊದಲು ಸತ್ತ ಪ್ರಾಣಿಗಳ ಅಸ್ಥಿಗಳು ಎಲ್ಲಿ ಯದಲ್ಲಿಯೇ ಬೀಳುತ್ತಿದ್ದವು. ಅದರಿಂದ ಅವು ಕಾಲಾಂತ ರದಲ್ಲಿ ಪದಾರ್ಥವಾಗಿ ಹೊಂದಲು ಅವುಗಳೊಳಗಿನ ಕ್ಯಾಲ್ಸಿ ಯಮ್ ಫಾಸ್ಫರಸ ಎಂಬ ಎರಡು ಭೂಮಿಯನ್ನು ಪೋಷಿ ಸುವ ದ್ರವ್ಯಗಳು ಅತ್ಯಲ್ಪವಾಗಿ ಭೂಮಿಯ ಸತ್ವಾಂಶವನ್ನು ಹೆಚ್ಚಿಸುತ್ತಿದ್ದವು. ಹೀಗೆ ಅಸ್ಥಿಗಳು ಗೊಬ್ಬರದ ರೂಪವ ನ್ನು ಹೊಂದಿ ಪುನ್ನೊಳಗೆ ಬೆರೆತುಕೊಳ್ಳಲಿಕ್ಕೆ ಹೆಚ್ಚು ಕಾ ಲ ಬೇಕಾಗುವದು ಸರಿ. ಆದರೆ ಅರ್ವಾಚೀನ ಶೋಧಕರು ಈ ಎಲುವುಗಳನ್ನ ಕುಟ್ಟಿ ಹಿಟ್ಟು ಮಾಡಿ ಅದರಲ್ಲಿ ಸಬಲ ವಾದ ಈ ಗಂಧಕಾಮ್ಲವನ್ನು ಮಿಶ್ರ ಮಾಡುವರು. ಅದರಿಂ ದ ಕಾಲಾವಧಿಯಿಂದಾಗುವ ಕಾರ್ಯವು ಕೆಲ ದಿವಸಗಳ ಲ್ಲಿಯೇ ಕೈಗೂಡುವದು ಹೀಗೆ ಕೃತಿಯಿಂದ ಸಿದ್ಧಮಾ ಡಿದ ಗೊಬ್ಬರದಿಂದ ಹೆಚ್ಚು ಬೆಳೆಯು ಬರುತ್ತದೆಂಬದು ಅಸಾಧ್ಯವಸಿದ್ಧವಾದ ಸಂಗತಿಯು. ಆದರೆ ಈ ಗೊಬ್ಬರವು ಅನ್ಯ ದೇಶದಿಂದ ಸಿದ್ಧವಾಗಿ ಬರುವದರಿಂದ ತುಟ್ಟಿ ವಾಗುತ್ತದೆ.

೨. ಈ ಅವ್ವಲರಾಜನು ಮೇಲಿನದೊಂದೇ ಕೆಲಸವನ್ನು ಮಾಡುತ್ತಾನೆಂತಲ್ಲ! ಇವರ ಸಹಾಯದಿಂದಲೆ, ಹೈಡ್ರೋ

ಕ್ಲೋರಿಕ್ ಎಂಬವೆರಡು ಬೇರೆ ಉಪಯುಕ್ತ ಆಮ್ಲಗಳು ಸಿದ್ಧವಾಗುತ್ತವೆ

೩. ಸಬಲವಾದ ಗಂಧಕಾಮ್ಲವನ್ನು ಉಪ್ಪಿನಲ್ಲಿ ಮಿಶ್ರಣ ಮಾಡಿದರೆ ಸಲ್ಫೇಟ ಆಫ್ ಸೋಡಾ ಎಂಬದೊಂದು ಮಿಶ್ರ ಪದಾರ್ಥವು ಉತ್ಪನ್ನವಾಗುತ್ತದೆ. ಈ ಹೊಸ ಪದಾರ್ಥದ ಉಪಯೋಗವು ಕಾಚಿನ ಕಾರಖಾನೆಯಲ್ಲಿಯೂ ಮತ್ತು ಬೇರೆ ಕಾರಖಾನೆಯಲ್ಲಿಯೂ ಆಗುತ್ತದೆ ಇದಲ್ಲದೆ ಇದೇ ಪದಾರ್ಥದಿಂದ ವಾಶಿಂಗ ಸೋಡಾ ಎಂಬ ಪದಾರ್ಥವು ಸಿದ್ಧವಾಗುತ್ತದೆ ಇದರ ಉಪಯೋಗವನ್ನಂತೂ ಬಣ್ಣಿಸಲಿಕ್ಕೆ ಬೇಡ.

೪. ಸಧ್ಯಕ್ಕೆ ಅಲ್ಲಲ್ಲಿ ಬರ್ಫವನ್ನು ತಯಾರ ಮಾಡುವ ಕಾರಖಾನೆಗಳಿರುವವಷ್ಟೇ ಆದರೆ ಈ ಬರ್ಫವನ್ನು ಸಿದ್ಧಮಾಡಲಿಕ್ಕೆ ಈ ಗಂಧಕಾಮ್ಲವು ಅತ್ಯವಶ್ಯವಾಗಿದೆ. ಯಾವ ಪಾತ್ರೆಯೊಳಗಿನ ನೀರನ್ನು ಹೆರಿಸಬೇಕಾಗಿರುವದೋ ಆ ಪಾತ್ರೆಗೂ ಬೇರೊಂದು ದೊಡ್ಡ ಪಾತ್ರೆಗೂ ರಬ್ಬರಿನ ಕೊಳವೆಯಿಂದ ಜೋಡಿಸಿರುತ್ತಾರೆ. ಈ ಎರಡನೇ ಪಾತ್ರೆಯಲ್ಲಿ ಸಬಲ ಗಂಧಕಾಮ್ಲವನ್ನು ಹಾಕಿರುವರು. ನೀರಿರುವ ಪಾತ್ರೆಗೆ ವಾತಾಕರ್ಷಕ ಯಂತ್ರವನ್ನು ಹಚ್ಚಿ ಒಳಗಿನ ಹವೆಯನ್ನು ಎಳೆಯುತ್ತಿರಲು, ಮೇಲಿನ ಹವೆಯ ಭಾರವು ಹೊರಟು ಹೋಗಲಾಗಿ ಆ ನೀರು ಶೀಘ್ರವಾಗಿ ಉಗಿಯಾಗುತ್ತ ಕೊಳವೆಯ ಮಾರ್ಗದಿಂದ ಎರಡನೇ ಪಾತ್ರೆಗೆ ಬರುವದು ಆ ಪಾತ್ರೆಯಲ್ಲಿರುವ ಗಂಧಕಾಮ್ಲವು ಆ ನೀರನ್ನು ಶೋಷಿಸಿಕೊಂಡು ಅದಕ್ಕೆ ಬರ್ಫದ ಸ್ವರೂಪವನ್ನುಂಟು ಮಾಡುತ್ತದೆ. ಅಂದರೆ ನೀರು ಎಷ್ಟು ಬೇಗನೆ ಉಗಿಯ ರೂಪವನ್ನು ಹೊಂದಿತ್ತೋ ಅಷ್ಟೇ ಬೇಗನೆ ಈ ಆವ್ಲದ ಯೋಗದಿಂದ ಆರಿ ಹೆಪ್ಪುಗಟ್ಟುತ್ತದೆ. ಇದು ನಾಲ್ಕನೇ ಉಪಯೋಗವು.

೫ ಫಾಸ್ಫರಸಂತೂ ಎಲ್ಲರಿಗೂ ಗೊತ್ತುಂಟು. ದೀಪದ ಕಡ್ಡಿಯ ತುದಿಯಲ್ಲಿ ಕೆಂಪಗೆ ಕಾಣುವದೇ ಫಾಸ್ಫರವು ಅಥವಾ ಕರೇ ತುದಿಯ ಕಡ್ಡಿಯ ಪೆಟ್ಟಿಗೆಯ ಮೈಗೆ ಹಚ್ಚಿ

ರುವದೇ ಫಾಸ್ಪರವು ಇದು ಕೆಂಪು ಹಳದಿ ಎಂಬ ಎರಡು ವಿಧವಾಗಿರುವದು. ಕೆಂಪು ಫಾಸ್ಪರವನ್ನೇ ದೀಪದ ಕಡ್ಡಿಗೆ ಉಪಯೋಗಿಸುತ್ತಾರೆ. ಇದನ್ನು ಅಂದರೆ ಫಾಸ್ಪರವನ್ನು ಎಲವುಗಳಿಂದ ತೆಗೆಯುವಾಗ ಈ ಆಮ್ಲವು ಉಪಯೋಗಿಸಲ್ಪಡುತ್ತದೆ; ಮೊದಲು ಎಲುವುಗಳನ್ನು ಕುಟ್ಟಿ ಹಿಟ್ಟು ಮಾಡುವರು. ಬಳಿಕ ಅದರಲ್ಲಿ ಸಬಲಗಂಧಕಾಮ್ಲವನ್ನು ಮಿಶ್ರಮಾಡಿ ಬಿಸಿಗೆ ಇಡುವರು. ಅದರಿಂದ ಒಂದು ಬಗೆಯ ಫಾಸ್ಪರಿಕ್ ಆಸಿಡ್‌ವು ಸಿದ್ಧವಾಗುವದು. ಬಳಿಕ ಈ ಮಿಶ್ರಣವನ್ನೂ ಇದ್ದಲಿಯ ಪುಡಿಯನ್ನೂ ಒಂದು ಗಟ್ಟಯಾಗಿ ಮುಚ್ಚಿದ ಬಾಯುಳ್ಳ ಮಣ್ಣಿನ ಪಾತ್ರೆಯಲ್ಲಿ ಹಾಕಿ ಒಲೆಯಾಗಿ ಕಾಸುವರು. ಆಗ ಅದರೊಳಗಿಂದ ಫಾಸ್ಪರವು ಉಗಿಯ ರೂಪದಿಂದ ಆಪಾತ್ರೆಗಿರುವ ಒಂದು ಕೊಳವೆಯೊಳಗಿಂದ ಹಾಯ್ದು ಬದಿಗಿಟ್ಟಿರುವ ನೀರಿನ ಪಾತ್ರೆಯಲ್ಲಿ ಬಂದು ಘನವಾಗುವದು.

೬. ಯಾವದೇ ಸ್ನೇಹ ಪದಾರ್ಥವಾಗಲಿ, ಸೆಣವಾಗಲಿ ಅದರಲ್ಲಿ ಸ್ಟಿಯರಿಕ್, ಪಾಮಿಟಿಕ್ ಓಲಿಕ್ ಎಂಬ ಮೂರು ಆಸಿಡಗಳಲ್ಲಿ ಒಂದು ಗ್ಲೀಸರೀನದ ರಸಾಯನ ಮಿಶ್ರಣವೂ ಬೆರತುಕೊಂಡಿರುವದು. ಬೇಕಾದ ಜಾತಿಯದೊಂದು ಸೆಣದಲ್ಲಿ ಸೋಡಾ ಅಥವಾ ಹಪ್ಪಳಕಾರವನ್ನು ಹಾಕಿದರೆ ಗ್ಲೀಸರೀನವು ಬೇರೆಯಾಗುವದು. ಉಳಿದ ಭಾಗದಲ್ಲಿ ಯಾವದಾದರೂ ಒಂದು ಆಸಿಡವೂ ಹಿಂದೆ ಹೇಳಿದಂತೆ ಅದರಲ್ಲಿ ಹಾಕಿದ ಸೋಡಾ ಅಥವಾ ಹಪ್ಪಳಕಾರವು ಕೂಡಿ ಒಂದಾಗಿರುವದು ಈ ಬಗೆಯಿಂದಾಗುವ ಮಿಶ್ರಣವೇ ಸಬಕಾರವೆಂದು ಕರೆಯಲ್ಪಡುವದು ಈ ಸಬಕಾರದಲ್ಲಿ ಸ್ಟಿಯರಿಕ್ ಹಾಗು ಪಾಮಿಟಿಕ್ ಎಂಬ ಎರಡೂ ಆಮ್ಲಗಳು ಬೆರತಿದ್ದರೆ ಅದರಲ್ಲಿ ಗಂಧಕಾಮ್ಲವನ್ನು ಹಾಕಲು, ಅವು ಬೇರೆ ಬೇರೆಯಾಗುತ್ತವೆ. ಉಳಿದ ಸೆಣವು ಅಥವಾ ಸ್ನೇಹವು ಗಟ್ಟಯಾಗಿ ಬೆಳ್ಳಗೆ ಕಾಣುವದು. ಇದರಿಂದಲೇ ಮೇಣ ಬತ್ತಿಗಳನ್ನು ಮಾಡುವರು. ಮೂರನೇ ಆಮ್ಲವಾದ ಓಲಿಕ್ ಆಸಿಡವು ಕೂಡಿದ್ದರೆ, ಅದರಲ್ಲಿ ಗಂಧಕಾಮ್ಲವನ್ನು ಹಾಕಲು

ಮಿಶ್ರಣದೊಳಗಿನ ಆವ್ಲುವು ಜೇರೆ ಯಾದರೂ ಮಿಶ್ರಣವು ಗಟ್ಟಿಯಾಗುವದಿಲ್ಲವ್ದರಿಂದ ಅದರಿಂದ ಮೋಣಬತ್ತಿಗಳು ಆಗುವದಿಲ್ಲ. ಇದಲ್ಲದೆ, ಎಪಸಮ್‌ಸಾಲ್ಟ (ರೇಚಕಲವಣ) ಹಿರಾಕಸ, ತುತ್ಯ, ಪ್ಲಾಸ್ಟರ ಆಫ್ ಪ್ಯಾರಿಸ, ಕ್ಸಿನೈನ ಸಲ್ಫೇಟ, ಮೊದಲಾದ ಅನೇಕ ಪ್ರಯೋಜನಕರವಾದ ಪದಾರ್ಥಗಳೆಲ್ಲ ಗಂಧಕಾಮ್ಲದ ಸಹಾಯದಿಂದಲೇ ಸಿದ್ಧವಾಗುತ್ತವೆ

೭. ಫ್ಲುಆರ್ ಸ್ಪಾರ ಎಂಬದೊಂದು ಪದಾರ್ಥವುಂಟು. ಇದನ್ನು ಸೀಸದ ಪಾತ್ರೆಯಲ್ಲಿ ಹಾಕಿ ಮೇಲೆ ಸಬಲವಾದ ಗಂಧಕಾಮ್ಲವನ್ನು ಸುರವಿ ಆ ಪಾತ್ರೆಯನ್ನು ಬೆಂಕಿಯ ಮೇಲಿಟ್ಟು ತಕ್ಕಷ್ಟು ಕಾಸಲು ಬೇರೊಂದು ತರದ ಆಸಿಡವು ಉಂಟಾಗುತ್ತದೆ. ಈ ಉಂಟಾದ ಆಸಿಡವು ಕಾಜನ್ನು ತಿನ್ನುತ್ತದೆ. ಆದ್ದರಿಂದ ಕಾಜಿನ ಮೇಲೆ ಸುಳವಿನ ಕೆಲಸ ಮಾಡಲಿಕ್ಕೆ ಈ ಆಸಿಡ್‌ವು ಬಹು ಪ್ರಯೋಜನಕರವಾಗಿರುತ್ತದೆ. ಆದು ಹ್ಯಾಗಂದರೆ ಬುದು ಕಾಜಿನ ಪಾತ್ರೆಯನ್ನು ತಕೊಂಡು ಅದರ ಹೊರಮ್ಯೆಗೆ ತಿಳುವಾದ ಮೇಣದ ಕವಚವನ್ನು ಸುತ್ತುವರು ಬಳಿಕ ಮೊಳೆಯಿಂದ ಮೇಣದ ಕವಚದಲ್ಲಿ ಬೇಕಾದ ಚಿತ್ರವನ್ನಾಗಲಿ, ಸುಳವನ್ನಾಗಲಿ ತೆಗೆಯುವರು. ಮೊಳೆಯ ತುದಿಯಿಂದ ಚಿತ್ರ ತೆಗದ ಪ್ರದೇಶದ ಮೇಣದ ಥರವು ಗೀಚಿ ಹೋಗುವದು. ಉಳಿದ ಕಡೆಯಲ್ಲೆಲ್ಲ ಅದು ಇದ್ದೇ ಇರುವದು. ಬಳಿಕ ಈ ಪಾತ್ರೆಯನ್ನು ಬೆಂಕಿಯ ಮೇಲಿಟ್ಟು ಮೇಲಿನ ಆವ್ಲದ ಪಾತ್ರೆಯ ಮೇಲೆ ಹಿಡಿಯಲು ಆವ್ಲದ ಉಗಿಯು ಮೊಳೆಯ ತುದಿಯಿಂದ ಮೇಣವು ಹೋಗಿರುವ ಕಾಜಿನ ಮೇಲೆ ಕೂತು ಅದನ್ನು ತಿನ್ನುವದು ಬಳಿಕ ಎಲ್ಲ ಪಾತ್ರೆಯನ್ನು ಸ್ವಚ್ಛವಾಗಿ ಒರಿಸಲು ಮೊದಲು ಬರೆದ ಚಿತ್ರವು ಒಡಿದು ಕಾಣುವದು.

೮ ಪೋರ್ಟಮೆಂಟ ಪೇಪರವೆಂಬ ಒಂದು ತರದ ಜಿಗಟಾದ ಕಾಗದವನ್ನು ತಯಾರ ಮಾಡಲಿಕ್ಕೂ ಈ ಆವ್ಲವು ಬೇಕು. ಇದಲ್ಲದೆ ಇನ್ನೂ ಅನೇಕ ಕಾರ್ಯಗಳಲ್ಲಿ ಇದರ ಉಪಯೋಗವುಂಟು. ಈ ಬಗೆಯಾಗಿ ಗಂಧಕಾಮ್ಲ

ವ ಅಸಾಧಾರಣವಾದ ಉಪಯುಕ್ತ ಗುಣವನ್ನು ಕಂಡು ಆ ದಕ್ಕೆ ಶಾಸ್ತ್ರಜ್ಞರು ಅವ್ಲು ರಾಜನೆಂದು ಹೆಸರಿಟ್ಟಿರುವರು.

HABIT
ಚಟವು.

ಅರಿಸ್ಟಾಟಲ ಮುಂತಾದ ತತ್ವಜ್ಞಾನಿಗಳು ಯೋಚಿಸಿದ್ದೇನೆಂದರೆ ಬಹು ಜನರು ಜನ್ಮತಃ ಕೆಟ್ಟವರಾಗಿ ಹುಟ್ಟಿರುವದಿಲ್ಲ. ಆದರೆ ಅವರಿಗೆ ಸಿಗುವ ಶಿಕ್ಷಣ ಹಾಗು ಚಟ ಇವುಗಳಿಂದ ಕೆಲವರು ಉತ್ತಮರೂ ಕೆಲವರು ಕೆಟ್ಟವರೂ ಆಗುತ್ತಾರೆ. ಕಾರಣ ಹುಡುಗರ ಸ್ವಾಭಾವಿಕ ಚಟುವಟಿಕೆಯನ್ನು ಉಪಯೋಗಿಸಿ ಚಟಗಳನ್ನು ಹಚ್ಚಬೇಕು. ಮೊದಲು ತನ್ನ ಕೆಲಸವನ್ನು ಯಥಾಯೋಗ್ಯವಾಗಿ ಮಾಡಿಕೊಳ್ಳುವ ಚಟವನ್ನು ಹಚ್ಚಬೇಕು. ಇದು ಹುಟ್ಟಿದ ಮೇಲೆ ಇದಕ್ಕೆ ಸಂಭಂಧಿಸಿದ ಪ್ರಾಮಾಣಿಕತನ, ನ್ಯಾಯ, ಮಿತವ್ಯಯ, ದಾನಧರ್ಮ ಮುಂತಾದ ಸದ್ಗುಣಗಳ ಚಟ ಹಚ್ಚಬೇಕು.

ಎಲ್ಲಕ್ಕೂ ಮೊದಲು ಹೊಸ ಹೊಸ ಚಟಗಳು ಬೇಸರಿಕೆ ಕೊಡುವಂಥವು ಇರುತ್ತವೆ. ಕಾರಣ ಚಟ ಹಚ್ಚುವದಕ್ಕಿಂತ ಮೊದಲು ಅವರಿಗೆ ಚಟ ಹತ್ತುವ ಕೆಲಸ ಮಾಡಲಿಕ್ಕೆ ಹಚ್ಚಬೇಕು. ಈ ತತ್ವವನ್ನು ಮಾಸ್ಟರನು ತನ್ನ ಸ್ವಂತ ಆಚರಣೆಯಿಂದ ತೋರಿಸಿ. ಅವರ ಕಡೆಯಿಂದ ಮಾಡಿಸುವ ಯೋಗ್ಯ ಸಂಗತಿಗಳನ್ನು ಕಾಯ್ದು ಕೊಂಡು (ಬರ ಮಾಡಿ) ಆಗ ಆ ಹುಡುಗನ ಕಡೆಯಿಂದ ಆ ಕೆಲಸವನ್ನು ಮಾಡಿಸಬೇಕು. ಮೊದಲೇ ಸಂಶಯಯುಕ್ತವಾದಂಥಾದನ್ನು ಪ್ರಾರಂಭ ಮಾಡಬಾರದು ಸಿದ್ಧಿಗೆ ಹೋಗುವ ಕೃತ್ಯಗಳನು ನೋಡಿ ಆರಂಭಿಸಬೇಕು. ಅಂದರೆ ಹೆಚ್ಚಿನ ಭಾವನೆಗಳು ಮನದಲ್ಲಿ ಹುಟ್ಟಿ ಕೀಳು ಭಾವನೆಗಳು ಹೋಗುತ್ತವೆ.

ಚಟ ಹತ್ತಬೇಕಾದರೆ ಯಾವದೊಂದು ಕೃತ್ಯವನ್ನು ಮೇಲೆ ಮೇಲೆ ಮಾಡುವದಲ್ಲದೆ ವಿಯಮಿತ ತನದಿಂದಲೂ

ಮಾಡಬೇಕು. ಹೀಗಾಗಬೇಕಾದರೆ ಮಾಸ್ತರನು ಹುಡು
ಗರ ಸ್ವಭಾವಗಳನ್ನು ಕಾಳಜಿಯಿಂದ ಅರಿತುಕೊಳ್ಳಬೇಕು
ಸೋಮಾರಿ ಹುಡುಗನಿಗೆ ಚಟುವ ಸಾವಕಾಶವಾಗಿ ಹತ್ತು
ತ್ತದೆ. ಚಟುವಿಲ್ಲದ (ಚಂಚಲ) ಹುಡುಗನಿಗಿಂತ ಚಟವಿದ್ದ
ಹುಡುಗನಿಗ ಬೇಗ ಚಟ ಹತ್ತುವದು. ಯಾಕಂದರೆ ಮ
ನಸ್ಸು ತನ್ನ ಕೆಲಸ ಮಾಡುತ್ತಿರುತ್ತದೆ. ಕಾರಣ ಮನಸ್ಸಿ
ದ್ದರೆ ತೀವ್ರ ಚಟ ಹತ್ತುತ್ತದೆ. ಕೆಲವು ಚಟಗಳು ಬೇಗ
ಹತ್ತುವವು. ಕೆಲವು ತಡವಾಡಿ ಹತ್ತುವವು. ಚಟ ಹತ್ತು
ವ ಮಾರ್ಗಗಳು ಕೆಲವು ಅನೈದದಾಯಕವೂ ಕೆಲವು ಕಠಿ
ಣವೂ ಆಗಿರುತ್ತವೆ. ಚಟ ಹತ್ತಬೇಕಾದರೆ ಮನೋಇಚ್ಛೆ
ಯು ಬೇಕು. ಕೆಲವು ಚಟಗಳು ಕಾಲಪರಿಸ್ಥಿತಿಯ ಮೇಲಿ
ದ ತಡವಾಗಿ ಹತ್ತುತ್ತವೆ. ಹಾಗು ಕೆಲಕೆಲವು ಚಟಗಳು
ರೂಢಿಯ ಮೇಲಿಂದಲೇ ಹತ್ತುತ್ತವೆ.

ಶಾಲೆಯಲ್ಲಿ ಚಟಗಳು ಹತ್ತಬೇಕಾದರೆ ಯಾವ ಯಾವ
ಉಪಾಯಗಳನ್ನು ಮಾಡಬೇಕೆಂಬ ಬಗ್ಗೆ- (೧) ಕೆಲಸದಲ್ಲಿ
ತತ್ಪರತೆ (೨) ಸ್ವಚ್ಛತೆ (೩) ಒಳ್ಳೇನಡತೆ (೪) ಸತ್ಯವಂತಿಕೆ
ಮತ್ತು ಪ್ರಮಾಣಿಕತನ ಇತ್ಯಾದಿ ಚಟಗಳು ವಿದ್ಯಾರ್ಥಿಗಳ
ಲ್ಲಿ ಹತ್ತುವದು ಅವಶ್ಯವಿದೆ.

ತತ್ಪರತೆ – ಹುಡುಗನಿಂದ ದಿನಾಲು ನೇಮದಿಂದ ಕೆಲಸ
ಮಾಡಿಸಿದರೆ (ರೂಢಿ ಮಾಡಿಸಿದರೆ) ಅದರಿಂದ ಅವನಲ್ಲಿ ತ
ತ್ಪರತೆ ಹುಟ್ಟುತ್ತದೆ. ಈ ತರದಿಂದ ರೂಢಿ ಬಿತ್ತೆಂದರೆ ಅವ
ನು ಸಹವಾಸದ ಸಂಬಂಧದಿಂದ ಆ ಕೆಲಸ ಮಾಡೇ
ಮಾಡುತ್ತಾನೆ. ಹೀಗೆ ಉಂಟಾದ ತತ್ಪರತೆಗೆ ವರ್ಗಿಕ
ರಣ ವೇಳಾಪತ್ರಿಕೆ. ಚಟುವಟಿಕೆ ಪ್ರೀತಿ ಆರೋಗ್ಯತೆಗೂ
ಕೆಲಸದ ಸಿದ್ಧಿಗೂ ನಡುನಡುವೆ ಬೇಕಾಗುವ ವಿಶ್ರಾಂತಿ ಇ
ವುಗಳಿಂದ ಒಳ್ಳೇ ಸ್ವರೂಪ ಕೊಡಲಿಕ್ಕೆ ಬರುತ್ತದೆ. ಅವ
ಶ್ಯವಿದ್ದಲ್ಲಿ ಮನರಂಜನೆಯಿಂದಲೂ ತತ್ಪರೆ ಹುಟ್ಟುತ್ತದೆ.
ಇದಲ್ಲದೆ ಎರಡನೆಯವರ ಉದಾಹರಣೆಗಳಿಂದಲೂ ಶಿ
ಕ್ಷಕ ಶಿಕ್ಷಿತರಲ್ಲಿ ಒಮ್ಮನಸ್ಸು ಅಥವಾ ಸಹಾನುಭೂತಿಯಿಂ
ದಲೂ ತತ್ಪರತೆ ಹುಟ್ಟುತ್ತದೆ. ಈ ಎರಡು ಕಾರಣಗಳಿಂ

ಬಿ ತತ್ಪರತೆ ಹುಟ್ಟದಿದ್ದರೆ ಅದನ್ನು ಅಧಿಕಾರ ಬಲದಿಂದ ಹುಟ್ಟಿಸಿ ಚಲೋ ಮಾರ್ಗಕ್ಕೆ ಹಚ್ಚಬೇಕು. ತತ್ಪರತೆ ಇಲ್ಲದವನು ಕೆಲಸ ಮಾಡುವದಿಲ್ಲವೆಂತಲ್ಲ ಆದರೆ ಅವನು ನೇಮಿಸಿ ಕೊಟ್ಟ ಇಲ್ಲವೆ ಅವಶ್ಯಕವಾದ ಕೆಲಸಗಳನ್ನು ಬಿಟ್ಟು ಅನವಶ್ಯಕವಾದ ಕೆಲಸವನ್ನು ಮಾಡುತ್ತಿದ್ದರೆ ಅವನಲ್ಲಿ ತತ್ಪರತೆ ಇಲ್ಲವೆಂದು ಅನ್ನುತ್ತಾರೆ. ಈ ಪ್ರಕಾರ ಅಧಿಕಾರ ಬಲದಿಂದ ಚಟ ಹಚ್ಚಬೇಕು. ಈ ಚಟದಿಂದ ಕೆಲಸ ಮಾಡುತ್ತ ಹೋದ ಹಾಗೆ ಅವನಿಗೆ ಮೊದಲು ಕೆಲಸ ಮಾಡಲಿಕ್ಕೆ ಬರುತ್ತಿದ್ದ ಬೇಸರಿಕೆಯು ಹೋಗಿ ಆನಂದವು ಉಂಟಾಗುತ್ತದೆ. ಈ ಪ್ರಕಾರ ಆನಂದ ಹುಟ್ಟಬೇಕಾದರೆ ತತ್ಪರತೆ ಹುಟ್ಟಿತೆಂದು ಹೇಳಬಹುದು ಈ ತತ್ಪರತೆಯನ್ನು ಸಣ್ಣ ಹುಡುಗರಲ್ಲಿಯೂ ದೊಡ್ಡವರಲ್ಲಿಯೂ ಹುಟ್ಟಿಸುವ ಕ್ರಮವು ಬೇರೆ ಬೇರೆ ಯಾಗಿರುವದು. ಸಣ್ಣಹುಡುಗರಿಗೆ ಮುಂದಾಗುವ ಪ್ರಯೋಜನವನ್ನು ಹೇಳಿದರೆ ತತ್ಪರತೆ ಹುಟ್ಟುವಾರದು. ದೊಡ್ಡವರಿಗೆ ಮಾತ್ರ ಹುಟ್ಟಬಹುದು. ಗರಜಿನಿಂದಲೂ ಮೊದಲು ತತ್ಪರತೆ ಹುಟ್ಟುತ್ತದೆ. ನಂತರ ಮಾನ ಮರ್ಯಾದೆಗಳು ಕೆಲವರಲ್ಲಿ ಹುಟ್ಟುತ್ತವೆ. ಕೆಲವರಲ್ಲಿ ಹುಟ್ಟುವದಿಲ್ಲ. ಗರಜು ಹುಟ್ಟಿಸುವಾಗಲೇ ಆನಂದ ಸಂತೋಷ ಆರೋಗ್ಯ ಉಪಜೀವನದ ಸಾಧನ ಮುಂತಾದವುಗಳನ್ನು ತಿಳಿಸಬೇಕು

ಸೋಮಾರಿತನ— ಕೆಲಸ ಮಾಡಲಾರದ ಗುಣವೇ ಸೋಮಾರಿತನವೆಂದು ಹೇಳ ಬಹುದು. ಸ್ವಭಾವದಿಂದ ಇಲ್ಲವೆ ಶರೀರ ಪ್ರಕೃತಿಯಿಂದ ಸೋಮಾರಿತನವು ಬರುತ್ತದೆ. ಅಶಕ್ತನಿಗೆ ಅವನ ಶಕ್ತಿಗನುಸರಿಸಿ ಕೆಲಸಕ್ಕೆ ಹಚ್ಚಿದರೆ ತತ್ಪರತೆ ಹುಟ್ಟುತ್ತದೆ. ಇದರಂತೆ ಸ್ವಭಾವತಃ ಸೋಮಾರಿಯಾದವನಿಗೆ ಕ್ರಮ ಕ್ರಮವಾಗಿ ಸ್ವಲ್ಪ ಸ್ವಲ್ಪ ಕೆಲಸ ಕೊಡುತ್ತಾ ಹೋಗಿ ಅವನಲ್ಲಿ ತತ್ಪರತೆ ಹುಟ್ಟಿಸಬೇಕು. ಹುಡುಗರ ಸ್ವರೂಪವು ತಿಳಿಯದ್ದರಿಂದಲೂ ತಿಳಿದಿಗೂ ಮಾಸ್ತರನ ದುರ್ಲಕ್ಷದಿಂದಲೂ ಸೃಷ್ಟಿದೋಷವನ್ನು ಹಚ್ಚುವದರಿಂದಲೂ ಎಷ್ಟೋ ಹುಡುಗರು ವಿಶೇಷ ಸೋಮಾರಿಗ

ಳಾಗುವದುಂಟು. ಆದದರಿಂದ ಮಾಸ್ತರನು ಪ್ರತಿಯೊಬ್ಬನ ಸ್ವರೂಪವನ್ನರಿತುಕೊಂಡು ಲಕ್ಷ್ಯ ಪೂರ್ವಕವಾಗಿ ಕೆಲಸಕ್ಕೆ ಹಚ್ಚಿ ಬೇಕು. ಅಂದರೆ ಸೋಮಾರಿತನವು ಹೋಗಬಹುದು ಶರೀರ ಪ್ರಕೃತಿಗಿಂತ ಚಟದಿಂದಲೇ ಸೋಮಾರಿಯಾದವನಿಗೆ ಆ ಚಟಗಳು ಹೋಗುವಂತೆ ಅವುಗಳಿಗೆ ವಿರೋಧವಾದ ಚಟಗಳನ್ನು ಇಲ್ಲವೆ ಅದಕ್ಕೂ ಹೆಚ್ಚಿನ ಚಟಗಳನ್ನು ಹಚ್ಚಿ ಮೊದಲಿನ ಚಟಗಳನ್ನು ತೆಗೆದು ಹಾಕಬೇಕು.

ತತ್ಪರತೆಯ ಸಂಬಂಧದಿಂದ ಸ್ವಭಾವದಲ್ಲಿ ಸೂಕ್ಷ್ಮವಾನದಿಂದ ಏಳು ವರ್ಗಗಳನ್ನು ಮಾಡಬಹುದು.

೧ ಚುರುಕುಬುದ್ಧಿಯುಳ್ಳವನಾಗಿ ಉದ್ಯೋಗಿಯಾದವನು ಇಂಥ ಒಬ್ಬ ಹುಡುಗನು ಶಿಕ್ಷರೆ ಅವನಿಗೆ ಜ್ಞಾನದ ಆಹಾರವನ್ನು ಅವನ ಮುಂದಿಡುವದೇ ಮುಖ್ಯ ಕೆಲಸವಾಗಿದೆ ಇಂಥವರು ಅಪರೂಪ ಇವರು ಕಲಿಸಿದಷ್ಟು ಹೆಚ್ಚು ಕಲಿಯುತ್ತಾರೆ ಅದರಿಂದ ಅವನಿಗೆ ಒಮ್ಮೊಮ್ಮೆ ಪ್ರತಿಬಂಧ ಮಾಡುವ ಪ್ರಸಂಗ ಮಾಡುವದು.

೨ ಸಾವಕಾಶವಾಗಿ ಗ್ರಹಿಸಿಕೊಂಡು ಹೇಳಿದಷ್ಟು ಕಲಿಯುವವರು ಇವರಿಗೆ ಉತ್ತೇನ ಕೊಟ್ಟು ತಾಳ್ಮೆಯಿಂದ ಕೆಲಸ ಮಾಡಿಸಬೇಕು;

೩ ಉದ್ಯೋಗಿಯಾಗಿದ್ದು ದುರಾಗ್ರಹಿಯಾದವನು ಇವನಿಗೆ ಒಮ್ಮೆ ಗ್ರಹಿಕೆಯಾದದ್ದು ಬಿಡಿಸುವದು ಒಹು ಕಷ್ಟ.

೪ ಮಂದ ಬುದ್ಧಿಯುವರಾದರೂ ಉದ್ಯೋಗಿಯಾದವರು ಇವರಿಗೆ ಹೇಳಿದ್ದನ್ನು ತಿಳುಕೊಳ್ಳಲಿಕ್ಕೆ ಒಹು ಶ್ರಮವಾಗುವದು. ಇಂಥವರ ಬಗ್ಗೆ ಮಾಸ್ತರನಲ್ಲೇ ಸಹಾನುಭೂತಿಯೂ ಶಾಂತತೆಯೂ ಬಹಳವಿರಬೇಕು. ಅಂದರೆ ಮಾಸ್ತರನು ತಾನು ಅವನಷ್ಟೇ ಜ್ಞಾನವುಳ್ಳವನೆಂದು ತಿಳುಕೊಂಡು ಹೆಚ್ಚು ಭಾರ ಹಾಕದೆ ಧೈರ್ಯ ಕೊಟ್ಟು ಅಷ್ಟಷ್ಟೇ ತಿಳಿಸುತ್ತ ಹೋಗಬೇಕು ಇದರಿಂದ ಇಂಥವರಲ್ಲಿ ಇಷ್ಟ ಸಿದ್ಧಿಯು ಬಹಳ ತಡವಾಗಿ ಆಗುವದು. ಆದದ್ದು ಸ್ಥಿರವಾಗಿ ಉಳಿಯುವದು.

ಬುದ್ಧಿ ಮಂದವಿದ್ದ ಸೋಮಾರಿಗಳಾದವರು ಇಂಥವ

ರನ್ನು ತಿದ್ದಲಿಕ್ಕೆ ಮಾಸ್ತರನಲ್ಲಿ ಜಾಣತನವೂ, ತಾಳ್ಮೆಯೂ ಬೇಕು ಮತ್ತು ಇವರ ಸೋಮಾರಿತನವನ್ನು ತೆಗೆಯಲಿಕ್ಕೆ ವಿಶೇಷ ಪ್ರಕಾರದ ಕ್ರಿಯೆಯು ಬೇಕು. ಮೊದಲು ಆಟಗಳ ಸಹಾಯದಿಂದ ಉದ್ಯೋಗದ ಚಟ ಹಚ್ಚಬೇಕು.

೬ ಬುದ್ಧಿಯು ಮಂದವಿದ್ದು ಕೆಟ್ಟ ಮನೋವ್ಯಾಪಾರಗಳು ಳವನು-ಇಂಥವರನ್ನು ಸುಧಾರಿಸುವದು ಅಸಾಧ್ಯವು. ಇವರಿಗೆ ಪ್ರಸಂಗ ಕಾಯ್ದುಕೊಂಡು ಕೂತು ಇವರು ಮಾಡಿದ ಕೃತ್ಯದ ಪರಿಣಾಮವನ್ನು ಅನುಭವಿಸಲಿಕ್ಕೆ ಹಚ್ಚಿ ಮುಂದೆ ಸುಧಾರಿಸುವ ಹೊಂಚಿಕೆಗಳನ್ನು ನೋಡಬೇಕು.

೭ ಚುರುಕು ಬುದ್ಧಿಯವನಾದರೂ ಕೆಲಸಕ್ಕೆ ಮೆಚ್ಚದವನು ಇಂಥ ಹುಡುಗರ ಗುಣಗಳು ಮಾಸ್ತರನಿಗೆ ಬೇಗ ಗೊತ್ತಾಗುವದಿಲ್ಲ. ಇಂಥವನು ಏನಾದರೊಂದು ವಿಶೇಷ ಕಾರಣದಿಂದ ಅಲ್ಲವೆ ಎತಡನೆಯವರ ಸಹವಾಸದಿಂದ ಸೋಮಾರಿಯಾಗಿರುತ್ತಾನೆ ಅಥವಾ ಬೇಕಂತ ಕಲಿತಿರುವದಿಲ್ಲ. ಇವನು ಬೇಗ ಸುಧಾರಿಸಬಹುದು. ಇಂಥವನು ಸೋಮಾರಿಯಾಗಲಿಕ್ಕೆ ಕೆಟ್ಟ ಪರಿಸ್ಥಿತಿಯು ಒಂದು ಕಾರಣವಾಗಿದೆ.

೮ ಸ್ವಚ್ಛತೆ-ಸ್ವಚ್ಛತೆಯು ಆರೋಗ್ಯಕ್ಕೂ ಮಾನಸೀಕ ಸ್ಥಿತಿಗೂ ಅವಶ್ಯವಾಗಿದ್ದು ಹೊಲಸು ತನವು ಅಪರಾಧದ ಚಿಹ್ನವೆಂದು ಸ್ಪೆನ್ಸರನೆಂಬ ತತ್ವಜ್ಞಾನಿಯು ಹೇಳುತ್ತಾನೆ

ವ್ಯಕ್ತಿ ಸಂಬಂಧದ ಸ್ವಚ್ಛತೆಯು ಚಿಕ್ಕಗಳು ಯೋಗ್ಯ ಹಾಗು ನಿರ್ದುಷ್ಟಗಳಾದಾಗ್ಗ ಸ್ವಚ್ಛತೆಯು ಪೂರ್ಣವಾಗುವದು

ಸ್ವಚ್ಛತೆಯಿಂದ ಮನಸ್ಸಿಗೆ ಸಮಾಧಾನವಾಗುವದು ಸ್ವಂತ ಸನ್ಮಾನ ಬೆಳೆಯುವದು. ಮತ್ತು ಚಲೋದರಲ್ಲಿ ಅಭಿರುಚಿ ಹುಟ್ಟುವದು. ಮನುಷ್ಯನ ಸ್ವಚ್ಛತೆಗೆ ಕಾಯ್ದಿಗಳೂ ಜನನಿಂದೆಯೂ ಒತ್ತಾಯಮಾಡುತ್ತವೆ.

ಸ್ವಚ್ಛತೆಯ ಚಟ ಹುಡುಗರಿಗೆ ಹತ್ತಬೇಕಾದರೆ ಗ್ರಹ ಶಿಕ್ಷಣ(ಸ್ವಚ್ಛತೆಯಸಂಬಂಧಿವು)ಅವಶ್ಯವಾಗಿ ಬೇಕು ತಂದೆ ತಾಯಿಗಳು ಹೊಲಸು ಇದ್ದರೆ ಅವರ ಮಕ್ಕಳಿಗೆ ಸ್ವಚ್ಛತೆಯ ಚಟ ಹತ್ತುವದು ಕಠಿಣ. ಆದರೆ ಗ್ರಹ ಶಿಕ್ಷಣವು ಹ್ಯಾ

ಗೇ ಇರಲಿ ಎಲ್ಲ ಹುಡುಗರಿಗೆ ಮಾಸ್ತರನು ಸ್ವಚ್ಛತೆಯ ಚಿಟಹಚ್ಚಿತಕ್ಕದ್ದು.

ಸ್ವಚ್ಛತೆಯ ಚಿಟ ಹತ್ತಬೇಕಾದರೆ ೧ ಹೊಲಸಿದ್ದವನಿಗೆ ತಪ್ಪದೇ ಶಿಕ್ಷೆಯಾಗುತ್ತದೆಂಬ ನಿಶ್ಚಯವೂ ೨ ಸಾಲೆಯು ಮನೆಯೂ ಸುತ್ತಲಿನ ಸ್ಥಳವೂ, ಹವೆಯೂ ಸಾಲೆಯೊಳಗಿನ ಸಾಮಾನುಗಳೂ ಕಾಗದ ಪತ್ರಗಳೂ ಮಾಸ್ತರನ ಉಡುಗೆ ತೊಡಿಗೆಗಳೂ ಇವುಗಳ ಸ್ವಚ್ಛತೆಯೂ ಕಾರಣವಾಗಿರುವವು. ಉಪದೇಶಕ್ಕಿಂತ ಸ್ವಚ್ಛತೆ ಇಡಿಸುವ ದೃಢನಿಶ್ಚಯವೂ ಸ್ವಂತ ಉದಾಹರಣೆಯೂ ಬಲವತ್ತರವಾದ ಸಾಧನಗಳಾಗಿವೆ.

PRESENT FEMALE EDUCATION AND CIVILIZATION.

ಸಾಂಪ್ರತದ ಸ್ತ್ರೀ ಶಿಕ್ಷಣವೂ ಸುಧಾರಣೆಯೂ

(ಒಬ್ಬ ಸ್ತ್ರೀಯಿಂದ ಬರೆದು ಬಂದದ್ದು)

ಸಾಂಪ್ರತಕ್ಕೆ ನಮ್ಮ ಸ್ತ್ರೀಯರಿಗೆ ದೊರೆಯುತ್ತಿರುವ ಶಿಕ್ಷಣವು ಯಾವ ತರದ್ದು? ಅದರಲ್ಲಿ ಯಾವ ಯಾವ ಸುಧಾರಣೆಗಳನ್ನುಂಟು ಮಾಡಬೇಕಾಗಿರುವದು ಅವರಿಗೆ ಮೇಲ್ತರದ ಶಿಕ್ಷಣ ದೊರೆಯುವಂತೆ ಆವಾವ ಉಪಾಯಗಳನ್ನು ಮಾಡಬೇಕು. ಮುಂತಾದ ಸಂಗತಿಗಳನ್ನು ಕುರಿತು ದೊಡ್ಡ ದೊಡ್ಡ ಪಂಡಿತ ಜನರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ.

"ಸ್ತ್ರೀಯರಿಗೆ ಶಿಕ್ಷಣವು ಅವಶ್ಯವಿರುವದು" ಎಂಬ ಮಾತು ಬಹು ಜನ ಸಮ್ಮತವಾದದ್ದು. ಯಾಕೆಂದರೆ ಹುಡುಗರು ಮುಂದೆ ಒಳ್ಳೆಯವರಾಗುವದೂ ಕೆಟ್ಟವರಾಗುವದೂ ಅವರ ತಾಯಿಯ ಶಿಕ್ಷಣವನ್ನೇ ಅವಲಂಬಿಸಿರುವದು. ಆ ಕಾರಣದಿಂದ ಸ್ತ್ರೀಯರಿಗೆ ಯೋಗ್ಯ ಶಿಕ್ಷಣ ದೊರೆಯದಿದ್ದರೆ ಭಾವೀ ರಾಷ್ಟ್ರವು ಸುಧಾರಿಸುವದು ಅಸಂಭವವು. ಈ ಮಾತು ಎಲ್ಲರಿಗೂ ಗೊತ್ತಿದ್ದದ್ದೇ ಸರಿ.

ಸ್ತ್ರೀಯರ ಹೆಚ್ಚಳವು ಹೇಗಾಗುವದು? ಸಮಾಜದ ಸುಧಾರಣೆಯಾಗಲಿಕ್ಕೆ ಸ್ತ್ರೀ ಶಿಕ್ಷಣದಲ್ಲಿ ಯಾವ ಯಾವ ಹೆಚ್ಚು

ಕಡಿಮಗಳನ್ನು ಮಾಡಬೇಕು? ಈ ಬಗ್ಗೆ ಪುರುಷರಂತ ಸ್ತ್ರೀಯರಾದರೂ ವಿಚಾರಿಸತೊಡಗಿದ್ದಾರೆ. ತಮ್ಮ ಜ್ಞಾನಾ ಭಿವೃದ್ಧಿಯಾಗಬೇಕು. ತಮ್ಮ ದೇಶದ ಉನ್ನತಿಗೆ ತಮ್ಮ ಪ್ರಯತ್ನಗಳು ಕಾರಣವಾಗಬೇಕು, ಮುಂತಾದ ಕಲ್ಪನೆ ಗಳು ಅವರ ಮನಸ್ಸಿನಲ್ಲಿ ಬರಹತ್ತಿವೆ. ಇದಕ್ಕೋಸ್ಕರ ಕಳೆದ ವರ್ಷ ಮುಂಬಯಿ ನಗರದಲ್ಲಿ ರಾಷ್ಟ್ರೀಯ ಸಭೆಯ ಕಾಲಕ್ಕೆ ''ಭಾರತ ಮಹಿಲಾ ಪರಿಷತ್ತೆಂಬ ಮಹಾಸಭೆಯು ಕೂಡಿತ್ತು. ಆ ಸಭೆಯಲ್ಲಿ ಬಂದು ಜಾತಿಯು ಎಲ್ಲ ಧರ್ಮದ ಹಿಂದೂ ಸ್ತ್ರೀಯರ ಭಾಷಣಗಳಾದವು ಅದರಲ್ಲಿ ಹುಡುಗೆ ಯರಿಗೆ ಯೋಗ್ಯವಾದ ಶಿಕ್ಷಣವು ದೊರೆಯುತಕ್ಕದ್ದೆಂತಲೂ ಅವರಿಗೆ ಗ್ರಹಕೃತ್ಯದ ತಿಳುವಳಿಕೆ ಇರತಕ್ಕದ್ದೆಂತಲೂ ಅ ವರ ಉನ್ನತಿಗೆ ಸಾಂಪ್ರತದಲ್ಲಿ ದೊರೆಯುತ್ತಿರುವ ಶಿಕ್ಷಣದ ಲ್ಲಿ ಅನೇಕ ಸುಧಾರಣೆಯನ್ನುಂಟು ಮಾಡತಕ್ಕದ್ದೆಂತಲೂ ಹಳಿ ಪಳ್ಳಿಗಳಲ್ಲಿ ಸಹ ಸ್ತ್ರೀ ಶಿಕ್ಷಣವು ಪ್ರಸಾರ ಹೊಂದುವಂ ತೆ ಉಪಾಯಗಳನ್ನು ಕೈಕೊಳ್ಳಬೇಕೆಂತಲೂ ಬಹು ಜನ ವಿದುಷಿಯರು ಪ್ರತಿಪಾದಿಸಿದರು ಮುಂಬಯಿ ನಗರದಲ್ಲಿ 'ಮಹಿಲಾ ಸಮಾಜ' 'ಲೇಡೀಸೊಸೆಲ್‌ಕ್ಲಬ್', ಎಂಬ ಹೆಸರಿ ನ ಎರಡು ಸ್ತ್ರೀ ಸಂಸ್ಥೆಗಳು ಬಹು ದಿವಸಗಳ ಪೂರ್ವದಲ್ಲಿ ಯೇ ಸ್ಥಾಪಿಸಲ್ಪಟ್ಟಿವೆ. ಇವರು ಇತ್ತೀತ್ತ ಸಾತಾರೆಯಲ್ಲಿಯೂ ಇಂಥಾದ್ದೇ ಒಂದು ಸಭೆಯು ನೆರೆಯಹತ್ತಿರುತ್ತದೆ ಸೊಲ್ಲಾ ಪುರದಲ್ಲಿ ಸುಮಾರು ಎಂಟು ವರ್ಷಗಳ ಪೂರ್ವದಲ್ಲಿ ಇದೇ ತಂದ ಒಂದು ಸಭೆಗೂಡುತ್ತಿತ್ತು. ಉಮರಾವತಿ ವರ್ಧಾ ಮುಂತಾದ ಪಟ್ಟಣಗಳಲ್ಲಿಯೂ ಸ್ತ್ರೀ ಸಮಾಜಗಳುಂಟು ಆ ದರೆ ನಮ್ಮಾ ಕರ್ನಾಟಕದಲ್ಲಿ ಇಂಥ ಸಂಸ್ಥೆಗಳೊಂದೂ ಇಲ್ಲ. ಇಷ್ಟೇ ಅಲ್ಲ ಸ್ತ್ರೀಯರಿಗೆ ಮಾರ್ಗದರ್ಶಿಗಳಾದಂಥ ಗುರುಸ್ವರೂಪಿಗಳಾದ ಪುರುಷ ವರ್ಗವು ಇಂಥ ಪ್ರಯತ್ನದ ಲ್ಲಿ ತೊಡಗಿರುವದು ಸಹ ಕೇಳಿಕೆಯಲ್ಲಿಲ್ಲ. ಆದರೆ ಹೆಣ್ಣು ಮಕ್ಕಳ ಸಾಲೆಗಳಾದಂದಿನಿಂದ ಕೆಲಜನ ಸ್ತ್ರೀಯರಿಗೆ ಓದ ಬರಿಯಲಿಕ್ಕೆ ಬರುತ್ತದೆ. ಒಟ್ಟಿಗೆ ಇಲಾಖೆಯಲ್ಲಿ ಸ್ತ್ರೀ ಶಿಕ್ಷ ಣವು ಮುಂದಡಿಯನ್ನಿಕ್ಕುತ್ತ ನಡೆದಿರುತ್ತದೆಂತಲೂ ಅದರಿಂ

ದ ಕಾಲಾವಧಿಯಿಂದಾದರೂ ಪ್ರಯೋಜನವಾಗಬಹುದೆಂ
ತಲೂ ಊಹಿಸಲಿಕ್ಕೆ ಆಸ್ಪದವಾಗಿದೆ,

ಪೂರ್ವಕಾಲದಲ್ಲಿ ಸ್ತ್ರೀಯರಿಗೆ ಬಹಳ ಮರ್ಯಾದೆ ಇ
ತ್ತು ಅವರಿಗೆ ಇಂಥ ಪ್ರಕಾರದ್ದೇ ಶಿಕ್ಷಣವು ದೊರೆಯುತ್ತಿ
ತ್ತೆಂದು ನಿಶ್ಚಯವಾಗಿ ಹೇಳಲಿಕ್ಕೆ ಬರುವದಿಲ್ಲ, ಪ್ರಾಚೀ
ನ ಕಾಲದ ಸ್ತ್ರೀಯರಿಗೆ ಓದೋಣ, ಬರೆಯೋಣ, ಚಿತ್ರ ತೆ
ಗೆಯೋಣ ಮುಂತಾದ ವಿದ್ಯೆಗಳು ಚೆನ್ನಾಗಿ ಬರುತ್ತಿದ್ದವೆಂ
ಬದು ಭಾರತ ರಾಮಾಯಣಗಳಿಂದಲೂ, ಪಿಪ್ಪಲಾದ ಪುರಾಣದ
ಲ್ಲಿರುವ ಚಿತ್ರರೇಖೆಯ ವೃತ್ತಾಂತದಿಂದಲೂ ಸ್ಪಷ್ಟವಾಗಿ ಕಂ
ಡು ಬರುತ್ತದೆ, ಕೆಲವರು ತಮ್ಮ ವಿದ್ವತ್ತಿನಿಂದ ಗಂಡಸರ
ನ್ನು ಸಹ ಹಿಂದಕ್ಕೆ ದೂಡಿದ್ದರು ಎಂಬ ಬಗ್ಗೆ ಹಲವು ಕ
ಥಾನಕಗಳೂ ದಂತಕಥೆಗಳೂ ಆಧಾರವಾಗಿವೆ, ಶೌರ್ಯಾದಿ
ಸದ್ಗುಣಗಳು ಹಿಂದೂ ಸ್ತ್ರೀಯರಲ್ಲಿದ್ದವೆಂಬದು ಮೊನ್ನೆ ಮೊ
ನ್ನೆ ಆಗಿ ಹೋದ ಮಹಾರಾಣೀ ಲಕ್ಷ್ಮೀಬಾಯಿ ಗುಲಾಬ
ಬಾಯಿ ಮುಂತಾದವರ ಚರಿತ್ರೆಗಳಿಂದ ಮನವರಿಕೆಯಾಗು
ತ್ತದೆ. ಪೂರ್ವಕಾಲದ ಸ್ತ್ರೀಯು ಪತಿವ್ರತೆಯಾಗಿರೂ ಸ್ವಧರ್ಮ
ನಿರತರೂ ಸದಾಚಾರಿಗಳೂ ಇದ್ದದ್ದಲ್ಲದೆ ತಮ್ಮ ಮನೆಗೆ
ಲಸಗಳಲ್ಲಿ ದಕ್ಷರಾಗಿದ್ದರು. ಸ್ವಲ್ಪ ವರ್ಷಗಳ ಹಿಂದೆ ಆಗಿ
ಹೋದ ಅಹಲ್ಯಾಬಾಯಿ ಬಾರಾಜಾಬಾಯಿ ಲಕ್ಷ್ಮೀಬಾ
ಯಿ ಮುಂತಾದವರ ಚರಿತ್ರೆಗಳಿಂದ ಕೂಡ ಇವರು ಸದಾ
ಚಾರಿಗಳೂ ಸುಶಿಕ್ಷಿತರೂ ಪತಿವ್ರತೆಯರೂ ಶೂರರೂ ಆಗಿ
ದ್ದರೆಂಬದು ವ್ಯಕ್ತವಾಗುತ್ತದೆ. ಆದರೂ ಶಿಕ್ಷಣದಿಂದ ಪ್ರಾ
ಪ್ತವಾದ ಉನ್ನತ ವಿಚಾರಗಳೂ ಸುಗುಣಗಳೂ ಯಾವ
ತ್ತೂ ಸ್ತ್ರೀಯರಲ್ಲಿ ತೋರಿ ಬರುತ್ತಿದ್ದಿಲ್ಲ. ಕ್ವಚಿತ ಸ್ತ್ರೀಯ
ರಲ್ಲಿ ಮಾತ್ರ ಇವು ವಾಸ ಮಾಡುತ್ತಿದ್ದವೆಂದು ವ್ಯಕ್ತವಾಗು
ವದು. ಇದು ವಾಸ್ತವಿಕವೇ ಸರಿ. ಶಿಕ್ಷಣ ಸಂಸ್ಕಾರವು ಸ
ರ್ವರಿಗೂ ಸರಿಯಾಗಿ ಆಗಲಾರದೆಂಬದು ಸ್ಪಷ್ಟವೇ. ಇದ
ರಿಂದ ಈಗ ನಡೆದಿರುವ ಸ್ತ್ರೀ ಶಿಕ್ಷಣದ ಚಲನ ವಲನವು
ತೀರ ಹೊಸದಲ್ಲವೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಆದರೆ ಆ
ದಕ್ಕೆ ಹೊಸರೂಪ ಮಾತ್ರ ಬಂದಿರುತ್ತದೆ. ಸುಮಾರು ಐ

ವತ್ತು ವರ್ಷಗಳಿಂದತ್ತ ಈ ಹೊಸ ಸ್ತ್ರೀ ಶಿಕ್ಷಣದ ಕಡೆಗೆ ನಮ್ಮ ಜನರು ಲಕ್ಷ್ಯ ಕೊಡಹತ್ತಿದರು. ಅವರು ಹೆಣ್ಣುಮಕ್ಕಳಿಗೋಸ್ಕರ ಶಾಲೆಗಳನ್ನು ಸ್ಥಾಪಿಸಿ, ಮಧ್ಯಮ ಪ್ರತಿಯ ಶಿಕ್ಷಣದ ಮಾರ್ಗವನ್ನು ಆರಂಭಿಸಿದರು. ಮುಂದೆ ವಿಚಾರ ಬೆಳೆದಂತೆ ಅದರಲ್ಲಿ ಸುಧಾರಣೆಯೂ ಬೆಳೆಯುತ್ತ ನಡೆಯಿತು. ಬಳಿಕ ಮೇಲ್ತರದ ಶಿಕ್ಷಣವನ್ನು ಕೊಡುವದಕ್ಕೆ ಪ್ರಾರಂಭ ಮಾಡಿದರು. ಪುಣೆ, ಮುಂಬಯಿ, ಅಮದಾಬಾದ ಮುಂತಾದ ಪಟ್ಟಣದಲ್ಲಿ ಹೆಣ್ಣುಮಕ್ಕಳಿಗಾಗಿ ಆಂಗ್ಲಭಾಷೆಯ ಶಾಲೆಗಳೂ ಪುಣೆ ಅಮದಾಬಾದ ಧಾರವಾಡಗಳಲ್ಲಿ ಫೀಮೇಲ ಟ್ರೇನಿಂಗಕಾಲೇಜಗಳೂ ಸ್ಥಾಪಿತವಾದವು ಹೆಣ್ಣುಮಕ್ಕಳ ಶಾಲೆಗಳಿಗೆ ಶಿಕ್ಷಕಿಯರು ದೊರೆಯಲಾರಂಭಿಸಿದರು. ಈ ಬಗೆಯಾಗಿ ನಾಲ್ಕು ಕಡೆಯಿಂದ ಸ್ತ್ರೀಶಿಕ್ಷಣವು ವೇಗದಿಂದ ನಡೆದಿರುವದರಿಂದ ಸ್ತ್ರೀಯರು ಸುಧಾರಿಸಿದರೆಂದು ಮಾತ್ರ ತಿಳಿಯಲಾಗದು. ಜನರ ಸುಧಾರಣೆಗೆ ಇನ್ನೂ ಮುಟ್ಟೇ ಇಲ್ಲ. ಮನುಷ್ಯನು ತಮ್ಮ ಹಾಗೂ ತಮ್ಮ ದೇಶದ ಉನ್ನತಿಯುಹ್ಯಾಗಾಗುವದೆಂಬದನ್ನು ವಿಚಾರದಿಂದನಿರ್ಧರಿಸಿ ಅದನ್ನನುಗುಣವಾದ ಮಾರ್ಗವನ್ನು ಹಿಡಿಯುವದೂ ಆ ಮಾರ್ಗವನ್ನು ಹಿಡಿಯಲಿಕ್ಕೆ ತಕ್ಕದ್ದಾದಂಥ ಮನಃಸುಧಾರಣೆಯನ್ನು ಪಡೆಯುವದೂ ನಿಜವಾದ ಶಿಕ್ಷಣದ ಪ್ರಭಾವವೆನಿಸುವದು. ಇಂಥ ಶಿಕ್ಷಣವನ್ನು ಪಡೆಯುವದವರ ಬಾಳು ವ್ಯರ್ಥವೆಂದು ಹೇಳುವ ಕಾರಣವಿಲ್ಲ. ಈ ತತ್ವದಿಂದ ವಿಚಾರ ನಡೆಸಿದರೆ ನಮ್ಮ ಸ್ತ್ರೀ ವರ್ಗವು ನಿಜವಾದ ಶಿಕ್ಷಣವನ್ನು ಬಿಟ್ಟು ಕೇವಲ ಪರರ ಅನುಕರಣ ಮಾಡಲಿಕ್ಕೆ ಪ್ರಾರಂಭಿಸಿರುವದೆಂದು ಕಾಣುವದು. ಈ ಬಗ್ಗೆ ಪುರುಷವರ್ಗವೂ ವಿಚಾರ ಮಾಡತಕ್ಕದ್ದು ಒಳಗಡೆಯ ಹತ್ತೆಂಟು ವರ್ಷಗಳಲ್ಲಂತೂ ಬರ ಪಿಡುಗುಗಳ ಹಾವಳಿಯಿಂದ ಶಿಕ್ಷಣವು ಬಹು ಮುಂದವಾಗಿ ಸಾಗುವದು. ಇವೆರಡು ಬಾಧೆಯಿಂದ ನಾವೆಲ್ಲರು ನಿರ್ವಿಣ್ಣರಾಗಿ ಹೋಗಿದ್ದೇವೆ ಈ ಪ್ರಕಾರ ಕಷ್ಟದ ಸ್ಥಿತಿಯಲ್ಲಿ ಶಿಕ್ಷಣವು ಸರಿಯಾಗಿ ಸಾಗುವದು ಅಸಂಭವವೇ ಸರಿ. ಅಂದಬಳಿಕ ಸುಧಾರಣೆಯಾಗುವ ಬಗೆಯೇನು?

ಅರ್ವಾಚೀನ ಪದ್ಧತಿಯ ಶಿಕ್ಷಣವು ಮೊದಲು ಪುಣೆ, ಮುಂಬೈಮುಂತಾದಮಹಾರಾಷ್ಟ್ರ ಪ್ರದೇಶದಲ್ಲಿ ತಲೆದೋರಿತು ಅಲ್ಲಿಂದ ಅದು ಮೆಲ್ಲ ಮೆಲ್ಲನೆ ನಮ್ಮ ಕರ್ನಾಟಕಕ್ಕೂ ಮುಟ್ಟಿತು. ಆದರೂ ಮೇಲ್ಮರದ ಶಿಕ್ಷಣವು ಪುಣೆ ಮುಂಬಯಿ ಇವೆರಡೇ ನಗರಗಳಲ್ಲಿ ದೊರೆಯುವದು. ಕರ್ನಾಟಕದಲ್ಲಿ ಅದರ ವಾರ್ತೆಯು ಕೂಡ ಇಲ್ಲ. ಅಲ್ಲಿಯಾದರೂ ಅದು ಕೇವಲ ಶ್ರೀಮಂತ ಜನರ ಸ್ತ್ರೀಯರಿಗೆ ಉಪಯೋಗವುಳ್ಳದ್ದಾಗಿತ್ತು. ಈ ಪ್ರಕಾರ ಶಿಕ್ಷಣದಿಂದ ಶಿಕ್ಷಿತರಾಗುವ ಹುಡಿಗೆಯರು ನೂರರಲ್ಲಿ ಇಬ್ಬರು ದೊರೆಯುವದು ಸಹ ದುರ್ಲಭ ಈ ಪರದೇಶದ ಶಿಕ್ಷಣದಿಂದ ಮಹಾರಾಷ್ಟ್ರ ಮುಂಬಯಿ ಕಡೆಯ ಸ್ತ್ರೀಯರ ಆಚಾರ ವಿಚಾರ ಉಡಿಗೆ ತೊಡಿಗೆಗಳಲ್ಲೆಲ್ಲ ಸ್ಥಿತ್ಯಂತರವುಂಟಾಗಿರುತ್ತದೆ. ಈ ಸ್ಥಿತ್ಯಂತರವು ನಮ್ಮ ಇರುವಿಕೆಗೂ ಬಾಳುವೆಗೂ ಅನುಕೂಲವಾದವುಗಳೂ ಪ್ರಯೋಜನವಾದವುಗಳೂ ಅಲ್ಲವೆಂದು ನಾವು ನಿಷ್ಕರ್ಷವಾಗಿ ಹೇಳುತ್ತೇವೆ.

ಪಾಶ್ಚಿಮಾತ್ಯರ ಶಿಕ್ಷಣ ಪದ್ಧತಿಯನ್ನು ನಾವು ಕುರುಡರಂತೆ ಅನುಸರಿಸಿದರಿಂದ ನಮ್ಮಲ್ಲಿ ಒಣ ಡೌಲು ಮನೆ ಮಾಡಿಕೊಂಡಿತು. ಪುಣೆ, ಮುಂಬಯಿ ಕಡೆಯ ಕಲಿತ ಹೆಣ್ಣು ಮಕ್ಕಳನ್ನು ನೋಡಿದರೆ ನಮ್ಮ ಬರಹದ ಸತ್ಯತೆಯು ವ್ಯಕ್ತವಾಗುವದು. (ಷಶೇಷ)

CORRESPONDENCE.
ಪತ್ರವ್ಯವಹಾರ.

ಶ್ರೀ

ರಾಜಮಾನ್ಯ ರಾಜಶ್ರೀ ಶಾಲಾಪತ್ರಕದ ಕರ್ತರ ಸನ್ನಿಧಿಗೆ ಸಾಷ್ಟಾಂಗ ನಮಸ್ಕಾರ ವಿನಂತಿ— ಈ ದೀಪಾವಳಿಯ ಸುಟ್ಟಿಯಲ್ಲಿ ನಾನು ಮೈಸೂರಿಗೆ ಹೋಗಿರಲು ಅಲ್ಲಿ ಅನೇಕ ಸ್ಥಳಗಳನ್ನು ನೋಡಿದೆನು, ಅವುಗಳಲ್ಲಿ ಕಿವುಡರ ಮೂಕರ ಸಲುವಾಗಿ ಇಟ್ಟ ಶಾಲೆಯನ್ನು ನೋಡಹೋಗಿರಲು ಅಲ್ಲಿಯ ವ್ಯವಸ್ಥಾಪಕರು ನಾನು ಹೆಣ್ಣು ಮಕ್ಕಳಾದರೂ ಬ

ಹುಮಾನ ಪೂರ್ವಕವಾಗಿ ನಮ್ಮನ್ನು ಬರಮಾಡಿಕೊಂಡಿಲ್ಲದೆ, ಆಸ್ಥೆಯಿಂದ ಶಾಲೆಯಲ್ಲಿ ನಡೆಯುವ ಎಲ್ಲ ಕೆಲಸಗಳನ್ನು ತೋರಿಸಿದರು. ನಾವು ಅಲ್ಲಿ ಕಂಡ ಸಂಗತಿಗಳನ್ನು ಇದರಡಿಯಲ್ಲಿ ಬರೆದಿದ್ದೇವೆ. ಯೋಗ್ಯ ಕಂಡರೆ ಮುದ್ರಿಸೋಣವಾಗಬೇಕು.

ದುರ್ದೈವಿಗಳಾಗಿ ಕಿವಿ ಬಾಯಿಗಳನ್ನು ಕಳಕೊಂಡಂಥ ಜನರಿಗೆ ಶಿಕ್ಷಣ ಕೊಡುವದಕ್ಕಾಗಿ ದಯಾಳುಗಳಾದ ಮೈಸೂರ ಮಹಾರಾಜರವರು ಮೈಸೂರಲ್ಲಿ ಒಂದು ಓದುಮನೆಯನ್ನು ಸ್ಥಾಪಿಸಿ ಅಲ್ಲಿ ಕಲಿಯುತಕ್ಕ ಬಡ ವಿದ್ಯಾರ್ಥಿಗಳಿಗೆ ಊಟ ಉಡಿಗೆಯ ವ್ಯವಸ್ಥೆಯನ್ನು ಸಹ ಮಾಡಿರುವರು. ಈ ಪ್ರಕಾರದ ಜನರಿಗೆ ಕಲಿಸುವಂಥ ಶಾಲಾಗೃಹಗಳು ನೆಮ್ಮ ಭರತ ಭೂಮಿಲ್ಲಿ ಎರಡೇ ಇರುತ್ತವೆ. ಒಂದು ಕಲಕತ್ತೆಯಲ್ಲಿ ಮತ್ತೊಂದು ಈ ಪಟ್ಟಣದಲ್ಲಿ. ಇಡೀ ಭರತ ಖಂಡದಲ್ಲಿ ಕುರುಡರು ಆರುಲಕ್ಷ ಮೂಕರು ಎರಡು ಲಕ್ಷ ಜನರಿರುತ್ತಾರೆ. ಈ ಪ್ರಕಾರದ ಶಾಲೆಗಳಿಲ್ಲದಿದ್ದರೆ ಈ ಎಲ್ಲ ಜನರು ಅಜ್ಞಾನಾವಸ್ಥೆಯಲ್ಲಿಯೇ ಇರಬೇಕಾಗುತ್ತಿತ್ತು. ಈ ದುರವಸ್ಥೆಯನ್ನು ಕೆಲಮಟ್ಟಿಗಾದರೂ ಕಡಿಮೆ ಮಾಡಬೇಕೆಂದು ಈ ಪ್ರಕಾರದ ವ್ಯವಸ್ಥೆಯನ್ನು ಮಾಡಿರುತ್ತಾರೆ

ಮೂಕರ ಶಿಕ್ಷಣ:— ಈ ಜನರಿಗೆ ಕೈಗಾರಿಕೆಯ ಕೆಲಸಗಳಾದ ನೂಲು ತೋಡೋಣ, ಅರಿವೇ ನೆಯ್ಯೋಣ, ಅಂಗಿ, ಟೊಪ್ಪಿಗೆ, ಕೋಟು ಮುಂತಾದವುಗಳನ್ನು ಕತ್ತರಿಸಲಿಕ್ಕೂ ಹೊಲಿಯಕ್ಕೂ ಕಲಿಸೋಣ ಮುಂತಾದವುಗಳ ಕಡೆಗೆ ವಿಶೇಷ ಲಕ್ಷ ಕೊಡುತ್ತಾರೆ. ಅವರಿಗಾದರೂ ಈ ವಿಷಯಗಳು ಅಲ್ಪ ಶ್ರಮದಿಂದ ಸಾಧ್ಯವಾಗುತ್ತವೆ. ಇವರಿಗೆ ಓದು ಬರೆಯಲಿಕ್ಕೂ ಗಣಿತ ಮಾಡಲಿಕ್ಕೂ ಕಲಿಸಿರುತ್ತಾರೆ. ಇವರಿಗೆ ಕಲಿಸಬೇಕಾದರೆ ಕ್ರಮದಿಂದ ಮೂಲಾಕ್ಷರಗಳನ್ನು ಕಲಿಸುವದಿಲ್ಲ. ಅವರಿಗೆ ಸುಲಭವಾಗಿ ಉಚ್ಚರಿಸಲಿಕ್ಕೆ ಬರುವಂಥ ಅಪ್ಪ, ಅವ್ವ, ಅಣ್ಣ, ಅಕ್ಕ, ಮುಂತಾದ ಶಬ್ದಗಳನ್ನು ಶಿಕ್ಷಕರು ಹುಡುಗನ ಮುಂದೆ ಕೆಲವು ಸಾರೆ ಅಂದು ಅವರಿಂದ

ಅನಿಸಿ, ಅವುಗಳ ಗುರುತನ್ನು ಬರೆಯು ಹೇಳುವರು ಬಳಿಕ ಹೀಗೆ ನಿಮ್ಮ ತಂದೆಗೆ ಅನ್ನುತ್ತಾರೆಂದು ಸನ್ನೆಯಿಂದ ತಿಳಿಸುವರು. ಸುಲಭದಿಂದ ಉಚ್ಚರಿಸಲಿಕ್ಕೆ ಅಂದರೆ ಉಚ್ಚರಿಸುವವರ ಬಾಯಿಯನ್ನು ನೋಡಿ ಅನ್ನಲಿಕ್ಕೆ ಬಾರದಂಥ ವುಗಳನ್ನು ಹುಡುಗರ ಮುಂದೆ ಬಹಳ ಹೊತ್ತು ಅಂದು ಎಲ್ಲಿಂದ ಆ ಸ್ವರ ಹುಟ್ಟುತ್ತದೋ ಅಲ್ಲಿ ಕೈ ಹಚ್ಚಿ ಅಲ್ಲಿಂದ ಅವರಿಂದ ನುಡಿಸುವರು ಈ ಪ್ರಕಾರ ಎಲ್ಲ ಅಕ್ಷರಗಳನ್ನು ಕಲಿಸಿ ಪ್ರತಿಯೊಂದು ಶಬ್ದಗಳನ್ನು ಬರಿಸಿ, ಪ್ರತ್ಯಕ್ಷ ವಸ್ತುಗಳನ್ನು ತೋರಿಸಿ ಅವುಗಳ ಜ್ಞಾನ ಮಾಡಿಕೊಡುವರು ಈ ಪ್ರಕಾರ ಕಲಿತು ಓದಲಿಕ್ಕೆ ಹತ್ತುವರು. ಓದುವಾಗ ಸ, ಹ, ಮುಂತಾದ ಕೆಲವಕ್ಷರಗಳನ್ನು ನುಡಿಯಲಿಕ್ಕೆ ಹುಡುಗರಿಗೆ ವಿಶೇಷ ಶ್ರಮವೆನಿಸುವದು ಇದೇ ಪ್ರಕಾರ ಶುದ್ಧ ಬರಹವನ್ನಾದರೂ ಹುಡುಗರು ಬರೆಯುವರು. ಮಾತ್ರ ಮಾಸ್ತರರು ಹುಡುಗನ ಎದುರಿಗೆ ನಿಂತು ಒಂದೊಂದು ಶಬ್ದವನ್ನು ಎರಡೆರಡು ಮೂರು ಮೂರು ಸಾರೆ ಅಂದು ಹೇಳಬೇಕಾಗುವದು. ಇದೇ ಪ್ರಕಾರ ಅಂಕಿಗಳನ್ನು ಬರೆಯಲಿಕ್ಕೂ ಬೇರಿಜು, ವಜಾಬಾಕಿ, ಗುಣಾಕಾರ, ಭಾಗಾಕಾರಗಳ ವರಗೆ ಲೆಖ್ಖ ಮಾಡಲಿಕ್ಕೂ ಕಲಿಸುವರು. ಈ ಪ್ರಕಾರ ಹುಡುಗರು ಲೆಖ್ಖ ಮಾಡುವದನ್ನು ನೋಡಿ, ಆಶ್ಚರ್ಯವಾಯಿತು ಗುಣಾಕಾರ ಮಾಡುವಾಗ ಗುಣ್ಯವನ್ನು ಗುಣಕದಷ್ಟು ಸಾರೆ ಇಟ್ಟು ಕೂಡಿಸಿ ಮಾಡುವರು. ಮಾಸ್ತರರು ಪ್ರತಿಯೊಂದು ಕೆಲಸವನ್ನು ಮಾಡಿಸುವಾಗ ಆ ಹುಡುಗರ ಬೆನ್ನ ಮೇಲೆ ಕೈಯಾಡಿಸುವದೂ ಗಲ್ಲ ಹಿಡಿಯುವದೂ ಮಾಡುವದನ್ನು ಕಂಡು ಈ ಪ್ರಕಾರ ಪ್ರೀತಿಯಿಂದ ಕಲಿಸಿದರೇ ಇವರು ಕಲಿಯುತ್ತಿರಬಹುದೆಂದು ತೋರುತ್ತದೆ.

ಕುರುಡರ ಶಿಕ್ಷಣ:— ಇವರಿಗೆ ಗಾಯನ ಕಲೆಯು ಅತ್ಯುತ್ತಮವಾಗಿ, ಕಲಿಸಲ್ಪಡುತ್ತದೆ ಸತಾರವನ್ನೂ ಪಿಟೀಲವನ್ನೂ ಉತ್ಕೃಷ್ಟ ರೀತಿಯಿಂದ ಬಾರಿಸುವರು ಇವರಿ

ಗೆ ಓದು ಬರೆಯಲಿಕ್ಕೆ ಕಲಿಸುವದು ಮೂಳಂಗೆ ಕಲಿಸು
ವದಕ್ಕಿಂತ ಹಗರು. ಇವರಿಗೆ ಕಲಿಸುವ ಅಕ್ಷರಗಳ ರಚ
ನೆಯು ಬೇರೆ ತೆರದ್ದಾಗಿರುವದು ಮೊದಲು ಕಲಿಯುವ
ಹುಡುಗರಿಗೆ ನಾವು ಅಕ್ಷರಗಳ ತುಂಡುಗಳನ್ನು ಕೊಟ್ಟು
ಕೂಡಿಸಲಿಕ್ಕೆ ಹೇಳುವಂತೆ ಈ ಹುಡುಗರಿಗೆ ಮೂರು
ಮೂರು ತಗ್ಗಿಗಳ ಎರಡು ಸಾಲುಳ್ಳ ಒಂದು ಕಟ್ಟಿಗೆಯ
ತುಂಡನ್ನೂ ಅರು ಗೋಲೀ ಗುಂಡುಗಳನ್ನೂ ಕೊಡುವರು
ಮೇಲಿನ ತಗ್ಗಿನಲ್ಲಿ ಒಂದು ಗೋಲಿಯನ್ನಿಟ್ಟು ಕೈಯಾಡಿಸಿ
ಬರೆ ಒಂದು ದಿಬ್ಬು ಕೈಗೆ ಹತ್ತುವದು. ಈ ಪ್ರಕಾರದ
ಗುರುತು ಕೈಗೆ ಹತ್ತಿದರೆ ಅದಕ್ಕೆ 'ಅ' ಅನ್ನಬೇಕು. ಒಂದ
ರ ಕೆಳಗೊಂದು ಎರಡು ಹತ್ತಿದರೆ ಆ ಅನ್ನಬೇಕು ಇದೇ
ಪ್ರಕಾರ ಎಲ್ಲ ಸ್ವರಾಕ್ಷರಗಳನ್ನೂ, ವ್ಯಂಜನಾಕ್ಷರಗಳ
ನ್ನೂ ಕಲಿಸಿದ ಮೇಲೆ ಪ್ರತಿ ಒಂದು ವ್ಯಂಜನದ ಮುಂದೆ
ಸ್ವರಾಕ್ಷರದ ಗುರುತುಗಳಿದ್ದಂತೆ ಅವರು ಗುಣಿತಾಕ್ಷರಗ
ಳನ್ನೂ ಉಚ್ಚರಿಸುವರು. ಈ ಪ್ರಕಾರ ಕಲಿತ ಬಳಿಕ ಅವ
ರಿಗೋಸ್ಕರವಾಗಿಯೇ ಒಳ್ಳೇ ದಪ್ಪಾದ ಕಾಗದದಲ್ಲಿ ಸೂಜಿ
ಗಳ್ಳನ್ನು ಚುಚ್ಚಿ ಮುಳ್ಳುಗಳನ್ನು ಎಬ್ಬಿಸಿಲಿ ಉಬ್ಬಿದ ಮು
ಳ್ಳುಗಳ ಮೈಮೇಲೆ ಕೈಯಾಡಿಸಿ ಕುರುಡರು ಉತ್ತಮ ಪ್ರ
ಕಾರವಾಗಿ ಓದುತ್ತಾರೆ. ಈಗ ಅವರಿಗೋಸ್ಕರವಾಗಿ ಆ
ಪ್ರಕಾರದ ಪುಸ್ತಕಗಳೂ ವರ್ತಮಾನ ಪತ್ರಗಳೂ ತಯಾ
ರಾಗಿವೆ. ಇದೇ ಪ್ರಕಾರ ಇಂಗ್ಲಿಷ ಅಕ್ಷರಗಳನ್ನು ಸಹ
ಬರೆಯುವರು. ಬರೆಯುವಾಗ ಸಾಲುಗಳು ಸೊಟ್ಟಾಗ
ಬಾರದೆಂದೂ ಅಕ್ಷರಗಳು ಒಂದರ ಮೇಲೊಂದು ಕೂಡ್ರ
ಬಾರದೆಂದೂ ಸಾಲಾಗಿ ತೂತುಗಳನ್ನು ಕೊರೆದ ದಪ್ಪಾದ
ತಗಡುಗಳನ್ನೂ ಡಬ್ಬಣದಂಥ ಒಂದು ಕಬ್ಬಿಣದ ತುಂಡ
ನ್ನೂ ಮಾಡಿಸಿರುವರು ಈ ಪ್ರಕಾರದ ಗುರುತುಗಳಿಂದ
ಬರೆದ ಒಂದು ಇಂಗ್ಲೀಜೆ ಪತ್ರವು ಒಬ್ಬ ಕುರುಡನಿಂದ
ಮೈಸೂರ ಶಾಲೆಯ ಮಾಸ್ತರರಿಗೆ ಬಂದದ್ದನ್ನು ನೋಡಿದೆ
ವು. ಇದೇ ಪ್ರಕಾರದ ಗುರುತುಗಳಿಂದಲೇ ಸಂಖ್ಯೆಯನ್ನು

ಕಲಿಸುವದು. ಇವರೂ ಗಣಿತವನ್ನು ಉತ್ತಮ ಪ್ರಕಾರವಾ
ಗಿ ಮಾಡುವರು. ಇವರು ತಮ್ಮ ಅಧ್ಯಾಪಕರಿಗೆ ಬಹು ವಿ
ಧೇಯರಾಗಿ ನಡೆಯುತ್ತಾರೆ. ಯಾರಾದರೂ ಶಾಲೆಯನ್ನು
ನೋಡಲಿಕ್ಕೆ ಹೋದರೆ ಈ ಜನರು ಬಹು ಸಂತೋಷ ಭ
ರಿತರಾಗಿ ತಮ್ಮ ನೈಪುಣ್ಯವನ್ನು ಪರೀಕ್ಷಕರಿಗೆ ತೋರಿಸುವ
ರು. ಈ ಶಾಲೆಯಲ್ಲಿ ಸಣ್ಣ ಹುಡುಗರು ಮೊದಲ್ಗೊಂಡು
೫೦-೫೫ ಪರುಷದವರವರೆಗೆ ಇರುವರು

ಮಹಾಶಯರೆ, ಪತ್ರವಿಸ್ತಾರಕ್ಕೆ ಕ್ಷಮಿಸುವಿರೆಂದು ನಂ
ಬಿದ್ದೇನೆ

ಧಾರವಾಡ
20 - 12 - 1905 } R. P.

DHARWAR TRAINING COLLEGE CERTIFICATE EXAMINATION. 1905.

೨ನೇ ವರ್ಷ.

ಬುಧವಾರ, ೪ನೇ ಅಕಟೋಬರ.

[೧೦ ಘಂಟೆ ಯಿಂದ ೧೨]

ವ್ಯಾಕರಣ

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು)

೧. ಕೆಳಗೆ ಬರದ ಸೂತ್ರಗಳ ಅರ್ಥವನ್ನು ಮೃತ್ಯು
ದಾಹರಣೆಗಳಿಂದ ಪೂರ್ಣ ಮಾಡಿಕೊಂಡು ಬರಿ. ಮು
ತ್ತು ಪ್ರತಿಯೊಂದು ವಿಧಿಗೆ ಉದಾಹರಣೆಗಳನ್ನು
ಕೊಡು:— ೧೨

ಸ್ವಾರ್ಥೆಂ ಪ್ರಥಮಾರ್ಥ ತೃತೀ
ಯಾರ್ಥ ಚತುರ್ಥ್ಯರ್ಥದೊಳ್ದ್ವಿತೀಯೆ ತೃತಿಯೋ
ಕ್ತಾರ್ಥದೊಳಾ ಸಪ್ತಮಿಯಿಸ
ಮರ್ಥಂ ಪಂಚಮಿಯೊಳಂ ತೃತಿಯೇ ಸಮರ್ಥಂ
ಕೃತಿಯುಕ್ತಂ ಪಷ್ಠಿಯೊಳಂ
ದ್ವಿತೀಯೆಯೊಳಮಾ ಚತುರ್ಥಿ ಸಪ್ತಮಿಯೊಳೆ ಸಂ
ಗತಮಾ ಪ್ರಥಮಾಪಷ್ಠೀ
ಚತುರ್ಥಿಗಳ್ ಪ್ರಥಮೆಯುಂ ದ್ವಿತೀಯೆಯೊಳಕ್ಕುಂ

೩. ಕೆಳಗಿನ ಉದಾಹರಣೆಗಳಲ್ಲಿ ವ್ಯಾಕರಣದ ವಿಶೇಷ ನಿಯಮಗಳನ್ನು ಹೇಳು:—

(ಅ) ಸಿರಿಯರಸಂ ಮೂದೇವಂ ಸರಸತಿಯಿರೆಯ ಕರ್ಣಪಡಿಗಳ್.

(ಬ) ಎನಿತ್ತ ನಿತ್ತಂಬುಜಪತ್ರ ನೇತ್ರೆಯೂ
ಘನಸ್ತನಂಗಳ್ ಬಳಿಗುಂಕಿರಾತೆಯೂ
ಅನಿತ್ತನಿತ್ತುಂ ವನದೊಳ್ ವನೇಚರಂ
ತನತ್ತು ಬಿಲ್ಲಾನದ ದನ್ತೆಕೇಸುವಂ

(ಕ) ನಮೋಸ್ತುಗಳಿರ್ವಂದದಿನಿರ್ದಂ

(ಡ) ಬಾರ, ವಂರಾಳಕಾಗಮನೆ ನೋಡ, ಚಕೋರ ವಿಲೋಲ ನೇತ್ರೆ

೪. ಕೆಳಗಿನ ಪ್ರಯೋಗಗಳಲ್ಲಿ ವ್ಯಾಕರಣ ದೋಷಗಳನ್ನು ಆಧಾರಸಹಿತ ಹೇಳು:—

(ಅ) ಆರಿದ ನೋಡಿಸಿದವನೆನೆ । ಆರಿದ ನೋಡಿಸಿದನೆಂದು ಪಡಿನುಡಿಗುಡುವರ್

(ಬ)ತೊಳಪ ಕದಂಪಿನೊಳೆಳಲು ತೊಪ್ಪಿರೆ ಕೇಸರಂ

(ಕ) ಕೊಳದತ್ತಣೆ ಬಂದಂ

(ಡ) ಗುಣಗಳ್ ಗುಣಿಗಣಕ್ಕೆ ಭೂಷಣಂಗಳ್

(ಇ) ಆವಂ ಪೊನ್ನುಳ್ಳವನೆ ಕುಲೀನಂ

೪. ಲಿಂಗ, ನೇಯ, ಉಮುವಿಧಿ, ಕುಳ, ಕ್ಷಳ, ಈ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಹೇಳು. ಕೇಶಿರಾ

ಜನ ವ್ಯಾಕರಣದಲ್ಲಿ ಸಂಧಿ ಶಬ್ದಕ್ಕೆ ಏನಾದರೂ ವಿಶೇಷ ಉಂಟೋ ? ೬

೫ ಕೆಳಗಿನ ಶಬ್ದಗಳಲ್ಲಿ ತತ್ಸಮಗಳಿಗೆ ತದ್ಭವಗಳನ್ನೂ ತದ್ಭವಗಳಿಗೆ ತತ್ಸಮಗಳನ್ನೂ ಬರಿ:— ೫

ಉಜ್ಜಣಿ, ಪಸಡನಂ, ಮುಕ್ಕಟಂ, ಉತ್ತರಿಗೆ, ತಾಣಬಟ್ಟಂ, ಮಹಾಪಥಂ, ತಿಸುಳಂ, ಅಂತಃಪುರಂ, ಪಂಜರಪಕ್ಷಿ, ಚಿತ್ರಕಾರಂ.

೬. ನೆಲುವು, ಅಡಗೂಲಜ್ಜಿ, ಮೇಕೆ, ಕುಣಿ, ಕರುಣ ಹೋರಿ, ಈ ಶಬ್ದಗಳ ಉತ್ಪತ್ತಿಯನ್ನು ಹೇಳು. ೬

೭. ಕೆಳಗಿನ ಪದ್ಯಗಳ ವೃತ್ತಗಳನ್ನು ಬರಿ:— ೭

(ಅ) ಚೆಲ್ವನಾಂತು ತೋರ್ಪ ಬನದ }
ನಡುವೆ ತನ್ನದೊಂದು ಬಿನದ }

(ಬ) ನೀರಿನಲ್ಲಿರು ತೋಜಃ ಪ್ರ
ಣ್ಯಾನಂದಾವೋದ ಸಂಪದಂಗಳಿಗೆ

(ಕ) ಖಿಳರ ಪುರುಷಾರ್ಥಮುಂ ಕಾಮಿಸುವ ಯಾ
ಚಕಾವಳಿಯಂತೆ ಪೊಳಲಿಂದ ಪೊರಮಟ್ಟು ಸ
ರಸಿಯೋಳ್ಮುಳುಗುತಿಪ್ಪಾನೆಗಳ ದಾನಾಭಿಲಾ
ಷೆಯುಂ ಬಿಟ್ಟಳಿಕುಲಂ ತೊಲಗಲು.

೮. ಕಂದ, ವೈತಾಳಿಕ, ಔಪಚ್ಛಂದಸಿಕ, ಭೋಗಷಟ್ಪದಿ, ಇವುಗಳ ಲಕ್ಷಣಗಳನ್ನು ಉದಾಹರಣೆ ಸಹಿತವಾಗಿ ಬರಿ. ೪

೯. ಲಘುಗಳಿಗೆ ಗುರುತ್ವ ಗುರುಗಳಿಗೆ ಲಘುತ್ವ ಯಾವ ಯಾವ ಪ್ರಸಂಗಗಳಲ್ಲಿ ಬರುತ್ತವೆ.

ಸಂಪಾದಕರು ಸಂ ಕಿ ೧೨

ಸೌದಾಗರ' ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಖಾಸಗಿ, ಮಾರ್ಸ್‌ಡನ್ ಇತಿಹಾ
ಸವೂ. ಕಥೆಗಳೂ ಪುರಾಣ ವೆಗ್ಗೆರೆವು. ಗಳು ಪ್ರಿಷ್ಟೇ ಆಫೀಸ
ಕ್ಲಾಸಗಳು ಸಹ ಬೊಂಬಾಯಿಯುಳ್ಳ ವಿಾಸಿಗಳ ಬೆಳಮಂಗೆಯ
ತೈಲು. ಬಸಿಯುಳ್ಳಿಡುವ ಸಿಮಿಯಾರಗಳು ಅವೆ. ಮಾರ್ಸ್‌ಡನ್
ಇ. ಹೊರ್ತಾಗಿ ಕಮಿಶನ್ ರು. ೧ ಕ್ಕೆ ೧ ಆಣೆ ಪ್ರಕಾರ.

ಧಾರವಾಡ ಮಹಮ್ಮದ ಪ. ಅಬ್ದುಲ್ಲ
ವಿಾದ ಸಾ॥ ಸೌದಾಗರ.

ಕನ್ನಡ ಡಾಯರಿ

ಪೂರಲಿಕ್ಕೆ ಸಿದ್ಧವಾಗಿವೆ.

ಕನ್ನಡ ಡಾಯರಿ-ಪ್ರತಿ ವರ್ಷದಂತೆ ಮುಂದಿನ ವರ್ಷದ ಅ
ದಕ್ಕೆ ೧೯೦೬ ನೇ ಇಸ್ವಿಯ ಕನ್ನಡ ಮರಾಠಿ ಇಂಗ್ಲೀಷ ಭಾಷ
ಯಲ್ಲಿಯು ಡಾಯರಿಗಳನ್ನು ಮುದ್ರಿಸಿ ಅವೆ. ಡಾಯರಿಗಳು ೧
ಅಂಬರ ೧ ನೇ ತಾರೀಖಿನಿಂದ ಪೂರಾಟಕ್ಕೆ ಸಿದ್ಧವಾಗಿವ
ಾಂ ಕ್ಕೆ ೨೦ ರೂಪಾಯಿ ಹತ್ತು ಕೊಂಡರ ಒಂದು ಉಚಿ
ಕೊಡಲ್ಪಡುವದು ಒಂಬಕ್ಕೆ ನಾಲ್ಕು ಆಣೆ ಟಪಾಲ ಹಾಸಲು ಬೇ
ಬೀಳುವದು.

ಖಾನೋಳಕರ ಮತ್ತು ಕಾಪನಿ
ಧಾರವಾಡ.

ಕನ್ನಡ ಶಾಲಾಪತ್ರಿಕೆ

KANARESE
SCHOOL PAPER.

ಪುಸ್ತಕ ೪೨] ಫೆಬ್ರುವರಿ ೧೯೦೬. [ಸಂಚಿಕೆ ೨.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು	೨೫–೨೯
೨.	ಚಟುವ	೨೯–೩೩
೩.	ಸಾಂಪ್ರತದ ಸ್ತ್ರೀಶಿಕ್ಷಣವೂ ಸುಧಾರಣೆಯೂ	೩೩–೩೮
೪.	ಹವಳ	೩೮–೪೩
೫.	ಉದೇಪುರದ ಮನೆತನವು	೪೩–೪೮

CONTENTS.

1.	Educational Intelligence and Useful Notes	25–29
2.	Habit	29–33
3.	Present female education and civilization	33–38
4.	Coral	38–43
5.	The history of rajasthan	43–48

DHARWAR:
PRINTED AT THE KARNATIC BOOK DEPOT PRESS.
1905.

REGISTERED No. B. 19.

ನೋಡೀರು

ಬಳ್ಳೆ ಮುಬಲೂತಾಗಿ ರಾಸಕೋಳ್ ಸಿಸ್ಟೀಮು ಲಿಹಾ ಪ್ಪರವಾಜ್ ಕ್ಯಯ ಸಿ-೪-೦ ಕ್ಕೆ ಕೊಳ್ಳುವವನಿಗೆ ೩೦೦ ನೀಲಿ ಕರೆ ತಾಯಿ ಜೀಟುಗಳು, ಹೋಕಾಯಂತ್ರ ೧, ಲೋಹಪಯಂಬಕ೧, ಫ್ಯಾನ್ಸಿ ಕಾರ್ಡುಗಳು ೧೦೦ ಶಿಗುವವು ಟಪಾಲಖರ್ಚು ವಾಫೀ

೩-೪-೦ ಕ್ಕೆ ೨೦೦ ತಾಯಿಜೀಟುಗಳು ಟೈಂಪೀಸೂ ೧ ಲೋಹಪಚುಂಬಕ ೧, ಹೋಕಾಯಂತ್ರ ೧, ೧೦೦ ಫ್ಯಾನ್ಸಿ ಕಾರ್ಡುಗಳು ಶಿಗುವವು. ಟ. ಖರ್ಚು ವಾಫೀ ೦-೧೧-೦ (ಹನ್ನೊಂದು ಆಣೆ) ೪೦ ತಾಯಿಜೀಟುಗಳು ೪೦ ಫ್ಯಾನ್ಸಿಕಾರ್ಡುಗಳು, ಹೋಕಾಯಂತ್ರ೧, ಲೋಹಪಚುಂಬಕ ೧ ಶಿಗುವವು. ಟಪಾಲಖರ್ಚು ವಾಫಿ

ರಘುನಾಥ ಜೀವಾಜಿ ಕುಲಕರ್ಣಿ
ಹಿಪ್ಪರಗಿ ಜಿ ಬಿಜಾಪುರ

ವಿದ್ಯಾಖಾತೆಯಿಂದೆ ಒಪ್ಪಿಗೆಯನ್ನು ಪಡೆದ ಹೆನ್ರೆ ಆವೃತ್ತಿಯ ಹೂಲೀಕೃತ ಜವಾಖರ್ಚಿನ ಪದ್ಧತಿ ೪೪ ನೇ ಭಾಗ ಅಂಕಗಣಿತ ೧೧೦ ಜೊಸರೂಲಸ ಸಹಿತ ಸಟೀಕಲ್ಯಾಡ ರೆನ್ಹಿನ್ಯೂಕೋಷ ೩೩೪ನೇ ಭಾಗ ಗಣಿತ ೨ ತಿಂಗಳಲ್ಲಿ ತಯಾರಾಗುವವು. ನಾವು ಹೊಸದಾಗಿ ಬುಕ್ಕಡಿಪೋ ಜೆಯು ಪವರಿದ್ದೇವೆ.

ಚನವೀರ ಫಕೀರಪ್ಪ ಧಾರವಾಡ.

ಶಾಲಾಪತ್ರಿಕೆ.

ಪದ್ಯ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷವಾ
ಚಯಸುತ್ತಂ ಪ್ರತಿಪೂಸದಾದಿಗೊಳವಿಂದೀಪತ್ರವಾಂ ಮುದ್ರಿಸಿ ॥
ಸಯದಿಂದಿತ್ತವೆವೋದುವರ್ಗಸುಗುಣಂ ತೋರಲ್ಕೆಕೊಂಬುದ್ಯೆ (ಗ್ರ)॥
ಬಯಕುಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್

ಪುಸ್ತಕ ೪೨.] ಫೇಬ್ರುವರಿ ೧೯೦೬. [ಸಂಚಿಕೆ ೨.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ವರುಷದ ಮುಂಬಯಿ ಇಲಾಖೆಯ ವಿದ್ಯಾಖಾತೆಯ ರಿಪೋರ್ಟು ಹೊರಬಿದ್ದಿದೆ. ಅದರಲ್ಲಿಯು ಮುಖ್ಯ ಮುಖ್ಯ ಸಂಗತಿಗಳನ್ನು ಮುಂದಿನ ಸಂಚಿಕೆಯಲ್ಲಿ ಬರೆಯುವೆವು. ಆದರೆ ಇದರಲ್ಲಿ ಧಾರವಾಡದ ಟ್ರೇನಿಂಗ ಕಾಲೇಜದ ಬಗ್ಗೆ ಮೆಹಬ್ಬಾನ್ ಡಿರೆಕ್ಟರಸಾಹೇಬ ಬಹದ್ದೂರವರು ಪಟ್ಟ ಅಭಿಪ್ರಾಯವನ್ನು ಮಾತ್ರ ಇಲ್ಲಿ ಉಲ್ಲೇಖಿಸಿರುವೆವು.

"ಈ ಕಾಲೇಜವು ಯಾವತ್ತು ಕಾಲೇಜಗಳಲ್ಲಿ ಮೇಲಾದ ದ್ದೆಂತಲೂ, ಉತ್ತಮವಾಗಿ ನಡಿಸಲ್ಪಟ್ಟಿದ್ದೆಂತಲೂ ಹೇಳಲಿಕ್ಕೆ ನಮಗೆ ಸಮಾಧಾನವೆನಿಸುತ್ತದೆ. ಕಾಲೇಜದ ಪ್ರಿನ್ಸಿಪಾಲರಾದ ರೊದ್ದ ಶ್ರೀನಿವಾಸರಾಯರು ಒಳ್ಳೇ ಉತ್ತಮತೆಯುಳ್ಳವರೂ, ಕರ್ತವ್ಯದಕ್ಷರೂ ಇರುವರು. ಇವರು ತಮ್ಮ ಸಹಾಯಕರಾದ ಶಿಕ್ಷಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ತಮ್ಮಲ್ಲಿರುವ ವಿಶಿಷ್ಟ ಗುಣಗಳಿಂದ ಪ್ರೋತ್ಸಾಹನವನ್ನುಂಟುಮಾಡಿ ಜ್ಞಾನಸಂಪಾದನೆಯ ಕಾರ್ಯವು ಸುಲಭವಾಗುವಂತೆ ಮಾಡಿದ್ದಾರೆ. ಈಗ ಎರಡು ವರುಷದಿಂದ ಮೊದಲು ಶಿಕ್ಷಕರನ್ನು ಪುನಃ ಶಿಕ್ಷಣಕ್ಕಾಗಿ ವರುಷಾ ಇಂತಿಷ್ಟು ಜನರಂತೆ ಟ್ರೇನಿಂಗ ಕಾಲೇಜದಲ್ಲಿ ಸೇರಿಸಿಕೊಳ್ಳುವ

ಪದ್ಧತಿಯನ್ನಿಟ್ಟುರುವರು. ಶಿಕ್ಷಣದಲ್ಲಿ ಅನುಭವ ಪಡೆದು ಬಂದ ಈ ಶಿಕ್ಷಕರು, ಹೊಸ ಶಿಕ್ಷಣವನ್ನೂ ವಿಷಯವನ್ನೂ ತೀವ್ರವಾಗಿ ಗ್ರಹಿಸಿಕೊಂಡು ತಿರಿಗಿ ತಮ್ಮ ಸ್ಥಳಕ್ಕೆ ಹೋಗಿ ಕೆಲಸ ಮಾಡುತ್ತಿರುವರು. ಇಂಥವರ ಸಾಲೆಗಳಲ್ಲಿ ಈಗ ತೋರಿಬರುವ ಸುಧಾರಣೆಯು ಪುನಃ ಶಿಕ್ಷಣದ ಮೇಲಾದ ಬೆಲೆಯನ್ನು ಅತ್ಯುತ್ತಮವಾಗಿ ವ್ಯಕ್ತಗೊಳಿಸುತ್ತದೆ."

ಇದೇ ರಿಪೋರ್ಟನಲ್ಲಿ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆಹರ್ಬಾನ್ ಸಹಸ್ರಬುದ್ಧೀಸಾಹೇಬರು, ಕೆಲವು ಮ್ಯುನಸಿಪಾಲಿಟಿಯಲ್ಲಿರುವ ಪ್ರಾಥಮಿಕ ಶಾಲೆಯ ಮಾಸ್ತರರು ಹತ್ತು ಹನ್ನೆರಡು ವರುಷ ಒಂದೇ ಸ್ಥಳದಲ್ಲಿರುವರೆಂತಲೂ, ಹೀಗಿರುವದು ವಿದ್ಯಾಸುಧಾರಣೆಗೆ ಅನುಕೂಲವಾದದ್ದಲ್ಲವೆಂತಲೂ, ನಿಕೃಷ್ಟ ಪಕ್ಷ ಐದಾರು ವರುಷಕ್ಕೊಮ್ಮೆಯಾದರೂ ಈ ಅಧ್ಯಾಪಕರ ಸ್ಥಳಾಂತರವಾಗುತ್ತಿರಬೇಕೆಂತಲೂ, ಅಭಿಪ್ರಾಯಪಟ್ಟಿರುವರು.

ನಮ್ಮ ಇಲಾಖೆಯ ಡಾಯರೆಕ್ಟರರಾದ ಮೆಹರ್ಬಾನ್ ಜಾಯಲ್ಲಸಾಹೇಬರು ಇಪ್ಪತ್ತುನಾಲ್ಕನೇ ಮಾರ್ಚ್ ದಿಂದ ಮೂರು ತಿಂಗಳು ರಜೆಯನ್ನು ತೆಗೆದುಕೊಳ್ಳುವರು. ಇವರ ಸ್ಥಳಕ್ಕೆ ಮೆಹರ್ಬಾನ್ ಸೆಲ್ಬೀ ಸಾಹೇಬರು ಬರುವರು.

ಹಿಂದುಸ್ತಾನವೇ ವಜ್ರಗಳ ಮೂಲಸ್ಥಾನವು ಗೋವಳಕೊಂಡದರತ್ನಗಳು ಬಹು ಪ್ರಾಚೀನ ಕಾಲದಿಂದಲೋ ಕದಲ್ಲೆಲ್ಲ ಹೆಸರಾಗಿದ್ದವು. ಹದಿನೇಳನೇ ಶತಕದಲ್ಲಿ ಗೋವಳಕೊಂಡದೊಳಗೆ ಸುಮಾರು ೬೦ ಸಾವಿರ ಜನರು ವಜ್ರಗಳನ್ನು ತೆಗೆಯುವ ಕೆಲಸವನ್ನು ಮಾಡುತ್ತಿದ್ದರೆಂದು ತಿಳಿಯುತ್ತದೆ. ಬರಬರುತ ಆ ಸ್ಥಳದೊಳಗಿನ ವಜ್ರಗಳು ಪೂ

ಕೈಕೆಯು ಕಡಿಮೆಯಾಯಿತು. ಸನ್ ೧೭೦೭ನೇ ಇಸವಿಯಲ್ಲಿ ಬ್ರಾಝಿಲ್ ದೇಶದೊಳಗೆ ವಜ್ರಗಳ ಶೋಧವಾಯಿತು. ಈ ಶೋಧದ ವೃತ್ತಾಂತವು ಬಹು ಸೋಜಿಗವಾಗಿರುವದು ಹ್ಯಾಗಂದರೆ– ಸನ್ ೧೭೦೭ನೇ ಇಸವಿಗಿಂತ ಮೊದಲು ಕೆಲ ಯುರೋಪದ ಜನರು ಆ ದೇಶದಲ್ಲಿ ವಾಸ ಮಾಡಿ ನದಿಯ ಮಳಲೊಳಗಿನ ಚಿನ್ನದ ಕಣಗಳನ್ನು ಸಂಗ್ರಹಿಸುವ ಕೆಲಸವನ್ನು ಮಾಡುತ್ತಿದ್ದರು. ಈ ಕೆಲಸವನ್ನು ಮಾಡುವಾಗ ಅಂದರೆ ಆ ಉಸುಬನ್ನು ತೊಳೆಯುವಾಗ ಅದರಲ್ಲಿ ಬೆಮ್ಮೊಮ್ಮೆ ಸಣ್ಣ ದೊಡ್ಡ ವಜ್ರದ ಹರಳುಗಳು ಸಿಗುತ್ತಿದ್ದವು. ಆದರೆ ಅವುಗಳ ಮೇಲೆ ಮಣ್ಣು ಕೂತದ್ದರಿಂದಲೂ ಅವುಗಳ ಅಡ್ಡ ತಿಡ್ಡ ಆಕಾರಗಳಿಂದಲೂ ಅವು ಆ ಜನರ ಮನಸನ್ನು ಎಳಕೊಳ್ಳುತ್ತಿದ್ದಿಲ್ಲ. ಅದರಿಂದ ಅವರು ಅವುಗಳನ್ನು ಚೆಲ್ಲಿ ಕೊಡುವರು. ಅವುಗಳೊಳಗೆ ಕೆಲವು ಹೆಚ್ಚು ಹೊಳೆಯುತ್ತಿದ್ದರೆ ಅವುಗಳನ್ನು ತೆಗೆದುಕೊಂಡು ಕಸ್ಲೇಟಿನ ಆಟದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರು. ಈ ಕ್ರಮವು ಹಲವು ದಿವಸ ಅವ್ಯಾಹತವಾಗಿ ನಡಿಯುತ್ತಿರಲು, ಸನ್ ೧೭೦೭ನೇ ಇಸವಿಯಲ್ಲಿ ಲೋಗೋ ಎಂಬವನೊಬ್ಬ ಪೋರ್ತುಗೀಜ ಮನುಷ್ಯನು ಬ್ರಾಜೆಲ್ ದೇಶಕ್ಕೆ ಬಂದನು. ಆವನೇ ಈ ಮೊದಲು ಹಿಂದುಸ್ತಾನದಲ್ಲಿ ಸಂಚರಿಸಿ ಗೋವಳಕೊಂಡದ ರತ್ನಗಳನ್ನು ನೋಡಿದ್ದನು. ಆದ್ದರಿಂದ ಆವನು ಬ್ರಾಜೆಲ್‌ದ ಜನರು ಅಜ್ಞಾನದಿಂದ ಒಕ್ಕೊಟ್ಟು ಬಿಟ್ಟು ಅನೇಕ ವಜ್ರದ ಹರಳುಗಳನ್ನು ಆರಿಸಿಕೊಂಡು ಪೋರ್ತಗಾಲಕ್ಕೆ ಬಂದು ಅಲ್ಲಿಯ ಚಿನಿವಾರರಿಗೆ ಅವುಗಳನ್ನು ತೋರಿಸಿದನು. ಆಗ ಚಿನಿವಾರರು ಅವು ಉತ್ತಮವಾದ ಹರಳುಗಳೆಂದು ಮನಗಂಡರೂ ಇವುಗಳಿಗೆ ಉತ್ತೇಜನಕೊಟ್ಟರೆ ವಜ್ರಗಳ ಪೂರೈಕೆಯು ಮಿತಿಮೀರಿ ಬೆಳೆದು ತಮ್ಮಲ್ಲಿ ಸಂಗ್ರಹವಾಗಿರುವ ರತ್ನಗಳನ್ನು ಆಗ್ಗವಾಗಿ ಮಾರಬೇಕಾಗುವದೆಂದು ಬಗೆದು ಲೋಗೋನು ಬ್ರಾಝಿಲ್ ದೇಶದಿಂದ ತಂದ ಹರಳುಗಳು ನಿಜವಾದ ವಜ್ರದ ಹರಳುಗಳ

ಲ್ಲೆಂದೂ, ವಜ್ರದ ಕಡೆಯಲ್ಲಿ ದೊರೆತ ಕಸವೆಂದೂ ಅಭಿಪ್ರಾಯ ಕೊಟ್ಟರು. ಆದರೆ ಇದರಿಂದ ಲೋಗೋನು ಎದೆಗುಂದದೆ ಉಳಿದ ವ್ಯಾಪಾರಸ್ಥರಿಗೆ ಅವುಗಳನ್ನು ತೋರಿಸಿದನು. ಅವರು ಅವುಗಳನ್ನು ಕೊಂಡು ಕೊಂಡು ಹಿಂದುಸ್ತಾನಕ್ಕೆ ಕಳಿಸಿ ಅಲ್ಲಿ ಅವುಗಳನ್ನು ಸಣ್ಣಗೆ ಹಿಡಿಸಿ ಅವುಗಳಿಗೆ ಹೊಳಪನ್ನುಂಟು ಮಾಡಿ ಹಿಂದು ಸ್ತಾನದ ಉತ್ತಮ ರತ್ನಗಳೆಂದು ಯುರೋಪ ಖಂಡಕ್ಕೆ ಕಳಿಸಲಾರಂಭಿಸಿದರು.

ಸನ್ ೧೪೭೦ರಿಂದ ಅಮೇರಿಕದೊಳಗಿನ ರತ್ನ ಸಂಪತ್ತಿಯು ಪ್ರಸಿದ್ಧಿಯಾಗಲು ಆದೇಕಾಲಕ್ಕೆ ದಕ್ಷಿಣ ಆಫ್ರಿಕೆಯ ತ್ರಾನ್ಸ್ವಾಲ, ನಾತಾಲ ಮುಂತಾದ ಸ್ಥಳಗಳಲ್ಲಿ ವಜ್ರದ ಕಣಿಗಳು ಶೋಧವಾದವು. ಈಗ ಜೋಹಾನ್ಸ ಬರ್ಗ, ಕಿಂಬರ್ಲೆ ಎಂಬ ಎರಡು ಸ್ಥಳಗಳಲ್ಲಿ ರತ್ನದ ಕಣಿಗಳು ಬಹು ಪ್ರಸಿದ್ಧಿಯನ್ನು ಪಡೆದಿರುತ್ತವೆ. ಈ ಕಣಿಗಳಲ್ಲಿ ಸಿಗುವ ರತ್ನಗಳ ಸಂಖ್ಯೆಯಿಂದ ಅವುಗಳ ಬೆಲೆ ಕಡಿಮೆಯಾದೀತೆಂದು ಅಂಜಿಕೊಂಡು ಎಷ್ಟೋ ರತ್ನಗಳನ್ನು ಮಾರಾಟಕ್ಕೆ ಕಳಿಸದೆ ಹಾಗೇ ಇಡುವರು.

ಬೆಳ್ಳಿ ಬಂಗಾರಗಳ ಕಣಿಯಂತೆ ರತ್ನದ ಕಣಿಗಳು ಆಳವಾಗಿರುವದಿಲ್ಲ. ನದಿಯ ಒಡಲೊಳಗಿನ ಮಳಲ ರಾಶಿಯಲ್ಲಿ ತಕ್ಕಷ್ಟು ತಗ್ಗು ತೆಗೆಯುವರು. ಆ ತೆಗ್ಗಿನೊಳಗಿನ ಮಣ್ಣನ್ನೂ ರ್ಯಾವಿಯನ್ನೂ ತಂದು ತೊಳೆಯುವರು. ಹೆಗುರಾದ ಮಣ್ಣು ನೀರಗುಂಟ ಹೋಗಲು, ತಳದಲ್ಲಿ ಬಂಗಾರದ ಕಣಗಳೂ, ವಜ್ರದ ಹರಳುಗಳೂ ಉಳಿಯುವವು.

ವಜ್ರದ ಗುಣಗಳು—ಕಾಠಿಣ್ಯದಲ್ಲಿ ಇದು ಎಲ್ಲಕ್ಕೂ ಮೇಲಾದದ್ದು. ಯಾವ ಖನಿಜದಿಂದಲೂ ಇದನ್ನು ಕೊಯ್ಯಲಾಗದು. ಇದರಲ್ಲಿ ಕಿರಣ ಪರಾವರ್ತನ ಗುಣವೂ ವಿಶೇಷವುಂಟು. ಕಾಜೆನೊಳಗೆ ನೂರು ಕಿರಣಗಳು ಬಾರಾದರೆ ವಜ್ರದಲ್ಲಿ ಅವುಗಳೊಳಗಿನ ೬೪ ಕಿರಣಗಳು ಅದರ ಪೃಷ್ಠಭಾಗದಿಂದ ಪರಾವರ್ತನ ಹೊಂದುವವು. ಅದರಿಂದ

ವಜ್ರಗಳು ತೇಜಃಪುಂಜವಾಗಿ ಕಾಣುವವು. ವಜ್ರದನ್ನು ಕೆಲಹೊತ್ತು ಬಿಸಿಲಲ್ಲಿಟ್ಟು ಕತ್ತಲಲ್ಲಿ ಒಯ್ದರೆ ಬಿಸಲಲ್ಲಿ ತಾನು ಮೊದಲು ಸಂಗ್ರಹಿಸಿಕೊಂಡ ಕಿರಣಗಳನ್ನು ಹೊರಗೆಡವುತ್ತದೆ.

HABIT

ಚಟವು

೩ ಒಳ್ಳೇ ನಡತೆ- ಒಳ್ಳೇ ನಡತೆಯು ಸಾಮಾಜಿಕ ಸಂಗತಿಯಾಗಿದೆ. ಸಾಮಾಜಿಕ ಸ್ಥಿತಿಯೆಂಬ ಯಂತ್ರವು ಸುಸೂತ್ರ ಸಾಗಲಿಕ್ಕೆ ಇದು ಎಣ್ಣೆಯಂತೆ ಇರುವದು ಇದು ಪ್ರತಿಯೊಬ್ಬ ವ್ಯಕ್ತಿಗೆ ಮಾನ ಕೊಡುವಂಥಾದ್ದು. ಎರಡನೆಯವರ ಸಂಗಡ ಅವರ ಮನಸ್ಸು ನೋಯದಂತೆ ಮಾಡುವ ನಮ್ಮ ವ್ಯವಹಾರದ ಹತೋಟಿಗೆ ಒಳ್ಳೇ ನಡತೆಯೆನ್ನುವರು. ಎರಡನೇಯವರ ಮನಸ್ಸು ನೋಯಬಾರದೆಂಬುದೇ ಒಳ್ಳೇ ನಡತೆಯ ಮುಖ್ಯ ಲಕ್ಷಣವು. ಒಳ್ಳೇ ನಡತೆ ಹತ್ತುವದು ಸುಲಭ ಸಾಧ್ಯವಲ್ಲ.

ಒಳ್ಳೇ ನಡತೆ ಹತ್ತಬೇಕಾದರೆ ಯೋಗ್ಯವಾದ ಸಾಮಾಜಿಕ ಪರಿಸ್ಥಿತಿ, ವಿಪುಲವಾದ ಶೋಧದೃಷ್ಟಿ, ವಿಚಾರ, ಆತ್ಮ ಸಂಯಮನ, ಹತೋಟಿ, ಅನುಕರಣ ಮುಂತಾದ ಗುಣಗಳು ಇರಬೇಕು. ಈ ಗುಣಗಳಿಂದ ಒಳ್ಳೇ ನಡತೆ ಹತ್ತಿ ಆನಂದವೃತ್ತಿಯಾಗುವದು.

ಒಳ್ಳೇ ನಡತೆಯಲ್ಲಿ ವಿನಯವೂ ಒಂದು ಭಾಗವಿರುತ್ತದೆ. ಎರಡನೆಯವರಿಗೆ, ಅವರು ಮಾದರಿ ತಕ್ಕೊಳ್ಳಲ್ಪಡುವವರೆಂದು ತಿಳಿದು ದೊಡ್ಡಸ್ತಿಕೆ ಕೊಟ್ಟು ನಡೆಯುವ ಭಾವನೆಯೇ ವಿನಯವು. ಹೀಗೆ ನಡೆಯಬೇಕಾದರೆ ಮನಸ್ಸಿನಲ್ಲಿ ನೀತಿಯ ಭಾವನೆಯು ಇರಬೇಕು. ನಮ್ಮ ಕೂಡ ಜನರು ಹ್ಯಾಗೆ ನಡೆಯಬೇಕೆಂದು ಅಪೇಕ್ಷಿಸುತ್ತೇವೋ ಅದರಂತೆ ನಾವು ಅವರ ಕೂಡ ನಡೆದರೆ ಅದು ಒಳ್ಳೇ ನಡತೆಯಾಯಿತು. ಒಮ್ಮೊಮ್ಮೆ ಮನಸ್ಸನ್ನು ಒತ್ತಟ್ಟ

ಗಿಟ್ಟು ಬರೇ ಒಳ್ಳೇ ನಡತೆಯನ್ನು ತೋರಿಸುತ್ತೇವೆ. ಆದ ಕೆ ಅದು ಮನಃಪೂರ್ವಕವಲ್ಲ. ಪರಂತು ಒಳ್ಳೇ ನಡತೆ ಯನ್ನು ತೋರಿಸುತ್ತಾ ತೋರಿಸುತ್ತಾ ಹೋಗುವ ಸಹವಾ ಸದಿಂದ ಒಳ್ಳೇ ನಡತೆಯುಳ್ಳ ಅಂತರಂಗ ಸ್ಥಿತಿಯುಂಟಾ ಗಬಹುದು. ಒಮ್ಮೊಮ್ಮೆ ಅಂತರಂಗದ ಮೂಲಕವಾಗಿ ಯೂ ಬಹಿರಂಗದಲ್ಲಿ ಚಲೋ ನಡತೆಯುಂಟಾಗುತ್ತದೆ. ಒ ಳ್ಳೇ ನಡತೆಯುಳ್ಳವನನ್ನು ಸಮಾಜವು ಅನುಸರಿಸುತ್ತದೆ.

ಒಳ್ಳೇ ನಡತೆಯಿಂದ ನಡೆಯುವದು ಕಠಿಣವು. ಯಾ ಕಂದರೆ ಇವರಿಂದ ಒಮ್ಮೊಮ್ಮೆ ಸ್ವಾರ್ಥವನ್ನು ಬಿಡಬೇಕಾ ಗುತ್ತದೆ. ಈ ಸ್ವಾರ್ಥತ್ಯಾಗವು ಸಾಂಸರ್ಗಿಕ ರೀತಿಯಿಂ ದ ಒಬ್ಬನಿಂದ ಮತ್ತೊಬ್ಬನಿಗೆ ಹತ್ತುತ್ತದೆ. ಮನಸಿನ ಭಾವನೆಯು ಕೊಬ ರೆಯಂತೆಯೂ (ಅಂತರಂಗ) ಒಳ್ಳೇ ನಡತೆಯು ಪರಟೆಯಂತೆಯೂ (ಬಹಿರಂಗ) ಇರುವದರಿಂದ ಭಾವನೆಯೇ ಮಹತ್ವವವು. ಒಳ್ಳೇ ನಡತೆಯ ಚಟವನ್ನು ಹಚ್ಚಬೇಕಾದರೆ ಅವಶ್ಯ ವಿದ್ದ ಚಟವನ್ನು ವ್ಯವಹಾರಕ್ಕೆ ಉಪಯೋಗ ಬೀಳುವಂತೆ ಹಚ್ಚಬೇಕು. ಅದರಂತೆ ವಿನ ಯಕ್ಕೂ ಒಳ್ಳೇ ನಡತೆಗೂ ಅವಶ್ಯವಾದ ಚಟವನ್ನು ಹಚ್ಚಬೇಕು. ಇದರಿಂದ ನಡತೆಯಲ್ಲಿಯೂ ನುಡಿಯಲ್ಲಿಯೂ ಒ ಳ್ಳೇ ನಡತೆಯ ಬಗ್ಗೆ ಪ್ರೀತಿ ಹುಟ್ಟುತ್ತದೆ.

ಒಳ್ಳೇ ನಡತೆಯಿಂದ ನಡೆಯುವಾಗ ಎರಡು ತಪ್ಪುಗ ಳಾಗುವ ಸಂಭವ ವುಂಟು (೧) ತಾವು ಹೆಚ್ಚಿನವರೆಂಬ ಹೆಮ್ಮೆಯಿಂದ ಎರಡನೆಯವರಿಗೆ ತೋರಿಸತಕ್ಕಷ್ಟು ವಿನಯ ವನ್ನು ತೋರಿಸದೇ ಇರೋಣ (೨) ಎರಡನೇಯವರು ತ ಮ್ಮ ಕಡೆಗೆ ಲಕ್ಷ್ಯಕೊಡಬೇಕೆಂದು ಬಯಸಿ, ಮಾನ ಮ ರ್ಯಾದೆಯನ್ನೂ, ಶಿಷ್ಟಾಚಾರವನ್ನೂ ಬಿಟ್ಟು (ಅತಿಶಯ ವಿನಯವನ್ನು ಅವಲಂಬಿಸಿ) ನಡೆಯೋಣ. ಇವುಗಳಲ್ಲಿ ೧ನೇದು ಶಕ್ತಿಯ ಲಕ್ಷಣವನ್ನೂ, ೨ನೇದು ದುರ್ಬಲ ಮ ನಸ್ಸಿನ ಲಕ್ಷಣವನ್ನೂ ತೋರಿಸುತ್ತವೆ.

ಸತ್ಯವಂತಿಕೆ ಮತ್ತು ಪ್ರಮಾಣಿಕತನ.

ಸಮಾಜದ ಕೂಡ ನಡೆಯುವಾಗ ಯಾವದು ತಕ್ಕಿಸೆಲ್ಪ ಡುವದಿಲ್ಲವೋ ಅದೇ ಬರೇತನವು. ಬುದ್ಧಿಯ ಸಾಮರ್ಥ್ಯ ದಿಂದ ನಮ್ಮ ಜ್ಞಾನದಲ್ಲಿ ಸಮಾವೇಶವಾಗುವ ಜ್ಞಾನವೇ ಬ ರೇತನವು. ತನ್ನ ಜ್ಞಾನಕ್ಕೆ ಅನುಸರಿಸಿ, ವಸ್ತುಸ್ಥಿತಿಯು ಇದ್ದಕ್ಕಿದ್ದಂತೆ ಸತ್ಯವು ಮನಸ್ಸಿನಲ್ಲಿ ನಟ್ಟರೆ ಆನಂದವಾಗು ತ್ತದೆ. ನೀತಿಯ ಸಂಬಂಧದಿಂದ ಇದರ ವ್ಯಾಪ್ತಿ ಬಹಳ. ಸಮಾಜದಲ್ಲಿ ಬರೇತನವು ಇಲ್ಲದಿದ್ದರೆ ಆ ಸಮಾಜವೇ ನಡೆ ಯುವದಿಲ್ಲ. ಇನ್ನು ಸಮಾಜದಲ್ಲಿ ನಡೆಯಲಿಕ್ಕೆ (೧) ನಿಷ್ಕ ಪಟತನ (೨) ಸರಳವರ್ತನ (೩) ಎರಡನೆಯವರ ವಸ್ತು ವಿನ ಬಗ್ಗೆ ಸಮಬುದ್ಧಿ (೪) ವೇಳೆಯು ಯಥಾರ್ಥ ಉಪ ಯೋಗ ಇವೆಲ್ಲ ಅವಶ್ಯವುಂಟು.

ಅಸತ್ಯತೆಯ ಕಾರಣಗಳು.

ಸುಳ್ಳು ಹೇಳಲಿಕ್ಕೆ ಅನೇಕ ಕಾರಣಗಳುಂಟು. ಅವುಗಳ ಲ್ಲಿ ಮುಖ್ಯ ನಾಲ್ಕು ಕಾರಣಗಳವೆ. (೧) ಸ್ವಾರ್ಥದ ಬಗ್ಗೆ ಅಂ ದರೆ ಎರಡನೆಯವರನ್ನು ಕೆಡಿಸಿ ತನ್ನ ಲಾಭ ಮಾಡಿಕೊ ಳ್ಳುವ ಬಗ್ಗೆ (೨) ಹೇಡಿತನ ಅಥವಾ ಭೀತಿಯ ಮೂಲಕವಾ ಗಿ ಅಂದರೆ ಸತ್ಯವನ್ನು ನುಡಿದರೆ ಶಿಕ್ಷಿಸುವರೆಂದು (೩) ಅತಿಶ ಯೋಕ್ತಿಯ ಮೂಲಕ ಅಂದರೆ ಹೆಚ್ಚಿನ ಕಲ್ಪನೆ ಮಾಡಿ, ಇ ದ್ದಪ್ಪು ಸಂಗತಿಗಿಂತಲೂ ಹೆಚ್ಚಿಗೆ ಬೆಳಿಸಿ ಹೇಳೋಣ. (೪) ಎರಡನೆಯವರಿಗೆ ಕೆಡಕಾಗಬೇಕೆಂದು ಮಾತ್ಸರ್ಯದಿಂದ ಇಲ್ಲದ್ದೊಂದು ಹುಟ್ಟಿಸಿ ಹೆಚ್ಚಿಗೆ ಹೇಳೋಣ.

ಸಭ್ಯ ಜನರು ಸಹ ಒಮ್ಮೊಮ್ಮೆ ಮನೆಯಲ್ಲಿ ತಮ್ಮ ಕೆಲ ಸಕ್ಕೆ ತೊಡಗಿದಾಗ ಸ್ವಾರ್ಥದ ಬಗ್ಗೆ, Not at Home ಎಂ ದು ಬರೆದ ಫಲಿಯನ್ನು ಬರೆದು ಮನೆಯ ಹೊರಮಗ್ಗಲಿನ ಲ್ಲಿ ತೂಗಹಾಕುವದುಂಟು. ಪರಂತು ಅದರಲ್ಲಿ ಪರರ ಹಾ ನಿ ಮಾಡುವ ಬುದ್ಧಿಯ ಅಂಶವು ತೀರ ಕಡಿಮೆ. ಇದಕ್ಕೆ ಸ್ವಾಮಾಜಿಕ ಸುಳ್ಳು ಅನ್ನುತ್ತಾರೆ.

ಸತ್ಯ ಪ್ರೀತಿಯನ್ನು ಬೆಳಿಸುವ ಮಹತ್ವವು.

ಮಾಸ್ತರನ ಕೆಲಸದಲ್ಲಿ ಸತ್ಯ ಪ್ರೀತಿಗಿಂತಲು ಹೆಚ್ಚಿನ ಮಹತ್ವದ್ದು ಯಾವದೂ ಇಲ್ಲ. ವಿದ್ಯಾರ್ಥಿಗಳ ತಪ್ಪು ತಿದ್ದುವದೂ, ಕೆಟ್ಟ ಜನರನ್ನು ನಂಬುವ ಭೋಳೆ ತನವನ್ನು ತೆಗೆದು ಹಾಕುವದೂ ಅವಶ್ಯ ಉಂಟು.

ಭೋಳೆತನವೆಂದರೆ — ಯಾರು ಏನು ಹೇಳುತ್ತಾರೋ ಅದರ ಮೇಲೆ ಖರೇ ಸುಳ್ಳು ಎಂಬದರ ವಿಚಾರ ಮಾಡದೆ ವಿಶ್ವಾಸ ವಿಡುವದು. ಇದು ಹುಡುಗರಿಗೆ ತಕ್ಕದ್ದಲ್ಲ. ಹುಡುಗರು ಸುಳ್ಳಿನ ಮೇಲೆ ವಿಶ್ವಾಸ ವಿಡದೆ ಸತ್ಯದ ಮೇಲೆ ಮಾತ್ರ ವಿಶ್ವಾಸವಿಡಬೇಕೆಂದು ಮಾಸ್ತರನು ಅವಶ್ಯವಾಗಿ ಗೊತ್ತು ಮಾಡಿಕೊಡಬೇಕು.

ಸೆಜ್ವಿಕ್ಕನೆಂಬವನ ಅಭಿಪ್ರಾಯ—ಸೆಜ್ವಿಕ್ಕನು ಖರೇ ತನವು ಕೇವಲ ನೀತಿಯು ಸಿದ್ಧಾಂತವೆಂದೆನ್ನಕೂಡದು. ಆಂದರೆ ನೀತಿಯು ಸ್ಪಷ್ಟವಾಗಿ ತೋರಲಿಕ್ಕೆ ಸತ್ಯವೇ ಬೇಕೆಂದು ತಿಳಿಯಲಾಗದು. ಸಾರಾ ಸಾರ ವಿಚಾರ, ತಾತ್ಕಾಲಿಕ ಪ್ರಸಂಗ ಇವುಗಳ ಮೂಲಕ ಎಲ್ಲ ಪ್ರಸಂಗಗಳಲ್ಲಿಯೂ ಸತ್ಯವನ್ನೇ ಹೇಳಬೇಕೆಂದು ಒಡಂಬಡಲಿಕ್ಕಾಗುವದಿಲ್ಲ ಎಂದು ಹೇಳುತ್ತದೆ. ಆದರೆ ಆತನ ತತ್ವದಂತೆ ನಡೆಯಬೇಕಾದರೆ ಹಲವು ತೊಂದರೆಗಳೂ, ಗಂಡಾಂತರಗಳೂ ಬರುವವು. ಯಾಕಂದರೆ ಇದರಂತೆ ನಡೆಯುವವನು ಸ್ವಾರ್ಥ ವಿದ್ದಲ್ಲೆಲ್ಲ ಸುಳ್ಳು ಹೇಳುತ್ತ ಆ ಸುಳ್ಳಿಗೆ ಸಾರಾ ಸಾರ ವಿಚಾರ ಪ್ರಸಂಗ ಇವುಗಳನ್ನೇ ನಿಮಿತ್ತ ಮಾಡುತ್ತ ಇದರ (ಸೆಜ್ವಿಕ್ಕನ ತತ್ವದ) ದುರುಪಯೋಗವನ್ನು ಮಾಡಬಹುದು. ಇದರಿಂದ ಸುಳ್ಳು ಬೆಳೆಯುತ್ತ ಹೋಗುವದು. ಕೊನೆಗೆ ಹಗಲೆಲ್ಲ ಸತ್ಯ ಹೇಳುವ ನೀತಿಯು ಕೆಡುವದೇ ನಿಜವು, ಆದ್ದರಿಂದ ಸೆಜ್ವಿಕ್ಕನ ತತ್ವವು ಸರ್ವಮಾನ್ಯವಲ್ಲ.

ಆದಕಾರಣ ಮಾಸ್ತರನು ಎಂಥ ಕಠಿಣ ಪ್ರಸಂಗದಲ್ಲಿಯೂ ಕೂಡ ಸುಳ್ಳು ಹೇಳಕೂಡದೆಂಬ ಭಾವನೆಯನ್ನು ಹುಡುಗರ ಮನಸ್ಸಿನಲ್ಲಿ ಹಾಕಬೇಕು. ಈ ಮಾತು ದೊ

ಡ್ಡವರಿಗೂ ಹತ್ತುವದು. ಹುಡುಗನು ತಾನು ಉಳಿಕ್ಕೊಳ್ಳಲಿಕ್ಕೂ ಸುಳ್ಳು ಹೇಳುವ ಪ್ರಸಂಗವನ್ನು ಎಂದಿಗೂ ತರಗೊಡಬಾರದು. ಜರೂರಿಯ ಪ್ರಸಂಗದಲ್ಲಿ ಸತ್ಯವನ್ನು ಬಿಟ್ಟರೆ ಅದು ನೀತಿ ಶಿಕ್ಷಣದ ಪೂರ್ಣತೆಯ ಲಕ್ಷಣವಲ್ಲ. ಆದರೆ ಬೇಕಾದಂಥ ಜರೂರಿಯ ಪ್ರಸಂಗ ಬಂದರೂ ಸತ್ಯವನ್ನೇ ಹೇಳುವದು ನೈತಿಕ ಶಿಕ್ಷಣದ ಪೂರ್ಣತೆಯ ನಿಜವಾದ ಲಕ್ಷಣವು.

(ಸಶೇಷ)

PRESENT FEMALE EDUCATION AND CIVILIZATION.

ಸಾಂಪ್ರತದ ಸ್ತ್ರೀ ಶಿಕ್ಷಣವೂ ಸುಧಾರಣೆಯೂ

(ಬರೆದುಬಂದದ್ದು.)

ಉದಾಹರಣಾರ್ಥ ಸ್ತ್ರೀಯರು ಇಡುವ ಬಳೆಗಳನ್ನೇ ನೋಡಿರಿ, ಕಾಪಿ, ಕೇರವಾ, ಬಾವಟಾ, ಹಾಗೆಲ ಚಿಕ್ಕ ಮುಪಿಲಬಿನ್ನ, ದಿಲ್ಲೀದರಬಾರ ಮುಂತಾದ ಅನೇಕ ಪ್ರಕಾರಗಳಿರುವವು. ಇವುಗಳಲ್ಲಿ ನಾವು ಮನಸಿನ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳುವದಕ್ಕೆ ಮನ ಬಂದಂತೆ ಹಣ ವೆಚ್ಚ ಮಾಡುತ್ತೇವೆ. ಬಂದು ವೇಳೆ ಹಣವಿರದಿದ್ದರೆ ಗಂಡನನ್ನು ಪೀಡಿಸಿ ಇಲ್ಲವೆ ನೆರೆಮನೆಯ ರಂಗೂಬಾಯಿಯ ಹತ್ತರ ಕೈಗಡ ಇಸಕೊಂಡು ಇಚ್ಛೆಯನ್ನು ಪೂರೈಸಿಕೊಳ್ಳುತ್ತೇವೆ. ಚೀಟಿನ ಬಿಬ್ಬಳು ಉಟ್ಟಳೆಂದರೆ ಯಾವತ್ತರೂ ಉಟ್ಟರೇ. ಆದರೆ ಹಳ್ಳಿಗಾಡು ಸ್ತ್ರೀಯರಲ್ಲಿ ಶಿಕ್ಷಣವು ಕಡಿಮೆ ಇರುವದರಿಂದ ಅವರಲ್ಲಿ ಚೀಟಿನ ಪ್ರಾದುರ್ಭಾವವು ವಿಶೇಷವಿಲ್ಲ. ಸಾರಾಂಶ ಅಶಿಕ್ಷಿತರಿಂದಲೇ ನಮ್ಮ ಮಾತೃಭೂಮಿಗೆ ಹೆಚ್ಚು ಕಲ್ಯಾಣವಾಗುತ್ತದೆಂಬಂತೆ ಕಾಣುತ್ತದೆ.

ನಮ್ಮ ಪೂರ್ವಿಕರ ಇರುವಿಕೆಯು ಬಹಳ ಸುಖಕರವಾದದ್ದಿತ್ತೆನ್ನಲಿಕ್ಕೆ ಅಡ್ಡಿ ಇಲ್ಲ. ಯಾಕಂದರೆ ಅವರಲ್ಲಿ ದ್ರ

ವ್ಯಸಂಗ್ರಹವು ವಿಶೇಷವಾಗಿತ್ತು. ಆದದರಿಂದಲೇ ನವಿನ್ಯಾ ಜನ್ಮಭೂಮಿಯಾದ ಹಿಂದೂ ದೇಶದ ಸಂಪತ್ತು ಪ್ರತಿಯೊಂ ದು ಪರರಾಷ್ಟ್ರದ ಕಣ್ಣಿನಲ್ಲಿ ಒತ್ತಿ ಮೇಲಿಂದಮೇಲೆ ಪರ ಜಕ್ಯಗಳು ಆಭಿಗಮಿಸಿ ಇಲ್ಲಿಯ ಎಲ್ಲ ಸಂಪತ್ತನ್ನೆಳದೊ ಯ್ದದ್ದಲ್ಲದೆ ಹಿಂದೂ ಜನರ ಸ್ವಾತಂತ್ರತೆಯನ್ನು ಸಹ ಕಳೆ ದವು. ಸದ್ಯದ ದುಃಖದಾಯಕ ಸ್ಥಿತಿಯಲ್ಲಿ ಸಂಗ್ರಹವೆಲ್ಲಿ ಯದು? ಹಾಸಿಗೆಗಿಂತ ಕಾಲೇ ಉದ್ದವಾದಂತೆ ಆದಾಯ ಕ್ಕಿಂತ ಖರ್ಚೇ ಹೆಚ್ಚಾಗಿದೆ!

ಈಗ ನಮಗೆ ದಿನಾಲು ಅತ್ಯವಶ್ಯವಾದ ಪದಾರ್ಥಗಳಿಂದ ರೆ ಚಿಮಣೀ ಎಣ್ಣೆಯ ಡಬ್ಬಿಗಳೂ, ದೇವದ್ವಾರ ಕಟ್ಟಿಗೆ ಯ ಕೆಟ್ಟಿಗೆಗಳು, ಬರಣಿಗಳು (ಚಿನಯಿ ಮಣ್ಣಿನ) ಕಾಜೆ ನ ಪಾತ್ರೆಗಳೂ, ದೀಪಗಳೂ, ನಮ್ಮ ಪೂರ್ವಜರು ಕೊಂಡ ಸಮಯಗಳು ಬಹುಕಾಲ ತಡೆಯುತ್ತಿದ್ದವು. ಆದರೆ ಈಗಿ ನ ದೀಪಗಳು ನಾಲ್ಕಾರು ದಿವಸದಲ್ಲಿ ತಮ್ಮ ಅಸದೃಶ ಗುಣ ವನ್ನು ತೋರ್ಪಡಿಸದೇ ಬಿಡವು. ಒಂದು ವೇಳೆ ಪರದೇಶ ದವರು ಹಿಂದೂ ದೇಶಕ್ಕೆ ದೀಪದ ಕಡ್ಡಿಗಳನ್ನು ಕಳಿಸುವ ದು ಬಂದು ಮಾಡಿದರೆ ಇವರ ಗೋಳಾಟವನ್ನು ಬಣ್ಣಿಸಲ ಳವಲ್ಲ. ಕಬ್ಬಿಣ ತವರುಗಳಿಂದ ಕೂಡಿದ ಜಮಚೆ, ಕಬ್ಬಿ ಣದ ಕಾಜಿನ ಗಿಲೀಟಿನ ಕಪ್ಪು, ಒಸಿ, ಪಾತೇಲಿ ಮುಂತಾದ ತೋರಿಕೆಯಲ್ಲಿ ಜಂಡ ಕಾಣುವ, ಕಡೆಗೆ ಸ್ವಲ್ಪ ದಿವಸದಲ್ಲಿ ಕೆಟ್ಟು ಹೋಗುವ ಪಾತ್ರೆಗಳು ಸುಶಿಕ್ಷಿತ ಸ್ತ್ರೀಯರಲ್ಲಿಯೇ ವಿಶೇಷವಾಗಿ ತೋರುವವು. ವಿಶೇಷವಾಗಿ ಅವುಗಳ ಥಳಥ ಳಿಸೋಣವನ್ನು ನೋಡಿ ನಾವು ಮರುಳಾಗುತ್ತೇವೆ. ಇಂ ಥ ಪಾತ್ರೆಗಳನ್ನೆ ಒಬ್ಬರು ತಕ್ಕೊಂಡರೆಂದರೆ ಅವರ ಅನು ಕರಣವನ್ನೇ ಎಡಡನೆಯವರು ಮಾಡುವರು ಹೀಗೆ ನಮ್ಮ ಒಳ್ಳೇ ಗಟ್ಟಿಯಾದ ಪಾತ್ರೆಗಳನ್ನು ಮೂಲೆಗೊಗೆ ದು ನಮ್ಮ ಕೈಯಲ್ಲಿ ಮಣ್ಣನ್ನು ತಕ್ಕೊಳ್ಳಹತ್ತಿದ್ದೇವೆ. ಸಭ್ಯ ರ್ಕೆ ಕಣ್ಣಿಗೆ ಚಂದ ಕಾಣುವಂಥ ಅನೇಕ ತರದ ಪರದೇಶದ ವಸ್ತುಗಳು ಬರಹತ್ತಿದರಿಂದಲೂ, ಸ್ವಲ್ಪ ಕಿಮ್ಮತ್ತಿನಲ್ಲಿ ಸಿಕ್ಕು

ವದರಿಂದಲೂ, ಆವುಗಳನ್ನು ಕೊಳ್ಳುವದಕ್ಕೆ ನಾವು ಉಕ್ಕ ಟೇಚ್ಛೆಯುಳ್ಳವರಾಗುತ್ತೇವೆ. ಇದರಿಂದ ನಮ್ಮ ಕೈಯಲ್ಲಿ ದ್ದ ಹಣವು ಪರದೇಶಕ್ಕೆ ಹೋಗುವದೆಂಬದಿಷ್ಟೇ ಅಲ್ಲ. ಸ್ವದೇಶದ ಕಲಾಕೌಶಲ್ಯಗಳನ್ನು ಅಳಿಯುಲಿಕ್ಕೆ ನಾವು ಕಾ ರಣರಾಗುತ್ತೇವೆ ಅಂದಬಳಿಕ ನಾವು "ಸುಶಿಕ್ಷಿತರು" ಎಂಬ ಬಿರುದಿಗೆ ಪಾತ್ರರೋ?

ನಮ್ಮ ಪ್ರಾಚೀನ ಸ್ತ್ರೀಯರು ಎಷ್ಟು ಸಾಧ್ವಿಗಳೂ ಏಕಾ ಗ್ರಚಿತ್ತೆಯರೂ ಇದ್ದರು? ಅವರ ಇರುವಿಕೆಯು ಎಷ್ಟು ಯೋಗ್ಯವಿತ್ತು? ಎಂಬುದನ್ನು ಬಣ್ಣಿಸಲಳವಲ್ಲ. ಅವರಿಗೆ ಆ ಲಸ್ಯ, ಟಿಣ ಡಂಭಾಚಾರ ಮುಂತಾದವುಗಳಂತೂ ಗೊತ್ತೇ ಇದ್ದಿಲ್ಲ. ಅವರು ಮನೆಯಲ್ಲಿಯ ಎಲ್ಲ ಕೆಲಸಗಳನ್ನು ಮಾ ಡುವಷ್ಟು ಶಕ್ತಿವಂತರೂ ಅವುಗಳನ್ನು ಮಾಡುವದರಲ್ಲಿ ಅನು ರಾಗವುಳ್ಳವರೂ ಆಗಿದ್ದರು. ಅವರಿಗೆ ಸಾಂಪ್ರತದವರಂತೆ ಅಷ್ಟಪ್ಪಷ್ಟಕ್ಕೆ ಆಳುಗಳು ಬೇಕಾಗುತ್ತಿರಲಿಲ್ಲ. ಅವರ ಯಾ ವ ಕೆಲಸವೂ ಹೊರಕತ್ತಾಗಿ ನಿಲ್ಲುತ್ತಿದ್ದಿಲ್ಲ. ಎಲ್ಲ ಕೆಲಸಗ ಳೂ ಸುಸೂತ್ರವಾಗಿ ಸಾಗುತ್ತಿದ್ದವು. ಉತ್ತಮ ರೀತಿಯಿಂ ದ ಅಡಿಗೆ ಮಾಡಲಿಕ್ಕೆ ಬರುವದು ಹೆಂಗಸರಿಗೆ ಭೂಷಣವಾ ದದ್ದೆಂದು ಅವರ ತಿಳುವಳಿಕೆ ಇತ್ತು. ಎಷ್ಟೋ ಜನರು ಈ ವಿಷಯದಲ್ಲಿ ಅದ್ವಿತೀಯ ಯಶೋಭಾಗ್ಯವನ್ನು ಹೊಂ ದಿದ್ದರು. ಅವರು ಅಡಿಗೆ ಮಾಡುವದಕ್ಕೋಸ್ಕರ ನೆರೆಹೊ ರೆಯವರಿಗೆ ನೆರವಾಗುತ್ತಿದ್ದರು. ಆದರೆ ಅರ್ವಾಚೀನ ಸ್ತ್ರೀಯರಾದ ನಾವು ಪೂರ್ವಿಕರಿಂದ ತೀರ ವಿಪರೀತ ವರ್ತಿಗ ಳಾಗಿದ್ದೇವೆ. ನಾವು ಸ್ವಲ್ಪ ವಿತ್ತವನ್ನಾರ್ಜಿಸಿದ ಕೂಡಲೆ ಅಡಿಗೆಗೆ ಬೇಸರಿಯಹತ್ತುತ್ತೇವೆ.

ಪುರುಷರು ಮಾತ್ರ ಮನಮುಟ್ಟಿ ದಾವತಿ ಮಾಡಿ ವಿದ್ಯ ಕಲಿತು ಪರೀಕ್ಷೆ ಕೊಡಬೇಕು. ಸರಕಾರದ ಕೆಲಸ ಮಾಡಿ ಇಲ್ಲವೆ ಅನ್ಯರೀತಿಯಿಂದ ಹಣ ಗಳಿಸುವದಕ್ಕೋಸುಗ ಊ ರೂರು ತಿರುಗಬೇಕು. ಇದರ ಮೂಲ ಕಾರಣವೇನು? ಹೆಚ್ಚಿಟ್ಟ. ಬೇರೆ ಆವುದೂ ಅಲ್ಲ. ಪುರುಷರ ಸಂಸಾರವು

ಯಾರನ್ನು ಅವಲಂಬಿಸಿರುವದೋ ಅಂಥವರಾದ ನಾವು ಅಡಿಗ ಮಾಡುವದಕ್ಕೆ ಬೇಸರಿಯಬೇಕೇ? ತಾವು ಸ್ವತಃ ಯಾವದೊಂದು ಪ್ರಕಾರದ ಅಡಿಗೆ ಮಾಡಿ ತನ್ನ ಗಂಡನಿಗೂ, ಮಕ್ಕಳಿಗೂ ಹಾಕುವದರಲ್ಲಿ ಯಾವ ಪ್ರಕಾರದ ಪ್ರೇಮ ಹುಟ್ಟುವದೆಂಬದು ಕೆಲ ಜನರ ಅನುಭವಕ್ಕೆ ಬಂದಿದ್ದೀತು. ಇನ್ನು ಅಡಿಗೆಯವರು ಹೇಳಕೂಡದಷ್ಟು ನಿಷ್ಕಾಳಜಿಯವರಿರುತ್ತಾರೆ. ಅಂಥವರು ಸಹ ಸಿಗುವದು ಅಪರೂಪ. ಯಾಕಂದರೆ ಮನೆಮನೆಗೆ ಅವರ ಅವಶ್ಯಕತೆ ಇರುವದು.

ಈಗ ನಮ್ಮ ಹೆಣ್ಣುಮಕ್ಕಳು ಹೊಲಿಯುವದರಲ್ಲಿಯೂ ಹೆಣೆಯುವದರಲ್ಲಿಯೂ ಬಲ್ಲವರಿರುತ್ತಾರೆ. ಸಾಧಾರಣ ಕಲಿತ ಹುಡಿಗೆಗೆ ನೂಲಿನ ಮಣಿಯು, ಉಣ್ಣೆಯು ಹೆಣೆಯುವ ಕೆಲಸಗಳು ಅಲ್ಪ ಪುಟ್ಟಗಾದರೂ ಬರುತ್ತಿರುತ್ತವೆ. ಹುಡಿಗೆಗೆ ಈ ಕೆಲಸ ಬರುತ್ತವೆಂದು ತಾಯಂದಿರಿಗೆ ಒಂದು ಬಗೆಯು ಆನಂದವಾಗುತ್ತದೆ. ಪೂರ್ವದ ಸ್ತ್ರೀಯರು ಕುಪ್ಪಸ ಸೀರೆಗಳ ಮೇಲೆ ಕಸೂತಿಗಳನ್ನು ತೆಗೆಯುವದೂ ರಂಗೋಲಿಯ ಪರಿಪರಿಯ ಬಳ್ಳಿ ಗೋಪುರಗಳನ್ನು ತೆಗೆಯುವದೂ ಕೇವಲ ಹೊತ್ತುಗಳೆಯುವದಕ್ಕೋಸ್ಕರ ಮಾಡಲ್ಪಡುವ ಕೆಲಸಗಳೆಂದು ತಿಳಿಯುತ್ತಿದ್ದರು. ಈಗ ಅವುಗಳಿಗೆ ಅತಿಕೆಯು ಮಹತ್ವ ಬಂದಿರುವದು. ಇವುಗಳಿಂದ ಸ್ವಲ್ಪವಾದರೂ ಪ್ರಯೋಜನವಿಲ್ಲೆಂದು ನನ್ನ ಅಭಿಪ್ರಾಯವಿಲ್ಲ. ಅವುಗಳನ್ನು ಮಾಡಲಿಕ್ಕೆ ಬರುವದು ಜಾಣತನದ ಕೆಲಸವೇ. ಆದರೆ ಅವುಗಳಿಗೆ ಖರ್ಚು ಬಹಳ ಹತ್ತುತ್ತದೆ. ಕಾರಣ ಅವುಗಳಲ್ಲಿ ಅಗದೀ ಅವಶ್ಯವಾದವುಗಳನ್ನು ಮಾಡಬೇಕು. ಈಗಿನ ಹುಡಿಗೆಯರಿಗೆ ಹೊಲಿಗೆಯಲ್ಲಿ ಪಾಸಾಗುವ ಪೂರ್ತಿ ಮಾತ್ರ ಹೊಲಿಯುಶಿಕ್ಕೆ ಬರುತ್ತದೆ. ತನ್ನ ಕುಪ್ಪಸವನ್ನು ಹೊಲಿಯುವದಕ್ಕೆ ಬೇಸರ ಪಡುವಲ್ಲಿ ಒಡಹುಟ್ಟಿದವರ ಅಂಗಿ ಟೊಪ್ಪಿಗೆಗಳನ್ನು ಹೊಲಿಯುವದೆಲ್ಲಿ! ಕತ್ತರಿಸಲಿಕ್ಕೂ ಜೋಡಿಸಲಿಕ್ಕೂ ಬರುವದೇ ಇಲ್ಲ. ಅಂದರೆ ತಾವು ಯಾತಕ್ಕೋಸುಗ ಈ ಕೆಲಸವನ್ನು ಕಲಿತೆವೆಂಬದರ ವಿಚಾ

ಅವೇ ತಮಗೆ ಗೊತ್ತಿರುವದಿಲ್ಲವೋ ಅಥವಾ ಸ್ತ್ರೀಯರಲ್ಲಿ ಸ್ವಭಾವತಃ ಕರ್ತೃತ್ವಶಕ್ತಿ ಇಲ್ಲವೋ ತಿಳಿಯದು. ಸಾರಾಂಶ ತಮಗೆ ಯಾವದೂ ಪೂರ್ಣ ಬರುವದಿಲ್ಲ. ಕೇವಲ ಪರಾಸಾಗುವದರ ದೆಶೆಯಿಂದಲೇ ಕಲಿಯುತ್ತಿರುವರೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಚಿಕ್ಕಮಕ್ಕಳ ಆರೈಕೆಯಲ್ಲಿಯೂ ನಾವು ಬಹಳ ಹೆಚ್ಚು ಕಡಿಮೆ ಮಾಡಿದ್ದೇವೆ ಆದರೆ ಇದರಿಂದ ಮೊದಲಿಗಿಂತ ಹೆಚ್ಚಿಗೆ ಏನೂ ಉಪಯೋಗವಾಗಿಲ್ಲ ಮೊದಲಿನ ಹೆಂಗಸರು ತಮ್ಮ ಮಕ್ಕಳನ್ನಗಲಿ ಇರುತ್ತಿದ್ದಿಲ್ಲ ಒಂದು ವೇಳೆ ಆ ಹುಡಗರು ಮನೆಯಲ್ಲಿ ಹಿರಿಯರ ಇಲ್ಲವೆ ಅನುಭವಿಕ ಸ್ತ್ರೀಯರ ಕಯ್ಯಲ್ಲಿ ಇರುತ್ತಿದ್ದರು. ಆದರೆ ಈಗ ನಮ್ಮ ಕಯ್ಯಲ್ಲಿ ಸ್ವಲ್ಪ ದ್ರವ್ಯ ಇತ್ತೆಂದರೆ ನಮ್ಮ ಮಕ್ಕಳ ಆರೈಕೆಗೆ ಗಾಡಿಯೂ ಆಳೂ ಬೇಕೇಬೇಕು. ದೇವರ ದರ್ಶನೆ ಮುಂತಾದ ಕೆಲಸಗಳಿಗೆ ಹೋಗಬೇಕಾದಾಗ ಸಹ ತಮ್ಮ ಕೂಸನ್ನು ತಮ್ಮ ಬಗಲಲ್ಲಿ ಎತ್ತಿಕೊಂಡು ಹೋಗುವದಕ್ಕೆ ನಮ್ಮ ಸ್ತ್ರೀಯರಿಗೆ ನಾಚಿಕೆ ಬರುತ್ತದೆ. ಕೂಸಿನ ಸಂಘಟನವು ಎಷ್ಟು ಕಡಿಮೆಯಾಗುವದೋ ಅಷ್ಟು ಒಳ್ಳೆಯದೆಂದು ಈಗಿನವರಿಗೆ ಶೋರಹತ್ತಿದೆ. ಆ ಕೂಸುಗಳಿಗೆ ಹಾಲು ಹಾಕೋಣ, ಮೈ ತೊಳೆಯೋಣ, ಮಲಗಿಸೋಣ, ಗುಟ್ಟು ಮುಂತಾದ ಔಷಧ ಪ್ರಯೋಗಿಸೋಣ ಇತ್ಯಾದಿ ಕೆಲಸಗಳನ್ನು ಮಾಡಬೇಕಾದರೆ ಹಿಂದುಮುಂದೆ ನೋಡದೆ ಆಳುಗಳಲ್ಲಿ ಅನುಚಿತವಾದ ವಿಶ್ವಾಸವನ್ನಿಟ್ಟು ಅವರಿಗೆ ಆ ಕೆಲಸಗಳನ್ನು ಹೇಳುತ್ತೇವೆ. ಈ ಎಲ್ಲ ಕೆಲಸಗಳನ್ನು ಚಾಕರರು ಮನಃಪುಟ್ಟ ಮಾಡಲಾರರೆಂಬ ಕಲ್ಪನೆಯೇ ನಮ್ಮ ಮನಸಿನಲ್ಲಿ ಬರುವದಿಲ್ಲ. ಒಂದು ವೇಳೆ ಯಾರಾದರೂ ಆಕ್ಷೇಪ ತೆಗೆದರೆ—"ಸಾಹೇಬ ಜನರ ಮನೆಯಲ್ಲಿ ದಾಯಿ ಇರುವದಿಲ್ಲವೇನು? ಅವರ ಹೆಂಡರು ಸ್ವತಃ ಈ ಕೆಲಸಗಳನ್ನು ಮಾಡುವರೋ? ಎಂದು ಒಂದೇ ಉತ್ತರ. ಆದರೆ ಅವರ ನಡೆನುಡಿಗಳೂ ಅವರ ಉತ್ಪನ್ನವೂ, ಸಂಬಂಧವೂ ನಮ್ಮಂ

ದ ಭಿನ್ನವಾದವುಗಳೆಂಬ ವಿಚಾರವು ಯಾರ ಮನಸಿನಲ್ಲಿಯೂ ಬರುವದಿಲ್ಲ. ಒಂದು ವೇಳೆ ಯಾರ ಮನಸಿನಲ್ಲಿಯಾದರೂ ಈ ವಿಚಾರ ಬಂದರೆ ನಾವು ಅವರನ್ನು ಅಶಿಕ್ಷಿತರೆಂದು ಹೀ ಯಾಳಿಸುವೆವು.

(ಸಶೇಷ)

CORAL.

ಹವಳ.

ಉಪ್ಪು ಕಟ್ಟಿಬಂಧಗಳೊಳಗಿನ ಸಮುದ್ರಗಳೊಳಗೆ ಪೋ ಲಾಯಿಪ ಎಂಬ ಹೆಸರಿನ ಅತಿಸೂಕ್ಷ್ಮವಾದ ಜಂತುಗಳುಂ ಟು. ಇವೇ ಹವಳಗಳನ್ನು ಹುಟ್ಟಿಸುತ್ತವೆ- ಈ ಜಂ ತುಗಳು ಆಕಾರದಿಂದ ದುಂಡು ಕೊಳಿವೆಯಂತೆ ಇರುತ್ತವೆ. ಈ ಪೊಳ್ಳು ಸಿಲಿಂದರದ ಒಂದು ಬಾಯಿದ್ದು ಅನೇಕ ಸೂ ಕ್ಷ್ಮ ಮೊಸೆಗಳಿಂದ ಚಂದಕಾಣಿಸುತ್ತದೆ. ಈ ಮೊಸೆಗಳು ವರ್ತುಳಾಕಾರವಾಗಿ ಇರುವದರಿಂದ ದೊರೆತ ಆಹಾರವ ನ್ನು ಹಿಡಿದು ಬಾಯೊಳಗೆ ನುಗಿಸುತ್ತವೆ. ಈ ಜಂತುಗ ಳು ಗುಂಪ್ರಗುಂಪಾಗಿರುವವು. ಆದರೂ ಒಂದೊಂದಕ್ಕೆ ಒಂದೊಂದು ಪೊಳ್ಳು ಕೊಳಿವೆ ಇರುವವು. ಇಂಥ ಅನೇಕ ಕೊಳಿವೆಗಳು ಒಂದು ತೀರ ತಿಳುವಾದ ಪರಿಯಿಂದ ಒಂದ ಕ್ಕೊಂದು ಜೋಡಿಸಲ್ಪಟ್ಟಿರುವವು. ಮತ್ತು ಇಂಥಾದ್ದೇ ಪರಿಯು ಆ ಕೊಳಿವೆಯು ಒಳಮಗ್ಗಲಿಗೂ ಹೊರಮಗ್ಗಲಿ ಗೂ ಸುತ್ತಿಕೊಂಡಿರುವದು. ಈ ಹುಳಗಳಲ್ಲಿ ಒಂದರ ಮೊಸೆಗೆ ಏನಾದರೊಂದು ಪದಾರ್ಥವು ಸ್ಪರ್ಶವಾದರೆ ಆಸ್ಪ ರ್ಶಜ್ಞಾನವು ವಿದ್ಯುಲ್ಲತೆಯಂತೆ ಆ ಸರಗೊಳಗಿನ ಯಾವ ತ್ತೂ ಜಂತುಗಳಿಗೆ ಗೋಚರವಾಗುತ್ತದೆ. ಈ ಮಾತಿನಿಂ ದಲೇ ಯಾವತ್ತೂ ಹುಳಗಳಿಗೆ ಕೂಡಿ ಒಂದೇ ಸಾಮಾನ್ಯ ಸ್ಪರ್ಶೇಂದ್ರಿಯವಿರುತ್ತದೆಂದು ಬಲ್ಲವರ ಮತವುಂಟು. ಈ ಜಂತುಗಳು ತಮ್ಮ ಮೊಸೆಯನ್ನು ಮುಂದು ಮಾಡಿ ಸಮುದ್ರ ದೊಳಗಿಂದ ಅತಿ ಸೂಕ್ಷ್ಮವಾದ ಉದಿಜ ಪ್ರಾಣಿಜ ಆಹಾರ

ಗಳನ್ನು ಗೂತ್ತು ಹಚ್ಚಿ ಉಣ್ಣುತ್ತವೆ. ಆದರೆ ವಿಸೆಗೆ ಸ್ಪರ್ಶವಾದ ಕೂಡಲೆ ಈ ಜಂತುವು ತನ್ನ ನಳಿಕಾ ರೂಪದ ಭದ್ರವಾದ ಮನೆಯಲ್ಲಿ ಕೂತುಕೊಳ್ಳುವದು ಇಂಥ ಅನೇಕ ನಲಿಕೆಗಳು ಅಥವಾ ಮನೆಗಳು ಒಂದರ ಮೇಲೊಂದು ರಚಿಸಲ್ಪಡುತ್ತಾ ಸಾಗುವದರಿಂದ ಕಾಲಾಂತರದಲ್ಲಿ ಅವು ದೊಡ್ಡದೊಂದು ಗಿಡದ ಸ್ವರೂಪವನ್ನಾಗಲಿ, ಬಳ್ಳಿಯ ಸ್ವರೂಪವನ್ನಾಗಲಿ, ಬಂಡೆಯ ಸ್ವರೂಪವನ್ನಾಗಲಿ ಹೊಂದುವವು ಅದರಿಂದಲೇ ನಮ್ಮ ಪ್ರಾಚೀನ ಕವಿಗಳು ವಿದ್ರುಮಲತಾ ಅಂದರೆ ಹವಳದ ಬಳ್ಳಿಎಂದು ಅನೇಕ ಪ್ರಸಂಗಗಳಲ್ಲಿ ವರ್ಣಿಸಿರುತ್ತಾರೆ.

ಈ ಗೂಡು ಒಂದೇ ಕಾಲಕ್ಕೆ ಒಂದೇ ಹುಳದಿಂದ ಕಟ್ಟಲ್ಪಡುವದಿಲ್ಲ. ಮೊದಲಿನ ಹುಳವು ಸಾಯಲು ಅದರಲ್ಲಿಯೇ ಮತ್ತೆ ಅವೇ ಜಾತಿಯ ಹುಳಗಳು ಹುಟ್ಟಿ ಸ್ವಂತ ರಕ್ಷಣೆಗಾಗಿ ಹೊಳ್ಳುಕೊಳಿವೆಗಳನ್ನು ಮಾಡಿಕೊಳ್ಳುತ್ತವೆ. ಅವು ಇದೇ ಮೇರಗೆ ಕಾಲ ಕಾಲಕ್ಕೆ ರಚಿಸಲ್ಪಟ್ಟ ಅನೇಕ ನಳಿಕಾರೂಪದ ಮನೆಗಳು ಒಂದಕ್ಕೊಂದು ಕೂಡಿಕೊಂಡು ನಾವು ಮೇಲೆ ವರ್ಣಿಸಿದಂತೆ ಗಿಡಬಳ್ಳಿಗಳ ಸ್ವರೂಪವನ್ನು ಹೊಂದುತ್ತವೆ. ಈ ಸ್ವರೂಪಗಳು ಬಹು ವಿಶಾಲವಾದವುಗಳಾದರೆ ನಡುಗಡ್ಡೆಗಳನ್ನು ಹೋಲುತ್ತವೆ. ಈ ನಡುಗಡ್ಡೆಯು ಸ್ವರೂಪವನ್ನೂ ಹೊಂದಿದ ಹವಳದ ಹುಳಗಳ ಮನೆಗಳಿಗೆ ಬೇಕಾಗುವ ದ್ರವ್ಯವು ಸಮುದ್ರದ ನೀರೊಳಗಿಂದಲೇ ದೊರೆಯುತ್ತದೆ. ಸಾರಾಂಶ ಗುಳ್ಳೇ ಬಸಪ್ಪ, ಶಂಖದ ಹುಳು ಮುತ್ತಿನ ವಿಸು ಮೊದಲಾದವುಗಳು ಸಮುದ್ರದ ನೀರೊಳಗಿನ ಸುಣ್ಣವನ್ನು ಶೋಷಿಸಿಕೊಂಡು ತಮ್ಮ ಮನೆಯನ್ನು ಮಾತಿಕೊಳ್ಳುವಂತೆಯೇ ಇವು ಮಾಡಿಕೊಳ್ಳುತ್ತವೆ. ಆದರೆ ಶಂಖ ಸಂಪ್ರಗಳ ಬಿಡದೊಂದು ಹುಳದ ಮನೆಯು ಬೇರೆ ಬೇರೆ ಇರುವಂತೆ ಇವುಗಳ ಮನೆಗಳು ಇರುವದಿಲ್ಲ. ಅಸಂಖ್ಯ ಜೀವಿಗಳ ಮನೆಗಳು ಒಟ್ಟಾಗಿರುತ್ತವೆ.

ಸಮುದ್ರದಲ್ಲಿ ನೂರು ಇನ್ನೂರು ನೂರು ಫೂಟುಗಳಿಗಿಂತ ಆ

ಳವಾದ ನೀರಲ್ಲಿ ಈ ಹುಳಗಳು ಇರುವದಿಲ್ಲ. ಇಪ್ಪೇ ಅ ಥವಾ ಇದಕ್ಕೂ ಕಡಿಮೆ ಆಳವಾಗಿರುವ ನೀರಲ್ಲಿ ಇರುವ ಬಂಡೆಯಮೇಲೆ ತಮ್ಮ ಮನೆಯನ್ನು ಕಟ್ಟುತ್ತ ಇಳಿತದ ಅಥವಾ ಓಹಟಿಯ ಮರ್ಯಾದೆಯ ವರೆಗೆ ಆ ಮನೆಗಳ ನ್ನು ಬೆಳಿಸುತ್ತವೆ. ವಿಷುವ ವೃತ್ತದಿಂದ ಉತ್ತರಕ್ಕೆ ಮೂ ವತ್ತು ಅಂಶದ ವರೆಗೂ ದಕ್ಷಿಣಕ್ಕೆ ಮೂವತ್ತು ಅಂಶದ ವ ರೆಗೂ ಪೆಸಿಫಿಕ ಮಹಾಸಾಗರದಲ್ಲಿಯೂ ಬೇರೆ ಸಮುದ್ರ ಗಳಲ್ಲಿಯೂ ಬೇರೆ ಬೇರೆ ತರದ ನೂರರಿಂದ ಇನ್ನೂರಾಮೈ ಲುಗಳ ವರೆಗೆ ವಿಸ್ತಾರವಾದ ಹವಳದ ಬಂಡೆಗಳು ದೃಷ್ಟಿ ಗೋಚರವಾಗುವವು. ಆಸ್ಟ್ರೇಲಿಯದ ಪೂರ್ವದಂಡೆಯ ಸ ಮುದ್ರ ದಂಡೆಯಲ್ಲಿ ಪಸರಿಸಿರುವ ಹವಳದ ಬಂಡೆಯು ಒಂ ದು ಸಾವಿರ ಮೈಲು ವಿಸ್ತಾರವಾಗಿರುವದು. ಇಂಥ ಬಂಡೆ ಗಳು ಸಮುದ್ರದ ನೀರೊಳಗೆ ಮರೆಯಾಗಿರುವದರಿಂದ ಜ ಲ ಪರ್ಯಟನ ಮಾಡುವ ಎಷ್ಟೋ ಹಡಗಗಳು ಇವುಗಳಿಗೆ ತಾಕಿ ಒಡೆಯುತ್ತವೆ.

ಹವಳದ ಬಂಡೆಗಳು ಓಹಟಿಯ ಮರ್ಯಾದೆಯ ಮೇಲೆ ಬರುವದಿಲ್ಲೆಂದು ಮೇಲೆ ಹೇಳಿದ್ದೇವೆ. ಆದರೆ ಅನ್ಯಕಾರ ಣಗಳಿಂದ ಆ ಬಂಡೆಗಳು ಬೆಳೆದು ದೊಡ್ಡವಾಗಿ ಸಮುದ್ರ ದ ಪೃಷ್ಠಭಾಗದ ಮೇಲೆ ಕಾಣುವವು. ತೆರೆಗಳ ಯೋಗ ದಿಂದ ಅಥವಾ ಏರಿಳಿತಗಳ ಯೋಗದಿಂದ ಸಮುದ್ರ ದಂಡೆಯ ಲ್ಲಿರುವ ಬಂಡೆಗಳು, ಉಸುಬು ಮುಂತಾದವುಗಳು ಹೋಗಿ ಅವರಲ್ಲಿ ಬೀಳುವವು ಅವು ಪ್ರವಾಹದ ಕೂಡ ಸರಿದಾಡಿ ಆ ಬಂಡೆಯಲ್ಲಿ ಸಿಕ್ಕಿಕೊಳ್ಳುವವು. ಹೀಗಾಗುತ್ತ ಕಾಲಾಂ ತರದಲ್ಲಿ ಈ ಬಂಡೆಗಳು ಪೃಷ್ಠಭಾಗದ ಮೇಲೆ ಕಾಣಹ ತ್ತುವವು. ಪಕ್ಷಿಗಳಿಂದಾಗಲಿ, ಪ್ರವಾಹದಿಂದಾಗಲಿ ಹಲವು ತರದ ಬೀಜಗಳು ಈ ಬಂಡೆಗಳ ಮೇಲೆ ಬಿದ್ದು ಮೊಳೆತು ಸಸಿಯಾಗಿ, ಮರವಾಗಿ ಕಡೆಯಲ್ಲಿ ಮುಪ್ಪಾಗಿ ಅಲ್ಲಿಯೇ ಬಿ ದ್ದು ಕೊಳೆಯುವವು. ಆ ಮಣ್ಣಿನ ಮೇಲೆ ಮೇಲೆ ಹೇಳಿ ದಂತೆ ಮತ್ತೆ ಬೀಜಗಳು ಬಿದ್ದು ಮೇಲೆ ಹೇಳಿದ ಮೇರೆಗೆ

ವನಸ್ಪತಿಗಳ ಬನವಾಗುವದು. ಈ ಕ್ರಿಯೆಯು ಕೆಲಕಾಲ ನಡೆಯಲು ಮೊದಲು ಹಾಳು ಪ್ರದೇಶವಾಗಿದ್ದ ಬಂಡೆಯು ಮನುಷ್ಯನಿಗೆ ವಾಸಾರ್ಹವಾಗುತ್ತದೆ. ಪಾಸಿಫೆಕ ಮಹಾ ಸಾಗರದೊಳಗೂ, ದಕ್ಷಿಣ ಮಹಾಸಾಗರಗಳೊಳಗೂ ಈ ಮಾದರಿಯ ಅನೇಕ ನಡುಗಡ್ಡೆಗಳುಂಟಾದದ್ದನ್ನು ಪ್ರತ್ಯಕ್ಷ ನೋಡ ಬಹುದು.

ಹವಳಗಳು ಅನೇಕ ಬಣ್ಣದವಿರುವವು. ಪ್ರಚಾರದಲ್ಲಿ ಕೆಂಪು ಬಣ್ಣದ ಅಥವಾ ಬಿಳಿ ಛಾಯೆಯು ಕೆಂಪು ಬಣ್ಣದ ಹವಳಗಳೇ ವಿಶೇಷ. ಬಿಳಿ ಕರೇ ಬಣ್ಣದ ಹವಳಗಳೂ ಉಂಟು. ಹವಳಗಳ ಬೆಲೆಯು ಅವುಗಳ ಬಣ್ಣ, ರೂಪ, ತೇಜ, ಘನತ್ವ, ಮಾಟ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಹವಳದಲ್ಲಿ ಮುಖ್ಯವಾಗಿ ಸುಣ್ಣವೂ ಕಾರ್ಬಾನಿಕ್ ಆಸಿಡವೂ ಪ್ರಧಾನ ಘಟಕಗಳಾಗಿರುತ್ತವೆ. ಕಬ್ಬಿಣದ ಆಕ್ಸಾಯಿಡ ಅಥವಾ ಜಂಗಿನ ಬಣ್ಣವು ಹವಳಗಳಿರುತ್ತದೆ. ಬ್ಲೀಕಾದಂಥ ಬಣ್ಣವನ್ನು ನಾಮಶೇಷವಾಗಿ ಮಾಡಿಬಿಡುವಂಥ ಕ್ಲೋರಿನ ವಾಯುವು ಹವಳದ ಬಣ್ಣವನ್ನು ಕಳೆಯಲಾರದು, ಹವಳವು ಆಲ್ಕಹೋಲದಲ್ಲಿ ಕರಗುವದಿಲ್ಲ. ಖಡುವಿನಂತೆ ಯಾವತ್ತು ತರದ ಖನಿಜ ಆಸಿಡಿನಲ್ಲಿ ಕರಗುವದು. ಕರೇ ಬಣ್ಣದ ಮತ್ತು ಗುಲಾಬೀ ಬಣ್ಣದ ಹವಳಗಳು ಅಪರೂಪವಾದದರಿಂದ ಅವುಗಳಿಗೆ ಬೆಲೆ ಬಹಳ.

ಕೆಂಪು ಹವಳಗಳಿಂದ ಕರಭೂಷಣ ಕಂಠ ಭೂಷಣಗಳನ್ನು ಮಾಡುವದುಂಟು. ಪ್ರವಾಳ ಭಸ್ಮವು ಪಿತ್ತಕ್ಕೆ ನೇಲಾದ ಶಾಮಕ ಔಷಧಿಯೆಂದು ಹಿಂದೂ ವೈದ್ಯರು ತಿಳಿಯುತ್ತಾರೆ. ಇವು ಭೂಮಧ್ಯ ಸಮುದ್ರದಲ್ಲಿಯೂ ಹಿಂದೀ ಮಹಾಸಾಗರದ ದಂಡೆಗುಂಟಲೂ ವಿಶೇಷವಾಗಿ ಸಾರ್ಡಿನಿಯಾ, ಕಾರ್ಸಿಕಾ, ಟಿಪ್ಪಿಕೆಯ ದಂಡೆ, ಸುಯೇಜ ಸಮುದ್ರ ಗುನಿ ಮುಂತಾದ ಪ್ರದೇಶಗಳಲ್ಲಿ ಇವು ವಿಪುಲವಾಗಿ ದೊರೆಯುವವು. ಭೂಮಧ್ಯ ಸಮುದ್ರದ ದಂಡೆಗಿರುವ ಮಾರ್ಸೆ

ಸಿ, ಜಿನೋವಾ, ತಿಫಾರ್ನ ಮುಂತಾದ ಬಂದರಗಳಲ್ಲಿ ಹವಳಗಳ ಆಲಂಕಾರಗಳನ್ನು ಮಾಡುವ ಕಾರಖಾನೆಗಳುಂಟು. ಇಲ್ಲಿಂದಲೇ ಹಿಂದುಸ್ತಾನ, ಚೀನ, ಜಪಾನಗಳಿಗೆ ಹವಳಗಳು ಕಳಿಸಲ್ಪಡುತ್ತವೆ.

ಹವಳಗಳನ್ನು ತೆಗೆಯುವ ರೀತಿ—ಹವಳವನ್ನು ತೆಗೆಯುವವರು ಏಳೆಂಟು ಡೋಣಿಗಳನ್ನು ಸಿದ್ಧ ಮಾಡಿಕೊಂಡು ಸಮುದ್ರವನ್ನು ಸೇರುತ್ತಾರೆ. ಒಂದೊಂದು ಡೋಣಿಗಳ ಮೇಲೆ ಏಳೆಂಟು ಜನರು ಇರುವರು ಅದರಲ್ಲಿ ಒಬ್ಬಿಬ್ಬರು ಜಾಳಿಗೆಯನ್ನಾಗಲಿ, ಯಂತ್ರವನ್ನಾಗಲಿ ನೀರೊಳಗೆ ಜಿಲ್ಲುವರು. ಉಳಿದವರು ಡೋಣಿಯನ್ನು ಕಾಯುವರು. ಎರಡು ಬಲವಾದ ತೊಲೆಗಳನ್ನು ಬಂದರ ಮೇಲೊಂದು ಅಡ್ಡ ಇಟ್ಟು ಬಿಗಿ ಮಾಡಿ ಅದಕ್ಕೆ ಅಲ್ಲಲ್ಲಿಗೆ ಸೀಸದ ಜಡವಾದ ತುಂಡುಗಳನ್ನು ಕಟ್ಟುವರು. ಈ ತೊಲೆಗೆ ಒಳ್ಳೇ ಬಲವಾದ ಜಾಳಿಗೆಯನ್ನು ಕಟ್ಟುವರು. ಅವುಗಳಿಗೆ ಕೆಲವು ವಿಾನದ ಗಾಣದಂಥ ಅಥವಾ ಪಾತಾಳಗಡದಂಥ ಹಲವು ಒಡವೆಗಳನ್ನು ಕಟ್ಟಿ ಮೇಲೆ ಸಣಬಿನ ಹುರಿಯನ್ನು ಸೈಲಾಗಿ ಕಟ್ಟುವರು. ಇದೇ ಹವಳವನ್ನು ತೆಗೆಯುವ ಯಂತ್ರ. ಈ ತೊಲೆಯು ನೀರೊಳಗೆ ಮುಳುಗಲು ಅದರೊಳಗಿನ ಗಾಳಿಗಳೂ ಜಾಳಿಗೆಯು ಹವಳದ ಬಂಡೆಗೆ ತೊಡಕಿಕೊಳ್ಳುವವು. ಬಳಿಕ ಐದಾರು ಡೋಣಿಗಳನ್ನು ಬಂದಕ್ಕೊಂದು ಜೋಡಿಸಿ ಅವುಗಳನ್ನು ಒಳ್ಳೇ ವೇಗದಿಂದ ನಡಿಸುವರು. ಆಗ ಆ ಪ್ರವಾಳದ ಶಾಖೆಗಳು ಮೂಲ ಬಂಡೆಯಿಂದ ಬೇರೆಯಾಗುತ್ತವೆ. ಬಳಿಕ ಆ ಯಂತ್ರವನ್ನು ಮೇಲಕ್ಕೆಳೆದು ಅದಕ್ಕೆ ಸಿಕ್ಕ ಹವಳದ ಬಂಡೆಯ ತುಂಡುಗಳನ್ನು ಮೇಲಕ್ಕೆ ತಕ್ಕೊಳ್ಳುವರು. ಈ ಕಾರ್ಯವು ವಸಂತ ಋತುವಿನಲ್ಲಿ ನಡೆಯುವದು.

ಬೆಲೆ—ಸುಂದರವಾದ ಗುಲಾಬೀ ಬಣ್ಣದ ಹವಳಗಳು ತೊಲೆಗೆ ನಾನೂರರಿಂದ ಎಂಟು ನೂರು ನೂಪಾಯಿಯವರೆಗೆ ಬೆಲೆ ಬಾಳುವವು. ಸಾದಾ ಕೆಂಪು ಹವಳಗಳು ತೊ

ಲಗ ಳಿಂದ ಳಿಂಕೂಪಾಯಿಗಳವರೆಗೆ ಬೆಳ ಬಾಳುವವು. ಕಿರುಕಳ ಕಾಳುಗಳನ್ನು ನಾಲ್ಕಾಣೆಯಿಂದ ಹನ್ನೆರಡು ರೂ ಪಾಯಿಗಳ ವರೆಗೆ ಮಾರುವರು.

THE HISTORY OF RAJASTHAN.

ರಜಪೂತರ ವೃತ್ತಾಂತ

೧ನೇ ಅಧ್ಯಾಯ

ಉದೇಪ್ಪರದ ಮನೆತನವು.

ರಜಪೂತಸ್ಥಾನದೊಳಗಿನ ಯಾವತ್ತೂ ಸಂಸ್ಥಾನಗಳಲ್ಲಿ ಮೇವಾಡವು ಎಲ್ಲ ಬಗೆಯಿಂದಲೂ ಶ್ರೇಷ್ಠನೆನಿಸುವದು ಈ ಸಂಸ್ಥಾನದ ಮುಖ್ಯ ನಗರವು ಉದಯಪುರವು. ಈ ಹೆಸರಿನ ಉಚ್ಚಾರದಲ್ಲಿ ಅಪಭ್ರಂಶವಾಗಿ ಉದೇಪ್ಪರವೆಂದು ನುಡಿಯಲ್ಪಡುತ್ತದೆ. ಇಲ್ಲಿಯ ಅರಸನಿಗೆ 'ರಾಣಾ' ಎಂಬ ಬಿರುದುಂಟು. ಈ ಅರಸು ಮನೆತನವು ಸೂರ್ಯ ವಂಶದ್ದೆಂತಲೂ ರಘುವಂಶದ್ದೆಂತಲೂ ಎಣಿಸಲ್ಪಡುತ್ತದೆ. ಹೀದೀ ಭಾಷೆಯಿಂದ ಈ ಮನೆತನಕ್ಕೆ 'ಹಿಂದು ವಾಸೂರಜ' ಅಂದರೆ 'ಹಿಂದೂ ಜನರ ಸೂರ್ಯ' ಎಂದು ಕರಿಯುವ ಪರಿಪಾಠ ವುಂಟು. ಕ್ಷತ್ರಿಯರಲ್ಲಿರುವ ಮೂವತ್ತಾರು ಕುಲಗಳಲ್ಲಿ ಉದೇಪ್ಪರದ ರಾಣಾನ ಕುಲವು ಮೇಲಾದದ್ದಿರುತ್ತದೆ.

ಮುಸಲ್ಮಾನರು ಹಿಂದುಸ್ಥಾನದಲ್ಲಿ ಬಂದು ಸಾವಿರವರು ಷಗಳ ವರೆಗೆ ಪುಂಡಾಟ ನಡೆಸಿದರು. ಆದರೂ ಉದೇಪ್ಪುರದ ರಾಜ್ಯವು ಗಿಜನೀ ಮಹಮ್ಮೂದನು ಸಿಂಧೂ (ಮುಸಲ್ಮಾನರು ಇದಕ್ಕೆ ಮಿಹ್ರಾಮಹಿರಾವಣ, ನೀಲಾಬ ಎಂದು ಕರೆಯುವರು) ನದವನ್ನು ದಾಟಿ ಭರತಖಂಡಕ್ಕೆ ದಾಳಿ ಇಟ್ಟಾಗ, ಎಷ್ಟು ವಿಸ್ತಾರವಾಗಿತ್ತೋ ಅಷ್ಟೇ ವಿಸ್ತಾರದಿಂದ ಅದೇ ಸ್ಥಾನದಲ್ಲಿ ಈಗಲೂ ನೆಲೆಗೊಂಡು ಮೆರೆಯುತ್ತದೆ ಉದೇಪ್ಪರದ ಅರಸು ಮನೆತನದವರು, ತಾವು ಮಾನವೀ ವಂಶದವರೆಲ್ಲವೆಂತಲೂ ಸೂರ್ಯನಾರಾಯಣನಿಂದ ಬಂದ ಇಂಥ ದೇವತಾ ವಂಶಕ್ಕೆ ಸೇರಿದರೆಂತಲೂ ಅಭಿಮಾನ ಪ

ಡುತ್ತಾರೆ. ಈ ಮನೆತನದ ಅರಸರು ಮೊದಲು 'ರಾವಳ' ಎಂಬ ಬಿರುದನ್ನು ಧರಿಸಿದ್ದರು. ಹದಿಮೂರನೇ ಶತಕದ ಮಧ್ಯದಲ್ಲಿ ಇವರು 'ಪರಿಹಾರ' ವಂಶದವರಿಂದ 'ಮುಂದಾವರ' ದ ರಾಜ್ಯವನ್ನು ಗೆದ್ದುಕೊಂಡ ಬಳಿಕ ತಮ್ಮ ವಂಶಕ್ಕೆ 'ರಾಣಾ' ಎಂಬ ಹೊಸ ಬಿರುದನ್ನು ಜೋಡಿಸಿಕೊಂಡರು.

ಉದೇ ಪುರದ ರಾಜ್ಯದ ಐತಿಹ್ಯವನ್ನು ತಿಳಿಕೊಳ್ಳಲಿಕ್ಕೆ ವಿಪುಲಸಾಧನಗಳುಂಟು. ರಾಜಾ 'ಜಯಸಿಂಗನು' ಖುಮಾನರಾಸಾ, ಎಂಬ ಹೆಸರಿನದೊಂದು ರಾಜಾವಳಿಯನ್ನು ಬರೆದಿರುವನು. ಇದಲ್ಲದೆ ರಾಜರತ್ನಾಕರ, ಜಯವಿಲಾಸ, ಅಕಬರ ನಾಮಾ, ಬಾಬರ ನಾಮಾ, ಜಹಾನಗೀರ ತವಾರೀಖ ಮುಂತಾದ ವಿಶ್ವಸನೀಯ ಗ್ರಂಥಗಳೂ, ಆಯಾ ಕಾಲದ ಅರಸರು ಈ ಜನರಿಗೆ ಕೊಟ್ಟಂಥ ಸನದುಗಳೂ, ಭಾಟರು ರಚಿಸಿದ ಬಿರುದಾವಳಿಗಳೂ, ಗ್ರಂಥಗಳೂ ಹೇರಳವಾಗಿ ದೊರೆಯುವವು. ಇವೆಲ್ಲ ಸಾಧನಗಳಿಂದ ಉಪಲಬ್ಧವಾದ ಸಾರವನ್ನು ಈ ಗ್ರಂಥದಲ್ಲಿ ಸಂಗ್ರಹಿಸಿದ್ದೇವೆ.

ಅಯೋಧ್ಯಾ ಪತಿಯಾದ ಶ್ರೀ ರಾಮಚಂದ್ರನಿಗೆ ಕುಶನೂ ಲವನೂ ಎಂಬ ಇಬ್ಬರು ಅವಳಿ ಜವಳಿ ಮಕ್ಕಳು. ಇವರಲ್ಲಿ ಲವನು ಈಗ ರವಿಯು ದಂಡೆಗಿರುವ ಲಾಹೋರ ನಗರವನ್ನು ಕಟ್ಟಿಸಿದನೆಂದೂ, ಅದರಿಂದಲೇ ಲಾಹೋರಕ್ಕೆ ಲಹುಕೋಟ ಎಂಬ ಹೆಸರು ಬಂತೆಂದೂ ತಿಳಿಯುವದು. ಈ ಲವನ ವಂಶದಲ್ಲಿ ಐವತ್ತನಾಲ್ಕನೆಯವನು ಸುಮಿತ್ರನೆಂಬವನು ಜನಿಸಿದನು. ಇವನು ಲಾಹೋರದಲ್ಲಿ ಆಳುತ್ತಿರುವಾಗ ಉಜ್ಜನಿಯಲ್ಲಿ ವಿಕ್ರಮಾದಿತ್ಯನೆಂಬ ಅರಸನು ರಾಜನಾಗಿದ್ದನು. ಸುಮಿತ್ರನಿಂದ ಮುಂದೆ ಐಂಬತ್ತನೇ ತಲೆಯವನು ಕನಕಸೇನನು. ಇವನು ೧೪೪೯ನೇ ಇಸವಿಯಲ್ಲಿ ಸೌರಾಷ್ಟ್ರ ದೇಶದಲ್ಲಿ ಬಂದು ನಿಂತುಕೊಂಡನೆಂದು ಅಂಭೇರದ ಅರಸನಾದ ಜಯಸಿಂಗನ ಲೇಖದಿಂದ ತಿಳಿಯುವದು. ಈ ಜಯಸಿಂಗನು ಜ್ಯೋತಿಷದಲ್ಲಿ ನಿಷ್ಣಾತನಿದ್ದನೆಂದೂ, ಇವನಿ

ಗೆ ಇತಿಹಾಸವನ್ನು ಬರೆದಿಡುವ ಕುತೂಹಲವು ವಿಶೇಷವಿ
ತ್ತೆಂದೂ ಗೊತ್ತಾಗಿರುವದು. ಆದ್ದರಿಂದ ಇವನು ಬರೆದಿ
ಟ್ಟ ಲೇಖಗಳನ್ನು ಕುರಿತು ಶಂಕಿಸಲಿಕ್ಕೆ ಮಾರ್ಗವಿಲ್ಲ. ಇವ
ನು ಜಯಪುರವನ್ನು ಕಟ್ಟಿಸುವ ಮೊದಲು ಅದರ ನೆರೆಯ
ಲ್ಲಿಯೇ ಈಗಿರುವ ಅಂಭೇರಿ ಪಟ್ಟಣವನ್ನು ರಾಜಧಾನಿಯ
ನ್ನು ಮಾಡಿಕೊಂಡಿದ್ದನು.

ಮೇಲೆ ಹೇಳಿದಂತೆ ಕನಕಸೇನನು ಸೌರಾಷ್ಟ್ರದಲ್ಲಿ ಬಂ
ದು ನಿಂತುಕೊಂಡದಿನಿಂದ ಇವನ ವಂಶಕ್ಕೆ 'ಸೇನ' ಎಂಬ
ಅಡ್ಡ ಹೆಸರು ಬಂತು. ಮುಂದೆ ಕೆಲವು ದಿವಸಗಳಲ್ಲಿ ಈ
ಕನಕಸೇನನ ವಂಶವು ಆದಿತ್ಯವಂಶ ಸೂರ್ಯವಂಶವೆಂಬ
ಬೇರೆ ಬೇರೆ ಅಭಿಧಾನಗಳನ್ನು ಇಟ್ಟು ಕೊಳ್ಳುತ್ತ ಕಡೆಯ
ಲ್ಲಿ ಗೇಹಲೋಟವೆಂಬ ನಾಮವನ್ನು ಧಾರಣಮಾಡಿತು. ಗೇ
ಹಲೋಟವೆಂಬ ಹೆಸರಿಟ್ಟುಕೊಂಡಾಗ ಈ ವಂಶದವರು
ಉದೇಪುರದ ನೆರೆಯ ಗುಡ್ಡಗಳ ಕಂದರಗಳಲ್ಲಿ ವಾಸಿಸು
ತ್ತಿದ್ದರು ಆ ಕಂದರಕ್ಕೆ ಆಗ ಆಹಾರ್ಯವೆಂಬ ಹೆಸರಿ
ತ್ತು. ಅದರಿಂದ ಈ ಗೇಹಲೋಟವಂಶದವರು ಆ ಕಂದ
ರದ ಹೆಸರನ್ನೇ ತಮ್ಮ ಕುಲಕ್ಕೂ ಇಟ್ಟುಕೊಂಡರು. ಅಂ
ದಿನಿಂದ ಗೇಹಲೋಟ ನಾಮವು ಲೋಪವಾಗಿ ಆಹಾರ್ಯ
ವೆಂಬ ನಾಮಕರಣವು ಪ್ರಸಿದ್ಧವಾಯಿತು. ಇಷ್ಟಕ್ಕೇ ಕ
ನಕಸೇನನ ವಂಶದ ನಾಮಾಂತರವು ಮುಗಿಯಲಿಲ್ಲ. ಮುಂ
ದೆ ಕೆಲಕಾಲದಲ್ಲಿ ಈ ವಂಶವು ಸಿಸೋದಿಯಾ ಎಂಬ ಬೇ
ರೊಂದು ಉಪನಾಮವನ್ನು ಇಟ್ಟುಕೊಂಡಿತು ಈ ಹೆಸ
ರು ಮಾತ್ರ ಇದು ವರೆಗೂ ಉದೇಪುರದ ಅರಸು ಮನೆತನ
ದ ಅಡ್ಡ ಹೆಸರಾಗಿರುವದು. ಈ ಸಿಸೋದಿಯಾ ಎಂಬ ಹೆ
ಸರು ಬಂದ ಸಂಗತಿಯು ಬಹು ಸೋಜಿಗವುಂಟು. ಅದು
ಹೇಗಂದರೆ:— ಒಂದುದಿನ ಈ ಆಹಾರ್ಯ ಕುಲದ ಅರಸ
ನು ಬೇಟೆಗೆ ಹೋಗಿದ್ದನು. ಮಾಡಿಕೆಯಂತೆ ಅಂದು ಅವ
ನಿಗೆ ದೊಡ್ಡ ಬೇಟೆ ಶಿಗಲಿಲ್ಲ. ಒಂದು ಮೊಲವು (ಶಶ) ಮಾ
ತ್ರ ಶಿಕ್ಕಿತು. ಅದು ಕಾರಣ ಅಂದಿನಿಂದ ಆ ರಾಜವಂಶಕ್ಕೆ

ಸಿಸೋದಿಯಾ ಎಂಬ ಅಡ್ಡ ಹೆಸರು ಬಂತೆಂದು ದಂತ ಕಥೆ ಯುಂಟು. ಇದು ಹ್ಯಾಗೆ ಇರಲಿ, ಶ್ರೀ ರಾಮಚಂದ್ರನ ವಂಶವು ಅನೇಕ ನಾಮಗಳನ್ನು ಧರಿಸಿತೆಂಬದು ನಿಜವು. ಸಿಸೋದಿಯಾ ಕುಲದವರು ಮೊದಲು ಚಿತ್ತೂರ (ಚಿತೋಡ) ಲ್ಲಿದ್ದರು. ಆಗ ಅವರಿಗೆ 'ರಾಣಾವಟ' ವೆಂಬ ಅಭಿಧಾನವಿತ್ತು. ಮುಂದೆ ಇವರು ಉದೇಪುರದಲ್ಲಿ ತಳವೂರಿದರು. ಇವರು ಚಿತ್ತೂರಲ್ಲಿರುವಾಗ ಮುಸಲ್ಮಾನರು ಮೂರುಬಾರಿ ಈ ಕೋಟೆಯನ್ನು ಮುತ್ತಿದರು. ಆದರೆ ರಜಪೂತರು ಮೂರು ಸಾರೆಯೂ ಮುಸಲ್ಮಾನರನ್ನು ಜಡಿದೋಡಿಸಿದರು.

ಕನಕಸೇನನು ಆರಂಭದಲ್ಲಿ ಪಂಜಾಬದ ನಿವಾಸಿಯು. ಅಲ್ಲಿಂದ ಹೊರಟು ಗುಜರಾಥಕ್ಕೆ ಬಂದು ಅಲ್ಲಿ ಆಳುತ್ತಿದ್ದ ಪ್ರಮಾರವಂಶದ ಅರಸರ ರಾಜ್ಯವನ್ನು ಸೆಳಕೊಂಡು ಕ್ರಿಸ್ತ ಶಕದ ೧೪೪೯ನೇ ವರುಷ ವಡ ನಗರವೆಂಬ ಹೊಸ ಪಟ್ಟಣವನ್ನು ಕಟ್ಟಿಸಿದನು. ಇವನಿಂದ ನಾಲ್ಕನೇ ತಲೆಯವನಾದ ವಿಜಯಸೇನನು ವಿಜಯಪುರ, ವಿದರ್ಭನಗರ ಎಂಬ ಎರಡು ಪಟ್ಟಣಗಳನ್ನು ಕಟ್ಟಿಸಿದನು. ವಿಜಯಪುರವು ಮೋಲ್ಕದ ನೆರೆಯಲ್ಲಿ ಇಂದಿಗೂ ಇರುತ್ತದೆ. ವಿದರ್ಭ ನಗರವು ಮಾತ್ರ ಸಿಹೋರ ಎಂಬ ಬೇರೆ ಹೆಸರಿನ್ನಿಟ್ಟುಕೊಂಡಿರುವದು. ವಿಜಯ ಸೇನನು ಇವೆರಡು ಪಟ್ಟಣಗಳನ್ನು ಕಟ್ಟಿಸಿದ ಬಳಿಕ, ಈಗ ಭಾವನಗರದಿಂದ ಐದು ಜರದಾರಿಯ ಮೇಲಿರುವ ವಲಭ ಎಂಬ ಊರಿರುವ ಸ್ಥಳದಲ್ಲಿ ವಲ್ಲಭಿ ಪುರವೆಂಬ ಮೂರನೇದೊಂದು ಪಟ್ಟಣವನ್ನು ಕಟ್ಟಿಸಿದನು. ಈ ನಗರವು ಬಹು ದಿವಸ ಬಾಳಲಿಲ್ಲ. ಆದ್ದರಿಂದ ವಲ್ಲಭಿಪುರವೆಂಬ ಹೆಸರಿನ ಹೊರತು ಆ ನಗರದ ಮಿಕ್ಕ ಯಾವ ಬಗೆಯ ಸಂಗತಿಗಳೂ ಬಹು ದಿವಸಗಳ ವರೆಗೆ ಗೊತ್ತಾಗಲಿಲ್ಲ. ಭರತ ಖಂಡದಲ್ಲಿ ಇಂಥವೆಷ್ಟೋ ನಗರಗಳು ಮೊದಲು ಮೊದಲು ಒಳ್ಳೇ ಪ್ರಸಿದ್ಧಿಯನ್ನು ಪಡೆದು ಕಡೆಯಲ್ಲಿ ನಾಮಶೇಷವಾಗಿ ಹೋಗಿರುತ್ತವೆ. ಅಯೋಧ್ಯಾ ಚಂಪಾವತೀ ಭೋಗನಗರ, ಕನೋಜ, ವಿಜಯನಗರ ಮುಂತಾದ ಅನೇ

ಈ ಪ್ರಾಚೀನ ನಗರಗಳಲ್ಲಿ, ಕೆಲವು ಪೂರ್ವ ವೈಭವ ಶೂನ್ಯವಾಗಿಯೂ, ಹಲವು ತೀರ ಹಾಳಾಗಿಯೂ, ಕೆಲವು ನಾಮ ಶೇಷವಾಗಿಯೂ ಇರುತ್ತವೆ. ಕಾಲದ ಮಹಿಮೆಯೇ ಅಂಥಾದ್ದು; ಅದಕ್ಕೆ ಯಾರೇನು ಮಾಡುವರು! ಈ ಕಾಲರೂಪವಾದ ಕಾಲನ ಕೈಯಲ್ಲಿ ಶಿಕ್ಷಕ ವಲ್ಲಭಿಪುರವಾದರೂ ನಾಮಶೇಷಾವಸ್ಥೆಯನ್ನು ಹೊಂದಿತೆಂಬದು ಆರಿದಲ್ಲ. ಆದರೆ ನಮ್ಮ ಸುದೈವದಿಂದ ಒಳಗಡೆಯಲ್ಲಿ ಪಾಲಿಟಾಣಾದ ನೆರೆಯಲ್ಲಿರುವ ಶತ್ರುಂಜ ಪರ್ವತ ಮಹಾತ್ಮೆಯ ಗ್ರಂಥವು ಪ್ರಸಿದ್ಧವಾಗಿದೆ. ಅದರಿಂದ ಈ ನಗರವು ನಾವು ಮೊದಲು ಹೇಳಿದಂತೆ, ವಳಾಗ್ರಾಮದ ನೆರೆಯಲ್ಲಿತ್ತೆಂದು ನಿಶ್ಚಯವಾಗುತ್ತದೆ. ಈ ನಗರವು ೫೦೦ನೇ ಇಸವಿಯ ವರೆಗೆ ಒಳ್ಳೇ ಸಡಗರದಿಂದಲೂ, ಸೆಡವಿನಿಂದಲೂ ಮೆರೆಯುತ್ತಿತ್ತೆಂತಲೂ ಆ ಗುರುಷ ಮ್ಲೇಂಛರ ದಾಳಿಯಿಂದ ತೀರ ಹಾಳಾಯಿತೆಂತಲೂ, ಅಂದಿನಿಂದ ಆ ನಗರವಾಸಿಗಳೆಲ್ಲ ಆ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗೆ ಹೋದರೆಂತಲೂ ಲೇಖ ಮೂಲಕ ಪ್ರಮಾಣಗಳಿಂದ ಗೊತ್ತಾಗುವದು. ಈ ನಗರದ ಪೂರ್ವ ಬದಿಯ ಪ್ರದೇಶಕ್ಕೆ ಭೂಲಾ ಪ್ರಾಂತವೆಂಬ ಹೆಸರಿತ್ತು. ಈ ಪ್ರದೇಶದಲ್ಲಿ ಕ್ಷತ್ರಿಯರು ಬಹು ಜನರು ವಾಸಿಸುತ್ತಿದ್ದರು. ಇವರು ತಾವು ಸೂರ್ಯವಂಶದವರೆಂದು ಹೇಳುವರು. ಆದರಿಂದ ಭೂಲಾ ಪ್ರಾಂತಕ್ಕೆ ಸೌರರಾಷ್ಟ್ರ ಅಥವಾ ಸೌರಾಷ್ಟ್ರವೆಂದು ಕರೆಯುವ ಪರಿಪಾಠವು ಬಿದ್ದಿರಬಹುದೆಂದು ತರ್ಕಿಸಲಿಕ್ಕೆ ಬರುವಂತಿದೆ ಸೌರಾಷ್ಟ್ರದಲ್ಲಿಯೇ ಶನಿಯಾನಗರವೆಂಬಲ್ಲಿ ಯದುವಂಶದ ಕ್ಷತ್ರಿಯರು ರಾಜ್ಯವಾಳಿದರೆಂದು ಲೇಖಗಳಿವೆ.

ವಲ್ಲಭೀ ಪುರವು ಹಾಳಾದ ಸಂಗತಿಯನ್ನು ಮೇಲೆ ಉಲ್ಲೇಖಿಸಿದ್ದೇವೆ. ಇದನ್ನು ಹಾಳು ಮಾಡಿದ ಮ್ಲೇಂಛರು ಉತ್ತರದಿಂದ ಬಂದಿದ್ದರು. ವಲ್ಲಭಿಪುರದಲ್ಲಿ ಶೀಲಾದಿತ್ಯನೆಂಬ ಅರಸನು ಆಳುತ್ತಿದ್ದನು. ಅವನು ಆ ದಾಳಿಯಲ್ಲಿ ಸಕುಟುಂಬ ನಾಶ ಹೊಂದಿದನು. ಆದರೂ ದೈವಯೋಗದಿಂದ

ಚಂದ್ರಾವತಿಯು ರಾಜಕನ್ನಿಯಾದ ಪುಷ್ಪವತಿಯೆಂಬ ಇವನ ಹೆಂಡತಿಯೊಬ್ಬಳು ಆಗ ಅಬೂಶಿಖರದ ನೆರೆಯಲ್ಲಿರುವ ಅಂಬಾಜೆ ಎಂಬ ಸ್ಥಳಕ್ಕೆ ದೇವಿಯ ದರ್ಶನಕ್ಕೆ ಹೋಗಿದ್ದಳಾದ್ದರಿಂದ, ಅವಳೊಬ್ಬಳು ಮಾತ್ರ ಬದುಕಿಕೊಂಡಳು. ಆಕೆಯು ಪೂರ್ಣ ಗರ್ಭವತಿಯಾಗಿದ್ದಳು. ತನ್ನ ಗಂಡನ ಅವಸ್ಥೆಯನ್ನೂ ಮನೆತನದ ಹಾಡನ್ನೂ ಕೇಳಿ, ಅಂಜಿಕೊಂಡು ಸ್ವಂತ ರಕ್ಷಣೆಗಾಗಿಯೂ, ಗರ್ಭಸ್ಥ ಶಿಶುವಿನ ರಕ್ಷಣೆಗಾಗಿಯೂ ಕಾತೇವಾಡದೊಳಗಿನ ಮಾಳಿಯಾ ಎಂಬ ಗುಡ್ಡವನ್ನು ಸೇರಿದಳು. ರಾಣಿಯು ಇಲ್ಲಿಯೇ ತನ್ನ ದೈವದು ರ್ವಿಲಾಸದ ಕಾಲವನ್ನು ಕಳೆಯುತ್ತಿರಲು, ಗಂಡು ಮಗನನ್ನು ಹಡೆದಳು. ಬಳಿಕ ಆ ಕೂಸನ್ನು ವಡನಗರದ ಒಬ್ಬ ಬ್ರಾಹ್ಮಣನಲ್ಲಿ ಇಟ್ಟು ತಾನು ಚಿತಾಪ್ರವೇಶ ಮಾಡಿದಳು. ಆ ಬ್ರಾಹ್ಮಣನು ಆ ಕೂಸು ಗುಡ್ಡದಲ್ಲಿ ಹುಟ್ಟಿರುವದರಿಂದ ಅದಕ್ಕೆ ಗುಹನೆಂದು ಹೆಸರನ್ನಿಟ್ಟು ಚೆನ್ನಾಗಿ ಕಾಪಾಡಿದನು. ಕಾರಣ ಪರಶ್ವದಿಂದ ಮನುಷ್ಯನ ಆಹಾರ ವಸತಿಗಳಲ್ಲಿ ಸ್ಥಿತ್ಯಂತರವಾದರೂ ಅವನ ಆನುವಂಶಿಕ ಸಂಸ್ಕಾರವು ತೀರ ನಷ್ಟವಾಗುವದಿಲ್ಲೆಂದು ವೃದ್ಧವಾಕ್ಯ ವುಂಟು. ಅದರಂತೆ ಗುಹನು ಬ್ರಾಹ್ಮಣನಿಂದ ಪೋಷಿಸಲ್ಪಡುತ್ತ ಸಾತ್ವಿಕಾಹಾರಿಯಾಗಿ ಬ್ರಾಹ್ಮಣನ ಸಂಸರ್ಗದಲ್ಲಿ ಕಾಲ್ಗಳೆಯುತ್ತಿದ್ದರೂ ದೊಡ್ಡವನಾದಂತೆ ತನ್ನ ಕ್ಷಾತ್ರ ಗುಣಗಳನ್ನು ಪ್ರಕಟಿಸ ತೊಡಗಿದನು. ಇವನು ಭಿಲ್ಲರ ಗೆಳೆತನವನ್ನು ಸಂಪಾದಿಸಿಕೊಂಡು ಅವರೊಡನೆ ಬೇಟೆಗೆ ಹೋಗುವನು. ಬಾಣಗಳನ್ನು ಹೊಡೆಯೋಣ, ಕತ್ತಿಯನ್ನು ಪ್ರಯೋಗಿಸೋಣ ಮುಂತಾದ ಕ್ಷತ್ರಿಯೋಚಿತ ಕರ್ಮಗಳಲ್ಲಿ ಕುಶಲನಾದನು. ಆ ಕಾಲಕ್ಕೆ ಭಿಲ್ಲರು ಈಡರದಲ್ಲಿ ಸ್ವತಂತ್ರವಾದ ರಾಜ್ಯವನ್ನು ಆಳುತ್ತಿದ್ದರು. ಇವರಿಗೆ ಜನಪುತ್ರರೆಂದೂ, ಅರಣ್ಯ ಪುತ್ರರೆಂದೂ ರೂಢನಾಮಗಳಿದ್ದವು.

ಪ್ರಕಟನೆ

ಈ ವರ್ಷ ಕನ್ನಡ ಮುಲಕಿ ಪರೀಕ್ಷೆಗೂ ಪ್ರವೇಶ ಪರೀಕ್ಷೆಗೂ ಜಯವಿನಿ ನಾಲ್ಕನೆ ಸಂಧಿಯ ವೊದಲಿನ ೫೦ ಪದ್ಯಗಳು ಇಡಲಪಟ್ಟಿರುತ್ತವೆ. ತಿಳಿದ ಆ ಪದ್ಯಗಳನ್ನು ಅಪುಗಳ ಅರ್ಥ ಅನ್ವಯ ಸಮಾಧಾನ, ಸಮಾಸ, ವ್ಯಾಕರಣ ವಿಚಾರ, ವಿಶೇಷವಾಹೇಲೆ ಇವು ಗಳನ್ನು ಪ್ರಾ. ಸ್ಕೂಲ ೧ನೇ ಅ ವಾಧ್ಯರ ತಮ್ಮಾಜಿ ನಾರಾ ಯಣ ಅಮ್ಮಿನವಿ ಇವರಿಂದ ಬರಿಯಿಸಿ ಅಚ್ಚು ಹಾಕಿಸಿರುತ್ತೇ ವೆ. ಇವರ ಸಹಾಯದಿಂದ ವಿದ್ಯಾರ್ಥಿಗಳು ಸ್ವತಂತ್ರವಾಗಿ ಅಭ್ಯಾ ಸ ಮಾಡಬಹುದು. ಬೇಕಾದವರು ಕೆಳಗೆ ಸಹಿ ಮಾಡಿದವರ ಕಡಿಗೆ ಪತ್ರ ಬರೆದು ಬರಿಗೊಡುವ ಯಿಂದ ಕಿಲಿಜಿಧನಾಗಿ ಹಣ. ಳ್ಳುಹಿ ತರಿಸಿಕೊಳ್ಳಬಹುದು. ಬೆಲೆ ೫೩ ಆಣೆ.

ಇವರ ಹೊರತು ನಮ್ಮಲ್ಲ ಹೊಸದಾಗಿ ತಯಾರಿಸಿದ ೧೫೦ನೆ ಬುಕ್ಕಗಳು ವೊರ್ಸ್‌ಡೆನ್ ಇತಿಹಾಸ ನಗ್ಯೆರೆ ಶಾಲೋಪಯೋಗಿ ಎ ಲ್ಲ ಪುಸ್ತಕಗಳು ಸಿಗುತ್ತವೆ. ಹೊಸ ಪದ್ಧತಿಯಂತೆ ಅಕ್ಷರ ಅಂಕಿಗಳ ನ್ನು ಕಲಿಸುವದಕ್ಕೆ ಇಸಫೇಟು ತಯಾರಿಸಿರುತ್ತದೆ. ಬೆಲೆ ೧೦೬

ರಾವ್ ಬಾಯರ್ ತನುಜಾಚಾರ್ಯರ್ ತೊನಸೆ ಬುಕ್ಕಶೇಲರ್.

ಧಾರವಾಡ.

ಪ್ರಕಟನೆ.

ನಮ್ಮ ಶಾಲೆಯು ೭ನೇ ಇಯತ್ತೆಯಲ್ಲಿ ಈಗ ೮೦ ಹುಡುಗ ರು ಇರುವದರಿಂದ ಹೆಚ್ಚಿಗೆ ಹುಡುಗರನ್ನು ತೆಗೆದುಕೊಳ್ಳಲಿಕ್ಕೆ ಅವಕಾಶವಿಲ್ಲ. ಬರುವವರು ಸುಮ್ಮನೆ ವೆಚ್ಚ ಮಾಡಿಕೊಳ್ಳಬಾರದೆಂ ದು ತಿಳಿಸಿದ್ದೇವೆ.

ಪ್ರಾಕ್ಟಿಸಿಂಗ ಸ್ಕೂಲ ಟ್ರೇನಿಂಗ ಕಾಲೇಜ ಧಾರವಾಡ ತಾರೀಖು ೨೦-೨-೧೯೦೬

G. V. DESHPANDE, ಹೆಡ್ ಮಾಸ್ತರ್

ಜಾಹೀರಾತು ನಂ. 11

ಸೌದಾಗರ ಬುಕ್‌ಡಿಪೋ

ಎಲ್ಲ ಶಾಲಗಳ ಸರಕಾಂ, ಖಾಸಗಿ, ಮಾರ್ಸ್‌ಡನ್ ಇತಿಹಾಸವೂ, ಕಥೆಗಳೂ, ಪುರಾಣ ವಗೈರೆವು. ಗಳು ಅವೆ. ಆಫೀಸ ಕ್ಲಾಕಗಳು ಸಹ ಶೋಭೆಯುಳ್ಳ ವಿಾಸಿಗಳ ಬೆಳವಣಿಗೆಯು ತೈಲು. ಕಿನೆಯಲ್ಲಿಡುವ ಫಡಿಯಾರಗಳು ಅವೆ. ಮಾರ್ಸ್‌ಡನ್ ಇ. ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ವ. ಅಬ್ದುಲ್‌ಜ
ವಿಾದ ಸಾ॥ ಸೌದಾಗರ.

ತ್ವರೆಮಾಡಿರಿ! ತ್ವರೆಮಾಡಿರಿ!

ಕ್ರಯಕಟನೆ.

ಫೆಬ್ರುವರಿ ೧೫ನೆಯು ತಾರೀಖಿಗೆ ಕಾರಾಟಕ್ಕೆ ಸಿದ್ಧವಾಗೆವದು.

ಈ ವರ್ಷ ಮುಲಕೀ ಪರೀಕ್ಷೆಗೆ ಜೈವಿನಿಯು ೮ನೆಯು ಸಂಧಿಯು ಆರಂಭದಿಂದ ೫೦ ಶೋಕಗಳು ಅರ್ಥ ಸಹಿತ ಬಾಯಿಪಾಠ ಬರತಕ್ಕದ್ದೆಂದಾ ನೇಮಿಸಿದೆಯಷ್ಟೆ. ನಾವು ಶಾಲಾಗುಂಪುಗಳಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಬೇಕೆಂದು ಸಂದರ್ಭವಾದ ವೊಳೆಯಕ್ಕರಗಳಿಂದ ಆ ೫೦ ಶ್ಲೋಕಗಳನ್ನೂ, ಅವುಗಳ ಅನ್ವಯಾರ್ಥವನ್ನೂ, ಸಮಾಸವಿಗ್ರಹಗಳನ್ನೂ, ವಿಶೇಷ ವ್ಯಾಕರಣ ಸಂಬಂಧದ ನೇಮುಗಳನ್ನೂ, ಸೇರಿಸಿ ಮುದ್ರಿಸಿರುತ್ತೇವೆ. ಬೆಲೆ ೪ ಆಣೆ. ಅಂಚೀವೆಚ್ಚ ಬೇರೆ.

ಪುಸ್ತಕಗಳು ದೊರೆಯುವ ವಿಳಾಸ:—

ಮ್ಯಾನೇಜರ.
ಗ್ರಾಮಾಧಿಕಾರಿ ಮುದ್ರಾಲಯ ವಿಜಾಪೂರ

ಕನ್ನಡ ಶಾಲಾಪತ್ರಿಕೆ

KANARESE

SCHOOL PAPER.

ಪುಸ್ತಕ ೪೨] ಮಾರ್ಚ ೧೯೦೬. [ಸಂಚಿಕೆ ೩.

ಅನುಕ್ರಮಣಿಕೆ

	ಪುಟ.
ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು	೪೯–೫೩
ಪಟ್ಟಿವು	೫೩–೫೧
ಸಾಂಪ್ರತದ ಸ್ತ್ರೀಶಿಕ್ಷಣವೂ ಸುಧಾರಣೆಯುಂ	೫೧–೫೩
ಉದಯಪುರದ ವೃತ್ತಾಂತವು	೫೩–೫೦
ವರ್ಷಾಂತ್ಯದ ಪರೀಕ್ಷೆಯ ಪ್ರಶ್ನೆಗಳು	೫೦–೫೧
ನೋಟೀಸು	೫೨

CONTENTS.

ducational Intelligence and Useful Notes	49–53
abit	53–61
sent female education and civilization	61–63
histo y of rajasthan	63–70
rt Prize Examination Paper. ...	...70-71
artmental Notice.	72

DHARWAR:

PRINTED AT THE KARNATIC BOOK DEPOT PRESS,

1905.

REGISTERED No.B. 1

ಕನ್ನಡ ವಾರಪತ್ರಿಕಾ ವರ್ಗಣಿ ವರ್ಷಕ್ಕೆ ಮುಂಗಡ ೧೫ ರೂ.
ಮೂರು ಸಂಚಿಕೆಗೆ ... ... ೧ ರೂ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ ೪ ಪಂಕ್ತಿಗಳವರೆಗೆ ೧ ರೂ.
ಮೂರುಸಾರೆ ಇಟ್ಟರೆ ೬ " ೧ ರೂ
ಆರುಸಾರೆ ಇಟ್ಟರೆ ೪ " ೧ ರೂ.

ಸೂಚನೆಗಳು.

೧. ವಾರಪತ್ರಿಕೆಗೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ವಿಶೇಷಲೇಖನಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ
ಜಾಸಲು ಬೀಳುವದು.
೩. ಛಾಪಾಂತರ ಮಾಡಿ ಛಾಪಿಸುವವಾದರೆ ಮೇಲಿನ ದರದ ೫
ಮ್ಯಾಡಿ ಫೀ ಬೀಳುವದು
೪ ಪ್ರಕಟನೆಯೆಕೂಡ ಹಣ ಕಳುಹಿಲಿಕ್ಕೆ ಬೇಕು
೫ ಟಿಕೀಟು ಇಟ್ಟು ಹೊರ್ತು ಉತ್ತರ ಶಿಗಲಾರದು

S. K. Rodda.

ಮ್ಯಾನೇಜರ ಕ. ವಾರಪತ್ರಿಕೆ

ಶಾಲಾಪತ್ರಿಕೆ.

ಪದ್ಯ.

ಶ್ರೀಯುವಿದ್ಯಾಗುರುವರ್ಯರುನ್ನತಶಕೆಯಂ ಸಚ್ಛಿಷ್ಯಕೋತ್ಕರ್ಷಮಾ
ಲೆಯುಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ।
ಸಹಯದಿಂದಿತ್ತವೊದುವರ್ಗಸುಗುಣಂ ತೋರರ್ಕ್ಕೈಕೊಂಬುದೆಂ।
ಬಯೆದುಂದೋಷವತಿರ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರದರ್ಶ್ಯಂ

ಪುಸ್ತಕ ೪೨.]　　ಮಾರ್ಚ ೧೯೦೬.　　[ಸಂಚಿಕೆ ೩.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸರ್ ೧೯೦೪-೦೫ ಇಸವಿಯ ಮುಂಬಯಿ ಇಲಾಖೆಯ ವಿದ್ಯಾಖಾತೆಯ ವಾರ್ಷಿಕ ರಿಪೋರ್ಟ್ ಪ್ರಸಿದ್ಧವಾಗಿರುತ್ತದೆ. ಅದರೊಳಗಿನ ಮುಖ್ಯ ಮುಖ್ಯ ಸಂಗತಿಗಳನ್ನು ವಾಚಕರಿಗಾಗಿ ಇದರಡಿಯಲ್ಲಿ ಬರೆದಿರುತ್ತೇವೆ.

ಸ್ವಂತ ಸರಕಾರದವರಿಂದ ನಡಿಸಲ್ಪಟ್ಟ ಆರ್ಟ್ಸ್ ಕಾಲೇಜಗಳು ಹತ್ತು ಇರುವವು. ಇವೇ ಮಾದರಿಯ ಜನರಿಂದ ನಡಿಸಲ್ಪಟ್ಟ ಕಾಲೇಜಗಳು ಐದು ಇರುವವು ಕ್ರಮವಾಗಿ ಇವುಗಳಲ್ಲಿ ೬೩೮, ಹಾಗೂ ೧೪೬ ವಿದ್ಯಾರ್ಥಿಗಳು ಕಲಿಯುವರು. ಮಧ್ಯಮಪ್ರತಿಯ ಶಾಲೆಗಳು ೫೦೪. ಪ್ರಾಥಮಿಕ ಶಿಕ್ಷಣದ ೯೬೧೪ ಶಾಲೆಗಳಲ್ಲಿ ೪೩೩೮೮ ವಿದ್ಯಾರ್ಥಿಗಳು ಓದುತ್ತಾರೆ. ಮಧ್ಯಮಪ್ರತಿಯ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೪೦೪೩ ಇರುತ್ತದೆ. ವಿಶೇಷ ಪ್ರಕಾರದ ಶಾಲೆಗಳಲ್ಲಿ ೧೪ ಟ್ರೇನಿಂಗ ಸ್ಕೂಲಗಳೂ, ೪೩ ಬೇರೆ ತರದ ಶಾಲೆಗಳೂ ಇರುತ್ತವೆ. ಇವುಗಳಲ್ಲಿ ಕ್ರಮವಾಗಿ ೧೦೪೩,-೩೦೪೪ ಹುಡುಗರು ಅಭ್ಯಾಸ ಮಾಡುತ್ತಾರೆ. ಜನರಿಂದಲೇ ನಡಿಸಲ್ಪಟ್ಟ ಮೇಲ್ತರದವುರ್ಗಳ ಶಾಲೆಗಳೂ, ಪ್ರಾಥಮಿಕ ಹಾಗೂ ಬೇರೆ ತರದ ಶಾಲೆಗ

ಳು ಕೂಡಿ ೭೬೪ ವಿದ್ಯಾಲಯಗಳೂ ಇರುವವು. ಇವು ಗಳಲ್ಲಿ ಕ್ರಮವಾಗಿ ೩೯೭೧ ೬೪೪ ವಿದ್ಯಾರ್ಥಿಗಳು ಕಲಿಯುತ್ತಾರೆ. ಮುಂಬಯಿ ಇಲಾಖೆಯಲ್ಲಿ ಯಾವತ್ತೂ ಪ್ರಕಾರದ ಶಾಲೆಗಳು ಕೂಡಿ ೧೯೯೬ ಇರುವವು. ಇವು ಗಳಲ್ಲಿ ೬೬೦೦೦ ಹುಡುಗರು ಕಲಿಯುತ್ತಾರೆ.

ಸರಕಾರದವರ ಮೇಲ್ವಿಚಾರಣೆಗೆ ಒಳಪಡದೆ ಇರುವಂ ಥ ಶಾಲೆಗಳಲ್ಲಿ ೫೦೫೦೦ ಹುಡುಗರೂ ೪೪೩೪ ಹುಡು ಗೆಯರೂ ಕಲಿಯುವರು. ಈ ಸಂಖ್ಯೆಯು ಹೋದ ವರ್ಷ ದ ಸಂಖ್ಯೆಗಿಂತ ಬೆಳೆದಿರುವದೆಂಬದು ಸ್ಪಷ್ಟವದೆ.

ಈಗ ಕಲಿಯುವ ವಿದ್ಯಾರ್ಥಿಗಳಲ್ಲಿ ೪೧೬೧ ಯುರೋಪು ಯನ್‌ರೂ, ೧೭೦೫೪ ದೇಶೀಯ ಕ್ರಿಸ್ತೀಜನರೂ, ೯೪೯೦೭ ಬ್ರಾಹ್ಮಣರೂ ೫೫೫೪೦ ಹಿಂದೂ ಜನರೂ ೧೦೦೭೯ ಮಂದಿ ಮುಸಲ್ಮಾನರೂ ೬೦೦೭ ಮಂದಿ ಬೌದ್ಧರೂ ೧೬೦೦೭ ಮಂದಿ ಪಾರ್ಶೀ ಜನರೂ ೭೧೭೪ ಮಂದಿ ಜೇರೆ ಜಾತಿಯ ಜನರೂ ಇರುವರು. ಬ್ರಾಹ್ಮಣೇತರರಲ್ಲಿ ಸ ಮಾವಿಷ್ಟರಾದ ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆಯು ೩೧೪೬೩ ಉಂಟು. ಇವರಲ್ಲಿ ೧೫೫ ಮಂದಿ ಕಾಲೇಜಗಳಲ್ಲಿ ಯೂ ೩೭೫೫ ಜನರು ಮಧ್ಯಮ ಪ್ರತಿಯ ಶಾಲೆಗಳಲ್ಲಿಯೂ ೩೧೦೫೯ ಪಾ ಥಮಿಕ ಶಾಲೆಗಳಲ್ಲಿಯೂ ೬೪ ಮಂದಿ ವಿಶೇ ಷ ಪ್ರಕಾರದ ಶಾಲೆಯಲ್ಲಿಯೂ ಅಭ್ಯಾಸ ಮಾಡುತ್ತಿರುವ ರು. ಇದರಿಂದ ಲಿಂಗಾಯತ ಜಾತಿಯವರು ವಿದ್ಯಾಭಿವೃದ್ಧಿಯಲ್ಲಿ ಮುಂದಡಿಯನ್ನಿಕ್ಕುತ್ತ ನಡೆದಿರುವರೆಂಬದು ಸ್ಪಷ್ಟವಾಗು ತ್ತದೆ.

ಈ ವರ್ಷ ವಿದ್ಯಾಖಾತೆಗೆ ದೊರೆತ ಹಣವು ಕೆಳಗೆ ಬರೆ ದಂತೆ:—೩೨೦೬೦೦ ರೂಪಾಯಿಗಳು ಸರಕಾರದಿಂದ ೪೯೩೦೦ ರೂಪಾಯಿಗಳು ಲೋಕಲ್‌ಫಂಡಿನಿಂದ ೪೯೪೧೯ ರೂಪಾಯಿಗಳು ಮ್ಯುನಿಸಿಪಾಲಿಟಿಯಿಂದ ೧೪೩೦೦ ರೂಪಾಯಿಗಳು ಫೀಯಿಂದ ೭೪೧೦೪ ರೂಪಾಯಿಗಳು ಅನ್ಯಪ್ರಕಾರದಿಂದ ಒಟ್ಟು ೬೩೪೩೦ ರೂ

ರೂಪಾಯಿಗಳು ವೆಚ್ಚವಾಗಿರುವವು. ಈ ಹಣದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ೫೯೨೯೦೦ ರೂಪಾಯಿಗಳು ವೆಚ್ಚವಾಗಿರುವವು.

ಲೋಕಲ್‌ಬೋರ್ಡಿನ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಂಥ ಟ್ರೇಂಡರಾದಂಥ ಪ್ರಾಥಮಿಕ ಶಾಲೆಗಳ ಮುಖ್ಯಾಧ್ಯಾಪಕರ ಸಂಬಳವು ಸರಾಸರಿ ೧೯—೧೧—೪ ಉಂಟು. ಮ್ಯುನಿಸಿಪಾಲಿಟಿಯೊಳಗಿನ ಮಾಸ್ತರ ಜನರ ಸಂಬಳವು ೨೯—೭—೧ ಉಂಟು. (ಮುಂಬಯಿಯೊಳಗಿನ ಮಾಸ್ತರರ ಪಗಾರ ಹೆಚ್ಚು ಇರುವದು.)

ದೇಶೀ ಸಂಸ್ಥಾನಗಳೊಳಗಿನ ಮಾಸ್ತರರ ಸಂಬಳದ ಸರಾಸರಿಯು ೧೪—೧೪-೧೧ ಉಂಟು. ಇದರಂತೆ ಟ್ರೇಂಡರಾದ ಶಿಕ್ಷಕಿಯರ ಸಂಬಳವಾದರೂ ಕ್ರಮವಾಗಿ ೨೧-೩--೪; ೨೩—೧೦—೫; ೨೦—೧೫—೫ ಯಂತೆಯೂ, ಅಟ್ರೇಂಡ ಶಿಕ್ಷಕಿಯರ ಸಂಬಳವು ಕ್ರಮವಾಗಿ ೯—೫—೯; ೧೬—೬—೧೧; ೧೨-೬-೫ ಯಂತೆಯೂ ಇರುವದು.

ಇದೇ ರಿಪೋರ್ಟಿನಲ್ಲಿ ಸರಕಾರದವರು ಅಮದಾಬಾದ, ನಡಿಯಾದ, ಧಾರವಾಡ, ಕಾರವಾರ, ಶಿಕಾರಪೂರ ಇವ್ಹು ಊರಲ್ಲಿರುವ ಹಾಯಸ್ಕೂಲಗಳೂ, ಅಮದಾಬಾದಿನ ಮಧ್ಯಮ ಪ್ರತಿಯು ಶಾಲೆಯೂ ಚನ್ನಾಗಿ ನಡಿಸಲ್ಪಡುತ್ತವೆಂದು ಅಭಿಪ್ರಾಯ ಪಡುತ್ತಾರೆ. ಸ್ತ್ರೀ ಶಿಕ್ಷಣವು ಇಲಾಖೆಯು ಯಾವತ್ತೂ ಭಾಗಗಳಲ್ಲಿ ಬಹು ವೇಗದಿಂದ ಮುಂದುವರಿಯುತ್ತಿದ್ದುದೆಂದು ಸರಕಾರವು ಸಮಾಧಾನವನ್ನು ಪಟ್ಟಿರುತ್ತದೆ.

ನೀರಿನ ದುರ್ಭಿಕ್ಷಕ್ಕೋಸುಗ ಈ ವರುಷದ ಜೋಳೀ ಪಬ್ಬದಲ್ಲಿ ಕೂಡುವ ಮಾಸ್ತರ ಜನರ ಸಮ್ಮೇಲನವು ಮುಂದೆ ಹಾಕಲ್ಪಟ್ಟಿರುತ್ತದೆ.

ಇಪ್ಪು ದಿವಸಗಳ ವರೆಗೆ ರಾಜ್ಯಕಾರ್ಯವನ್ನು ನಡಿಸುತ್ತಿದ್ದ ಕಾನ್ಸರ್‌ವೇಟಿವ್ ಜನರಿಗೆ ಬದಲಾಗಿ ಈಗ ಲಿಬರಲ್ ಜನರು ಅಧಿಕಾರಾರೂಢರಾಗಿರುವರು. ಸರ್ ಕ್ಯಾಂಬೆಲ್, ಬ್ಯಾನರಮನ್ ಎಂಬ ಮುತ್ಸದ್ದಿಯು ಮುಖ್ಯ ಪ್ರಧಾನನಾಗಿರುವನು. ಜಾನ್‌ಮೋರ್ಲೆ ಎಂಬವರು ಹಿಂದುಸ್ತಾನದ ಪ್ರಧಾನರಾಗಿರುವರು.

ಯುವರಾಜರೂ, ಯುವರಾಜ್ಞಿಯೂ ಹಿಂದುಸ್ತಾನದಲ್ಲಿ ಸಂಚರಿಸುತ್ತ ಮದ್ರಾಸು ಮೈಸೂರ, ಹೈದರಾಬಾದ ಮುಂತಾದ ಪಟ್ಟಣಗಳನ್ನು ನೋಡಿಕೊಂಡು ಕಾಶಿಗೆ ಬಂದು ತಲುಪಿರುವರು. ಅಲ್ಲಿ ಕೆಲವು ದಿವಸ ನಿಂತುಕೊಂಡು ಆಗ್ರಾ ಮೊದಲಾದವುಗಳ ಮೇಲಿಂದ ಇಂಗ್ಲಂಡಕ್ಕೆ ಪ್ರಯಾಣ ಮಾಡಿಸುವರೆಂದು ತಿಳಿಯುತ್ತದೆ.

ಮುಂಬಯಿ ನಗರದ ಜನಸಂಖ್ಯೆಯು ಪ್ಲೇಗಿನ ಹಾವಳಿಗಾಗಿ ೧೯೦೧ ಖಾನೇಸುಮಾರಿಯಲ್ಲಿ ಸರಿಯಾಗಿ ಗೊತ್ತಾಗಲಿಲ್ಲ. ಆದ್ದರಿಂದ ಹೊಸದಾದ ತಿಂಗಳಲ್ಲಿ ಮ್ಯುನಿಸಿಪಾಲಿಟಿಯವರು ತನ್ನು ನಗರದ ಖಾನೇಸುಮಾರಿಯನ್ನು ಮಾಡಿಸಿದರು. ಅದರಿಂದ ನಗರದಲ್ಲಿ ೮೪೦೦೦೦ ಜನರಿರುವರೆಂದು ಗೊತ್ತಾಗಿದೆ. ಬ್ರಿಟಿಶ ಸಾಮ್ರಾಜ್ಯದೊಳಗೆ ಲಂಡನ್ (೬೬೦೦೦೦೦) ಹೊರತಾಗಿ ಇದೇ ದೊಡ್ಡ ಪಟ್ಟಣವೆನಿಸುವದು.

ಕಲಕತ್ತೆಯ ವಿಶ್ವವಿದ್ಯಾಪೀಠದವರು ಯುವರಾಜರಿಗೆ ಎಲ್, ಎಲ್,, ಡಿ, ಎಂಬ ಬಹುಮಾನದ ಪದವಿಯನ್ನು ಕೊಟ್ಟರು. ಈಗಿರುವ ಚಕ್ರವರ್ತಿಗಳು ಯುವರಾಜರಾಗಿ ಹಿಂದುಸ್ತಾನಕ್ಕೆ ಇಂದಿಗೆ ಮುವತ್ತು ವರುಷಗಳ ಕೆಳಗೆ ಬಂದಾಗ, ಇದೇ ವಿಶ್ವವಿದ್ಯಾಪೀಠದವರು ಅವರಿಗೂ ಇದೇ ಪದವನ್ನು ಕೊಟ್ಟಿದ್ದರು

ಇಂಗ್ಲಿಷ ಭಾಷೆಯಲ್ಲಿ ೬೫೦೦೦ ಶಬ್ದಗಳೂ, ಫ್ರೆಂಚ್ ಭಾಷೆಯಲ್ಲಿ ೩೦೦೦೦ ಶಬ್ದಗಳೂ, ಜರ್ಮನ್ ಭಾಷೆಯಲ್ಲಿ ೮೦೦೦೦ ಶಬ್ದಗಳೂ, ತುರ್ಕೀ ಭಾಷೆಯಲ್ಲಿ ೨೮೦೦೦ ಶಬ್ದಗಳೂ ಇರುವವು. ಆದರೆ ನಮ್ಮ ಸಂಸ್ಕೃತ ಭಾಷೆಯಲ್ಲಿ ಮೂಲ ಧಾತುಗಳು ಇಪ್ಪತ್ತೈರಡೇನೂರು ಇರುವವು. ಇವುಗಳಿಗೆ ಇಪ್ಪತ್ತು ಉಪಸರ್ಗಗಳು ಬಂದೊಂದರಂತೆ ಇಲ್ಲವೆ ಜೋಡಾಗಿ ಸೇರಿ ಅನೇಕ ಅರ್ಥಗಳನ್ನು ಕೊಡುವಂಥ ಅನಂತ ಶಬ್ದಗಳುಗಿರುವವು.

ಹೋದ ದಿಶಂಬರ ತಿಂಗಳಲ್ಲಿ ಕಾಶೀ ಪಟ್ಟಣದಲ್ಲಿ ರಾಷ್ಟ್ರೀಯ ಔದ್ಯೋಗಿಕ ಪರಿಷತ್ತು ಕೂಡಿತ್ತು. ಅದರಲ್ಲಿ ಬಡೋದೆಯ ಮಹಾಮಾತ್ಯರಾದ ಶ್ರೀಯುತ ದತ್ತರವರು ಅಧ್ಯಕ್ಷರಾಗಿದ್ದರು. ಬೇರೆ ಬೇರೆ ಭಾಗದಿಂದ ಬಂದ ಅನೇಕ ವಿದ್ವಾಂಸರಾದ ಪ್ರತಿನಿಧಿಗಳು ಈ ಪರಿಷತ್ತಿನಲ್ಲಿ ನಿಬಂಧಗಳನ್ನೋದಿದರು.

HABIT

ಬೆಟವು

ಸತ್ಯಪ್ರೀತಿ ಬೆಳಿಸುವ ತತ್ವಗಳು.

ಸತ್ಯದ ಚಟವು ಹುಡುಗರಿಗೆ ಹತ್ತಬೇಕಾದರೆ ಮಾಸ್ತರನ ಉದಾಹರಣೆಯೇ ಬಲವತ್ತರವಾದ ಸಾಧನವು. ಮಾಸ್ತರನು ಸತ್ಯದಿಂದ ನಡೆದುತ್ತ ಹುಡುಗರಿಗೆ ಕಿತ್ತೇ ಹಾಕಿ ಕೊಡಬೇಕು. ಅದರಂತೆ ನಡೆಯಲಿಕ್ಕೆ ಹಚ್ಚಬೇಕು. ಬಳಿಕ ಉದಾಹರಣೆ, ಉಪದೇಶಗಳಿಂದ ಸತ್ಯಾಚರಣೆಯನ್ನು ಬೆಳಿಸಬೇಕು. ಹುಡುಗರಲ್ಲಿ ಯಾವ ಸದ್ಗುಣಗಳು ಹುಟ್ಟಬೇಕೆಂದು ಅಪೇಕ್ಷೆ ಇರುವದೋ ಆ ಗುಣಗಳು ಮಾಸ್ತರನಲ್ಲಿರಬೇಕು. ಒಂದು ವೇಳೆ ಒಬ್ಬ ಹುಡುಗನು ಸುಳ್ಳು ಹೇಳಿದರೆ ಆ ಸುಳ್ಳಿನ ಕಾರಣವನ್ನು (ಹೇತುವನ್ನು) ತಿಳುಕೊಳ್ಳಬೇಕು. ಬಳಿಕ ಸುಳ್ಳಿನ ಉದ್ದೇಶವನ್ನು ತಗೆದುಹಾಕಬೇಕು. ಸುಳ್ಳು ಇದು ಸ್ವತಂತ್ರ ಗುಣವಲ್ಲ.

ಇದು ಹೇತುವಿನ ಆಧೀನವಿರುತ್ತದೆ. ಆದ್ದರಿಂದ ಹೇತು ತಿಳುಕೊಳ್ಳದೆ ಏನು ಮಾಡಿದರೂ ಕೆಟ್ಟ ಪರಿಣಾಮವಾಗುತ್ತದೆ.

ಹುಡುಗರು ಶಾಲೆಯಲ್ಲಿ ಯಾಕೆ ಸುಳ್ಳು ಹೇಳುತ್ತಾರೆ.

(೧) ಮಾಸ್ತರನ ತಿದ್ದುವಿಕೆ ಕಟ್ಟುದಿದ್ದರೆ ಸುಳ್ಳುಹೇಳುತ್ತಾರೆ ಶಿಕ್ಷಣಕ್ಕೂ ತಿದ್ದುವಿಕೆಗೂ ಭೇದವದೆ. ವಿಷಯ ಜ್ಞಾನ ಮಾಡಿಕೊಡುವದು ಶಿಕ್ಷಣವು. ಇನಾಮು ಶಿಕ್ಷೆ ಮುಂತಾದ ಇತರ ಸಂಗತಿಗಳು ತಿದ್ದುವಿಕೆಯಲ್ಲಿ ಬರುವವು ತಿದ್ದುವಿಕೆಯಲ್ಲಿ ಹುಡುಗನನ್ನು ಕೆಡಿಸುವಂಥ ಹಾಗು ಕುಂದು ತರುವಂಥ ಯಾವ ಸಂಗತಿಗಳು ಇರಬಾರದು.

(೨) ಶಿಥಿಲವಾದ ಮೇಲ್ವಿಚಾರಣೆಯಿಂದ ಸುಳ್ಳು ಹೆಚ್ಚಾಗುತ್ತದೆ. ಪರಂತು ಪೂರ್ಣವಾದ ಚಲೋ ಮೇಲ್ವಿಚಾರಣೆಯಿಂದ ಸುಳ್ಳಿನ ತಪ್ಪು ಆಗುವದೇ ಇಲ್ಲ.

(೩) ಆಳಿಕೆಯು ಸಾಮರ್ಥ್ಯದ ದುರುಪಯೋಗದಿಂದಲೂ ಸುಳ್ಳು ಹುಟ್ಟುತ್ತದೆ. ಕಠಿಣ ಶಿಕ್ಷೆಯಿಂದ ದುರ್ಗುಣಗಳು ಹೋಗದೆ ಅವು ಹೆಚ್ಚು ಹೆಚ್ಚು ಸ್ಥಿರವಾಗುತ್ತವೆ. ಮೊದಲು ಸುಳ್ಳು ಹೇಳಿದವನಿಗೆ ಬಲವಾದ ಶಿಕ್ಷೆ ಕೊಟ್ಟರೆ ಅವನು ಮೋಸ ಮಾಡಹತ್ತುವನು. ಶಿಕ್ಷೆ ಯಾದಂತೆ ಅಪರಾಧಗಳು ಹೆಚ್ಚುವವು. ಹೀಗೆಯೇ ಶಾಲೆಯು ಕೆಟ್ಟು ಹೋಗುವದು.

(೪) ಸಂಕಟ ಪಡುವದರಿಂದಲೂ ಹುಡುಗರು ಸುಳ್ಳುಹೇಳುತ್ತಾರೆ. ಹುಡುಗರ ನಡತೆಯ ಬಗ್ಗೆ ಸಂಕಟ ಬಂದರೆ ಮಾಸ್ತರನು ಅದನ್ನು ಬಹಿರಂಗಕ್ಕೆ ತೋರಗೊಡಬಾರದು ತೋರಿಸಿದರೆ ಇಲ್ಲೆಂದು ವಾದಿಸುವನು. ಇದಲ್ಲದೆ ಹೆಚ್ಚು ಕೃತ್ರಿಮತನದಿಂದ ನಡೆಯಹತ್ತುವನು ಸಂಕಟವು ಪೂರ್ಣ ಭಾರದಮ್ಮ ಜಾಗ್ರತೆಯಿಂದಲೂ ಯುಕ್ತಿಯಿಂದಲೂ ನಡೆಯುವನು. ಆದ್ದರಿಂದ ಮಾಸ್ತರನು ಸಂಕಟದ ಆರೋಪವನ್ನು ಬಹುಮೇಲೆ ಹುಡುಗರ ಮೇಲೆ ಹೊರಿಸಬಾರದು. ಸತ್ಯವಿದ್ದಲ್ಲಿಯೇ ವಿಶ್ವಾಸ ಇರುವದು. ಇವೆರಡಕ್ಕೂ

ಗಂಟು ಹಾಕಬೇಕು. ಸುಳ್ಳಿನ ಸಂಶಯ ಬಂದವನನ್ನು ಕೆಲವು ಕಾಲ ನಂಬದೆ ಬಳಿಕ ಅಂತಃಕರಣದಿಂದ ನಡಿಸಿ ಕೊಂಡರೆ ಅಪನಂಬಿಗೆಯು ತನ್ನಷ್ಟಕ್ಕೆ ತಾನೇ ಹೋಗುವದು. ಅಂದರೆ ಹುಡುಗನು ನಿರ್ಭಯವಾಗಿ ಖರೇ ಹೇಳುವನು.

(೫) ತೀರ ಚಿಕ್ಕ ಹುಡುಗರು ಕಲ್ಪನಾಶಕ್ತಿಯು ಸ್ವಾಭಾವಿಕವಾದ ಮೂಲಕ ತುಸು ಬೆಳಿಸಿ ಹೇಳುವದುಂಟು. ಇದು ಅವರ ತಪ್ಪಲ್ಲ. ತಿಳಿಯದೆ ಸ್ವಭಾವ ಧರ್ಮದ ಮೂಲಕ ಹೇಳುತ್ತಾರೆ. ಇದರಲ್ಲಿ ಸತ್ಯಾಂಶವನ್ನಷ್ಟೇ ತೆಗೆಕೊಂಡು ಬಿಟ್ಟರಾಯಿತು.

(೬) ಹುಡುಗರು ತಮ್ಮ ಪ್ರತಿಷ್ಠೆ (ಮಹತ್ವ) ಬೆಳೆಯುವದೆಂದು ಇಲ್ಲವೆ ಕೇಳುವವರು ಹೆಚ್ಚು ಲಕ್ಷ ಕೊಡಬೇಕೆಂದು ಸುಳ್ಳು ಬೆಳಿಸಿ ಹೇಳುವರು. ಮಾಸ್ತರನು ಈ ಸಂಗತಿಗಳ ಕಡೆಗೆ ಉದಾಸೀನನಾಗಿ ಲಕ್ಷ ಕೊಡದಿದ್ದರೆ ಈ ದುರ್ಗುಣವು ಹೋಗುತ್ತದೆ.

(೭) ಕಲ್ಪನಾಶಕ್ತಿಯನ್ನು ಬೇಕಾದಂತೆ ಹರಿಯ ಗೊಡುವದರಿಂದಲೂ ಸುಳ್ಳು ಉಂಟಾಗುತ್ತದೆ. ಮಾಸ್ತರನು ಕಲ್ಪನಾ ಶಕ್ತಿಯನ್ನು ಹರಿಯಗೊಡದೆ ಅಕುಂಚನ ಪಡಿಸಿ ಕ್ರಮಗೊಳಿಸಬೇಕು. ಇಲ್ಲದಿದ್ದರೆ ಇದು ತೀರ ಬೆಳೆದು ಸುಳ್ಳು ಹೇಳುವನು. ಕಲ್ಪನಾ ಶಕ್ತಿಯನ್ನು ಕಡಿವು ಮಾಡಲಿಕ್ಕೆ ವಸ್ತುಸಾಂಗಗಳು ಸಹಾಯ ಮಾಡುತ್ತವೆ. ಆದರೆ ಇದು ಪೂರ್ಣ ಸಾಧನವಲ್ಲ. ಯಥಾರ್ಥ ವರ್ಣನೆ ಮಾಡಲಿಕ್ಕೂ, ಯಥಾರ್ಥ ಶೋಧ ಮಾಡಲಿಕ್ಕೂ ಯಾವ ಸಾಧನಗಳು ಬೇಕೋ ಅವೇ ಸಾಧನಗಳನ್ನು ಕಾಳಜಿ ಪೂರ್ವಕವಾಗಿ ಬೆಳಿಸ ಬೇಕಾಗುತ್ತದೆ. ಬುದ್ಧಿ ಸಾಮರ್ಥ್ಯವನ್ನು ಬೆಳಿಸಿದರೆ ಈ ಕಲ್ಪನಾ ಶಕ್ತಿಯು ಕ್ರಮೇಣ ನಷ್ಟವಾಗುತ್ತದೆ

ಹುಡುಗರಲ್ಲಿ ತಿಳುಕೊಳ್ಳುವ ಶಕ್ತಿ ಇವು ಕಡಿವು ಇರುತ್ತವೆ. ಆದ್ದರಿಂದ ಸುಳ್ಳಾಡಬೇಡಿರಿ ಶಿಕ್ಷಿಸಬೇಡಿರಿ! ಎಂದು

ಹೇಳುವದರ ಬದಲು ಸತ್ಯವನ್ನೇ ಹೇಳಿರಿ ಎಂದು ಹೇಳುವದು ಸುಲಭವಾದದ್ದು.

ನೀತಿಯ ಸಂಬಂಧದ ಪ್ರತಿಯೊಂದು ತತ್ವವು ಬಹಳ ಮಹತ್ವದ್ದು ಇರುತ್ತದೆ. ಈ ನೈತಿಕ ಭಾವವನ್ನು ಹುಡುಗರಲ್ಲಿ ಹುಟ್ಟಿಸಬೇಕಾದರೆ ನಾಚಿಕೆಯ ಭಾವನೆ ಮತ್ತು ಸನ್ಮಾನದ ಭಾವನೆ ಇವುಗಳನ್ನು ಹುಟ್ಟಿಸಬೇಕಾಗುತ್ತದೆ.

ಅಂದಗನ್ನು ಮನಸ್ಸಿಗೆ ಹಚ್ಚಿಕೊಳ್ಳುವ ಹುಡುಗನು ಖರೇತನದಿಂದ ನಡೆಯುತ್ತಾನೆ. ಯಾವನಿಗೆ ಏನೆಂದರೂ ಮನಸ್ಸಿಗೆ ಹತ್ತುವದಿಲ್ಲವೋ ಅವನು ಖರೇತನದಿಂದ ನಡೆದುಲಾರನು. ನಾಚಿಕೆ ಅಥವಾ ಸನ್ಮಾನದ ಭಾವನೆ ಇರುವವನಲ್ಲಿಯೇ ಖರೇತನದ ಬೀಜ ಊರುತ್ತದೆ. ಮಾಸ್ತರನು ಸತ್ಯದ ಬಗ್ಗೆ ಆಗ್ರಹ ಪಟ್ಟು ಪ್ರತಿಯೊಬ್ಬನಲ್ಲಿ ಸತ್ಯವನ್ನು ಹುಟ್ಟಿಸಬೇಕು. ಹಾಗು ಹುಡುಗನು ತಾನು ಸತ್ಯ ಮಾತಾಡುವೆನು ಸಾಯುವ ವರೆಗೂ ಸತ್ಯತನದಿಂದ ನಡೆಯುವೆನು ಎಂಬ ಮಾತು ಪ್ರತಿಯೊಬ್ಬ ಹುಡುಗನ ಬಿರದೇ ಆಗುವಂತೆ ಭಾವನೆ ಹಾಕುವದು ಅತ್ಯವಶ್ಯವಾದದ್ದು.

ಈ ತತ್ವಗಳನ್ನು ಕೃತ್ಯಕ್ಕೆ ಹಚ್ಚಬೇಕು. ಅಂದರೆ ತಿದ್ದುವಿಕೆ, ಕಲ್ಪನಾಶಕ್ತಿ, ಲಕ್ಷ್ಯ, ಬುದ್ಧಿ ಸಾಮರ್ಥ್ಯವನ್ನು ಬೆಳಿಸೋಣ ಈ ಎಲ್ಲ ಕೆಲಸಗಳಲ್ಲಿಯೂ ಉಪಯೋಗಿಸಬೇಕು. ಹಾಗು ಹುಡುಗರು ಈ ತತ್ವಗಳಿಗೆ ಅನುಸರಿಸಿ ನಡೆಯುವರೋ ಇಲ್ಲೋ ಎಂಬದನ್ನು ಪ್ರತಿಯೊಬ್ಬ ಹುಡುಗನು ಮಾಡುವ ಎಲ್ಲ ಕಾರ್ಯಗಳ ಕಡೆಗೆ ಲಕ್ಷ ಕೊಡಬೇಕು. ಹುಡುಗನು ಯಾವದೊಂದು ಕೃತ್ಯದಲ್ಲಿ ಸತ್ಯದ ಬಗ್ಗೆ ತಪ್ಪಿದರೆ ಮೊದಲು ಸಿಟ್ಟು ಮಾಡಬೇಕು. ಅದು ಸಾಕಾಗದಿದ್ದರೆ ಚನ್ನಾಗಿ ಛೀ ಹಾಕಬೇಕು. ಸ್ವಲ್ಪ ದಿವಸ ಅವನ ಮೇಲೆ ನಂಬಿಗೆ ಇಡಬಾರದು. ಅವನಿಗೆ ಪಶ್ಚಾತ್ತಾಪ ವಾಗಿದ್ದರೆ ಮಾತ್ರ, ಪುನಃ ನಂಬಬೇಕು. ತಪ್ಪು ಮಾಡಿದ ಬಗ್ಗೆ ಒಮ್ಮೇಲೆ ಒಪ್ಪಿಕೊಂಡರೆ ತಪ್ಪು ಮಾಡಿದ

ಉದ್ದೇಶವನ್ನು ಲಕ್ಷ್ಯಕ್ಕೆ ತರಬೇಕು. ಸುಮ್ಮನೆ ಪ್ರತಿಸಾರಿಗೆ ತಪ್ಪು ಒಪ್ಪಿಕೊಳ್ಳುವವನು ನಾಚಿಕೆಗೇಡಿಯು ಪರಂತು ಪಶ್ಚಾತ್ತಾಪದಿಂದ ತಪ್ಪು ಒಪ್ಪಿಕೊಂಡಿದ್ದರೆ ಉಪದೇಶ ಮಾಡಿ ಅವನನ್ನು ಕ್ಷಮಿಸಬೇಕು.

ಸತ್ಯದ ತತ್ವಗಳನ್ನು ಕಲಿಸುವಾಗ ಮೊದಲು (೧) ಉಪದೇಶ (೨) ವಾಗ್ವಾದ ಅಥವಾ ಚರ್ಚೆ ಇವುಗಳನ್ನು ಉಪಯೋಗಿಸಬೇಕು ಸಣ್ಣವರ ಬಗ್ಗೆ ಉಪದೇಶ ಬೇರೆ ದೊಡ್ಡವರ ಬಗ್ಗೆ ಉಪದೇಶ ಬೇರೆ ಹೀಗೆ ನೈಸರ್ಗಿಕ ಸಂಬಂಧದ ಎಲ್ಲ ವಿಷಯದಲ್ಲಿಯೂ ವಯಸ್ಸಿನಿಂದ ಹೆಚ್ಚುಕಡಿಮೆ ಯುಂಟು. ಯಾಕಂದರೆ ಎಲ್ಲ ಉಪದೇಶವನ್ನು ಒಂದೇ ಸವನೆ ಎಲ್ಲರಿಗೂ ಮಾಡಿ ಉಪಯೋಗವಿಲ್ಲ. ವ್ಯವಹಾರವನ್ನು ಅನುಲಕ್ಷಿಸಬೇಕು.

ಪ್ರೌಢ ವಿದ್ಯಾರ್ಥಿಗಳಲ್ಲಿ ಬುದ್ಧಿ, ಸಾಮರ್ಥ್ಯವೂ, ಮನೋಇಚ್ಛೆಯೂ ಪ್ರಬಲವಿರುತ್ತದೆ. ಇಂಥವರಿಗೆ ಜ್ಞಾನವು ಹೆಚ್ಚಾಗಿರುವದರಿಂದ ಉಪದೇಶ ಮಾಡುವದು ಸುಲಭವಾಗುತ್ತದೆ. ಯಾಕಂದರೆ ಅವರಿಗೆ ಲಾಭ ಹಾನಿಗಳ ಜ್ಞಾನವಿರುತ್ತದೆ. ಅದನ್ನು ಹೇಳಿದರೆ ಸಾಕು

ಸಣ್ಣ ಹುಡುಗರಲ್ಲಿ– ಲಾಭ ಲುಕ್ಸಾನೆಯ ಜ್ಞಾನವಿರುವದಿಲ್ಲ. ಶಿಕ್ಷೆಯ ಭಯದ ಮೂಲಕ ಸುಳ್ಳು ಹೇಳುವದುಂಟು ಆದ್ದರಿಂದ ಮಾಸ್ತರನು ಮುಂಜಾಗ್ರತೆಯಿಂದ ಸುಳ್ಳುಹೇಳುವ ಕಾರಣಗಳನ್ನು ತಿಳಿಸಿ ಎಚ್ಚರ ಪಡಿಸಿದ್ದರೆ ಅವನು ಸುಳ್ಳು ಹೇಳಲಾರನು.

ಪ್ರೌಢರಿಗೆ ಸುಳ್ಳಿನಿಂದಾಗುವ ಕೆಟ್ಟ ಪರಿಣಾಮ ಸುಗುಣ ದುರ್ಗುಣಗಳ ಸಂಬಂಧ ಇವುಗಳನ್ನು ಕೂಡಿಸಿ ಹೇಳಲಿಕ್ಕೆ ಸಹ ಬರುತ್ತದೆ. ವ್ಯಾವಹಾರಿಕ ತನದಲ್ಲಿ ನ್ಯಾಯದ ಸಮಾವೇಶವಾಗುತ್ತದೆ. ಸುಳ್ಳಿನಲ್ಲಿ ನ್ಯಾಯವಿಲ್ಲ ಅಂದರೆ ಅದು ಅನ್ಯಾಯದ್ದಿರುತ್ತದೆ. ಇದರಿಂದ ಪರಸ್ಪರರನಂಬಿಗೆ ಹಾರುತ್ತದೆ ಸಮಾಜದಲ್ಲಿ ಗೊಂದಲವೇಳುತ್ತದೆ. ಅನನುಕೂಲತೆಯಾಗುತ್ತದೆ. ಬರೇ ಮಾತಾಡುವವನು ಸ

ಸಮಾಜದ ರೀತಿಯಿಂದಲೂ, ಕಾಯದೆ ರೀತಿಯಿಂದಲೂ ಅ
ನ್ಯಾಯವೆಸಗಿ ವಿರುದ್ಧದರಿಂದಲೂ ಸತ್ಯತೆಯು ಸಮಾಜಕ್ಕೆ ಬೇಕಾ
ಗಿರುವದರಿಂದಲೂ ಅದು ಕಾಯದೆಯಿಂದ ನಿರ್ಬಂಧಿಸಲ್ಪ
ಟ್ಟಿದ್ದು, ಕಾಯದೆ ವಿರುದ್ಧ ಸುಳ್ಳು ಹೇಳಿದರೆ ಶಿಕ್ಷೆಯಾಗು
ತ್ತದೆ.

ಕಿಡಕುತನ- ಇದರಂಥ ಕೆಟ್ಟದು ಯಾವದೂ ಇಲ್ಲ. ಇ
ದಕ್ಕೆ ವ್ಯಕ್ತಿ ಸ್ವರೂಪದ ಅವತಾರದ ಮೂರ್ತಿಯನ್ನು ಕ
ಲ್ಪಿಸಿದರೆ ಅದಕ್ಕೆ ದೆವ್ವ ಅನ್ನಲಿಕ್ಕೆ ಅಡ್ಡಿ ಇಲ್ಲ. ಇದಕ್ಕೆ
ಸುಳ್ಳಿನ ತಂದೆಯೆಂದೆನ್ನ ಬಹುದು. ಯಾಕಂದರೆ ಸುಳ್ಳು
ಹೇಳುತ್ತ ಹೇಳುತ್ತ ಅನೇಕ ಸುಳ್ಳುಗಳಿಂದ ಪರಿಣಾಮವಾ
ಗಿ ಇದು ಉಂಟಾಗಿರುತ್ತದೆ. ಇದು ಕೊಳಚೆ ಭೂಮಿಯಂ
ತೆಯಿದೆ. ಈ ಭೂಮಿಯಲ್ಲಿ ಮುಂದೆ ಮುಂದೆ ಸಡೆದಂತೆ
ಹೆಚ್ಚು ಹೆಚ್ಚು ಸಿಗಬೀಳುತ್ತದೆ. ಆದರಲ್ಲಿಯೇ ಕೂನೆಗೆ
ಮುಳುಗಿ ಹೋಗುತ್ತಾನೆ. ಎಲ್ಲ ಬಡಾಟಗಳಲ್ಲಿಯೂ ರಾ
ಷ್ಟ್ರಗಳ ನಡುವಿನ ಯುದ್ಧಗಳಲ್ಲಿಯೂ ಸುಳ್ಳೇ ಕಾರಣ
ವಾಗಿದೆ. ಕಪ್ಪವಪತಿಬಾರದಂಥವರು ಸಹ ಈ ಸುಳ್ಳಿನ
ಮೂಲಕ ಕಪ್ಪವಪಡುತ್ತಾರೆ. ಸುಳ್ಳಿನಲ್ಲಿ ದಯಾ, ಮಾಯಾ
ಏನೂ ಇರುವದಿಲ್ಲ. ಇದು ಕಟುಕನಂತೆ ಇರುತ್ತದೆ. ವ
ಕ್ರೋಪಕಾರದ ಕೆಲಸಗಳಿಗೆ ಸಹ ಸುಳ್ಳು ಪ್ರತಿಕೂಲವಾಗು
ತ್ತದೆ. ದಯಾ ಬುದ್ಧಿಯನ್ನು ಕಡಿಮೆ ಮಾಡುತ್ತದೆ. ಮ
ನಸ್ಸನ್ನು ಕೆಡಿಸಿ ದ್ವೇಷ ಬುದ್ಧಿಯನ್ನು ಹುಟ್ಟಿಸುತ್ತದೆ. ಶಾ
ಲೆಯಲ್ಲಿ ಸುಳ್ಳಿನ ಸಂಸರ್ಗವಾಗದಂತೆ ಹೆಚ್ಚಾ ಎಚ್ಚರ ಪ
ಡಬೇಕು. ಬಬ್ಬನು ಸುಳ್ಳು ಹೇಳಿದರೆ ಅದನ್ನು ಬರೇ ನಿ
ರ್ಧಾರವಾಡಿ ಪ್ರಯೋಜನವಿಲ್ಲ. ಆದರೆ ಹುಡುಗರಲ್ಲಿ ಸತ್ಯ ಪ್ರೀ
ತಿ ಖರೇ ಹೇಳುವೆನೆಂಬ ಅಭಿಮಾನ ಇವುಗಳನ್ನು ಹುಟ್ಟು
ಸಲಿಕ್ಕೆ ಬೇಕು.

ಅನುಭವ ಮತ್ತು ಮನವಾಕ್ಕಿ ಇವೆರಡರಿಂದಲೂ ಸತ್ಯ
ವೇ ಶ್ರೇಷ್ಠವಾದದ್ದೆಂದು ಪ್ರತಿಯೊಬ್ಬ ಹುಡುಗನಿಗೆ ಖಾತ್ರಿ
ಪಡಿಸಿ ಕೊಡಬೇಕು.

ಸಣ್ಣ ಹುಡುಗರ ಅಕೃತ್ಯಗಳು (ಸುಳ್ಳು ವಿಚಿತ್ರವಾದವುಗಳು)

ಸಣ್ಣ ಹುಡುಗರು ಸುಳ್ಳು ಹೇಳುವದನ್ನು ಒಂದು ಚಾಳಿಯ ಮೊದಲು ಅವರ ಸ್ವಭಾವ ತಿಳಿದುಕೊಳ್ಳಬೇಕು. ಬರೇ ಕಲ್ಪನಾಮೂಲಕವಾಗಿ ಅತಿಶಯೋಕ್ತಿಯಿಂದ ಮೂಢ ವಿಶ್ವಾಸವಿಟ್ಟು ಹೀಗೆ ಹೇಳುವರು. ಎಮ್ಮೆಯನ್ನು ಅನೆಯಿಂದು ಹೇಳಬಹುದು ತಮ್ಮ ಆಟ, ಮಾತುಗಳಲ್ಲಿ ತಮ್ಮ ಮನಸ್ಸಿನಲ್ಲಿ ಬಂದದ್ದೆಲ್ಲ ಖರೆಯೆಂದು ತಿಳಿಯುವರು. ಹುಡುಗರು ಆಟದಲ್ಲಿ ನಿಜವನ್ನು ತಿಳಿಯದೆ ಮೋಸ ಹೋಗಿ ಸುಳ್ಳು ಹೇಳುವರು. ಅವರಿಗೆ ಸತ್ಯವೆಂದರೇನು? ಅದನ್ನು ಆಗಾಗೆ ಹೇಳಬೇಕು ಇದು ತಿಳಿಯುವದಿಲ್ಲ ಹೊಡೆದೆನೆ ೫ ವರ್ಷಗಳಂತೂ ಅವರು ಖರೆಯನ್ನು ಹೇಳುವದಿಲ್ಲ. ಸುಳ್ಳನ್ನು ಹೇಳುವದಿಲ್ಲ. ಬರೇ ಬಾಯಿಮಾತು ಮಾತ್ರ ಆಡುತ್ತಿರುತ್ತವೆ. ತಮ್ಮ ವಿಚಾರಕ್ಕೆ ಬಂದದ್ದನ್ನೇ ಆಡಿ ಬಿಡುತ್ತವೆ. ಅವ್ವ ನಿಜವಿರಲಿ ಸಟೆಯೇ ಹಾಗೇ ಇರಲಿ ಆಪ್ರಬುದ್ಧ ಸ್ಥಿತಿಯಲ್ಲಿ ಅಸಂಗತ ಮಾತುಗಳನ್ನು ಸಹಜವಾಡುತ್ತಿರುತ್ತಾರೆ. ಅವರಿಗೆ ಭೂಪೆಯು ಜ್ಞಾನವಿರುವದಿಲ್ಲ. ಅವರು ತಪ್ಪುಗೆ ಏನಾದರೂ ದೊರೆಯಬೇಕೆಂದು ಇಲ್ಲವೆ ಸೇಡು ತೀರಿಸಿಕೊಳ್ಳಬೇಕೆಂದು ಸುಳ್ಳು ಹೇಳುವದುಂಟು ಈ ಕಾರಣಗಳಿಂದಲೇ ದೊಡ್ಡವರೂ ಸುಳ್ಳು ಹೇಳುವರು. ಆದರೆ ದೊಡ್ಡವರನ್ನೂ ಸಣ್ಣವರನ್ನೂ ಸತ್ಯದ ಮಾರ್ಗಕ್ಕೆ ಹಚ್ಚುವ ಮಾರ್ಗಗಳು ಬೇರೆ ಬೇರೆ ಉಂಟು ಪರಂತು ಬಿಟ್ಟಿನಿಂದ ಸುಳ್ಳು ಹೇಳುವ ಹೇತುವನ್ನು ಲಕ್ಷಕ್ಕೆ ತಂದು ಅದನ್ನು ಶೋಧಿಸಿ ತಿದ್ದಬೇಕು. ತಿದ್ದುವಾಗ (೧) ಸುಲಭವಾದ ಕಟ್ಟಳೆ ಮಾಡಬೇಕು. (೨) ದುರ್ಮಾರ್ಗಗಳನ್ನು ಬಂದು ಮಾಡಬೇಕು (೩) ಸದುಪದೇಶ ಮಾಡಬೇಕು. (೪) ತಕ್ಕ ಕರ್ತವ್ಯಗಳಲ್ಲಿ ತೊಡಕಿಸಬೇಕು (೫) ವಾಗ್ಧಾದ ಮಾಡಿ ಬುದ್ಧಿಸಾಮರ್ಥ್ಯವನ್ನು ಬೆಳಿಸಬೇಕು (೬) ಜ್ಞಾನ ಹೆಚ್ಚಾದ ಬಳಿಕ ಯೋಗ್ಯ ಭಾವನೆಗಳನ್ನುಂಟು ಮಾಡಬೇಕು.

ವಿಶೇಷ ಪ್ರಕಾರದ ಸುಳ್ಳು.

(೧) ಹುಡುಗನು ಅಪ್ರಮಾಣಿಕತನದ ಕೆಲಸ ಮಾಡುತ್ತಾನೆ. ಆದರೆ ಅದನ್ನು ಅವನ ಪದರಿನಲ್ಲಿ ಹಾಕಲಿಕ್ಕೆ ಬರುವಂತಿರುವದಿಲ್ಲ. ಇಂಥ ಪ್ರಸಂಗದಲ್ಲಿ ಸಂಶಯ ತೋರಿಸಬಾರದು ಆದರೆ ಇದನ್ನು ಹಾಗೆ ಕೊನೆತನಕ ಬಿಟ್ಟು ಬಿಟ್ಟರೆ ಇನ್ನೊಂದು ತಂದೆ ಹಂಬಿಕೆ ಸಿಕ್ಕುಂತಾಗಿ ಹೆಚ್ಚಿಗೆ ಸುಳ್ಳಿಗೆ ಮಾರ್ಗವಾಗುತ್ತದೆ. ಸುಳ್ಳು ಹೇಳಿ ಪಕ್ಕಸಿಕೊಂಡವರ ಪರಿಣಾಮ ವಾಗುವ ಪ್ರಸಂಗದಲ್ಲಿ ಬಹಳ ಕಡಕಿನ ಮಾರ್ಗಕ್ಕಿಂತ ತುಸು ಕೆಡಕಿನ ಮಾರ್ಗವನ್ನು ಹಿಡಿಯುವದು ಯೋಗ್ಯವು ಉದಾ— ಹುಡುಗನು ಮಾಸ್ತರನು ಕೊಟ್ಟ ಆಜ್ಞೆಯನ್ನು ತಪ್ಪಿಸಿ ನಡೆದನು. ಈ ತಪ್ಪಿಗಾಗಿ ಅವನು ಸುಳ್ಳು ಹೇಳಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವನು. ಅವನು ಶಿಕ್ಷಿಸದೆ ಉಳಿದರೆ ಸುಳ್ಳಿನಿಂದಾಗುವ ಲಾಭವು ಪ್ರತ್ಯಕ್ಷ ತೋರಿ ಮುಂದೆ ಸುಳ್ಳು ಅವನ ಮನದಲ್ಲಿ ಬರಹತ್ತಿ ಸಹಜ ಸುಳ್ಳು ಹೇಳಿ ಹತ್ತುತ್ತಾನೆ. ಈ ಪ್ರಸಂಗದಲ್ಲಿ ಮಾಸ್ತರನು ಸುಳ್ಳು ಹೇಳಿದ ಹುಡುಗನ ಬಗ್ಗೆ ಸಂಪೂರ್ಣ ಪ್ರಮಾಣ ದೊರೆಯುವವರೆಗೆ ಏನೂ ಸಂಶಯ ತೋರಿಸದೆ ಅವನ ಮೇಲೆ ಲಕ್ಷ್ಯವಿಟ್ಟು ನಡೆಯಬೇಕು. ಎಡನೆ ಸಾರೆ ಸುಳ್ಳು ಹೇಳುವ ಪ್ರಸಂಗವನ್ನು ಕಾಯುತ್ತ ಕುಳಿತು ಸುಳ್ಳು ಹೇಳಿದರೆ ಅಪಮಾನ ಮಾಡಬೇಕು. ಇದು ಸುಳ್ಳಿನ ಪರಿಣಾಮವೆಂಬುದನ್ನು ತಿಳಿಸಬೇಕು. ತಪ್ಪು ಒಪ್ಪಿಕೊಂಡರೆ ಅಪಮಾನವಲ್ಲ. ಸುಳ್ಳು ಹೇಳಿದ್ದಕ್ಕೆ ಅಪಮಾನವು: ತಪ್ಪು ಒಪ್ಪಿಕೊಳ್ಳುವಾಗ ನೈತಿಕ ಧೈರ್ಯವೂ ನೀತಿಯ ಗುಣಗಳೂ ಅವಶ್ಯವಾಗಿ ಬೇಕಾಗುತ್ತವೆ.

ಸುಳ್ಳಿಗೆ ತಪ್ಪದೆ ಶಿಕ್ಷೆಯಾಗುವದೆಂಬ ಭಾವನೆಯನ್ನು ನೆಲಗೊಳಿಸುವದು ಅತಿ ಮಹತ್ವದ ಸಂಗತಿಯು. ವ್ಯವಹಾರ, ಇತಿಹಾಸ, ಪುರಾಣ, ದಂತಕಥೆ ಮುಂತಾದವುಗಳೊಳಗಿನ ಸುಳ್ಳಿನ ಪರಿಣಾಮವನ್ನು ತಿಳಿಸಬೇಕು. ಸತ್ಯದ

ಲಾಭದ ಉದಾಹರಣೆಗಳನ್ನು ಅವುಗಳೊಡನೆ ಬೆರಸಿ ಹೇಳಬೇಕು.

(ಸಶೇಷ)

PRESENT FEMALE EDUCATION AND CIVILIZATION.

ಸಾಂಪ್ರತದ ಸ್ತ್ರೀ ಶಿಕ್ಷಣವೂ ಸುಧಾರಣೆಯೂ

(ಬರೆದುಬಂದದ್ದು.)

ಮೊದಲಿಗೆ ಚಿಕ್ಕಮಕ್ಕಳ ಆಟಗಳೆಂದರೆ ಗೂಡುಗಳು ಕಟ್ಟುಗೆಯ ರಂಗಣಿ ಕಟ್ಟುಗೇ ಗೊಂಬೆಗಳು ಮುಂತಾದವುಗಳಿರುತ್ತಿದ್ದುವು ಹುಡುಗರಿಗೆ ಆನಂದವಾಗಲೆಂದು ಬಳೂಳ್ಳಿಯ ಆರಿವೆಗಳಿಂದ ಗುಬ್ಬಿಗಳನ್ನು ಹೂಲಿದು ತೊಟ್ಟಿಲಕ್ಕೆ ಚಟ್ಟು ಮಾಡಿ ಕಟ್ಟುತ್ತಿದ್ದರು. ಅವನ್ನು ಸುಮ್ಮನೆ ಕೆಟ್ಟುಹೋಗುವ ಆರಿವೆಗಳಿಂದ ಹೊತ್ತು ಹೋಗುವದಕ್ಕೆ ಹೂಲಿಯುತ್ತಿದ್ದರು. ತದ್ವಿಪರೀತವಾಗಿ ಈಗ ಕಿಮ್ಮತ್ತು ಕೊಟ್ಟು ಮಾಡಿಸಿ ಕಟ್ಟುವರು. ಇಂಥ ಬೆಲೆಗು ಬೆಳಿಸುವಂತಹ ಅನೇಕ ಉದಾಹರಣೆಗಳು ಮೇಲಿಂದಮೇಲೆ ದೃಗ್ಗೋಚರವಾಗುತ್ತವೆ. ಸಾರಾಂಶ ಅರ್ವಾಚೀನ ಹೆಂಗಸರು ವೆಚ್ಚವನ್ನು ಮಾತ್ರ ಹಚ್ಚಿಸುತ್ತಿರುವರು.

ನಮ್ಮ ಪೂರ್ವಜರು ತಮ್ಮ ಮಕ್ಕಳಿಗೆ ಔಷಧೋಪಚಾರವನ್ನು ತಾವೇ ಮಾಡುತ್ತಿದ್ದರು. ದೊಡ್ಡ ಜೀನೆ ಬಂದರೆ ಮಾತ್ರ ವೈದ್ಯರಿಂದ ಚಕಿತ್ಸೆ ಮಾಡಿಸಿ ಔಷಧ ಕೊಡಿಸುತ್ತಿದ್ದರೇ ಹೊರತು ಅಷ್ಟಷ್ಟಕ್ಕೆ ವೈದ್ಯರನ್ನು ಕರಿಸುತ್ತಿದ್ದಿಲ್ಲ. ದೇಶೀಯ ಶುಂಠಿ, ಅಜವಾನ, ಮೆಣಸು, ಬಡೇಸೋಪು ಮುಂತಾದ ಔಷಧಗಳನ್ನು ಉಪಯೋಗಿಸುತ್ತಿದ್ದರು. ಚಿಕ್ಕ ಮಕ್ಕಳಿಗೆ ಗುಟ್ಟಿ ಹಾಕುವ ನಡತೆ ಇತ್ತು. ಅದು ಒಳ್ಳೇದು ಇಲ್ಲವೆ ಕೆಟ್ಟದ್ದು ಎಂಬ ಬಗ್ಗೆ ನನ್ನ ಅಭಿಪ್ರಾಯವೇನೂ ಇಲ್ಲ. ಈಗ್ಗೆ ನಾವು ಒಮ್ಮೊಮ್ಮೆ ಜಾಹೀರಾತಿಯ ಭರವಸದ ಮೇಲಿಂದ ಮಕ್ಕಳಿಗೆ ಬಾಲಾಮೃತ,

ಶಕ್ತ್ಯಮೃತ ಮುಂತಾದವುಗಳನ್ನು ಕೊಡುತ್ತೇವೆ. ಇವು
ಗಳ ವಿಷಯಕ್ಕೆ ನಮಗೇನಾದರೂ ಗೊತ್ತಿರುತ್ತದೋ ?
ಹುಡುಗರಿಗೆ ಸ್ವಲ್ಪ ಜಡ್ಡು ಆದ ಕೂಡಲೇ ಡಾಕ್ಟರರ ಕಡೆಗೆ
ಕಳಿಸಿ ಡಾಕ್ಟರರು ಏನು ಹೇಳುವರೆಂಬ ಕಾಳಜಿ ಮಾಡು
ತ್ತ ಕೂಡುತ್ತೇವೆ. ನಮ್ಮ ಸಾಧಾರಣ ನಿರುಪದ್ರವಿಗಳಾದ
ಖಾಸಗಿ ಔಷಧಗಳನ್ನು ನಮಗೆ ಉಪಯೋಗಿಸಲಿಕ್ಕೆ ಬರು
ವದಿಲ್ಲ. ಮತ್ತು ಇಂತಹ ಚಿಕ್ಕ ಪುಟ್ಟ ಸಂಗತಿಗಳಲ್ಲಿಯೂ
ದುಡ್ಡನ್ನು ವೇಸ್ಟ್ ಮಾಡಿ ಎರಡನೆಯವರನ್ನು ನಂಬಿ ದೀ
ರ್ಘ ನಾವಸ್ಕರಣೆಯನ್ನು ಮಾಡುತ್ತ ಒಳಗೂ ಹೊರಗೂ
ಸಮಾಧಾನವಿಲ್ಲದೆ ಕೂಡ್ರುತ್ತೇವೆ. ಅಂದಬಳಿಕ ನಮ್ಮ
ಶಿಕ್ಷಣದಿಂದ ನಾವು ಯಾವ ಉಪಯೋಗವನ್ನು ಮಾಡಿಕೊಂ
ಡಂತಾಯಿತು. ಅಂದರೆ ನಾವು ಅಲಸಿಗರೂ, ದುಪ್ಪಟ್ಟು
ಖರ್ಚು ಮಾಡುವವರೂ ಪರಾವಲಂಬಿಗಳೂ ಮಾತ್ರ
ಆದೆವು. ಇದೇ ನಮಗೆ ದೊರೆತ ಶಿಕ್ಷಣದ ಪರಿಣಾಮವು. ಮುಂದೆ ನಮ್ಮ ಅನುಕರಣವನ್ನು ನಮ್ಮ ಹುಡುಗೆಯರು
ಮಾಡುವರು. ಸಂಸಾರದಲ್ಲಿ ನಾವು ಗಂಡಸರಿಗೆ ವಿಶೇಷ
ಸಹಾಯ ಮಾಡುವದೆಂದರೆ "ಖರ್ಚನ್ನು ಬಳಿಸುವದು"
ಎಂದರೂ ಸಲ್ಲುವದು.

ಹೆಂಗಸರಲ್ಲಿ ಜಗಳಘ್ನ ಮನೆಮಾಡಿಕೊಂಡಿರುವದು ಎಂಬ
ಮಾತು ಪೂರ್ವದಿಂದಲೇ ನಡೆದುಬಂದಿರುವದು. ಸುಶಿಕ್ಷಿ
ತರಾದ ಹೆಂಗಸರಿಲ್ಲದರಿಂದ ಹೀಗಾಗುವದೆಂದು ಕೆಲವರು
ಅನ್ನಬಹುದು. ಆದರೆ ಈಗ ಸಮಯವಿಕ್ಷೇಪದಲ್ಲಿ ಹುಡಿ
ಗೆಯರು ತಾಯಂದಿರನ್ನೂ, ಸೊಸೆಯರು ಅತ್ತೆಯಂದಿರನ್ನೂ
ಮೂರ್ಖರೆಂದು ಹೀಯಾಳಿಸುವರು. ಯಾಕಂದರೆ ಅವರು
ಕಲಿತವರು.

ಸುಶಿಕ್ಷಿತತನದಿಂದ ಮನೆಯಲ್ಲಿಯ ಹಿರಿಯ ಮನುಷ್ಯರ
ಆದರಾತಿಥ್ಯವಾಗತಕ್ಕದ್ದು. ಆದು ಆಗದೆ ನಾವು ಸ್ವತಂತ್ರ
ರು, ಜಾಣರು, ನಾವು ಎಲ್ಲ ಕೆಲಸ ಮಾಡಲಿಕ್ಕೆ ಯೋಗ್ಯ
ರು ಹೀಗೆ ತೋರಹತ್ತುತ್ತದೆ. ತನ್ನ ಗಂಡನ ವಿಷಯವಾ

ಗಿಬೂತನ್ನ ಮಾನವ ವೃದ್ಧನನ್ನ, ನೆಗೆಳ್ಳಿ
ದುವಾಗಿಯೂ ಎಲ್ಲ ಅಪ್ಪಿಪ್ಪರ ವಿಷಯವಾಗಿಯೂ
ಕರ್ತವ್ಯಕರ್ಮವೇನು? ಎಂಬಿದು ನಮಗೆ ಏನೂ ಗೊತ್ತಿ
ಲ್ಲ. ಇದಲ್ಲದೆ ನಾವು ಒಬ್ಬರೇ ಇರಬೇಕು. ತಮಗೆ
ಮಕ್ಕಳು ಬೇಕು. ಯಾವ ಅಪ್ಪಜಾಂಘವತ ಸಂಪರ್ಕ
ವೂ ಬೇಡ. ಎಂಬ ಮಾತುಗಳು ನಮಗೆ ಅತಿ ಪ್ರಿಯವಾಗಿ
ತೋರಹತ್ತುತ್ತವೆ.

ಶಿಕ್ಷಣದ ಪರಿಣಾಮವು ಸತ್ಕರೀತಿಯಿಂದ ಯಾರ ಮನಸಿ
ನ ಮೇಲಾಗಿರುವದೋ ಅವರಿಗೆ ಕಾವ್ಯ ಜಾಣರೆಂದು
ತೋರುವದಿಲ್ಲ. ನಮಗೆ ಆಪೂರ್ಣ ಶಿಕ್ಷಣ ದೊರೆದದರಿಂ
ದ ನಾವು ಬಹಳ ಜಾಣರು, ನಮಗೆ ಎಲ್ಲ ತಿಳಿಯುತ್ತ
ದೆ; ಎಲ್ಲ ಒರುತ್ತದೆ; ಸತ ಜ್ಞಾನವಂ; ನಾವು ಸ್ವಚ್ಛ ಮ
ತ್ತು ನಿರ್ಮಲರು; ನಮ್ಮ ಹಿರಿಯರು ಮೂಖರು ಅ
ಶಿಕ್ಷಿತರು, ಮತ್ತು ಹುಚ್ಚರು; ಎಂದು ತೋರುವದರಿಂದ
ಮೇಲಿಂದ ಮೇಲೆ ನವ್ಯಿಂದ ಆವರ ಅಪವಾನವಾಗು
ತ್ತದೆ. ಇದು ಹೆಚ್ಚು ಶಿಕ್ಷಣದ ಫಲ. ಎಂದು ಮನೆ
ಯಲ್ಲಿಯ ಹಿರಿಯ ಮನುಷ್ಯರು ಆಕ್ಷೇಪ ತಕ್ಕೊಳ್ಳಹತ್ತಿ
ದ್ದಾರೆ. ಸನ್ಮಕ್ಕೆ ಅಕ್ಷರಶತ್ರುಗಳಾದ ಆಸ್ತಿಸೂಸಯರ
ಸ್ಥಳದಲ್ಲಿ ಅಶಿಕ್ಷಿತ ಅತಿ, ಮತ್ತು ಕಿಕ್ಷಿತ ಸೂಸೆ ಇವರ
ಜಗಳಗಳು ಮೇಲಿಂದಮೇಲೆ ನಡೆಯುತ್ತಿರುತ್ತವೆ

(ಸಂಪೂ)

THE HISTORY OF RAJASTHAN.

ರಜಪೂತರ ವೃತ್ತಾಂತ

೧ನೇ ಅಧ್ಯಾಯ

ಉದೇಪುರದ ಮನೆತನವು

ಈ ಮೇರೆಗೆ ಗುಹನು ಭಿಲ್ಲರೊಡನಾಡಿ ಕಸ್ತವಿದ್ಯವನ್ನು
ತಿಳುಕೊಂಡು ತನ್ನ ಕ್ಷಾತ್ರ ತೇಜದಿಂದ ಜನಮನವನ್ನು ಆ

ಕಕ್ಕಯ್ಯನು ಕುತ್ತರಲು ಈಡರದ ಭಿಲ್ಲ ರಾಜನು ತೀರಿಕೊಂಡ ಗಳು. ಭಿಲ್ಲರೆಲ್ಲ ಕೂಡಿ ಇನ್ನು ಯಾರನ್ನು ಪಟ್ಟಗಟ್ಟಬೇ ಕೆಂದು ಆಲೋಚಿಸಿ ಕಡೆಗೆ ಚೀಟಿಯನ್ನು ಹಾಕೋಣ ಆ ದಂಪ್ಲೆ ಯಾರ ಹೆಸರು ಬರುವದೋ ಅವರನ್ನೇ ಪಟ್ಟಕ್ಕೆ ಕೂರ್ತ್ರಿಸೋಣವೆಂದು ನಿಶ್ಚಯಿಸಿ, ದೇವರ ಮುಂದೆ ಚೀ ಟಿ ಹಾಕಿಸಿ ಅಜ್ಞಾನ ಬಾಲಕನಿಂದ ಆ ಚೀಟಿಗಳನ್ನು ತಗಿಸುತ್ತಿರಲು, ಅದರಲ್ಲಿ ಗುಹನ ಹೆಸರಿನ ಚೀಟಿಯೇ ಹೊರಟಿತು. ಆಗ ಎಲ್ಲರೂ ಏಕಮತದಿಂದ ಅವನೇ ಅರ ಸನಾಗಬೇಕೆಂದು ನಿಶ್ಚಯಿಸಿದರು. ಆ ಕೂಡಿದ ಜನರಲ್ಲಿ ಗುಹನ ಜೀವದ ಗೆಳೆಯನೊಬ್ಬನಿದ್ದನು. ಅವನು ಕೂಡ ಲೆ ತನ್ನ ಕಿರಿಬೆರಳನ್ನು ಕೊಯ್ದು ಆ ನೆತ್ತರದಿಂದ ಗುಹನ ಹಣೆಗೆ ತಿಲಕವನ್ನಿಟ್ಟನು. ಈ ನಡತೆಯು ಭಿಲ್ಲರಲ್ಲಿ ಪರಂ ಪರಾಗತ ಸಂಪ್ರದಾಯವೆನಿಸುವದು. ಈ ಸಂಗತಿಯನ್ನು ಅಬುಲ್‌ಫಜಲನೆಂಬ ಮುಸಲ್ಮಾನ ಜಾತಿಯ ಇತಿಹಾಸಲೇ ಖಕನೂ ಉಲ್ಲೇಖಿಸಿದ್ದಾನೆ. ಈ ಪ್ರಕಾರ ಗುಹನು ಭಿಲ್ಲ ರ ಒಡೆಯನಾಗಲು, ಯಾವತ್ತೂ ತರುಣ ವೃದ್ಧ ಭಿಲ್ಲರು ಅವನಿಗೆ ಪೊಡವಟ್ಟು ಕಾಣಿಕೆಯನ್ನಿತ್ತರು. ಈ ಗುಹ ನ ತರುವಾಯದವರಿಗೆ ಗುಹಲೋಟ(ಗುಹನವಂಶ) ವೆಂಬ ಅಡ್ಡ ಹೆಸರು ಬಂತು. ಈ ಗುಹಲೋಟ ಶಬ್ದವೇ ಅಪ ಭ್ರಂಶವಾಗುತ್ತಾಗುತ್ತ ಗೇಹಲೋಟ ಎಂಬ ರೂಪದಿಂದ ಲೋಕ ಪ್ರಸಿದ್ಧಿಯನ್ನು ಹೊಂದಿತು.

ಈ ಗೇಹಲೋಟ ವಂಶದವರು ಏಳು ತಲೆಯವರೆಗೆ ಈ ನಾಡಲ್ಲಿ ಆಳಿದರು. ಆದರೆ ಭಿಲ್ಲರಿಗೆ ಅನ್ಯ ಜಾತಿಯವನ ತಮ್ಮಗ ಅರಸನಾಗಿದ್ದದ್ದು ಸರಿದೋರಲಿಲ್ಲ. ಆದ್ದರಿಂದ ಅವ ರು ಗೇಹಲೋಟ ವಂಶದ ಏಳನೇಯವನಾದ ಗ್ರಹಾದಿತ್ಯನ ಆಳಿಕೆಯಲ್ಲಿ ರಾಜ್ಯದಲ್ಲಿ ದಂಗೆಯನ್ನೆಬ್ಬಿಸಿ ಅವನನ್ನು ಕೊಂ ದುಹಾಕಿದ್ದಲ್ಲದೆ ಅವನ ವಂಶದವರನ್ನು ಕೂಡ ತಮ್ಮನಾಡಿ ನಿಂದ ಅಟ್ಟಿಕೊಟ್ಟು ಬಿಟ್ಟರು. ಈ ಗ್ರಹಾದಿತ್ಯನಿಗೆ ಬಾ ಪ್ಪ ಎಂಬ ಮೂರುವರ್ಷದವನೊಬ್ಬ ಮಗನಿದ್ದನು.

ಎನನ್ನು ವಡನೆಗರದವನೊಬ್ಬ ಬ್ರಾಹ್ಮಣನು
ಕೊಂಡು ಸಂರಕ್ಷಿಸಿದನು. ಆ ಹುಡುಗನು ದೊಡ್ಡವನಾದ
ಬಳಿಕ ಆ ಬ್ರಾಹ್ಮಣನು ಅವನನ್ನು ಬಯಸ್ದು ಭಂಡೇರಿಗಡದ
ಲ್ಲಿರುವ ಯದುವಂಶದವನೊಬ್ಬ ರಾಜಪುರುಷನಲ್ಲಿಟ್ಟನು.
ಈ ಸ್ಥಳವಾದರೂ ಹುಡುಗನಿಗೆ ಸುರಕ್ಷಿತವಾದದ್ದಲ್ಲವೆಂದು
ಬಗೆದು ಆ ಬ್ರಾಹ್ಮಣನು ಆ ಹುಡುಗನನ್ನು ಪಾರಾಶರ ಆರ
ಣ್ಯದಲ್ಲಿ ಬಂದು ಬಹು ಗುಪ್ತವಾದ ಸ್ಥಳದಲ್ಲಿಟ್ಟನು.

ಇದೇ ಆರಣ್ಯದಲ್ಲಿ ತ್ರಿಕೂಟಾಚಲವೆಂಬದೊಂದು ಪರ್ವ
ತವದೆ. ಅದರ ಅಡಿಯಲ್ಲಿ ನಾಗೇಂದ್ರವೆಂಬ ಹೆಸರಿನದೊಂದು
ಪಟ್ಟಣವಿರುವದು. ಈ ನಗರವು ಉದೇಪುರದಿಂದ ಐದು
ಹರದಾರಿಯ ಮೇಲೆ ನಾಗಡಾ ಎಂಬ ಹೆಸರನ್ನಿಟ್ಟುಕೊಂ
ಡು ಪವಿತ್ರ ಕ್ಷೇತ್ರಗಳಲ್ಲಿ ಎಣಿಸಿಕೊಳ್ಳುತ್ತ ಇಂದಿಗೂ ನೆಲ
ಸಿರುತ್ತಿದೆ. ನಾಗೇಂದ್ರ ನಗರದಲ್ಲಿ ಒಂದು ಪ್ರಸಿದ್ಧವಾದ
ಈಶ್ವರನ ಗುಡಿ ಇರುವದು. ಈ ಈಶ್ವರನು ಏಕಲೀಂಗ
ವೆಂಬ ನಾಮದಿಂದ ಆ ನಾಡಿನ ಯಾವತ್ತೂ ಬ್ರಾಹ್ಮಣರಿಗೆ
ಪೂಜ್ಯದೇವತೆಯಾಗಿರುವನು. ಈಶ್ವರನಿಗೆ ಸರ್ವಭೂಷ
ಣನೆಂದು ಹೆಸರುಂಟು. ಆ ಹೆಸರು ಈ ಏಕಲಿಂಗದಲ್ಲಿಯೇ
ಸಾರ್ಥಕವಾಗಿದೆಯೋ ಏನೋ ಎಂಬಂತೆ ಲಿಂಗವೆಲ್ಲ ಸ
ರ್ವಾಭರಣಗಳಿಂದ ಅಲಂಕೃತವಾಗಿದೆ. ಈ ಪಟ್ಟಣಕ್ಕಾ
ದರೂ ನಾಗೇಂದ್ರವೆಂಬ ಹೆಸರು ಬೀಳಲಿಕ್ಕೆ ಲಿಂಗದ ಸರ್ವಾ
ಲಂಕಾರಗಳೇ ಕಾರಣವಾಗಿರಬಹುದು ಆ ನಾಡ ಜನರೆ
ಲ್ಲ ತಾವು ಹೊತ್ತ ಹರಿಕೆಯನ್ನೆಲ್ಲ ಇಲ್ಲಿಗೆ ಬಂದು ಮುಟ್ಟಿಸು
ತ್ತಾರೆ. ಈ ದೇವರ ಮುಂದೆ ಹಿತ್ತಾಳೆಯ ನಂದಿಯೊಂದುಂ
ಟು. ದೇವರ ಪೂಜಾರಿಗಳು ಶಾವು ಡಾರೀತ ಋಷಿಯ ವಂ
ಶದವರೆಂದೂ ಇಂದಿಗೆ ತಮ್ಮಲ್ಲಿ ೬೫ ತಲೆಗಳಾದವೆಂದೂ
ಹೇಳುವರು ಈ ದೇವಾಲಯವು ಬಹು ವಿಸ್ತೀರ್ಣವಾದ
ನ್ದಿರುವದು. ಬಿಳಿ ಸಂಗಮರವರೀ ಕಲ್ಲಿಂದ ಕಟ್ಟಿದ ಈ
ಗುಡಿಯಲ್ಲಿ ಅಲ್ಲಲ್ಲಿ ಕೊರೆದ ತರ ತರದ ಚಿತ್ರಗಳು ಶ್ರೇಷ್ಠ
ಕರ ಚಿತ್ತಾಕರ್ಷಣಮಾಡುವವು. ಮುಸಲ್ಮಾನರ ದಾಳಿ

ಕಕ್ಕಯ್ಯನ ಪ್ರತಿಷ್ಠೆಯಿಂದ ದೇವಾಲಯದ ಅನೇಕ ಭಾಗಗಳು ಗಳಿಸ್ಥರುತ್ತವೆ.

ಉದೇಪ್ರದದಲ್ಲಿರುವ ಏಕಲಿಂಗನ ದೇವಸ್ಥಾನದ ಸರ ಯುಳ್ಳಿಯೇ ನಾಥದ್ವಾರವೆಂಬ ಶ್ರೀನಾಥಜಿಯ ಸಂಸ್ಥಾನವಿ ರುವದು. ಇದು ಗೋಸಾವೀ ಜನರ ಮುಖ್ಯ ಸಿಂಹಾಸನದ ಸ್ಥಳವು. ಏಕಲಿಂಗನಿಗೂ ಶ್ರೀನಾಥನಿಗೂ ಕೂಡಿ ದಿನ ನ್ನೊಂದಕ್ಕೆ ಒಂದು ಸಾವಿರ ರೂಪಾಯಿದು ವರೆಗೆ ವೆಚ್ಚ ವಾಡಲ್ಪಡುತ್ತದೆ. ಮೊದಲು ಶ್ರೀ ನಾಥನ ಮೂರ್ತಿಯು ಗೋಕುಲದ ಒಳಿಯು ಒಂದು ಗುಡ್ಡದ ಮೇಲೆ ಇತ್ತು ಮು ಸಲ್ಮಾನರ ದಾಳಿಗೆ ಅಂಜಿ ಹಿಂದೂ ಜನರು ಅದನ್ನು ನೆಲದ ಲ್ಲಿ ಹುಗಿದು ಬಿಟ್ಟಿದ್ದರು ಮುಂದೆ ಎಷ್ಟೋ ದಿವಸಗಳ ವರೆಗೆ ಆ ಮೂರ್ತಿಯು ಸುದ್ದಿಯೇ ಇದ್ದಿಲ್ಲ. ವೈಷ್ಣವ ಪಂ ಥದ ಸ್ಥಾಪಕರಲ್ಲೊಬ್ಬರಾದ ವಲ್ಲಭಾಚಾರ್ಯರಿಂದ ಹದಿ ನೈದನೇ ಶತಕದಲ್ಲಿ ಈ ಮೂರ್ತಿಯು ಪ್ರಕಟವಾಯಿತು. ಅಂದಿನಿಂದ ಈ ದೇವರಿಗೆ ಉತ್ಸವಾದಿಗಳು ಯಥಾ ಸಾಂಗ ವಾಗಿ ನಡೆಯು ತೊಡಗಿದವು. ಆದರೆ ಹಿಂದೂ ಧರ್ಮದ ದ್ವೇ ಷಿಗಳಾದ ಮುಸಲ್ಮಾನ ಅಧಿಪತಿಗಳಿಗೆ ಈ ಶ್ರೀನಾಥಜಿಯ ಉತ್ಕರ್ಷವು ಸಹನವಾಗದೆ, ನಡೆಯುವ ಪೂಜಾದಿಗಳನ್ನು ನಿಲ್ಲಿಸಿ ಬಿಡಬೇಕೆಂತಲೂ, ಮೂರ್ತಿಯನ್ನು ನಾಶಗೊಳಿಸ ಬೇಕೆಂತಲೂ ಆಜ್ಞೆ ಮಾಡಿದರು ಆಗ ವಲ್ಲಭಾಚಾರ್ಯ ರ ಮಗನಾದ ವಿಠ್ಠಲ ನಾಥನು ಎಂಬವನು ಗುಪ್ತವಾಗಿ ಶ್ರೀ ನಾಥಜಿಯ ಮೂರ್ತಿಯನ್ನು ಬಂಡಿಯೊಳಗೆ ಹಾಕಿಕೊಂಡು ಉದೇಪ್ರದದ ಬಳಿಯಲ್ಲಿರುವ ಕಂದರಕ್ಕೆ ತಂದು ಅಲ್ಲಿ ಅದ ನ್ನು ಸ್ಥಾಪಿಸಿದನು ಅಂದಿನಿಂದ ಇಂದಿನ ವರೆಗೂ ಈ ಶ್ರೀ ನಾಥಜಿಯ ಮೂರ್ತಿಯು ಗುಡಿಯನ್ನು ಕಾಣದೆ ಹಾಗೇ ಬ ಯಲಲ್ಲಿ ಬಸಿಲು ಗಾಳಿಗಳನ್ನು ಬಡಿಸಿಕೊಳ್ಳುತ್ತ ನಿಂತಿರುತ್ತ ದೆ ಈ ಮೂರ್ತಿಯ ರಕ್ಷಣದ ಸಲುವಾಗಿ ಸಾವಿರಾರು ಜ ನ ಕ್ಷತ್ರಿಯ ಯೋಧರು ತಮ್ಮ ಪ್ರಾಣಗಳನ್ನು ಕಳಕೊಂಡಿ ರುವರು. ಈ ದೇವಸ್ಥಾನದ ಸಂಸ್ಥೆಯು ವಲ್ಲಭಾಚಾ ರ್ಯರ ಹಿರಿ ಮನೆತನದವರ ಕೈಯಲ್ಲಿರುವದು. ವಲ್ಲಭೀ

ಪಂಥದ ಜನರು ಈ ಸಂಸ್ಥಾನಕ್ಕೆ ಅತಿಶಯವಾ
ಡುತ್ತಾರೆ. ಆ ಪಂಥದ ಜನರಿಂದ ವರುಷಾ ಏಳು
ರೂಪಾಯಿಗಳು ದೇವಸ್ಥಾನಕ್ಕೆ ಮುಟ್ಟುತ್ತವೆ. ಅಲ್ಲದೆ ಈ ಪ್ರಾಂತದಲ್ಲಿ ನಡೆಯುವ ವ್ಯಾಪಾರಸ್ಥರಿಂದಲೂ, ಯಾತ್ರೆಗೆ ಬರುವ ವಾಣಿ ಭೂಟಿ ಮೊದಲಾದ ಶ್ರೀಮಂತ ಗೃಹಸ್ಥರಿಂದಲೂ ಹೇರಳ ಹಣ ದೊರೆಯುವದು. ಉದೇಪುರ ಸಂಸ್ಥಾನದವರು ಈ ದೇವಸ್ಥಾನಕ್ಕೆ ಒಂದು ಲಕ್ಷ ರೂಪಾಯಿಯ ವರ್ಷಾಶನವನ್ನು ಗೊತ್ತು ಪಡಿಸಿದ್ದಾರೆ. ಈ ಯಾತ್ರೆಯಲ್ಲಿ ಈ ಪ್ರಾಂತದಲ್ಲಿ ವ್ಯಾಪಾರ ನಡಿಸುವವರು ತಮ್ಮ ತಮ್ಮ ಸರಕುಗಳ ಬೆಲೆಯಂತೆ ಇಷ್ಟಿಷ್ಟು ಹಣವನ್ನು ಕೂಡಬೇಕೆಂದು ಗೊತ್ತಾಗಿರುವದು ಹೀಗೆ ಎತ್ತಲ್ಪಡುವ ಕರಕ್ಕೆ ಶ್ರೀ ನಾಥಜಿಯ 'ಲಾಗಾ' ಎಂಬ ಹೆಸರು ಈ ಲಾಗೆಯ ಹಣವನ್ನು ಮಹಾಜನರೆಂಬವರು ಎತ್ತಿ ದೇವಸ್ಥಾನಕ್ಕೆ ಮುಟ್ಟಿಸುವರು. ಏಕಲಿಂಗನ ಗುಡಿಯು ಬಾಪ್ಪನ ಆಳಿಕೆಯಲ್ಲಿಯೇ ಕಟ್ಟಲ್ಪಟ್ಟಿತು.

ಬಾಪ್ಪನ ಸಂಗೋಪನವು ಎಷ್ಟು ಕಷ್ಟದಿಂದ ಸಾಗಿತೆಂಬದನ್ನು ಹಿಂದೆ ಹೇಳಿದ್ದೇವೆ. ಇವನ ಉದಯವಾದರೂ ಬಹು ಸೋಜಿಗದ ರೀತಿಯಿಂದ ಆಯಿತೆಂಬದು ಮುಂದಿನ ವರ್ಣನೆಯಿಂದ ತಿಳಿಯುವದು. ಇವನು ಚಿಕ್ಕವನಿರುವಾಗ ತನ್ನ ಓರಿಗೆಯ ಹುಡುಗರೊಡನೆ ಆಡುತ್ತಿದ್ದನು. ಇವನು ಆಟದ ಮೇಳದಲ್ಲಿ ನಾಗಡೆಯ ಸೋಳಂಕೀ ಠಾಕೂರನ ಮಗಳೊಬ್ಬಳು ಇದ್ದಳು. ಒಂದು ದಿವಸ ಆ ಹುಡುಗ ಹುಡುಗಿಯರು ಆಡುತ್ತಿರುವಾಗ ಆಟದಲ್ಲಿ ಹುಡುಗರು ಬಾಪ್ಪನ ಒಕ್ಕಡೆಯ ಸೆರಗಿಗೂ ಆ ಠಾಕೂರನ ಹುಡಿಗೆಯ ದಟ್ಟಿಯ ಸೆರಗಿಗೂ ಗಂಟು ಹಾಕಿ ಆವಿಬ್ಬರ ಮದುವೇ ಮಾಡಿಬಿಟ್ಟರು. ಇಷ್ಟೇ ಅಲ್ಲಾ ವಿವಾಹದಲ್ಲಿ ನಡೆಯ ತಕ್ಕ ಮೆರವಣಿಗೆ ಮುಂತಾದ ಕಾರ್ಯಗಳನ್ನು ಕೂಡ ಯಥಾಸಂಗವಾಗಿ ನಡಿಸಿದ್ದಲ್ಲದೆ ಅಲ್ಲಿಯೇ ಬಳಿಯಲ್ಲಿದ್ದ ಒಂದು ಅಮ್ರ ವೃಕ್ಷಕ್ಕೆ ಮದುಮಕ್ಕಳಿಂದ ಪ್ರದಕ್ಷಿಣೆಯನ್ನು ಸಹ ಹಾಕಿಸಿದರು

ಹುಡುಗಾಟಕೆಯ ಲಗ್ನವೆಂಬದುನಿಜವೆ. ಆದರೆ ಕ
ಡಗೆ ಇದೇ ಲಗ್ನವೇ ಸತ್ಯವಾಯಿತು. ಈ ಸಂಬಂಧದ
ವೃತ್ತಾಂತವು ಬಹು ಚಮತ್ಕಾರವಾಗಿದೆ. ಹ್ಯಾಗಂದರೆ:—
ಹುಡುಗರು ಆಟದಲ್ಲಿ ತನ್ನ ಮಗಳ ಮದುವೆಯನ್ನು ಮಾ
ಡಿದ್ದು ಠಾಕೂರನಿಗೆ ಗೊತ್ತಿದ್ದಿಲ್ಲ. ಗೊತ್ತಿರುವ ಸಂಭವ
ವೂ ಇಲ್ಲ ಯಾಕಂದರೆ ಹುಡುಗರು ಆಟದಲ್ಲಿ ಏನೇನು
ಮಾಡುತ್ತಾರೆಂಬದನ್ನು ಪಾಲಕರು ನೋಡುತ್ತಿರುವದಿಲ್ಲ.
ಹುಡುಗರು ವಿನೋದಕ್ಕಾಗಿ ತಮ್ಮ ಮನಸಿಗೆ ಬಂದಂತೆ ಆ
ಡುತ್ತಿರುತ್ತಾರೆ. ಮುಂದೆ ಈ ಹುಡಿಗೆಯು ಮದುವೆಗಾದ
ಬಳಿಕ ಠಾಕೂರನು ತನ್ನ ಉಪಾಧ್ಯಾಯನನ್ನು ಕರೆದು
ಮಗಳ ಹಸ್ತವನ್ನು ಪರೀಕ್ಷಿಸಿ ಇವಳಿಗೆ ಅನುಗುಣನಾದ
ವರನನ್ನು ಯೋಜಿಸು. ಎಂದು ಹೇಳಿದನು. ಆಗ ಆ ಸಾ
ಮುದ್ರಿಕ ಶಾಸ್ತ್ರದಲ್ಲಿ ಪಾರಂಗತನಾದ ಉಪಾಧ್ಯಾಯನು ಆ
ಹುಡಿಗಿಯ ಕೈಯನ್ನು ನೋಡಲು, ಅವನಿಗೆ ಅವಳ ಹಸ್ತ
ದೊಳಗಿನ ಸಾಮುದ್ರಿಕ ಚಿನ್ಹಗಳಿಂದ ಈ ಮೊದಲೇ ಇವ
ಳ ಲಗ್ನವಾಗಿರಬೇಕೆಂದು ಗೊತ್ತಾಯಿತು. ಆದರಂತೆ ಅವ
ನು ಠಾಕೂರನಿಗೆ ಹೇಳಲು, ಅವನು ಆಶ್ಚರ್ಯ ಚಕಿತನಾ
ಗಿ ಆವ ವಿವಾಹದ ಶೋಧವನ್ನು ನಡಿಸಿದನು. ಕಡೆಗೆ ಚಿ
ಕ್ಕಂದಿನಲ್ಲಿ ಹುಡುಗ ಹುಡುಗರ ಆಟದಲ್ಲಿ ಆದ ಲಗ್ನವು ಗೊ
ತ್ತಾಗಲು, ಅವನು ಕೂಡಲೆ ಬಾಪ್ಪನನ್ನು ಕರಿಸಿ ಅವ
ನಿಗೇ ವಿಧ್ಯುಕ್ತವಾಗಿ ಮಗಳನ್ನು ದಾರೀ ಎರೆದು ಕೊಟ್ಟ
ನು. ಇದೇ ರಾವಳ ವಂಶಕ್ಕೂ ಸೋಳಂಕೀ ವಂಶಕ್ಕೂ ಆದ
ಪ್ರಥಮಸಂಬಂಧವು.

ಬಾಪ್ಪನು ಚಿತೋಡನ ಪ್ರಮಾರ ರಾಜರ ಬಳಿಯಲ್ಲಿ
ಚಾಕರಿ ಇದ್ದನು. ಆ ಅವಸರದ ಅವನ ಕೂರತ್ವಕ್ಕೂ
ಚಾಕಚಕ್ಯಕ್ಕೂ ಮೆಚ್ಚಿ ಅವನಿಗೆ ಹಿಂದು ಊರನ್ನು ಅಂಬಳಿ
ಕಾಣಿಕೆಕೊಟ್ಟಿದ್ದನು. ಹಾರೀತ ಋಷಿಯು ಏಕಲಿಂಜರಾಜ
ಏಕಲಿಂಗನ ಪೂಜಾರಿಯು ಬಾಪ್ಪನಿಗೆ ಕೆಲಕಾಲದಲ್ಲಿ
ನಿನ್ನ ಭಾಗ್ಯೋದಯವಾಗುವದು ನಿಶ್ಚಯವು, ನೀನು ಮ

ಕ್ರ ಈ ವಿಕಲಿಂಗನಲ್ಲಿ ಭಕ್ತಿಯನ್ನಿಟ್ಟು ಅತನನ್ನು
ತ್ತಿರು ಎಂದು ಹೇಳಿದನು. ಈ ಬ್ರಹ್ಮದಜನಪನ್ನು
ಬಿ ಬಾಣಫ್ಪನು, ಶ್ರೀ ವಿಕಲಿಂಗನನ್ನು ನಿಷ್ಠೀವು ಭಕ್ತಿಯಿಂದ
ಆರಾಧಿಸತೊಡಗಿದನು. ಬಾಣಫ್ಪನು ಒಂದೇ ಹಲ್ಲಿಯು ಬ
ಡೆಯನಾಗಿದ್ದರೂ, ಪ್ರವಾರ ಅರಸರು ಅವನ ಶೌರ್ಯಾ
ದ್ಯನೇಕ ಗುಣಗಳಿಂದ ಅವನನ್ನು ಶೀಪ್ಠರಾದ ಸರದಾರರ
ಲ್ಲಿ ಎಣಿಸುತ್ತಿದ್ದರು. ಹೀಗಿರುವಾಗ ಒಮ್ಮೆ ಶತ್ರುಸೈನ್ಯವು
ಚಿತೋಡವನ್ನು ಮುತ್ತಿತು. ಆಗ ಚಿತೋಡದ ಸರದಾರ
ರೆಲ್ಲರು ಒತ್ತಟ್ಟಿಗೆ ಕೂಡಿ ಅರಸರು ಬಾಪ್ಪನನ್ನು ಏರಿಸಿ
ಕೂಡ್ರಿಸಿದ್ದಾರೆ. ಅವನ ಮೇಲೆ ಅರಸರ ನಂಬುಗೆಯೂ
ಮುಮತೆಯೂ ಹೆಚ್ಚಿರುವದು. ಸಾಂಪ್ರತದಲ್ಲಿ ಶತ್ರುಗಳು
ನಗರವನ್ನು ಮುತ್ತಿರುವರು. ಈ ಬಾಪ್ಪನ ಪ್ರತಾಪವ
ನ್ನು ಒರೆಗೆ ಹಚ್ಚುವ ಪ್ರಸಂಗವು ಅನಾಯಾಸವಾಗಿ ಪ್ರಾ
ಪ್ತವಾಗಿದೆ; ಆದ್ದರಿಂದ ನಾವೆಲ್ಲರೂ ಒಂದಾಗಿ ಅರಸನ
ಬಳಿಗೆ ಹೋಗಿ, ಬಂದಂಥ ಶತ್ರುಬಾಧೆಯನ್ನು ನಿವಾರಿಸಲಿ
ಕ್ಕೆ ತಮ್ಮ ಪ್ರೀತಿಯ ಸರದಾರನಾದ ಬಾಪ್ಪನನ್ನೇ ಕಳಿಸ
ಬೇಕೆಂದು ವಿನ್ನಹ ಮಾಡೋಣ ಎಂದು ನಿಶ್ಚಯಿಸಿ ಅರಸ
ನ ಬಳಿಗೆ ಬಂದು ಅದರಂತೆ ಅರಿಕೆ ಮಾಡಿಕೊಂಡರು. ಆ
ಗ ಅರಸನು ಬಾಪ್ಪನ ಮುಖವನ್ನು ನೋಡಲು, ಬಾಪ್ಪ
ನು ಅರಸನ ಇಂಗಿತವನ್ನು ಅರಿತು ಕೂಡಲೆ ಶತ್ರುಗಳ
ಮೇಲೆ ಸಾಗಿಹೋದನು. ಅವನು ಕಾಳಗದಲ್ಲಿ ಮಿಗಿಲಾದ
ಶೌರ್ಯವನ್ನು ಪ್ರಕಟಿಸಿದ್ದಲ್ಲದೆ, ಶತ್ರುಗಳನ್ನು ಸೋಲಿಸಿ
ಅವರನ್ನು ಬೆನ್ನಟ್ಟಿಕೊಂಡು ಗಿಜನಿಯ ವರಗೆ ಹೋದನು.
ನಾರ್ಗದೊಳಗಿನ ಅನೇಕ ಅರಸರು ಇವನ ಶೌರ್ಯಕ್ಕೆ
ನಿಬ್ಬೆ ತಮ್ಮ ತಮ್ಮ ಕನ್ಯೆಯರನ್ನು ಮದುವೆ ಮಾಡಿಕೊ
ಟ್ಟರು. ಇವನು ಗಿಜನಿಯಿಂದ ಹಿಂದುರುಗಿ ಚಿತೋಡಕ್ಕೆ
ಬಂದಬಳಿಕ ತನ್ನ ಅನ್ನದಾತರಾದ ಪ್ರವಾಹ ರಾಜನನ್ನೇ
ಸಿಂಹಾಸನದಿಂದ ತಳ್ಳಿ ತಾನೇ ಚಿತೋಡದ ರಾಜ್ಯವನ್ನು ಆ
ಕ್ರಮಿಸಿದನು. ಈ ಸಂಗತಿಯು ವಿಕ್ರಮ ಸಂವತ್ಸರ

ನೇ ವರುಷ ಅಂದರೆ ಕ್ರಿಸ್ತಶಕದ ೭೦೪ನೇ ವರುಷ ಸಂಭವಿಸಿತು. ಇವನಿಗೆ ಹಿಂದೂ ವಾ ಸೂರಜು ರಾಜಗು ರು, ಚಕವಾ (ಚಕ್ರವರ್ತಿ) ಎಂಬ ಬಿರುದುಗಳಿದ್ದವು.

ಇವನಿಗೆ ಮಕ್ಕಳು ಬಹಳ. ತನ್ನವೆಪ್ಪೋ ಮಂದಿ ಮಕ್ಕಳನ್ನು ಬೇರೆ ಬೇರೆ ದೇಶಗಳಿಗೆ ಕಳಿಸಿದ್ದನು. ಇರಾ ಣಾ, ತುರುಣಾ, ಇಸ್ಪಹಾನ, ಕಂದಹಾರ, ಕಾಶ್ಮೀರ, ಕಾ ಬೂಲ ಮುಂತಾವ ತಾನು ಗೆದ್ದ ಪ್ರದೇಶಗಳ ರಾಜಕುಮಾ ರಿಯರನ್ನು ಮದುವೆ ಮಾಡಿಕೊಂಡಿದ್ದರಿಂದ, ಇವನ ಹೆಂಡ ರಲ್ಲಿ ಕೆಲವು ಮಂದಿ ಮುಸಲ್ಮಾನ ಧರ್ಮದವರೂ ಇದ್ದರು. ಈ ಹಿಂದೂ ಮುಸಲ್ಮಾನ ಹೆಂಡರ ಹೊಟ್ಟೆಯಿಂದ ಇವನಿ ಗೆ ಒಟ್ಟು ೧೩೦ ಮಂದಿ ಮಕ್ಕಳು ಆಗಿದ್ದರು. ೯೪ ಮಂದಿ ಹಿಂದೂ ಧರ್ಮದ ರಾಣಿಗಳಿಂದಲೂ ಉಳಿದವರು ಮುಸ ಲ್ಮಾನ ಜಾತಿಯ ರಾಣಿಗಳಿಂದಲೂ ಹುಟ್ಟಿದ್ದರು.

(ಸಶೇಷ)

ಪರ್ಯಾಯ ಪರೀಕ್ಷೆಯ ಪ್ರಶ್ನೆಗಳು

ವ್ಯಾಕರಣ — ಛಂದಸ್ಸು.

ತಾ|| ೧೧-೧೨-೧೯೦೫ ಇಸ್ವಿ ವೇಳೆ ೩ ತಾಸು

ವರ್ಣಂಗಳ ಪಾಠಕ್ರಮ; ಕವಿಗಳರದಿಂ, ತರದಿಂ ವಿಂಗಡಿಸಲ್ಕಂ; ತಿಳಿದೇಶೀಯಮುಮೈದಂ; ಈ ನಾಲ್ಕು ಸೂತ್ರ ಗಳಿಂದ ಹೇಳಲ್ಪಡುವ, ವರ್ಣಮಾಲೆಗಳು ಯಾವ ಯಾ ವ ಭಾಷೆಯವು? ಇವುಗಳಿಗೆ ಪರಸ್ಪರ ವ್ಯತ್ಯಾಸವೇನು;

(೩) ಕೇಶವನು ಹೇಳಿದ ಯಾವ ಸಂಧಿ ದೋಷವು, ಪ್ರಸಾದೋಷವು ಸರ್ವಸಮ್ಮತವಾದದ್ದಲ್ಲ.

(೪) ಸಂಸ್ಕೃತ ಕರ್ಣಾಟಕ ಸಾಮಾನ್ಯ ಸಂಧಿಸೂತ್ರ ಗಳಾವು?

(೪) ಕ್ರಿಯಾನಾಮ, ತದ್ಧಿತ, ನೇಯ, ಅವ್ಯಯಲಿಂಗ ಗಳೆಂದರೇನು? ಉದಾಹರಿಸಿರಿ!

(೫) ತಣ್ × ಪುಳಿಲ್ ಇಲ್ಲಿ ಸೂತ್ರದ್ವಯವಿದಿರುವ ದುರ್ದ್ವಯವು ಪ್ರಾಪ್ತಿಯಾದೆ. ಅದರಲ್ಲಿ ಒಂದು ನಿತ್ಯವಾದ ದ್ದು, ಯಾವದನ್ನು ಮಾಡಬೇಕು. ಏಕೆ?

(೬) ಸಮಸಂಸ್ಕೃತಗಳು ತತ್ಸಮಗಳೋ ತದ್ಭವಗಳೋ ಸಕಾರಣವಾಗಿ ತಿಳಿಸಿರಿ! ಈ ವಿಷಯದಲ್ಲಿ ಮತ ಭೇದವಿದ್ದರೆ ಯಾವದು ಸಯುಕ್ತಿಕವಾದದ್ದು

(೭) ಉಳ್ಳುಡೆ, ಜೀನೆಯ್, ಪಾರುಂಬಳೆ, ಮುಚ್ಚಿವ ಡಿ, ಹೆಲ್ಲುಹಳ್ಳಿ, ಪಿಂತಿಲ್. ಎನೆಂ, ಇವುಗಳ ವಿಗ್ರಹಸ ವಾಸಗಳನ್ನು ಕೇಳಿರಿ.

(೮) ಕೃತ್ತದ್ಧಿತ ಸಾಧಾರಣವಾದ ಪ್ರತ್ಯಯಗಳಾವ ವು ಮತ್ತು ಇಗ, ಇಚ, ಇಲ, ಈ ತದ್ಧಿತ ಪ್ರತ್ಯಯ ಗಳು ಯಾವ ಯಾವ ಅರ್ಥದಲ್ಲಿ ಬರುವವು?

(೯) ಮಾಡಿದಪಂ, ಮಾಡುಗೆ ಮುಂತಾದ ಹಳಿಗನ್ನಡ ದ ವಿಧ್ಯಾದಿ ರೂಪಗಳು ವಿಸ್ಮೃತವಾಗಿ, ಹೊಸಗನ್ನಡದಲ್ಲ ಮಾಡುತ್ತಾನೆ- ಮಾಡಲಿ ಮೊದಲಾದ ರೂಪಗಳು ಆಗಿವೆ ಯೆಂದು ಹೇಳಬಹುದೆ? ಸಕಾರಣ ಉತ್ತರ ಕೊಡಿರಿ.

(೧೦) ಗುರುನಾಣ್ಕಂಭರದಿ ನೆರಗಿ, ಮುಖತಾವರೆ, ತರ ವೇಳ್ ಮಾಣಿಕ್ಯ ಭಂಡಾರದ ಪ್ರಭಿಕೆಯುಂ, ಬೆಗಿನಕೆಂಬಿ ಸಲೆಳಸಲೆಸೆವಾಶ್ರಮತರುಗಳ್, ಆರೋಹಕಾತನಂ, ಮುಯ್ಮೆಳ್ ಸೂಳ್ ಪ್ರತಿಭಯಂಕೋದಿಕ್ಕಿದಂ ಜಾಮದ ಗ್ನ್ಯಂ, ಇವ್ರ ಯಾವ ಸಂದರ್ಭದಲ್ಲಿ ಉದಾಹೃತವಾಗಿವೆ;

(೧೧) ಗ, ದ, ವ, ಜಕಾರಮಾವಿದಿರಿರೆ! ಪದಮಧ್ಯ ವಿ ಷಯಮಾಗಸೇ ಕಾಶ್ಮೀರದೊಳ್ ॥ ಪ್ರಿಯೇ ಭೂಪದೆ ಕೆಲ ಕೆಲ! ವೊರವಿಕ್ಕುಗಂ ರಂತಳಾಂತಮುವು ಕ್ಲಿಲತೆಯುಂಗ

(೧೨) ನಪ್ಪ, ಉದ್ದಿಷ್ಟಗಳಂದರೇನು? ಮಾಲಿನೀ ಸ್ರಗ್ಧ ರೋವೃತ್ತಗಳು ಯಾವ ಛಂದಸ್ಸಿನ ಎಷ್ಟನೇ ವೃತ್ತಗಳು? ಮ ತ್ತು ಪಂಕ್ತಿ ಛಂದಸ್ಸಿನ ೪ನೇ ವೃತ್ತದ ಪ ಸಂಸ್ಕಾರವನ್ನು ಹೇ ಳಿರಿ.

DEPARTMENTAL NOTICE.

ವರ್ಣ ಪ್ರಾಯೋಗಿಕ ಪರೀಕ್ಷೆಯ

ನೋಟೀಸು.

ನೋಟೀಸಿನಿಂದ ತಿಳಿಸುವದೇನಂದರೆ ಕನ್ನಡದ್ದ
ಆಗತಕ್ಕ ವರ್ಣಪ್ರಾಯೋಗಿಕ ಪರೀಕ್ಷೆಯು, ೧೯೦೬ನೆ
ಇಸವಿಯ ಫೇಬ್ರುವಾರಿ ತಿಂಗಳ ಶಾಲಾಪತ್ರಿಕೆಯಲ್ಲಿ
೭—೪ ಪಾನುಗಳ ಮೇಲೆ ಪ್ರಕಟಿಸಲ್ಪಟ್ಟ ನಿಯಮಗ
ಳ ಅನುರೋಧದಿಂದ, ಧಾರವಾಡ ಟ್ರೇನಿಂಗ ಕಾಲೇಜದಲ್ಲ
ಸೋಮವಾರ ತಾ॥ ೧೦ನೇ ದಿಶೆಂಬರ ೧೯೦೬ನೇ ಇಸವಿ
ದಿನ ತೆಗೆದುಕೊಳ್ಳುವದರಲ್ಲಿ ಬರುವದು. ಸದರೀ ಪರೀಕ್ಷೆ
ಯಲ್ಲಿ ೪೦ ರುಪಾಯಿಗಳ ಬಕ್ಷೀಸು ಒಂದು ಮತ್ತು ೨೦
ರುಪಾಯಿಗಳ ಬಕ್ಷೀಸು ಒಂದು ಹೀಗೆ ಎರಡು ಬಕ್ಷೀಸ
ಗಳು ಇರುವವು. ಪರೀಕ್ಷೆಗೆ ಬರಲಿಚ್ಛಿಸುವವರ
ತಮ್ಮ ಅರ್ಜಿಗಳನ್ನು ಕೆಳಗೆ ಸಹೀ ಮಾಡಿದವರ ಕಡೆ
ತಾ॥ ೨೦ನೇ ನೋವೆಂಬರ ೧೯೦೬ನೇ ಇಸವಿಯೊಳಗಾ
ಕಳಿಸಬೇಕು. ಪರೀಕ್ಷೆಯು ಕೆಲಸಕ್ಕೆ ಹಗಲು ೧೧ ಘಂಟೆ
ಗೆ ಪ್ರಾರಂಭವಾಗುವದು.

ಧಾರವಾಡ
ತಾ॥ ೨೨ನೇ ಜಾನೇವಾರಿ
೧೯೦೬ ಇಸವಿ.

(ಸಹೀ) ಬೀ. ಆರ್. ಸಹಸ್ರಬುದ್ಧೆ
ಎಜ್ಯುಕೇಶನಲ್ ಇನಸ್ಪೆಕ್ಟರ
ದಕ್ಷಿಣಭಾಗ.

REGISTERED NO

ಸೌದಾಗರ್ ಬುಕ್‌ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಖಾಸಗಿ, ಮಾರ್ಸಡನ್ ಇತಿಹಾ
ಸವೂ, ಕಥೆಗಳೂ, ಪುರಾಣ ವಗೈರೆ ಪ್ರ. ಗಳು ಅವೆ. ಆಫೀಸ
ಜ್ಞಾಪಗಳು ಸಹ ಶೋಭೆಯುಳ್ಳ ವಿಸಿಗಳ ಬೆಳವಣಿಗೆಯ
ಪೆಲು. ಕಿಸೆಯಲ್ಲಿಡುವ ಫರಿಯಾರಗಳು ಅವೆ. ಮಾರ್ಸಡನ
ಇ. ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್ಲಾ
ಮಿಾದ ಸಾಃ ಸೌದಾಗರ.

ಜ್ಞಾಪಿಸುವುದು! ಕ್ಷಮೆಯಿರಲಿ!

ಪ್ರಕಟನೆ.

ಫೆಬ್ರುವರಿ ೧೫ಕ್ಕೆ ನೆಯ ತಾರೀಖಿಗೆ ಪಾಠಕ್ಕೆ ಸಿದ್ಧವಾಗುವದು.

ಈ ವರ್ಷ ಮುಲಕ್ಕೇ ಪರೀಕ್ಷೆಗೆ ಫೈನಿನಿಯ ತನಕದ ಸಂ
ಧಿಯ ಆರಂಭದಿಂದ ೫೦ ಕೋಕಗಳು ಅರ್ಥ ಸಹಿತ ಜಾಯಿಪಾ
ತ ಪುರತಕ್ಕದ್ದಿಂದಾ ನೇಮಿಸಿದೆಯಷ್ಟೆ. ನಾವು ಶಾಲಾಗುರುಗಳಿ
ಗೂ ವಿದ್ಯಾರ್ಥಿಗಳಿಗೂ ಸುಲಭವಾಗಬೇಕೆಂದು ಸಂದರ್ಭವಾಪ
ವಿವರಿಯುಕ್ತಗಳಿಂದ ಆ ೫೦ ಶ್ಲೋಕಗಳನ್ನೂ, ಅವುಗಳ ಅನ್ವ
ಯಾರ್ಥವನ್ನೂ, ಸಮಾಸವಿಗ್ರಹಗಳನ್ನೂ, ವಿಶೇಷ ವ್ಯಾಕರಣ
ಸಂಬಂಧದ ನೇಮುಗಳನ್ನೂ, ಸೇರಿಸಿ ಮುದ್ರಿಸಿರುತ್ತೇವೆ ಬಲೆ ಆ
ಆಹೆ. ಅಂಜೀವಿಚ್ಚ ಬೇಕಿ.

ಪುಸ್ತಕಗಳು ದೊರೆಯುವ ವಿಳಾಸ:—

ವ್ಯವಸ್ಥಾಪಕರ.

ಗ್ರಂಥಾಧಿಕಾರ ಮುದ್ರಾಲಯ

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೪೨] ಮಾರ್ಚ್ 1905. [ಸಂಚಿಕೆ ೩.

ಅನುಕ್ರಮಣಿಕೆ

		ಪುಟ.
೧.	ವಿದ್ಯಾಸುಧಾರಣೆ ಸಂಬಂಧವ ವೃತ್ತಾಂತಗಳು	೭೩–೭೯
೨.	ಕಿಂಡರಗಾರ್ಟನ್	೭೯–೮೬
೩.	ಚಟವು	೮೬–೮೮
೪.	ಉದೇಪುರವ ಮನೆತನವು	೮೯–೯೦
೫.	ನೋಟೀಸು	೯೦–೯೧
೬.	ವರ್ತ್ಯವಹಾರ	೯೨–೯೬

CONTENTS.

1.	Educational Intelligence and Useful Notes	73–79
2.	Kindergarten	79–86
3.	Habit	86–88
4.	The history of Rajasthan	89–90
5.	Departmental Notice.	90–91
6.	Correspondance	92–96

DHARWAR:
PRINTED AT THE KARNATIC BOOK DEPOT PRESS,
1905.

REGISTERED N. B. 19.

ಶ್ರೀಗುರು ಕೊಟ್ಟೂರೇಶ್ವರ ಪ್ರಸನ್ನ.

ಪ್ರಸಿದ್ಧ ಪತ್ರಿಕೆಯು:

ಈ ಸಮಯದ ಎಂದಿಗೂ ಸಿಕ್ಕಲಾರದು!!!

ಜಾತಕಫಲದಾಯನಿ.

ಮಹನೀಯರಿರಾ; ನಿಮ್ಮ ಮಕ್ಕಳು ಹುಟ್ಟಿದ ವರ್ಷ ಮಾಸ ತಿಥಿ ವಾರ ನಕ್ಷತ್ರ) ಜನನ ಕಾಲಗಳನ್ನು ಚೆನ್ನಾಗಿ ಬರೆದು, ಕೆಳಗೆ ಸಹಿ ಮಾಡಿದ ನಮ್ಮ ಕಡೆಗಾಗಲಿ, ಬಳ್ಳಾರಿ ಜಿಲ್ಲಾ ಮಾಗಳ ಧರ್ಮಾರ್ಥ ಜ್ಯೋತಿಶ್ಶಾಸ್ತ್ರ ಪಾಠಶಾಲಾಧ್ಯಾಪಕರಾದ ಶ್ರೀಮದು ದ್ವಯರ್ಯ ಸಿದ್ಧಾಂತಿ ಗಂಗಾಧರಶಾಸ್ತ್ರಿಗಳವರ ಕಡೆಗಾಗಲಿ ಅಂಚೆಯಿಂದ ಕಳಿಸಿಕೊಡಿರಿ ಅಂದರೆ ನಾವು ಜನನಕಾಲ ಸ್ಥಿರಮಾಡಿಕೊಂಡು, ಜನನ ಕುಂಡಲ್ಲಿ ಲಗ್ನಸ್ಪಷ್ಟ, ಷಡ್ವರ್ಗಶುದ್ಧಿ, ಅಷ್ಟಂತ ಇಷ್ಟಕಾಲ ದಶಾಂತರ್ದಶ ಇವೇ ಮುಂತ್ರಾದ ಗಣಿತಗಳನ್ನು ಮಾಡಿಕೊಂಡು, ಜಾತಕಾರಿಷ್ಟವನ್ನು ಪರಿಶೋಧಿಸಿ, ಅದಕ್ಕೆ ತಕ್ಕ ಶಾಂತಿಕ್ರಮವನ್ನೂ ಸಂವತ್ಸರಫಲ ಮಾನಫಲ ತಿಥಿ ವಾರ ನಕ್ಷತ್ರ) ರಾಶಿಲಗ್ನಫಲ ಗ್ರಹಭಾವಫಲ ಮಾತಾಪಿತೃಗಳ ಪೀಡಾನಿರ್ಣಯ, ಜಾತಕಶಿಕ್ಷವಿಗೆ ಫಲಾನಿ ಸಂವತ್ಸರಗಳಲ್ಲಿ ಜರಷಕ್ಕೆ ಕಂಟಕ ವಿಷಯ ಆಯುರ್ದಾಯ ವಿಷಯ ಮುಂತಾದ ಇನ್ನೂ ಕೆಲವು ಫಲಗಳನ್ನೂ ವಿಚಾರಿಸಿ, ಜಾತಕ ಫಲದಾಯಿನೀ ಪತ್ರಿಕೆಯನ್ನು ಬರೆದು, ವಿ. ಪಿ. ಯಿಂದ ಕಳಿಸುತ್ತೇವೆ ಇದರ ಬೆಲೆ ತೀರ ಕಡಿಮೆ ಅಂದರೆ ವಿ. ಪಿ. ಖರ್ಚು ಸಹಿತ ರೂ. ೨೯೧೦ ಕಷ್ಟ ಕಡಿಮೆ ಬೆಲೆಗೆ ಯಾರೂ ಜಾತಕ ಬರೆದುಕೊಡರು. ಕಾರಣ ಇಷ್ಟವಿಲ್ಲದವರು ಬೇಗನೆ ನಿಮ್ಮ ಶಿಶುಗಳ ಜನನ ಟಿಪ್ಪಣಿ ಇಕ್ಕಿಸಿ ಕಳಿಸಬೇಕು.

ನಮ್ಮ ಕಡೆ ಪ್ರಭವಾದಿ ಪಂಚಾಂಗಗಳೂ ಹರಪನಹಳ್ಳಿ ಪಂಚಾಂಗ ಟ್ಟ. ಗಳೂ ಸಿಗುವವು.

ಶಿವಬಸಪ್ಪಾ ತಂದಪ್ಪಾ ನೆಲವಾಗಿಲ
ಸಾಕಿನ ಕಾಟೆಹಳ್ಳಿ, ಮ್ಹ. ಹೆಬ್ಬಳ್ಳಿ
ತಾ. ಕಾರಜಿಗಿ.
ವ್ಯವಸ್ಥಾಪಕ ಜ್ಯೋತಿಶಾಸ್ತ್ರ
ಪಾಠಶಾಲೆ ಮಾಗಳ
ಜಿಲ್ಲಾ ಬಳ್ಳಾರಿ.

ಗದಗ ತಾಲೂಕೆ ಸಿಂಗಟಾಲೂರ ಹಿರೇಮಠದ ಅವರಗುಂಡಯ್ಯನವರು, ಗುಡಗೇರಿ ಕಲ್ಮಠದ ಸ್ವಾಮಿನಬಸವಯ್ಯನವರು, ನೀರಲಗಿ ಹಿರೇಮಠದ ಶಿವಜೋಗಯ್ಯನವರು.

ಶಾಲಾ ಪತ್ರಿಕೆ.

ಪದ್ಯ.

ಶ್ರೀಯುವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಣಂ
ಜಯಸುತ್ಸಂ ಪ್ರತಿವಾಸದಾಬಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂವಿತ್ತಚಿನ್ತೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ;
ಜಯಮಿಂದೋಪಪತಿದ್ದ ವೇಳ್ವುದುಬುಧರಜ್ಞಾನಾಭಿವೃದ್ಧಿಪ್ರಯತ್ನಂ

ಪುಸ್ತಕ ೪೨.] ಎಪ್ರಿಲ ೧೯೦೬. [ಸಂಚಿಕೆ ೪.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ರಸಾಯನಶಾಸ್ತ್ರದ ಪ್ರಗತಿಯು—ಇಪ್ಪತ್ತನೇ ಶತಕವು ಸೃಷ್ಟಿಶೋಧದಲ್ಲಿ ಅಗ್ರೇಸರತ್ವವನ್ನು ಪಡೆಯ ಹವಣಿಸುತ್ತಿರುವಂತೆ ಕಾಣುವದು. ಮನುಷ್ಯನು ಅದ್ವೈತ ಮತದಂತೆ ಈಶ್ವರನೇ ಎಂದು ಗೊತ್ತಾಗುವದು. ಇದಲ್ಲದೆ ಕರಣೀಕರೆಸೊ ನರಕಾ ನಾರಾಯಣ ಹೋಗಾ, ಎಂಬ ಹಿಂದುಸ್ಥಾನಿಯ ಗಾದೆಯು ಕೂಡ ಮನುಷ್ಯನು ದೇವರಾಗಬಹುದೆಂದು ಹೇಳುವದು. ಈಶ್ವರನು ನಿರ್ಮಿಸಿದ ಸೃಷ್ಟಿಯಲ್ಲಿ ಭೂತರೀತಿಯರು ಐದು ತತ್ವಗಳನ್ನೂ ಪಾಶ್ಚಾತ್ಯರು ೬೩ (ಈಗ ಹೆಚ್ಚಿಗೆ ಶೋಧವಾಗಿವೆ ಆದರೂ ೧೦೦ ಕ್ಕೆ ಮಿಕ್ಕಿಲ್ಲ.) ಮೂಲ ತತ್ವಗಳನ್ನು ಕಂಡುಕೊಂಡಿರುವರು. ಸೃಷ್ಟ್ಯ ಪದಾರ್ಥಗಳೆಲ್ಲ ಇವುಗಳ ಮಿಶ್ರಣದಿಂದಲೇ ಉಂಟಾಗಿರುವವೆಂದು ಉಭಯಜನಾಂಗದವರ ಸಿದ್ಧಾಂತವುಂಟು. ಈ ಸಿದ್ಧಾಂತವನ್ನು ಅನುಸರಿಸಿ ಪಾಶ್ಚಾತ್ಯರು ಆಗಾಗ್ಗೆ ಹೊಸ ಹೊಸ ಶೋಧಗಳನ್ನು ಮಾಡಿ ನವೀನ ಪದಾರ್ಥವನ್ನು ಲೋಕದ ಎದುರಿನಲ್ಲಿ ಇಡತೊಡಗಿದ್ದಾರೆ. ಆ ಪದಾರ್ಥಗಳಿಂದ ಮನುಷ್ಯನ ಐಹಿಕ ಸುಖಕ್ಕೆ ಮಿತಿಮೀರಿ ಸಹಾಯ

ಮಾಗುತ್ತದೆ. ಇದೇ ಮೇರೆಗೆ ಈ ಶೋಧಕರು ಅವಿ ಶ್ರಾಂತ ಶ್ರಮದಿಂದ ತಮ್ಮ ಶೋಧವೆನ್ನು ಎಡೆಬಿಡದೆ ನಡಿಸಲು, ಸೃಷ್ಟಿಯೊಳಗಿನ ಯಾವತ್ತೂ ಪದಾರ್ಥಗಳನ್ನು ನವೀನವಾಗಿ ರಚಿಸಶಕ್ತರಾಗಬಹುದೆಂದು ಅನುಮಾನವಾಗುತ್ತದೆ. ಸದ್ಯಕ್ಕೆ ವಿದ್ಯುತ್, ಉಷ್ಣತೆಗಳಿಂದ ಸೃಷ್ಟ ಪದಾರ್ಥಗಳ ಪ್ರಭಕ್ಕರಣವನ್ನು ಮಾಡಿ, ಅವುಗಳೊಳಗಿನ ಘಟಕಗಳನ್ನು ಕಂಡುಕೊಳ್ಳ ಶಕ್ತರಾಗಿರುವರು. ಅದರಂತೆ ಅವೇ ಘಟಕಗಳನ್ನು ಪ್ರಮಾಣದಂತೆ ವಿಕೀಕರಣ ಮಾಡಿ ಪೊದಲಿನ ಸೃಷ್ಟ ಪದಾರ್ಥವನ್ನು ಸಿದ್ದಮಾಡಿಕೊಳ್ಳಲೂ ಸಮರ್ಥರಾಗಿರುವರು. ಇದರಿಂದ ಇವರು ಬರಬರುತ್ತ ಯಾವತ್ತೂ ಸೃಷ್ಟ ಪದಾಥಗಳನ್ನು ನಿರ್ಮಿಸಿಕೊಳ್ಳಬಹುದೋ ಎಂಬ ಜಿಜ್ಞಾಸೆಯು ಲೋಕದಲ್ಲಿ ತಲೆದೋರಲಾರಂಭಿಸಿದೆ. ಭರತಖಂಡದಲ್ಲಿದ್ದ ವಿಶ್ವಾಮಿತ್ರನೆಂಬ ಮುನಿಯು ಜೇತೊಂದು ಸೃಷ್ಟಿಯನ್ನೇ ನಿರ್ಮಾಣ ಮಾಡಿದ್ದನೆಂದು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದು ಹೇಗೇ ಇರಲಿ, ಭೌತಿಕಶಾಸ್ತ್ರದ ಶೋಧದಲ್ಲಿ ಪ್ರಸ್ತುತದ ಜನರು ಅನೇಕ ಹೊಸ ಶೋಧಗಳನ್ನು ನಡಿಸಿರುವದು ನಿಜವು. ಅವರು ಇದೇ ಕ್ರಮವನ್ನು ನಡಿಸಿದರೆ, ಪರಾತ್ಪರನಾದ ಸೃಷ್ಟಿಕರ್ತನ ಸಂಪೂರ್ಣವಾದಂಥ ಅಗಾಧ ಶಕ್ತಿಯನ್ನು ಪಡೆಯುತ್ತ ಪಡೆಯುತ್ತ, ಕಡೆಗೆ ಅವನೆನ್ನು ಸರಿಗಟ್ಟಬಹುದೆಂದು ತೋರುವದು.

ಆದರೂ ಪರಮೇಶ್ವರನ ಶಕ್ತಿಯು ಅತ್ಯಗಾಧವಾದದ್ದು; ಅದನ್ನು ಸರಿಗಟ್ಟುವದು ಮಾನವನ ಅಳವಲ್ಲವೆಂಬ ಸಿದ್ಧಾಂತಕ್ಕೆ ಸದ್ಯಕ್ಕಂತೂ ಬಾಧೆ ಬಂದಿಲ್ಲ. ಮುಂದೆಯೂ ಈ ಸಿದ್ಧಾಂತಕ್ಕೆ ಬಾಧೆ ಬರದೆಂದು ತರ್ಕಿಸಲಿಕ್ಕೆ ಅಸ್ಪದವುಂಟು. ಯಾಕೆಂದರೆ ಅವನು ನಿರ್ಮಿಸಿದ ಗಿಡಗಳ ಎಲೆಗಳ ಬಣ್ಣಗಳು ಎಷ್ಟು ವಿಧವಾಗಿವೆ! ಹಸುರೆಂದು ಸಾಮಾನ್ಯವಾಗಿ ಕರೆಯುವ ಎಲೆಗಳ ಬಣ್ಣದಲ್ಲಾದರೂ ಎಷ್ಟು ಭೇದವಿರುವದು! ಪಶುಪಕ್ಷಿ ಮುಂತಾದವುಗಳ ಬಣ್ಣಕ್ಕಂತೂ

ಮನುಷ್ಯನು ಹೆಸರಿಡಲಿಕ್ಕೆ ಇನ್ನೂ ಸಮರ್ಥನಾಗಲಿಲ್ಲ. ರುಚಿಯು ಹಾಡಾದರೂ ಹೀಗೇ. ನೋಡಿರಿ, ಸವತೀಕಾಯಿ ಶೀ, ಸಕ್ಕರಿ ಶೀ, ಉತ್ತತ್ತಿ, ಸೀ, ಮೂವಿನಹಣ್ಣು ಸೀ, ಎಂದು ಹೇಳುವೆವಲ್ಲ! ಇವೆಲ್ಲವ್ರಗಳ ರುಚಿಯು ಒಂದೇ ಇರುವದೋ? ಇದರಂತೆ ಅನೇಕ ಪದಾರ್ಥಗಳ ರುಚಿಯು ಭಿನ್ನ ಭಿನ್ನವಿರುವದು. ಮನುಷ್ಯನೇ ಮೊದಲಾದ ಪ್ರಾಣಿಗಳ ರೂಪ, ಸ್ವಭಾವ, ಧ್ವನಿ ಮುಂತಾದವುಗಳಲ್ಲಿ ತೋರುವ ಭಿನ್ನತ್ವಕ್ಕಂತೂ ನೆಲೆಯೇ ಇಲ್ಲ, ಏಕೀಕರಣದಿಂದ ಇಷ್ಟೆಲ್ಲ ರುಚಿಗಳನ್ನು, ಬಣ್ಣಗಳನ್ನು ನಿರ್ಮಿಸಲು ಮಾನವನು ಸಮರ್ಥವಾಗುವದು ನೆಮಗಂತೂ ಅಸಾಧ್ಯವೆನಿಸುವದು. ರೂಪಗುಣಗಳ ಮಾತಂತೂ ದೂರ ತೋಪಾಸ್ತವೇ ಸರಿ. ಆದರೂ ಈ ಮಾರ್ಗದಿಂದೆ ಅವನು ಮಾಡುವ ಶೋಧದಿಂದ ಇಷ್ಟಾರ್ಥವು ಕೈಗೂಡದಿದ್ದರೂ ಅವನ ಸಾಹಸವು ವರ್ಣನೀಯವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಇರಲಿ; ಇಂದು ಈ ವಿಚಾರವು ತಲೆದೋರಲಿಕ್ಕೆ ಕಾರಣವೇನೆಂದರೆ—ಇಂದಿನ ವರೆಗೆ ಆಗಿ ಹೋದ ರಸಾಯನಶಾಸ್ತ್ರಜ್ಞರು ಯಾವತ್ತು ಖನಿಜ ಪದಾರ್ಥಗಳನ್ನು ಪೃಥಕ್ಕರಿಸಿ, ಅದರೊಳಗಿನ ಘಟಕಗಳನ್ನು ಬೇರೆ ಬೇರೆ ಮಾಡಲು ಸಮರ್ಥರಾಗಿದ್ದಾರೆ. ಹಾಗೂ ಅವೇ ಘಟಕಗಳನ್ನು ಏಕೀರಿಸಿ ಮೂಲ ವಸ್ತುವನ್ನು ಉಂಟುಮಾಡಲೂ ಶಕ್ತರಾಗಿದ್ದಾರೆ. ಉದಾಹರಣಾರ್ಥವಾಗಿ ಉಪ್ಪು ನೋಡಿರಿ, ಇದರಲ್ಲಿ ಸೋಡಿಯಮ್ ಎಂಬ ಧಾತುವೂ, ಕ್ಲೋರಿನ್‌ವಾಯೂ ಇರುವದೆಂದು ವಿದ್ಯುತ್ತಿನ ಸಹಾಯದಿಂದ ಗೊತ್ತಾಗಿದೆ. ಅಂದರೆ ಉಪ್ಪಿನ ನೀರಲ್ಲಿ ವಿದ್ಯುತ್ತಿನ ಎರಡೂ ತಂತಿಗಳನ್ನು ಮುಳುಗಿಸಲು, ಒಂದು ತಂತಿಗೆ ಸೋಡಿಯಮ್ ಧಾತುವು ಅಂಟಿಕೊಳ್ಳುವದು. ಮತ್ತೊಂದರಿಂದ ಕ್ಲೋರಿನ್ ವಾಯುವು ಹೊರಡತೊಡಗುವದು. ಬಳಿಕ ಇವೆರಡನ್ನು ಏಕೀಕರಿಸಿದರೆ, ಉಪ್ಪು ಸಿದ್ಧವಾಗುವದು- ಇದರಂತೆ ನೀರನ್ನು

ಪ್ರಥಕ್ಕರಿಸುವದು, ಏಕೀಕರಿಸುವದು. ಹೀಗೆ ಯಾವತ್ತು ಖನಿಜ ಅಥವಾ ನಿರಿಂದ್ರಿಯ ಪದಾರ್ಥಗಳನ್ನು ಮನುಷ್ಯನು ಉಂಟು ಮಾಡಿಕೊಳ್ಳಲಿಕ್ಕೆ ಈ ಶಾಸ್ತ್ರದಿಂದ ಶಕ್ತನಾಗಿದ್ದಾನೆ. ಆದರೆ ಸೇಂದ್ರಿಯ ಪದಾರ್ಥಗಳನ್ನು ಪ್ರಥಕ್ಕರಿಸಲಿಕ್ಕೆ ಬರುವಂತೆ ಏಕೀಕರಿಸಲಿಕ್ಕೆ ಇವನಿಗೆ ಶಕ್ತಿ ಇಲ್ಲ. ಆದರೂ ಯೂರಿಯಾನ್ ಎಂಬ ಸೇಂದ್ರಿಯ ಒಡವೆಯನ್ನು ಪ್ರಥಕ್ಕರಿಸಲಿಕ್ಕೂ ಏಕೀಕರಿಸಲಿಕ್ಕೂ ಸಮರ್ಥನಾಗಿರುವನು ಈ ಒಡವೆಯು ಪ್ರಾಣಿಗಳ ಮೂತ್ರದಲ್ಲಿರುವದು ಅದರಂತೆ ನೀಲಿಯ ಪ್ರಥಕ್ಕರಣವೂ ಏಕೀಕರಣವೂ ಸಾಧ್ಯವಾಗಿದೆ. ಅದರಿಂದ ಕೃತ್ರಿಮನೀಲಿಯು ವಿಪುಲವಾಗಿ ಬಾಜಾರದಲ್ಲಿ ಖರಲಾರಂಭಿಸಿದೆ. ಮುಖ್ಯವಾಗಿ ಸೇಂದ್ರಿಯಗಳ ಘಟನೆಯಲ್ಲಿ ನಡೆಯುವ ಕಾರ್ಯವು ಗೊತ್ತಾದರೆ ಯಾವತ್ತು ಸೇಂದ್ರಿಯ ಪದಾರ್ಥಗಳನ್ನು ಕೂಡ ರಸಾಯನಶಾಸ್ತ್ರಜ್ಞರು ಸೃಷ್ಟಿಸಸಮರ್ಥರಾಗುವರು. ಮನುಷ್ಯನೇ ಮೊದಲಾದ ಪ್ರಾಣಿ ಶರೀರಗಳಲ್ಲಿ ಇರುವ ಮಿಶ್ರ ಪದಾರ್ಥಗಳನ್ನು ಬೇರೆ ಬೇರೆ ಮಾಡಲಿಕ್ಕೂ, ಬೇರ್ಪಟ್ಟ ಮೂಲತತ್ವಗಳಿಂದ ಮರಳಿ ಆಯಾ ಮಿಶ್ರ ಪದಾರ್ಥಗಳನ್ನು ರಚಿಸಲಿಕ್ಕೂ ಬಂದರೆ ಪ್ರಾಣಿ ಶರೀರವನ್ನು ಮಾಡಲಿಕ್ಕೆ ನಾವು ಶಕ್ತರಾಗಬಹುದು. ಈಗ ಸದ್ಯಕ್ಕೆ ಅಘಟಿತವಾಗಿ ತೋರುವ ಕಾರ್ಯವು ಮಾನವ ಯತ್ನದಿಂದ ಸಾಧ್ಯವಾದರೂ ಆ ಶರೀರಗಳಲ್ಲಿ ಚೈತನ್ಯವನ್ನುಂಟುಮಾಡುವದೊಂದು ಅತಿ ದುರ್ಘಟವೂ ಮಹತ್ವವೂ ಆದ ಕಾರ್ಯವು ಇನ್ನೂ ಸಾಧಿಸತಕ್ಕದ್ದಿರುವದು. ಈ ಅಸಾಧ್ಯ ಕಾರ್ಯವು ಕೂಡ ಕೈಗೂಡುವ ಸುಯೋಗವು ಪ್ರಾಪ್ತವಾಗಿದೆ.

ರೇಡಿಯಮ್ ಎಂಬದೊಂದು ಹೊಸ ಪದಾರ್ಥದ ಶೋಧವಾಗಿರುವದನ್ನೂ ಅದರ ಗುಣಧರ್ಮಗಳನ್ನೂ ಕೆಲವು ದಿವಸಗಳ ಪೂರ್ವದಲ್ಲಿ ಶಾಲಾಪತ್ರಿಕೆಯೊಳಗೆ ಉಲ್ಲೇಖಿಸಿರುವೆವು. ಈ ಧಾತುವು ಅತಿಶಯವಾದ ಪ್ರಕಾಶವನ್ನು ಹರವುತ್ತದೆ. ಆದರೂ ಇದರ ಪರಿಮಾಣದಲ್ಲಿ ಹೆಚ್ಚು ಕಡಿಮೆ

ಯೋಗುವದಿಲ್ಲ. ಮಾಂಸವನ್ನು ನೀರಲ್ಲಿ ಕೆಲವೊತ್ತು ಕುದಿಸಿ ಆ ನೀರನ್ನು ಬಿಂದು ಕಾಜೆನ ಪಾತ್ರೆಯಲ್ಲಿ ತುಂಬಿ ಅದರ ಬಾಯಿಕಟ್ಟಿ ಎಷ್ಟು ದಿವಸವಿಟ್ಟರೂ ಅದರಲ್ಲಿ ಹುಳುಗಳು ಉತ್ಪನ್ನವಾಗುವದಿಲ್ಲ. ಆದರೆ ಅದೇ ನೀರಲ್ಲಿ ಕೇಡಿಯುಮ್ ಧಾತುವು ಮಿಶ್ರವಾದ ಪದಾರ್ಥವನ್ನು ತುಸು ಕೂಡಿಸಿ ಇಡಲು, ನಾಲ್ಕೈಂಟು ದಿವಸಗಳಲ್ಲಿ ಆ ರಸದೊಳಗೆ ಅನೇಕ ಸೂಕ್ಷ್ಮ ಜೀವಿಗಳು ಉಂಟಾಗುವವು. ಇದರಿಂದ ಕೇಡಿಯುಮ್ ಧಾತುವು ಜೈತನ್ಯೋತ್ಪಾದಕಗುಣವುಳ್ಳದ್ದೆಂದು ಗೊತ್ತಾಗಿರುವದು. ಆದ್ದರಿಂದ ಇನ್ನು ಮೇಲೆ ರಸಾಯನಶಾಸ್ತ್ರಜ್ಞರು ರಕ್ತ, ಮಾಂಸ, ಮಜ್ಜಾ, ಮೇಧ, ಅಸ್ಥಿ, ಸ್ನಾಯು, ಮುಂತಾದ ಶರೀರದೊಳಗಿನ ಸಪ್ತ ಧಾತುಗಳನ್ನು ರಸಾಯನ ಕೃತಿಯಿಂದ ನಿರ್ಮಿಸಿಕೊಂಡು, ಮೊದಲು ಅಚೇತನವಾದ ಬಿಂದು ಕಳೇವರವನ್ನು ಸಿದ್ಧಮಾಡಿ, ಬಳಿಕ ಅದರಲ್ಲಿ ಕೇಡಿಯುಮ್ ಧಾತುವಿನ ಯೋಗದಿಂದ ಜೀವಕಳೆಯನ್ನುಂಟು ಮಾಡಿಕೊಳ್ಳಬಹುದೆಂದು ತರ್ಕಿಸಲಿಕ್ಕೆ ಆಸ್ಪದವುಂಟು.

ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರಾದ ಮೆಹರ್ಬಾನ ಸೆಲ್ಬಿಸಾಹೇಬರನ್ನು ಮುಂಬಯಿ ವಿಶ್ವವಿದ್ಯಾಲಯದ ವೈಸ ಚಾನ್ಸಲರರನ್ನು ನಿಯಮಿಸಿದ್ದಾರೆ.

ದಕ್ಷಿಣಭಾಗದಲ್ಲಿ ಮೊದಲು ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಖ್ಯಾತಿಯನ್ನು ಪಡೆದಂಥ, ತರುವಾಯ ವರ್ಹಾಡ ಪ್ರಾಂತದ ಡಾಯರೆಕ್ಟರರಾಗಿ ಪೆನೆಶನ್ ಹೊಂದಿ ಪುಣೆಯಲ್ಲಿ ಸುಖರೂಪದಿಂದ ಇರುತ್ತಿದ್ದಂಥ ರಾವಬಹದ್ದೂರ ನೀತಾರಾಮ ವಿಶ್ವನಾಥ ಪಟವರ್ಧನಸಾಹೇಬರು, ಎಲ್ಫಿನಿಸ್ಟನ್‌ರೆಂಬ ಮುಂಬಯಿ ಗವರ್ನರರ ಸ್ಮಾರಕಕ್ಕಾಗಿ ಏಲಿಗೊಳಿಸಿದ ಎಲ್ಫಿನಿಸ್ಟನ್ ಕಾಲೇಜದ ಐವತ್ತನೇ ವರುಷದ ಜುಬಲಿಯ ಉತ್ಸವದ ಕಾಲಕ್ಕೆ ಆ ಕಾಲೇಜದ

ವಿದ್ಯಾರ್ಥಿಗಳಂಬ ಅಭಿಮಾನದಿಂದ ಬಂದು, ಇಬ್ಬರು ಬ್ರಾಹ್ಮಣ ವಿದ್ಯಾರ್ಥಿಗಳ ಉಚ್ಚಶಿಕ್ಷಣಕ್ಕೆ ಅನುಕೂಲವಾಗಬೇಕೆಂದು ಹನ್ನೆರಡುಸಾವಿರ ರೂಪಾಯಿಗಳನ್ನು ಯುನಿವರ್ಸಿಟಿಗೆ ಕಾಣಿಕೆಯಾಗಿ ಕೊಟ್ಟರು. ಕಲಿತ ಸಾಲೆಯ ಅಭಿಮಾನವನ್ನು ಈ ಸಂಗತಿಯೂ, ಈ ಸದ್ಗೃಹಸ್ಥರೂ ಬಳಿತಾಗಿ ವ್ಯಕ್ತಗೊಳಿಸಿದರೆಂದು ಬರೆಯಲಿಕ್ಕೆ ತುಂಬಾ ಸಮಾಧಾನವೆನಿಸುವದು.

ಅಂಬ್ಲೇಂಡರಾವಂಥ ಹತ್ತು ರೂಪಾಯಿಗಳೊಳಗಿನ ಸಂಬಳವುಳ್ಳವಂಥ ಅಧ್ಯಾಪಕರು ವಾರ್ಧಿಕ್ಯದ ಮೂಲಕವಾಗಿ ಕೆಲಸವನ್ನು ಬಿಡಲು, ಸರಕಾರದಿಂದ ದಯಾರೂಪವಾಗಿ ಕಿಂಚಿತ್ತು ಹಣವು ದೊರೆಯುವದು ಎಲ್ಲರಿಗೂ ಗೊತ್ತುಂಟು. ಆ ಹಣವು ಅವರ ಐರು ಮೂರು ತಿಂಗಳ ಅಥವಾ ಹೆಚ್ಚಾಗಿ ಬಿಡದು ವರುಷದ ಸಂಬಳದ ಬಳಗೆ ಇರುತ್ತಿತ್ತು. ಇದರಿಂದ ಅವರ ಹಾನಿಯು ಹೆಚ್ಚಾಗುವದೆಂದು ತಿಳಿದು ಬೆಳಗಾವಿಯ ಮ್ಯುನಿಸಿಪಾಲಿಟಿಯವರು ಎಷ್ಟು ರೂಪಾಯಿ ಸಂಬಳ ಪಡೆಯುವವನೇ (ಅಂದರೆ ಹತ್ತು ರೂಪಾಯಿಒಳಗೆಂಬ ಅರ್ಥ) ಆಗಲಿ ಅವನು ವಾರ್ಧಿಕ್ಯದ ಮೂಲಕ ಕೆಲಸಕ್ಕೆ ಅಯೋಗ್ಯನಾಗಲು, ಗ್ರಾಚ್ಯುಟೆ ಎಂಬ ಕಿಂಚಿತ್ ಹಣದ ಸಹಾಯಕ್ಕೆ ಬದಲಾಗಿ ನಾಲ್ಕು ರೂಪಾಯಿ ಪೆನ್‌ಶನ್ ಕೊಡಬೇಕೆಂದು ಆಲೋಚಿಸಿದ್ದಾರೆ. ಇದು ಅಭಿನಂದನೀಯ ಸಂಗತಿಯೆಂದು ಬಿಡಿದು ಹೇಳುವ ಕಾರಣವಿಲ್ಲ.

ಇಷ್ಟು ದಿವಸ ಇಂಗ್ಲಂಡದ ಪಾರ್ಲಮೆಂಟಿನ ಸಭಾಸದರಿಗೆ ನಿಯಮಿತವಾದ ಸಂಬಳವಾಗಲಿ, ಉಚಿತವಾಗಲಿ ಸಿಗುತ್ತಿದ್ದಿಲ್ಲ. ಆದರೆ ಈ ಸಾರೆಯ ಮಂತ್ರಿಮಂಡಲದವರು ಒಬ್ಬೊಬ್ಬ ಸಭಾಸದನಿಗೆ ವರುಷವೊಂದಕ್ಕೆ ಮು

ನ್ನೂರು ಪೌಂಡುಗಳು ದೊರೆಯಬೇಕೆಂದು ಸೂಚಿಸಿದ್ದಕ್ಕೆ ಯಾವತ್ತು ಬಣದವರೂ ಒಪ್ಪಿಗೆಯನ್ನು ಕೊಡುವ ಹವಣಿಕೆಯುಳ್ಳವರಾಗಿರುವರು.

KINDER GARTEN.

ಕಿಂಡರಗಾರ್ಟನ್.

೪ನೇ ಕರಣ.

ಫ್ರೋಬೆಲ್ಲನ ಮೂರು ಕರಣಗಳನ್ನು ಕೆಲವು ದಿವಸಗಳ ಕೆಳಗೆ ಶಾಲಾಪತ್ರಕದಲ್ಲಿ ವಿವರಿಸಿರುವದು ವಾಚಕರಿಗೆ ಗೊತ್ತಿರುವದು. ಇಂದು ನಾಲ್ಕನೇ ಕರಣದ ದಿಗ್ದರ್ಶನವನ್ನು ಇದರಡಿಯಲ್ಲಿ ಮಾಡಿರುತ್ತೇವೆ.

ಮೂರನೇ ಕರಣದ ಪೆಟ್ಟಿಗೆಯಂತೆಯೇ ಈ ನಾಲ್ಕನೇ ಕರಣದ್ದಾದರೂ ಹಿಂದು ಪೆಟ್ಟಿಗೆಗಿಂತೀ ಉಂಟು ಈ ಪೆಟ್ಟಿಗೆಯಲ್ಲಿ ಎರಡು ಇಂಚಿನದೊಂದು ಘನದಲ್ಲಿ ಮಾಡಿದ ಎಂಟು ತುಂಡುಗಳು ಇರುವವು. ಈ ತುಂಡುಗಳನ್ನು ಮಾಡಿದ ಕ್ರಮವು ಹ್ಯಾಗಂದರೆ—ಮೊದಲು ಘನದಲ್ಲಿ ನಟ್ಟನಡುವೆ ಕರಗಸವಿಟ್ಟು ಕೊರೆದು ಎರಡು ಸಮ ತುಂಡುಗಳನ್ನು ಮಾಡುವರು. ಬಳಿಕ ಅರ್ಧ ಅರ್ಧ ಇಂಚಿನ ಮೇಲೆ ಅಡ್ಡ ಅಂದರೆ ಸ್ಥಿತಿಜ ಸಮಾಂತರ ಪಾತಾಳಿಯಲ್ಲಿ ಮೂರು ಕೊರೆತಗಳನ್ನು ಕೊರೆಯಲು, ಹಿಂದು ಇಂಚು ಅಗಲ ಎರಡು ಇಂಚು ಉದ್ದ ಅರ್ಧ ಇಂಚು ಪಿಂಡುಳ್ಳಂಥ ಎಂಟು ತುಂಡುಗಳಾಗುವವು. ಇವು ಇಟ್ಟಂಗಿಯನ್ನು ಹೋಲುವ ಕಾರಣ ನಾವು ಈ ತುಂಡುಗಳಿಗೆ ಇಟ್ಟಂಗಿಗಳೆಂತಲೇ ಸಂಜ್ಞೋಧಿಸೋಣ.

ಮೂರನೇ ಕರಣದ ಕಟ್ಟಿಗೆಯ ತುಂಡುಗಳು ಉದ್ದ ಅಗಲ, ಪಿಂಡಗಳಲ್ಲಿ ಸಮಾನವಿರುತ್ತವೆಂಬದು ನಿಮಗೆ ಗೊತ್ತುಂಟು. ಆದರೆ ಈ ಕರಣದ ತುಂಡುಗಳು ಹಾಗಿರುವದಿಲ್ಲ. ತುಂಡುಗಳ ಪಿಂಡದ ಇಮ್ಮಡಿ ಅಗಲವೂ, ಅಗಲದ ಇಮ್ಮಡಿ ಉದ್ದವೂ ಇರುವದು. ಇದರಿಂದ ಈ ಕರಣದ

ಲ್ಲಿ ಹೊಸಬಗೆಯ ಆಕೃತಿಯು ಅಂದರೆ ಕಾಟಕೋನೆ ಚತು
ಷ್ಕೋನಾ ಕೃತಿಯನ್ನು ಹುಡುಗರಿಗೆ ಗೊತ್ತು ಮಾಡಿಕೊ
ಡಲಿಕ್ಕೆ ಅನುಕೂಲವಾಗುವದು. ಇದಲ್ಲದೆ ಉದ್ದ, ಅಗಲ
ಎತ್ತರ ಅಥವಾ ದಪ್ಪ ಮುಂತಾದ ಪದಾರ್ಥದ ಧರ್ಮಗಳ
ನ್ನು ತಿಳಿಸಲಿಕ್ಕೂ ಅನುಕೂಲವಾಗುವದು. ಸಕೃದ್ದರ್ಶನ
ಕ್ಕೆ ಆಕಾರದಿಂದ ಬಿಂದನ್ನೊಂದು ಹೋಲುವ ೩ನೇ, ೪ನೇ
ಕರಣಗಳ ಫಲಗಳು ವಿದ್ಯಾರ್ಥಿಗಳ ಕಣ್ಣಿಗೆ ಬೀಳಲು ಅ
ವರ ತುಲನಾ ಶಕ್ತಿಯು ಬೆಳೆಯು ತೊಡಗುವದು.

ಈ ಇಟ್ಟಂಗಿಗಳು ಉದ್ದಗಲಗಳಲ್ಲಿ ಸರಿಯಾಗಿರುವದಿ
ಲ್ಲಾದ್ದರಿಂದ ೩ನೇ ಕರಣದ ತುಂಡುಗಳಿಂದ ರಚಿಸುವ ಆ
ಕೃತಿಗಳಿಗಿಂತ ಹೆಚ್ಚು ಚೆಂದವಾದ ತರತರದ ಆಕೃತಿಗಳ
ನ್ನು ಈ ಕರಣದ ತುಂಡುಗಳಿಂದ ರಚಿಸಿ ವಿದ್ಯಾರ್ಥಿಗಳು
ತಮ್ಮ ಕುತೂಹಲವನ್ನು ಪೂರ್ಣ ಮಾಡಿಕೊಳ್ಳಬಹುದು.
ಇದಲ್ಲದೆ ಈ ಕರಣದಿಂದ ಆಜ್ಞಾಧಾರಕತ್ವ, ಅಚ್ಚು ಕಟ್ಟು
ತನ, ಓರಣ, ಏಕಾಗ್ರತೆ ಮುಂತಾದ ಸದ್ಗುಣಗಳನ್ನು ವಿ
ದ್ಯಾರ್ಥಿಗಳಲ್ಲಿ ನೆಲೆಗೊಳಿಸಲಿಕ್ಕೆ ಅನುಕೂಲವಾಗುವದು.

ಈ ಕರಣದಲ್ಲಿಯ ಪ್ರತಿ ಬಿಂದು ಪಾಠವನ್ನು ಕಲಿಸು
ತ್ತಿರುವಾಗ ಶಿಕ್ಷಕನು ೩ನೇ ಕರಣದಲ್ಲಿ ಹೇಳಿದಂತೆ ಎಲ್ಲ
ಹುಡುಗರಿಂದ ಕಿಟ್ಟಗೆಗಳನ್ನು ತೆಗೆದುಕೊಳ್ಳಲಿಕ್ಕೆ ಹಚ್ಚಬೇಕು. ಗೀತವನ್ನು ಅನ್ನುತ್ತ ಅದರ ಮುಚ್ಚಳವನ್ನು ತೆ
ರಿಸಬೇಕು. ಹಲಿಗೆಯ ಮೇಲೆ ಕೊರೆದ ಚೌರಸದ ಸಡು
ವೆ ಈ ಕರಣದ ಫಲವನ್ನು ಅದರಲ್ಲಿ ಉದ್ದಕ್ಕೂ ಅಡ್ಡವಾ
ಗಿಯೂ ವಿಭಾಗಿಸಲಿಕ್ಕೆ ಬರುವಂತೆ ಇಡಿಸಬೇಕು

೧ ಮೂರನೇ ಕರಣದಲ್ಲಿಯ ಫಲಕ್ಕೂ ಇದಕ್ಕೂ ತೂಗಿ
ನೋಡೋಣಾ

೨ ಫಲ ಇಟ್ಟಂಗಿಗಳ ತುಲನೆಯು (೩)

೩ ಉದ್ದ, ಅಗಲ, ಪಿಂಡ ಮೊದಲಾದ ಧರ್ಮಗಳ ಜ್ಞಾನೆ.

೪ ವ್ಯವಹಾರದೊಳಗಿನ ಪದಾರ್ಥಗಳ ಆಕೃತಿಗಳು.

೫ ಸೌಂದರ್ಯಯುಕ್ತ ಆಕೃತಿಗಳು

೬ ತ್ರಿನೇ, ೪ನೇ ಕರಣಗಳ ತುಂಡುಗಳ ಮಿಶ್ರಣದಿಂದ ಆ ಕೃತಿಗಳನ್ನು ರಚಿಸೋಣ.

೭ ಗಣಿತ ವಿಷಯಕ ಜ್ಞಾನ.

ಈ ಮೇರೆಗೆ ಈ ಕರಣದಿಂದ ವಿಳು ಬಗದು ಜ್ಞಾನವನ್ನು ವಿದ್ಯಾರ್ಥಿಗಳಿಗೆ ಮಾಡಿ ಕೊಡಲಿಕ್ಕೆ ಬರುವದು. ಇನ್ನು ಮೊದಲನೇ ಭಾಗವನ್ನು ಕೂರಿತು ವಿವರಿಸುವಾ.

ತ್ರಿನೇ ಕರಣದ ಘನವನ್ನು ೪ನೇ ಕರಣದ ಘನವನ್ನು ಹುಡುಗರ ಮುಂದೆ ಇಟ್ಟು ಅದನ್ನು ಲಕ್ಷಪೂರ್ವಕವಾಗಿ ನೋಡಲಿಕ್ಕೆ ಅವರಿಗೆ ಹೇಳಿ—ಮಕ್ಕಳೇ, ಈ ಎರಡು ಘನಗಳ ಆಕಾರದಲ್ಲಿ ಹೆಚ್ಚು ಕಡಿಮೆಯುಂಟೋ? ಎಂದು ಕೇಳಲಾಗಿ, ಹುಡುಗರು ಇಲ್ಲವೆಂದು ಸಹಜವಾಗಿ ಉತ್ತರಕೊಡಬಹುದು. ಬಳಿಕ ಈ ಘನಗಳನ್ನು ಕೊಯ್ದು ಪ್ರಕಾರದಲ್ಲೇನಾದರೂ ಭೇದ ತೋರುವದೋ? ಎಂದು ಕೇಳಲು, ಹೌದೆಂದು ಹುಡುಗರು ಹೇಳುವರು. ಆ ಭೇದವು ಯಾವದೆಂದು ಪುನಃ ಮಾಸ್ತರನು ಪ್ರಶ್ನ ಮಾಡಲು, ವಿದ್ಯಾರ್ಥಿಗಳು ತ್ರಿನೇ ಕರಣದ ಘನವನ್ನು ಉದ್ದಗಲ, ಪಿಂಡ ಈ ಮೂರು ಬದಿಯಲ್ಲಿ ಸಮಾಂತರವಾದ ಒಂದೊಂದು ಕೊರೆತದಿಂದ ವಿಭಾಗಿಸಿರುವರು. ೪ನೇ ಕರಣದ ಘನದಲ್ಲಿ ಒಂದೇ ಸಾರೆ ಉದ್ದಕ್ಕೂ ಮೂರು ಸಾರೆ ಅಡ್ಡವಾಗಿಯೂ ಕೊರೆದಿರುವರು ಎಂದು ಹೇಳುವರು. ಈ ಸಂಗತಿಯನ್ನು ಹುಡುಗರು ಬರೇ ಬಾಯಿಂದ ಹೇಳದೆ, ಆಯಾ ನಿಟ್ಟಿನಲ್ಲಿ ಕೊರೆದ ಕೊರತಗಳನ್ನು ಕೈಮುಟ್ಟಿ ತೋರುತ್ತ ವಿವರಿಸಲಿಕ್ಕೆ ಶಕ್ತರಾಗುವಂತೆ ಪ್ರಶ್ನಗಳನ್ನು ಕೇಳಿ ಉತ್ತರ ತಕ್ಕೊಳ್ಳುವದು ಲೇಸು. ತ್ರಿನೇ ಕರಣದ ಘನವನ್ನು ಹೀಗೆ ಕೊರೆದದರಿಂದ ಅದರಲ್ಲಿ ಘನಾಕಾರದ ಎಂಟು ತುಂಡುಗಳಾಗಿರುತ್ತವೆಂತಲೂ ೪ನೇ ಕರಣದ ಘನವನ್ನು ಈ ಬಗೆಯಾಗಿ ಕೊರೆದದರಿಂದ ಇಟ್ಟಂಗಿಯ ಆಕಾರದ ಎಂಟು ತುಂಡುಗಳಾಗಿರುತ್ತವೆಂತಲೂ ಆಯಾ ಮಾದರಿಯ ತುಂಡುಗಳನ್ನು ತೋರಿಸಿ, ಎಣಿಸಿ ಹುಡುಗರಿಗೆ ಮನಗಾಣಿಸಿ ಕೊ

ಡಬೇಕು. ಬಳಿಕ ಮೂರನೇ ಕರಣದ ಘನವನ್ನೂ ೪ನೇ ಕರಣದ ಘನವನ್ನೂ ಮೇಲೆ ವರ್ಣಿಸಿದಂತೆ ಹುಡುಗರಿಂದ ಪ್ರತ್ಯಕ್ಷವಾಗಿ ವಿಭಾಗ ಮಾಡಿಸಬೇಕು. ಬಳಿಕ ಆ ತುಂ ಡುಗಳ ಮೇಲ್ಮೈ, ಅಂಚು, ಮೂಲೆ ಮುಂತಾದವುಗಳಲ್ಲಿ ತೋರಿ ಬರುವ ಸಾಮ್ಯ ವೈಷಮ್ಯಗಳನ್ನು ಕಲಿಸಬೇಕು. ಬ ಳಿಕ ಪ್ರಶ್ನೆ ಮಾಡಿ ಎಡೂ ಘನಗಳಲ್ಲಿರುವ ಸಾಮ್ಯವನ್ನು ಮನಗಾಣಿಸಿ ಕೊಡಬೇಕು.

ಘನ ಮತ್ತು ಇಟ್ಟಂಗಿಗಳ ತುಲನೆಯು:— ೪ನೇ ಕ ಣದೊಳಗಿನ ಒಂದು ತುಂಡನ್ನೂ, ೪ನೇ ಕರಣದೊಳಗಿನ ಒಂದು ಇಟ್ಟಂಗಿಯನ್ನು ಹುಡುಗರ ಮುಂದೆ ಇಟ್ಟು, ಅವ ಡರ ಮೇಲ್ಮೈಯಲ್ಲಿ ಕಂಡು ಬರುವ ವೈಷಮ್ಯವನ್ನು ಕು ತು ಚರ್ಚಿಸಬೇಕು. ಘನದ ಮೇಲ್ಮೈಗಳೆಲ್ಲ ಒಂದೇ ಮಾನವಾಗಿರುವಂತೆ ಇಟ್ಟಂಗಿಯ ಆರು ಮೈಗಳು ಸರಿಯ ಗಿರುವವೋ? ಎಂದು ಕೇಳಲು, ಹುಡುಗರು ಇಲ್ಲವೆಂದ ಸಹಜವಾಗಿ ಉತ್ತರ ಹೇಳುವರು. ಬಳಿಕ, ಹಾಗಾದರೆ ವುಗಳ ಮೈಗಳಲ್ಲಿ ತೋರುವ ವ್ಯತ್ಯಾಸವನ್ನು ಹೇಳು ಎ

ಲು, ಇಟ್ಟಂಗಿಯ ಕೆಲವು ಮೈಗಳು ದೊಡ್ಡವಾಗಿಯೂ, ಕೆ ಲವು ಸಣ್ಣವಾಗಿಯೂ ಇರುತ್ತವೆಂದು ವಿದ್ಯಾರ್ಥಿಗಳು ಉ ತ್ತರ ಕೊಡುವರು. ಬಳಿಕ ಅಧ್ಯಾಪಕನು ಇಟ್ಟಂಗಿಯ ಹೆ ಚ್ಚು ಅಗಲವಾದ ಮೈಗಳು ಎಷ್ಟು ಉಂಟು? ಎಂದು ಕೇಳ ಬೇಕು. ಹುಡುಗರು ಸಹಜವಾಗಿ ಎರಡು ಎಂದು ಹೇಳು ವರು. ಬಳಿಕ ಈ ಇಟ್ಟಂಗಿಯ ವಿಸ್ತಾರವಾದ ಮೈಮೇ ಲೆ, ಇಗೋ, ಈ ಘನದ ತುಂಡುಗಳು ಎಷ್ಟು ಹಿಡಿಸುತ್ತವೆ ನೋಡು ಎಂದು ಹುಡುಗರನ್ನು ಕೇಳಲು ಆ ಹುಡುಗರು ಪ್ರ ತ್ಯಕ್ಷವಾಗಿ ಘನಗಳನ್ನು ಇಟ್ಟು ಮನಗಂಡು ಎರಡು ಎ ದು ಹೇಳುವರು. ಬಳಿಕ ಮಕ್ಕಳೇ, ಇಟ್ಟಂಗಿಯಲ್ಲಿ ತೋ ರುತ್ತಿಯಾದ ಮೈಗಳು ಎಷ್ಟಿರುವವು? ನೋಡಿ ಹೇಳಿರಿ. ಎ ನ್ನು ಕೇಳಲು, ಅವರು ಎರಡೆಂದು ಹೇಳುವರು. ಈ ಹತ್

ಯಾದ ಮೇಲ್ಮೈಗಳಿಗೆ ಇಟ್ಟಂಗಿಯ ತುದಿಗಳಿನ್ನುವರೆಂದು ಶಿಕ್ಷಕನು ಹೇಳಬೇಕು. ಬಳಿಕ ಬಾಲಕರೇ, ಇಟ್ಟಂಗಿಗೆ ತೀರ ಹರವಾದ ಮೈಗಳು ಎರಡಾದವು. ತೀರ ಹತ್ತಿಯಾದ ಮೈಗಳು ಎರಡಾದವು. ಇನ್ನು ಎಷ್ಟು ಮೈಗಳು ಉಳಿದವು ಹೇಳಿರಿ, ಎಂದು ಕೇಳಲು; ಅವರು ಎರಡೆಂದು ಸಹಜವಾಗಿ ಹೇಳುವರು. ಬಳಿಕ ಮಾಸ್ತರನು ಈ ಮೈಗಳು ಬಹಳ ಹರವಾಗಿಯೂ ಇಲ್ಲ. ತೀರ ಹತ್ತಿಯಾಗಿಯೂ ಇಲ್ಲ. ಆದ್ದರಿಂದ ಇವುಗಳಿಗೆ ಸಾಧಾರಣ ಮೇಲ್ಮೈಗಳೆನ್ನುವರು. ಇವೇ ಇಟ್ಟಂಗಿಯ ಬದಿಗಳು. ಎಂದು ಹೇಳಿ ಹಾಗಾದರೆ ಇಟ್ಟಂಗಿಗೆ ಒಟ್ಟಿಗೆ ಎಷ್ಟು ಮೈಗಳುಂಟು? ಎಂದು ಪ್ರಶ್ನ ಮಾಡಿ ಅದರಿಂದ ಒಟ್ಟಿಗೆ ಆರು ಮೇಲ್ಮೈಗಳಿಂತಲೂ ಅವುಗಳಲ್ಲಿ ಎರಡು ತೀರ ಹರವಾಗಿರುತ್ತವೆಂತಲೂ, ಎರಡು ತೀರ ಹೆತ್ತಿಯಾಗಿರುತ್ತವೆಂತಲೂ, ಎರಡು ಮಧ್ಯಮ ಮಾನದವಿರುತ್ತವೆಂತಲೂ ಸೂಚಕ ಪ್ರಶ್ನಗಳಿಂದ ಉತ್ತರ ತೆಗೆದುಕೊಳ್ಳಬೇಕು ಹಾಗೂ ಆಯಾ ಮೇಲ್ಮೈಗಳನ್ನು ವಿದ್ಯಾರ್ಥಿಗಳು ತಪ್ಪದೆ ತೋರಿಸುವಂತೆ ಎಚ್ಚರ ಪಡಬೇಕು.

ಉದ್ದ, ಅಗಲ, ಪಿಂಡ ಮುಂತಾದ ಧರ್ಮಗಳ ಬಗ್ಗೆ:— ಒಂದು ಇಟ್ಟಂಗಿಯನ್ನು ಹುಡುಗರ ಮುಂದೆ ಇಟ್ಟು ಇದರ ಉದ್ದ ಅಂಚನ್ನು ತೋರಿಸೆಂದು ಕೇಳಬೇಕು. ಹುಡುಗರು ತೋರಿಸಲು, ಈ ಬದಿಯು ಅಳತೆಯೇ ಉದ್ದವನ್ನು ತೋರಿಸುತ್ತದೆಂತಲೂ, ತಳದಿಂದ ತಲೆಯವರೆಗಿನ ಅಂತರವು ಎತ್ತರವನ್ನು ತೋರಿಸುತ್ತದೆಂತಲೂ ತಿಳಿಸಿ ಕೊಡಬೇಕು. ಅಗಲದ ಬಗ್ಗೆಯಾದರೂ ಇದೇ ಮೇರೆಗೆ ಸೂಚಕ ಪ್ರಶ್ನಗಳಿಂದ ಹುಡುಗರು ತಿಳುಕೊಳ್ಳುವಂತೆ ಮಾಡಿಬೇಕು ಫಲಕ, ಇಟ್ಟಂಗ, ಮೇಜು, ಪುಸ್ತಕ ಮುಂತಾದವುಗಳ ಉದ್ದ, ಅಗಲ, ಎತ್ತರಗಳನ್ನು ಹುಡುಗರಿಗೆ ತೋರಿಸಲಿಕ್ಕೆ ಹೇಳಬೇಕು. ಫಲಕದ ಉದ್ದ, ಅಗಲ, ಎತ್ತರಗಳು ಒಂದೇ ಅಳತೆಯವಿರುವಂತೆ ಇಟ್ಟಂಗಿಯ ಉದ್ದ, ಅಗಲ, ಎತ್ತರಗ

ಳು ಸರಿಯಾಗಿರುವದಿಲ್ಲೆಂಬದನ್ನು ಹುಡುಗರಿಗೆ ಮನಗಾಣಿಸಿ ಕೊಡಬೇಕು. ಇದೇ ಕಾರಣದಿಂದ ಇಟ್ಟಂಗಿಯು ಆಕಾರಕ್ಕೆ ಕಾಟಕೋನ ಚೌಕೋನಾ ಕೃತಿ ಅಥವಾ ಆಯತ ತಾಕೃತಿ ಎಂದು ಅನ್ನುತ್ತಾರೆಂಬದನ್ನು ಹೇಳಬೇಕು. ಘನದ ಮೇಲ್ಮೈಗಳೆಲ್ಲ ಚೌಕಾಕೃತಿಯಾಗಿರುವಂತೆ ಇಟ್ಟಂಗಿಯ ಮೈಗಳೆಲ್ಲ ಆಯತಾಕೃತಿಗಳಾಗಿರುತ್ತವೆಂದು ಹೇಳಬೇಕು. ಆಯತಗಳಲ್ಲಿ ಎದುರು ಬದರಿನ ಬದಿಗಳು ಸರಿಯಾಗಿರುತ್ತವಂತಲೂ, ಕೋನಗಳೆಲ್ಲ ಕಾಟಕೋನಗಳಿರುತ್ತವೆಂತಲೂ ಹೇಳಬಹುದು. ಇಟ್ಟಂಗಿಯ ಹರವು ಮೈಯ ಮೇಲೆ ತೀನೇ ಕರಣದ ಘನದ ಎರಡು ತುಂಡುಗಳು ತಿಂಡಿಸುವದರಿಂದ ಆ ಇಟ್ಟಂಗಿಯು ಎರಡು ಇಂಚು ಉದ್ದಾಗಿಯೂ ಬಂದು ಇಂಚು ಅಗಲಾಗಿಯೂ ಇರುತ್ತದೆಂಬದನ್ನೂ ಎರಡು ಇಟ್ಟಂಗಿಗಳನ್ನು ಬಂದರ ಮೇಲೊಂದು ಇಟ್ಟರೆ ತೀನೇ ಕರಣದ ಘನದ ತುಂಡಿನಷ್ಟು ಎತ್ತರವಾಗುವದರಿಂದ ಇಟ್ಟಂಗಿಯು ಅರ್ಧ ಇಂಚು ಎತ್ತರವಿರುತ್ತದೆಂಬದನ್ನು ತಿಳಿಸಿ ಹೇಳಬೇಕು.

ನಿಲ್ಲಿಸೋಣ, ಅಡ್ಡ ಕಿಡವೋಣ-ಇಟ್ಟಂಗಿಯನ್ನು ಅದರ ಹತ್ತಿ ಮೈಮೇಲೆ ನಿಲ್ಲಿಸಿದರೆ ಅದು ಉದ್ದಕ್ಕೆ ನಿಂತಿತೆಂತಲೂ, ಹರವಾದ ಮೈಮೇಲೆ ನಿಲ್ಲಿಸಿದರೆ ಅದನ್ನು ಅಡ್ಡ ಇಟ್ಟತೆಂತಲೂ ಹೇಳಿ ಅದರಂತೆ ಹುಡುಗರಿಗೆ ಇಟ್ಟಂಗಿಯನ್ನು ಉದ್ದಾಗಿ ನಿಲ್ಲಿಸಲಿಕ್ಕೂ, ಅಡ್ಡಾಗಿ ನಿಲ್ಲಿಸಲಿಕ್ಕೂ ಹಚ್ಚಿ ಇವೆರಡು ಸಂಗತಿಗಳನ್ನು ಅವರಿಗೆ ಮನಗಾಣಿಸಿ ಕೊಡಬೇಕು.

ವ್ಯವಹಾರದೊಳಗಿನ ವದಾರ್ಥಗಳ ಆಕೃತಿ:— ತೀನೇ ಕರಣದಲ್ಲಿ ಆಕೃತಿಗಳನ್ನು ರಚಿಸುವ ಸಂಬಂಧದಿಂದ ಮಾಡಿದ ಸೂಚನೆಗಳಂತೆ ಈ ಕರಣದ ಆಕೃತಿಗಳನ್ನು ರಚಿಸಬೇಕು. ಈ ಕರಣದ ಘನವನ್ನು ಎಡಬಲ ಭಾಗಗಳಾಗಿ ವಿಭಾಗಿಸಲಿಕ್ಕೆ ಬರುವಂತೆ ಇಡಬೇಕು. ಆ ಮೇಲೆ ಕೆಳಗೆ ಹೇಳಿದ ಆಕೃತಿಗಳನ್ನು ಮಾಡಿಸಬೇಕು. ಆಕೃತಿಗಳನ್ನು ಮಾಡಿಸುವಾಗ್ಗೆ ಅವುಗಳಿಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಯನ್ನು ಹೇಳಬೇಕು.







๑
๒
๓
๔
๕
๖
๗
๘
๙
๑๐
๑๑
๑๒
๑๓
๑๔
๑๕

೧ ಕಟ್ಟೆ
೨ ಕಲ್ಲು ಹಾಸಿಕೆ
೩ ಎರಡು ಹಲಿಗೆಗಳು.
೪ ಎಂಟು ಮಣಿಗಳು.
೫ ಗೊಜ್ಜಿಡೆ
೬ ಬಾಗಿಲು
೭ ಬಾಗಿಲುಗಳು
೮ ಮೇಜು ಕುರ್ಚಿ
೯ ತೋಳಿಲ್ಲದ ಬಾಕು.
೧೦ ಕೋಚೆ
೧೧ ಮೊರತಿನಮುಂಭಾಗ
೧೨ ಸಿಂಹಾಸನ
೧೩ ಬಾವಿ
೧೪ ಪಾವಟಿಗೆಗಳೂ ಕುರ್ಚಿಯೂ
೧೫ ಹೌದು
೧೬ ಬಾವಿ
೧೭ ಸುರಂಗ ಮಾರ್ಗ
೧೮ ಸುರಂಗ ಮಾರ್ಗವೂ, ಇಂಜಿನ್ನೂ
೧೯ ಮನೆಯೂ ಅಂಗಳವೂ

ಈ ಆಕೃತಿಗಳನ್ನೂ ಇದರಂತೆ ಬೇರೆ ಆಕೃತಿಗಳನ್ನೂ ಹುಡುಗರಿಂದ ಮಾಡಿಸಬೇಕು. ಇವುಗಳಲ್ಲಿಯ ಕೆಲವು ಆಕೃತಿಗಳನ್ನು ಮಾದರಿಗಾಗಿ ಮುಂದಿನ ಕಾಗದದಲ್ಲಿ ತೆಗೆದಿರುತ್ತದೆ.

ಸೌಂದರ್ಯಯುಕ್ತ ಆಕೃತಿಗಳು:— ಚಿತ್ರಪಟದಲ್ಲಿ ತೋರಿಸಿದಂತೆ ಮೊದಲು ೧, ೨, ೩, ೪ನೇ ಬಗೆಯ ಆಕೃತಿಗಳನ್ನು ಮಾಡಿಸಬೇಕು. ಈ ಆಕೃತಿಗಳನ್ನು ರಚಿಸುವಾಗ ಮಧ್ಯದಲ್ಲಿ ಸ್ವಲ್ಪ ಬಿಡಕೂಡದೆಂಬದನ್ನು ಮರೆಯಲಾಗದು. ಈ ಆಕೃತಿಗಳನ್ನು ರಚಿಸಲಿಕ್ಕೆ ಬಂದ ಬಳಿಕ ತುಂಡುಗಳ ನಡುವೆ ಒಂದೊಂದು ಚಬ್ಬೊಕ ಇಂಚಿನಷ್ಟು ಸ್ಥಳವನ್ನು ಬಿಟ್ಟು ತರತರದ ಆಕೃತಿಗಳನ್ನು ರಚಿಸ ಹತ್ತಬೇಕು. ಈ ಆಕೃತಿಯ ಮಾದರಿಗಳನ್ನು ಚಿತ್ರಪಟದೊಳಗಿನ ೪|೫ನೇ ಆಕೃತಿಗಳಿಂದ ತೋರಿಸಿರುತ್ತೇವೆ. ಚಿತ್ರಪಟದಲ್ಲಿಯ ೮ನೇ ಒಂಬತ್ತನೇ ಆಕೃತಿಗಳನ್ನಾದರೂ ತುಂಡುಗಳ ನಡುನಡುವೆ ಚಬ್ಬೊಕ ಇಂಚಿನಷ್ಟು ಸ್ಥಳ ಬಿಟ್ಟೇ ರಚಿಸಿದ್ದರೂ ಅವುಗಳ ಹಿಂಬದಿಗೆ ಇಟ್ಟ ಇಟ್ಟಿಗೆಗಳು ಅಡವಾಗಿಡಲ್ಪಟ್ಟಿರುವವೆಂಬದನ್ನು ಲಕ್ಷ್ಯದಲ್ಲಿಡ

ಬೇಕು. ಇದೇ ಮೇರೆಗೆ ಶಿಕ್ಷಕರು ತಮ್ಮ ಕಲ್ಪನೆಯಿಂದ ಬೇರೆ ತರದ ಆಕೃತಿಗಳನ್ನು ರಚಿಸಿಕೊಳ್ಳಬಹುದು.

ಹತ್ತನೇ ಹನ್ನೊಂದನೇ ಆಕೃತಿಗಳನ್ನು ರಚಿಸುವಾಗ ತುಂಡುಗಳ ನಡುವೆ ನಾಲ್ಕು ಚಚ್ಚೌಕ ಇಂಚಿನಷ್ಟು ಸ್ಥಳ ಬಿಟ್ಟಿರುವದು. ಹನ್ನೆರಡನೇ ಆಕೃತಿಯನ್ನು ರಚಿಸಲಿಕ್ಕೆ ಕಲಿಸಿದ ಬಳಿಕ ಇದೇ ಆಕೃತಿಯಲ್ಲಿ ತುಸು ಹೆಚ್ಚು ಕಡಿಮೆ ಮಾಡಿದರೆ ಹದಿಮೂರನೇ ಹದಿನಾಲ್ಕನೇ ಆಕೃತಿಗಳುಂಟಾಗುತ್ತವೆಂಬದನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಿ ಕೊಡಬೇಕು.

ಮೂರನೇ ನಾಲ್ಕನೇ ಕರಣದ ತುಂಡುಗಳ ಮಿಶ್ರಣದಿಂದ ಹದಿನೇಳನೇ ಹತ್ತೊಂಬತ್ತನೇ ಆಕೃತಿಗಳು ರಚಿಸಲ್ಪಟ್ಟಿರುತ್ತವೆ. ಕಲ್ಪನಾದ ಶಿಕ್ಷಕನು ಮತ್ತೆ ಬೇರೆ ತರದ ಆಕೃತಿಗಳನ್ನು ರಚಿಸಿ ಕಲಿಸಬಹುದು.

ಗಣಿತ ವಿಷಯಕ ಜ್ಞಾನವು— ಮೂರನೇ ಕರಣದಲ್ಲಿಯ ತುಂಡುಗಳ ಯೋಗದಿಂದ ಕೆಲವು ಸಂಖ್ಯೆಗಳ ಜ್ಞಾನವನ್ನು ಚಿಕ್ಕ ಚಿಕ್ಕ ಬೇರೀಜುವಜಾಬಾಕೆಗಳನ್ನು ಕಲಿಸಿದಂತೆ ಈ ಕರಣದ ತುಂಡುಗಳಿಂದಲೂ ಕಲಿಸಬಹುದು.

HABIT

ಬೆಳೆವು

ಶಾಲೆಯೊಳಗಿನ ಆಪೇಕ್ಷಿತನವು ಸ್ಪರ್ಧಾಯೋಗದಂತೆ ಎಲ್ಲ ಹುಡುಗರನ್ನು ವ್ಯಾಪಿಸುವದು. ಇದು ಕಾಪಿ ಮಾಡುವಾಗ್ಗೆ ಹೊರಟೀಕ್ಷಿಸುವದು ಅಥ್ಗ ಮಾಸ್ತರನು ನೋಡಿ ನೋಡಿಯೂ ಸುಮ್ಮನಿರುವದುಂಟು, ನೋಟು ಬರೆಯುವಾಗ್ಗೆ ಬಬ್ಬನು ಬರೆದದ್ದನ್ನು ಎಲ್ಲರೂ ನಕಲು ಮಾಡುತ್ತಾರೆ ಚಿಕ್ಕ ಪುಟ್ಟ ಕಳವು ಮಾಡುವದು. ಈ ಕೃತ್ಯಗಳು ತಿದ್ದು ವಿಕೆಗಳಿಲ್ಲದ ಶಾಲೆಗಳಲ್ಲಿ ನಡೆಯುವವು. ಕಳವು ಸಾರ್ವತ್ರಿಕ ನಡೆಯುವದಿಲ್ಲ. ಕಾಪಿಯು ಮಾತ್ರ ಸಾರ್ವತ್ರಿಕ ನಡೆಯುವದು. ಇದು ಜಾತಿ, ವಯಸ್ಸು, ವರ್ಗ ಇವುಗ

ಳ ಸಂಬಂಧವಿಲ್ಲದೆ ಎಲ್ಲ ಕಡೆಯಲ್ಲಿ ನಡೆಯುತ್ತದೆ. ಇದಕ್ಕೆ ಕಾರಣಗಳು ಯಾವದೆಂದರೆ–

೧ ಹುಡುಗರಿಗೆ ವಿಷಯವು ಬಾರದ್ದರಿಂದ ಕಾಪಿಯನ್ನು ಮಾಡುವರು.

೨ ವಿಷಯಜ್ಞಾನವಿದ್ದರೂ ನಿಷ್ಕಾಳಜಿಯಿಂದಾಗಲೀ ಆಲಸ್ಯದಿಂದಾಗಲೀ ಕಾಪಿಯನ್ನು ಮಾಡುವರು. ಇದಕ್ಕೆ ತನ್ನ ಅಯೋಗ್ಯತೆ ಗೋಚರವಾಗದ ಹಾಗೆ ತಿದ್ದುವಿಕೆಯ ಕಡೆಗೆ ಲಕ್ಷ್ಯಕೊಡಬೇಕು. ಕರ್ತವ್ಯದ ಜಟಿ ಹಚ್ಚಿ ಸೋಮಾರಿತನ ಹೋಗಲಾಡಿಸಬೇಕು.

೩ ಮಾನಸಿಕ ದುರ್ಬಲತೆಯಿಂದ ಕಾಪಿ ಮಾಡುವರು.

೪ ಪ್ರಾಕೃತಿಕ ದುರ್ಬಲತೆಯಿಂದ ಕಾಪಿ ಮಾಡುವಂಥವರ ಮೇಲೆ ತಾಳ್ಮೆಯಿಂದಲೂ, ಸಹಾನುಭೂತಿಯಿಂದಲೂ ಹುಡುಗರ ಶರೀರ ಪ್ರಕೃತಿಯ ಮೇಲೆ ಕೆಲಸಕ್ಕೆ ಹಚ್ಚಬೇಕು.

೫ ಹುಡುಗರು ವಿಷಯದ ಕಡೆಗೆ ಲಕ್ಷ್ಯಕೊಡುತಿದ್ದರೂ ಏಕಾಗ್ರತೆ ಹುಟ್ಟುವ ಹಾಗೆ ಕಲಿಸಬೇಕು.

೬ ಸಾಲೆಯ ಕೊರತೆಯು ಮೂಲಕ ಕಾಪಿ ಮಾಡುವದಲ್ಲದೆ ಮಿಕ್ಕ ಅಪರಾಧಗಳನ್ನು ಸಹಜ ಮಾಡಿ ಬಿಡುವನು. ಇಂಥ ಪ್ರಸಂಗದಲ್ಲಿ ನೈತಿಕ ಶಿಕ್ಷಣ ಕೊಡುವದಲ್ಲದೆ ದೂರ ದೂರ ಕೂಡಿಸಿ ಸಾಧ್ಯವಿದ್ದರೆ ಬೇರೆ ಬೇರೆ ಪ್ರಶ್ನೆಗಳನ್ನು ಕೊಟ್ಟು ಕಟ್ಟು ಮಾಡಬೇಕು. ಇದರಿಂದ ಮಾಸ್ತರನಿಗೆ ಹೆಚ್ಚು ದುಡಿತ ಬೀಳುವದು.

೭ ಮೇಲಿಂದ ಮೇಲೆ ಪರೀಕ್ಷೆ ತೆಗೆದುಕೊಳ್ಳುವದರಿಂದ ಸಹ ಒಮ್ಮೊಮ್ಮೆ ಕಾಪಿ ಮಾಡುವರು. ಪರೀಕ್ಷೆಯು ಕಾರ್ಯದಲ್ಲಿಯೇ ತೊಡಗಿಸಿದ ಶಿಕ್ಷಕನಿಗೆ ತಿದ್ದುವಿಕೆಗೆ ವೇಳೆಯು ಉಳಿಯುವದಿಲ್ಲ. ಸಣ್ಣ ಹುಡುಗರಿಗೆ ನೈತಿಕ ಪ್ರವೃತ್ತಿಗಳು ಸಹಜವಾಗಿ ಇರದ ಕಾರಣ ಪರೀಕ್ಷೆಯನ್ನು ಮೇಲಿಂದ ಮೇಲೆ ತೆಗೆದುಕೊಳ್ಳಬಾರದು, ಕಾಪಿಯ ನಡತೆಯನ್ನು ಕಟ್ಟುಮಾಡಬೇಕು. ಬಲವತ್ತರವಾದ ನೀತಿಯನ್ನು ಸೆಲೆಗೊಳಿಸುವದೇ ಪ್ರಧಾನವು. ಕಾಪಿ ಮಾಡುವದರಿಂದ

ತನ್ನ ಕ್ಲಾಸಿನ ಮತ್ತು ಶಾಲೆಯ ಮಾಸ್ತರನ ಮಾನ ಹೋಗು ವದೆಂತಲೂ ತೋರಿಸಬೇಕು. ಕಾಪಿ ಮಾಡುವ ಸಂದರ್ಭಗ ಳನ್ನು ಕಂಡು ಅಲ್ಲಿ ಹುಡುಗನಿಗೆ ನೆರವಾಗಿ ಮನಃ ಪ್ರವೃತ್ತಿ ಗಳನ್ನು ತಿದ್ದಬೇಕು.

ಕ್ರೂರತನ.

ಕ್ರೂರತನವು ವಿಶೇಷವಾಗಿ ಗಂಡು ಹುಡುಗರಲ್ಲಿ ಇರುತ್ತ ದೆಂದು ಕೆಲವರ ಮತವದೆ, ಕ್ರೂರತನಕ್ಕೆ ಏನಾದರೂ ಉ ದ್ದೇಶಬೇಕು, ಚಿಕ್ಕ ಹುಡುಗರಲ್ಲಿ ಕ್ರೂರತನವು ಹುಟ್ಟಲಿ ಕ್ಕೆ ಏನಾದರು ಉದ್ದೇಶವದೆಯೋ ಇಲ್ಲೋ ಈ ಬಗ್ಗೆ ಸಂಶಯವದೆ, ಆದರೆ ಚಿಕ್ಕ ಮಕ್ಕಳು ಪ್ರಾಣಿಗಳನ್ನು ಪೀಡಿ ಸುವದು ನಿಜ. ಆದರೆ ಅವುಗಳಿಗೆ ನೋವಾಗಬೇಕೆಂಬ ಉ ದ್ದೇಶವಿರುವದಿಲ್ಲ. ಪ್ರಾಣಿಗಳ ಬದ್ಕಾಟದಿಂದಲೂ ಆನಂದ ವಾಗಬೇಕೆಂಬ ಉದೇಶವೂ ಇರುವದಿಲ್ಲ. "ಪರರ ಕೇಡಿ ನಿಂದ ಆನಂದಪಡುವ ನಡತೆಯು ಕ್ರೂರತನವೆನಿಸುವದು." ದೊಡ್ಡವರ ಕ್ರೂರತನವು ಉದ್ದೇಶವನ್ನವಲಂಬಿಸಿಯೇ ಇ ರುವದು. ಸಣ್ಣ ಹುಡುಗರ ಕ್ರೂರತನಕ್ಕೆ ಬೇರೆ ಬೇರೆ ಕಾರ ಣಗಳುಂಟು.

೧ ಹುಡುಗರಲ್ಲಿರುವ ಸ್ವಾಭಾವಿಕ ಚಟುವಟಿಕೆಯು ಪ್ರೀತಿ ಯು ಕ್ರೂರತನಕ್ಕೆ ಕಾರಣವಾಗಿರುವದು. ಚಟುವಟಿಕೆ ಇ ಲ್ಲದ ಹುಡುಗನು ಕ್ರೂರತನ ಮಾಡನು.

ಉದಾ–ನೊಣದ ರೆಕ್ಕೆ ಕಿತ್ತಿದರೆ ಹಾರಲಿಕ್ಕೆ ಬರುವದೋ ಕ್ಯಾಗೆ ಇತ್ಯಾದಿ.

ಹುಡುಗರಲ್ಲಿರುವ ಅಧಿಕಾರ ಪ್ರೀತಿಯಿಂದಲೂ ಕ್ರೂರತನ ಮಾಡುತ್ತಾರೆ. ತಾನು ಹೆಚ್ಚಿನವ ತನ್ನ ಬಲ ಹೆಚ್ಚು ಎಂಬ ತಿಳಿವಳಿಕೆಯೇ ಅಧಿಕಾರ ಪ್ರೀತಿಯು. ತನ್ನ ಮೇ ಲೆ ಗುರುಹಿರಿಯರ ಅಧಿಕಾರ ನಡೆಯುವಂತೆ ತನ್ನ ಅಧಿಕಾ ರವು ಎಡನೆಯವರ ಮೇಲೆ ನಡಿಸಬೇಕೆಂಬ ಹೇತುವಿನಿಂದ ಎರಡನೆ ಪ್ರಾಣಿಗಳ ಮೇಲೆ ಅಧಿಕಾರ ನಡಿಸುತ್ತಾನೆ

THE HISTORY OF RAJASTHAN.
ರಾಜಾಸ್ಥಾನದ ಇತಿಹಾಸವು

ಹಿಂದೂ ರಾಣಿಗಳಿಂದ ಹುಟ್ಟಿದ ಕುಮಾರರಿಗೆ ಸೂರ್ಯ ವಂಶೀ ಅಗ್ನ್ಯುಪಾಸಕ, ಎಂಬ ಅಭಿಧಾನವೂ ಮುಸಲ್ಮಾನ ರಾಣಿಗಳಿಂದ ಹುಟ್ಟಿದ ಕುವರರಿಗೆ 'ನೌಷೇರ್ಯ ಪಠಾಣ, ಎಂಬ ಹೆಸರೂ ರೂಢವಾದವು. ಈ ಮುಸಲ್ಮಾನ ರಾಣಿಗಳ ಮೂವತ್ತೈರಡು ಮಂದಿ ಮಕ್ಕಳು ಮುಂದೆ ತಮ್ಮ ತಮ್ಮ ತಾಯಂದಿರ ಹೆಸರಿನಿಂದ ಬೇರೆ ಬೇರೆ ಜಾತಿಗಳನ್ನುಂಟು ಮಾಡಿದರು. ಬಾಪ್ಪಾನು ನೂರು ವರ್ಷದವನಾಗಿ ಸಾಯುಲು, ಅವನ ಶವಸಂಸ್ಕಾರದ ಸಂಬಂಧದಿಂದ ಅವನ ಉಭಯ ಧರ್ಮದ ಮಕ್ಕಳಲ್ಲಿ ವಿರೋಧವುಂಟಾಯಿತು. ಹಿಂದೂ ಮಕ್ಕಳು ತಮ್ಮ ತಂದೆಯ ಶವವನ್ನು, ತಮ್ಮ ಧರ್ಮದಂತೆ ಸುಡುವೆವೆಂತಲೂ, ಮುಸಲ್ಮಾನ ಮಕ್ಕಳು ತಮ್ಮ ಧರ್ಮದಂತೆ ಹುಗಿಯುವೆವೆಂತಲೂ ವಾದಿಸ ತೊಡಗಿದರು. ಕಡೆಗೆ ಈ ವಾದವು ವಿಕೋಪಕ್ಕೆ ಮುಟ್ಟಲು, ಉಭಯತರು ಆ ಶವವನ್ನು ಬಲಾತ್ಕಾರದಿಂದ ತಮ್ಮ ತಮ್ಮ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಆತುರ ಪಟ್ಟು, ಶವದ ಬಳಿಗೆ ಬಂದು ಅದರ ಮೇಲಿನ ಅರಿವೆಯನ್ನು ತೆಗೆಯಲು, ಶವಕ್ಕೆ ಬದಲಾಗಿ ತಾವರ ಹೂವಿನ ರಾಶಿಯನ್ನು ಕಂಡರು. ಬಳಿಕ ಉಭಯರೂ ಆಶ್ಚರ್ಯಚಕಿತರಾಗಿ ಪೂಜ್ಯಭಾವದಿಂದ ಆ ಹೂಗಳನ್ನು ತೆಗೆದುಕೊಂಡು ಸರೋವರದಲ್ಲಿ ವಿಸರ್ಜಿಸಿದರು. ಬಾಪ್ಪಾನು, ಸ್ವಸಂತೋಷದಿಂದ ಮೇರುಮಂದಾರ ಪರ್ವತದ ಅಡಿಯಲ್ಲಿ ಜೀವಂತ ಸಮಾಧಿಯನ್ನು ಗ್ರಹಣ ಮಾಡಿ ಯೋಗಿಯಾದನೆಂದು ಜನವಾರ್ತೆಯುಂಟು. ಅದು ಹ್ಯಾಗೆ ಇರಲಿ; ಅವನು ಇಹಲೋಕದ ವ್ಯವಹಾರದಿಂದ ಮುಕ್ತನಾದನೆಂಬದು ಸಿದ್ಧವಾದದ್ದು.

ಬಾಪ್ಪಾನ ತರುವಾಯ ಅವನ ವಂಶಜರು ಸೌರಾಷ್ಟ್ರ ಸೌರವಾಡ ಮುಂತಾದ ಪ್ರದೇಶಗಳಲ್ಲಿ ಅಕಬರನ ಕಾಲದವರೆಗೆ ಅರಸೊತ್ತಿಗೆಯನ್ನು ಅನುಭವಿಸುತ್ತಿದ್ದರೆಂದು ಐನ ಅಕಬರಿ, ಎಂಬ ಐತಿಹ್ಯ ಗ್ರಂಥದಿಂದ ಗೊತ್ತಾಗುತ್ತದೆ

ಬಾಪ್ಪನ ಮರಣದಿಂದ ಅಕಬರನ ಆಳಿಕೆಯವರೆಗೆ ಬಾಪ್ಪನ ವಂಶದಲ್ಲಿ ಹದಿನೆಂಟು ತಲೆಗಳಾದವು. ಅವರಲ್ಲಿ ಅಪರಾಜಿತ, ಕಾಲಭೋಜ, ನಂದಕುಮಾರ, ಖುಮಾನ (ಇ. ೮೫೬) ಉಲ್ಲಟ (ಇ. ೮೭೭) ಶಕ್ತಿಕುಮಾರ (ಇ. ೯೭೪) ಸಾಮರಸಿ (ಇ. ೧೦೫೫) ಕರ್ಣ (ಇ. ೧೦೯೫) ಇಷ್ಟು ಮಂದಿಯ ಹೆಸರುಗಳು ಉಪಲಬ್ಧವಾಗಿವೆ. ಇವರಲ್ಲಿ ಪ್ರವಾರ ಕುಲದ ರಾಜಕನ್ಯೆಯಿಂದ ಹುಟ್ಟಿದ ನಂದ ಕುಮಾರನು ದಕ್ಷಿಣವನ್ನು ಪ್ರವೇಶಿಸಿ ದೇವಗಿರಿಯನ್ನು ಕೈವಶ ಮಾಡಿಕೊಂಡಿದ್ದನೆಂದು ಒತ್ತಟ್ಟಿಗೆ ಉಲ್ಲೇಖಿಸಲ್ಪಟ್ಟಿದೆ. ಇದೇ ವೇಳೆಗೆ ಖುಮಾನನು ಅಲ್ಲಿನೇ ಇಸವಿಯಲ್ಲಿ ಚಿತೋಡವನ್ನು ಮುತ್ತಿದ ಮುಸಲ್ಮಾನರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿದನೆಂದು ಖುಮಾನರಾಸೊ ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿದೆ.

DEPARTMENTAL NOTICE.

ನೋಟೀಸು

ಪೆ. ಡಾಯರೆಕ್ಟರ ಆಫ ಪಬ್ಲಿಕ ಇನ್ಸ್ಟ್ರಕ್ಶನ ಸಾಹೇಬ ಬಾಹಾದೂರವರಿಂದ ಮುಂಬಯಿಯಿಂದ ಗವ್ಹರ್ನಮೆಂಟ ಸೆಂಟ್ರಲ ಬುಕ ಡಿಪೋದಿಂದ ಪುಸ್ತಕಗಳನ್ನು ಕೊಳ್ಳುವ ಸಲುವಾಗಿ ಪ್ರಕಟಿಸಲ್ಪಟ್ಟ ನಿಯಮಗಳಲ್ಲಿ ಮೊದಲನೇ ನಿಯಮದಲ್ಲಿ ಕೆಳಗೆ ಬರೆದ ಹೆಚ್ಚು ಕಡಿಮೆಗಳನ್ನು ಮಾಡಿದ್ದಾರೆ.

(೧) ಠೋಕು ವ್ಯಾಪಾರ ಅಂದರೆ ೧೦ ರು. ಗಳ ಅಥವಾ ೧೦೦ ರು. ಗಳಿಗಿಂತ ಹೆಚ್ಚು ರುಪಾಯಿಗಳ ಪುಸ್ತಕಗಳನ್ನು ಕೊಳ್ಳೋಣ. ಅಥವಾ ಕಳಿಸಿಕೊಡಲಿಕ್ಕೆ ಬರಯೋಣವು.

ಟೀಪು. ಇಲಾಖೆಯೊಳಗಿನ ಎಲ್ಲ ಜಿಲ್ಲೆಗಳೊಳಗಿನ ಶಾಲಾ ಮಾಸ್ತರರ ವಿಷಯದಲ್ಲಿ ಮಾತ್ರ ಠೋಕ ವ್ಯಾಪಾರ ಅಂದರೆ ೫ ರು. ಗಳ ಅಥವಾ ಅವುಗಳಿಗಿಂತ ಹೆಚ್ಚು ರೂಪಾಯಿಗಳ ಪುಸ್ತಕಗಳನ್ನು ಕೊಳ್ಳುವದು.

ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ, ಮುಂಬಯಿ. ತಾ= ೬ನೇ ಮಾರ್ಚ ೧೯೦೬ ಇಸ್ವಿ

(ಸಹಿ) ಜೀ. ಜೆ. ಅಗಾಸೆ.
ಕ್ಯುರೇಟರ.

II

ಈ ನೋಟೀಸಿನಿಂದ ತಿಳಿಸುವದೇನೆಂದರೆ ಬಾಲಕರ ಸಲುವಾಗಿ ವ್ಹರ್ನಾಕ್ಯುಲರ ಟೆಕ್ಸ್ಟ ಬುಕ್ಸ ರಿವ್ಹಿಜನ ಕಮಿಟಿಯವರಿಂದ ತಯಾರಿಸಲ್ಪಟ್ಟ ಬಾಲಬೋಧಿನಿಯೆಂಬ ಪುಸ್ತಕವನ್ನು (ಇನಫಂಟ್ಸ ಪ್ರೈಮರ) ಸರಕಾರದವರು ಮಂಜೂರ ಮಾಡಿದ್ದಾರೆ. ಕಾರಣ ಇನ್ನು ಮುಂದೆ ಯಾವತ್ತು ಲೋಕಲಬೋರ್ಡ ಮತ್ತು ಮುನಸಿಪಲ ಶಾಲಾ ಮಾಸ್ತರರು ಹಳೇ ಅಂಕಲಿಪಿಯ ಪುಸ್ತಕವನ್ನು ಪಯೋಗಿಸದೆ ಇದನ್ನೇ ಉಪಯೋಗಿಸತಕ್ಕದ್ದು.

ಪುಣೆ, ಡಾಯರೆಕ್ಟರ ಆಫ ಪಬ್ಲಿಕ್ ನ್ಸಟ್ರಕ್ಶನ ಇವರಕಡೆ
ಜೇರಿ ತಾ॥ ೨೭ನೇ ಮಾರ್ಚ ೧೯೦೬ ಇಸ್ವಿ

(ಸಹಿ) ಪೀ. ಲೋರೀ.

III

ಸರ್ಕ್ಯೂಲರ.

ಬೆಳಗಾವ ಹಾಯಸ್ಕೂಲ ಹೆಡ್ಡ ಮಾಸ್ತರರಾದ ರಾ. ಸಾ. ಸೋನೆ ಇವರ ಪತ್ರದ ನಕಲು ಉತ್ತರ ಭಾಗದೊಳಗಿನ ಯಾವತ್ತು ಡೆಪೂಟಿ ಎಜ್ಯುಕೇಶನಲ ಇನಸ್ಪೇಕ್ಟರರ ಕಡೆಗೆ ಕಳಿಸಿರುತ್ತದೆ. ಡಿಪೂಟಿ ಎಜ್ಯುಕೇಶನಲ ಇನಸ್ಪೇಕ್ಟರರು ತಮ್ಮ ತಮ್ಮ ಜೆಲ್ಲೆಯೊಳಗಿನ ಲೋಕಲಬೋರ್ಡ ಮತ್ತು ಮುನಸಿಪಲ ಶಾಲಾ ಮಾಸ್ತರರಿಗೆ ಮೇಲೆ ಕಾಣಿಸಿದ ಪತ್ರದೊಳಗಿನ ಸೂಚನೆಗಳನ್ನು ತಿಳಿಸಿ ಕೊಡತಕ್ಕದ್ದು ಸೃಷ್ಟಿ ವಿಷಯದ ಪಾಠಗಳು, ವಸ್ತು ಪಾಠಗಳು ಮುಂತಾದ ಪಾಠಗಳನ್ನು ಯಾವಾಗಲು ಆ ವಿಷಯಗಳ ಸಂಬಂಧಿ ತೋಂಡೀ ಶಿಕ್ಷಣದ ಕೂಡ ಕಲಿಸತಕ್ಕದ್ದು. ಮೇಲೆ ನಮೂದಿಸಿದ ಪಾಠಗಳನ್ನು ಕಲಿಸುವ ಪೂರ್ವದಲ್ಲಿ ಆ ವಿಷಯಗಳ ಸಂಬಂಧವಾಗಿ ತೋಂಡೀ ಶಿಕ್ಷಣ ಕೊಟ್ಟರೆ ನೆಟ್ಟಗಾಗುವದು

ಧಾರವಾಡ
ತಾ॥ ೨೭- ೪- ೦೬ ಇಸ್ವಿ

(ಸಹಿ) ಬಿ. ಆರ. ಸಹಸ್ರಬುದ್ಧೆ
ಎಜ್ಯುಕೇಶನಲ ಇನಸ್ಪೇಕ್ಟರ
ದ. ಭಾ.

---

* ಹೊಸದಾಗಿ ತಯಾರಿಸಲ್ಪಟ್ಟ ಕನ್ನಡ ಒಂದನೇ ಪುಸ್ತಕದಲ್ಲಿ ಶಿಕ್ಷಕರಿಗೋಸರವಾಗಿ ಬರೆದ ಸೂಚನೆಯು ಎರಡನೇ ಮೂರನೇ

CORRESPONDENCE

ಪತ್ರವ್ಯವಹಾರ

(ಬಂದಪತ್ರಗಳ ಸಾರಾಂಶ.)

ಕಲಕೇರಿ (ತಾ. ಗದಗ) ಇಲ್ಲಿಯ ಸಾಲೆಯ ವಾರ್ಷಿಕ ಪರೀಕ್ಷೆ ಚೆನ್ನಾಗಿ ಆಗಿರುವದೆಂದೂ, ಅಧ್ಯಾಪಕರೂ ಉಪಶಿಕ್ಷಕರೂ ಮನಸ್ಸುಗೊಟ್ಟು ಕೆಲಸ ಮಾಡಿರುವರೆಂದೂ ಊರವರು ಸಾಲೆಯ ಅಭ್ಯಾಸಕ್ಕೂ ಇತರ ಕಾರ್ಯಕ್ಕೂ ಮಾಸ್ತರರಿಗೆ ತುಂಬಾ ನೆರವಾಗುವರೆಂದೂ ವಿಜ್ಞಾಪನ ಪುಸ್ತಕದಲ್ಲಿ ಶರಾ ಬರೆದಿರುವರು.

II

ಅದರಗುಂಚಿ (ಹುಬ್ಬಳ್ಳಿ) ಈ ಊರ ಸಾಲೆಗೆ ಶ್ರೀ. ರಾ. ರಾ. ಕೊಟ್ರಯ್ಯಸ್ವಾಮಿಗಳು ಉದಾರಾಂತಃಕರಣದಿಂದ ಹದಿನೈದು ರೂಪಾಯಿ ಬೆಲೆ ಬಾಳುವ ಗಡಿಯಾಲವನ್ನು ಉಚಿತವಾಗಿ ಕೊಟ್ಟಿರುವರು.

III

ಅಣ್ಣೀಗೇರಿ (ತಾ. ನವಲಗುಂದ) ಗ್ರಾಮಸ್ಥರು ಸಾಲೆಯ ಉಪಯೋಗಕ್ಕಾಗಿ ಹಲವು ಸಾಧಕದ ಸಾಮಾನುಗಳನ್ನು ಕೊಡಿಸಿರುವರು.

ನಂದಗಡ—ರಾ. ರಾ. ಹಣಮಂತರಾವ ಕುಲಕರ್ಣಿಯೆಂಬವರು ಶಾಲೆಯ ಕೆಲಸದಲ್ಲಿ ವಿಶೇಷ ಸಹಾಯ ಮಾಡುತ್ತಿರುವರು. ಇದು ಅವರಿಗೆ ಭೂಷಣವೇ ಸರಿ.

ರಾವಸಾಹೇಬ ಕ. ಶಾ. ಪತ್ರಿಕ ಕರ್ತೃರವರ ಸೇವೆಗೆ ಅಸನೋಟಿ ಸ್ಕೂಲಮಾಸ್ತರನ ವಿನಂತಿಗಳು.

ಕಲಮುಗಳಲ್ಲಿ ಈ ಸಕ್ಯೂಲರಿನೊಳಗಿನ ಸಂಗತಿಯನ್ನು ಚೆನ್ನಾಗಿ ಸ್ಪಷ್ಟೀಕರಿಸಿದ್ದಾರೆ. ಆ ಕಲಮುಗಳು ಮುಂದಿನ ಪುಸ್ತಕಗಳೊಳಗಿನ ಸೃಷ್ಟಿ ಜ್ಞಾನದ ಪಾಠಗಳ ಶಿಕ್ಷಣಕ್ಕೂ ಸಂಬಂಧಿಸಿರುತ್ತವೆಂಬದನ್ನು ಶಿಕ್ಷಕರು ಮರೆಯಕೂಡದು.

ಹೊಸದಾಗಿ ತಯಾರಾದ ಕನ್ನಡ ಕ್ರಮಿಕ ಎರಡನೇ ಪುಸ್ತಕವನ್ನು ಕಲಿಸುವಾಗ ಕಂಡು ಬಂದ ಒಂದೆರಡು ದೋಷಗಳನ್ನು ಬರೆದು ತಮ್ಮೆಡೆಗೆ ಕಳುಹಿಸ್ದೇನೆ. ಅವಕ್ಕೆ ಕನ್ನಡ ಶಾಲಾಪತ್ರಿಕದಲ್ಲಿ ಇಂಬನ್ನು ಕೊಡುವಿರೆಂದು ಆಶಿಸುತ್ತೇನೆ.

೧೦ನೇ ಪಾಠ ದೃಢನಿಶ್ಚಯ—ಈ ಪಾಠದಲ್ಲಿ ಜೇಡಹುಳದ ಪ್ರಯತ್ನದ ಬಗ್ಗೆ ವರ್ಣಿಸಿಯದೆ; ಆದರೆ ಇದರ ವಿಷಯದ ರಚನೆಯು ವಿಸಂಗತವಾಗಿ ಹೋಗಿದೆ.

"ಜಾಲವ ಬಿಡದೆ ರಚಿಸಲು ಯತ್ನ ನಡಿಸಿತು."(ಪದ೨)

"ಮೊದಲನೆಯೆಳೆಯ ಹಚ್ಚುವ ಶ್ರಮದ ಕೆಲಸಕೆ ಜೇಡ ತೊಡಗಲು ಕೆಳಗೆ ಬಿದ್ದಿತು." (ಪದ ೭)

ಇವೆರಡು ಅವತರಣಗಳ ಮೇಲಿಂದ ನೋಡಿದರೆ, ಜಾಲವು ಸಿದ್ಧವಾಗಲಿಲ್ಲೆಂದು ಸ್ಪಷ್ಟವಾಗುತ್ತದೆ. ಹೀಗಿದ್ದ ಮುಂದೆ,—

'ಶಾಂತಗುಣದಿಂ ತಟ್ಟನೆಳೆಯನ್ನೇರಿ ಜಾಲಕೆ ಸಾಗಿ ಹೋಯಿತು.' (ಪದ ೪)

'ಏಳನೆ ಸಾರೆ ಜಾಲವನೇರಿ ಹಿಡಿಯಿತು' (ಪದ ೯)

ಹೀಗೆ ವರ್ಣಿಸಿಯದೆ.

ಜಾಲವನ್ನು ರಚಿಸಲಿಕ್ಕೆ ಆರಂಭಿಸಲಾಗಿ ಕಷ್ಟತರವಾದ ಮೊದಲನೆಯ ಎಳೆಯನ್ನೇ ಹಾಕುವ ಕೆಲಸದಲ್ಲಿ ಅದಕ್ಕೆ ಆರುಸಾರೆ ಅಪಯಶ ಬರಲು, ಜಾಲಕ್ಕೆ ಸಾಗಿ ಹೋಗುವ ದಕ್ಕಾಗಲಿ, ಏರಿ ಅದನ್ನು ಹಿಡಿಯಲಿಕ್ಕಾಗಲಿ, ಆ ಜಾಲವು ಅಲ್ಲಿ ಎಲ್ಲಿಂದ ನಿರ್ಮಾಣವಾಯಿತು?

ಮರಾಠಿ ೧೦ನೇ ಪುಸ್ತಕದಲ್ಲಿ ಜೇಡವು ಎತ್ತರವಾದ ಸ್ಥಳದಲ್ಲಿ ಜಾಲವನ್ನು ಕಟ್ಟಿ ಕೆಳಗೆ ಇಳಿಯಲಾಗಿ, ಪುನಃ ಜಾಲಕ್ಕೆ ಹೋಗುವದಕ್ಕೆ ಸಪ್ತಪ್ರಯತ್ನ ಮಾಡಿ ಸಾಧ್ಯ ಮಾಡಿಕೊಂಡಿತು, ಎಂದು ವರ್ಣಿಸಿಯದೆ; ಈ ಸಮ್ಮ ಕನ್ನಡ ಕವಿತಾ ಕರ್ತರ ಲಕ್ಷಯವು ಅದರಂತೆ ತೋರುವದಿಲ್ಲ. ಅವರು ಜಾಲದ ಪ್ರಯತ್ನದ ಬಗ್ಗೆ ವರ್ಣಿಸಿದ್ದಾರೆ. ಆದರೆ ಅದು ಸಯುಕ್ತಿಕ ತೋರದ್ದರಿಂದ ೪ನೇ ೯ನೇ ಪದಗಳ

ಕಡೆಯ ಒಂದೊಂದು ಚರಣವನ್ನು ತಿದ್ದುವದು ಅವಶ್ಯವೆಂದು ತೋರುತ್ತದೆ. ಅಥವಾ ಮುರಾರಿಯಲ್ಲಿದ್ದಂತೆ ರಚಿಸುವದು ಸುಲಭವು. ಅದಕ್ಕಾಗಿ ೨ನೇ ಪದದ ೨ನೇ ಚರಣವನ್ನೂ ೩ನೇ ಪದವನ್ನೂ ಸುಧಾರಿಸಿದರಾಯಿತು. ಅದರಂತೆ ಸುಧಾರಿಸಿದರೆ ೧ನೇ ಪದವನ್ನು ಕಡಿಮೆ ಮಾಡಬೇಕಾಗುವದು. ಈ ಪಾಠದಲ್ಲಿ ಬೀಡನ್ನು ಕಟ್ಟುವ ಅವಶ್ಯಕತೆ ಬಹುಶಃ ತೋರುವದಿಲ್ಲ. ಆದ್ದರಿಂದ ೧ನೇ ಪದವನ್ನು ಕಡಿಮೆ ಮಾಡಲು ಅರ್ಥವಿಪರ್ಯಾಸವಾಗಲಿಕ್ಕಿಲ್ಲ. ಆದಕಾರಣ ಅದರಂತೆ ಸುಧಾರಿಸಿ ಇದರಡಿಯಲ್ಲಿ ಕೊಡುತ್ತೇನೆ.

ಬಂದುಜೇಡವುಬಂದ ಬೇಟೆಯ ಹಿಡಿಯಲೋಸುಗ ಗೆಳೆಯನೆ |
ಆಂದ ಜಾಲವನೆತ್ತರದ ಸ್ಥಳದಲ್ಲಿ ಕಟ್ಟಿತು ಗೆಳೆಯನೆ ॥೧॥
ಹುಳವು ತಾನದು ಸೊಗಸಿನಿಂ ಕೆಳಗಿಳಿದು ಬಂದಿತು ಗೆಳೆಯನೆ |
ಬಳಿಕವೇರುವ ಯತ್ನ ನಡಿಸಲು ನೆಲಕೆ ಬಿದ್ದಿತು ಗೆಳೆಯನೆ ॥ ೨ ॥

ಮುಂದಿನ ೩ ಪದಗಳು ಉತ್ತಮವಾಗಿ ಕೂಡುತ್ತವೆ. ಅವುಗಳಲ್ಲಿ ಹೆಚ್ಚು ಕಡಿಮೆ ಮಾಡುವ ಕಾರಣವಿಲ್ಲ ಅಂತು ೯ ಪದಗಳಾದವು. ನನ್ನ ವ್ಯವಸಾಯ-ಬಂಧುಗಳು ಪುಸ್ತಕದೊಳಗಿನ ಕವಿತೆಗಳನ್ನು ನೆಟ್ಟಗೆ ನೋಡಿ ಅವುಗಳಲ್ಲಿ ವಿಸಂಗತಿ ಕಂಡು ಬಂದರೆ ಮೇಲಿನಂತೆ ಅಥವಾ ತಮಗೆ ಸರಿಕಂಡ ಮೇರೆಗೆ ದುರುಸ್ತಮಾಡಿ ಕಲಿಸುವರೆಂದು ನಂಬಿದ್ದೇನೆ.

೨ನೇ ಪಾಠ-ಪ್ರತಿಕಾಲದ ವರ್ಣನೆ ಯಲ್ಲಿ 'ಏಳು ಬೆಳಗಾಯಿತು' 'ತಂಗಾಳಿ ಸುಳಿವುದು' ಇವೆರಡು ಸ್ಥಳಗಳು ಪದದ ಪೂರ್ವಾರ್ಧದ ಅಂತ್ಯವಿರುವದರಿಂದ ಅಂತ್ಯದ ಲಘುಗಳನ್ನು ಇಟ್ಟು ಬಲಾತ್ಕಾರದಿಂದ ಉಚ್ಚರಿಸಿದರೆ ಕವಿತೆಯು ಸರಳತ್ವವು ಕೆಡುವದು. ಮತ್ತು ಅಂತ್ಯಲಘುವು ಪುನಃ ಗುರುವಾಗದೆ ಇರಲಾರದು. ಇಂಥ ಪ್ರಕಾರವು ಮೇಲಿ

ನೆ ೦ ಸ್ಥಳಗಳಲ್ಲಿ ಆಗಿ, ಒಂದೊಂದು ಮಾತ್ರೆಯು ಹೆಚ್ಚಿಗಿರುವದರಿಂದ 'ಬೆಳಗಾಯಿತು' ಎಂಬಲ್ಲಿ 'ಬೆಳಗಾಯ್ತು' ಎಂಬದನ್ನು ಇಡಬೇಕು.

೧ನೇ ಪದದ "ಕತ್ತಲೆಯು ತಾ ಹರಿದು ಸುತ್ತು ಬೆಳಕಾಯಿತ್ಯೆ" ಈ ಚರಣದಲ್ಲಿರುವ ಎರಡು ಕ್ರಿಯೆಗಳಲ್ಲಿ ಒಂದು ಕ್ರಿಯೆ ಸಂಭವಿಸಿದರೆ ಇನ್ನೊಂದು ಸಂಭವಿಸಲಿಕ್ಕೇ ಬೇಕು; ಅಂದರೆ ಕತ್ತಲೆಯು ಹರಿಯಲು, ಬೆಳಕಾಗಲಿಕ್ಕೇ ಬೇಕು- ಇಂಥ ಅತಿನಿಕಟ ಸಂಬಂಧವು ಬೆಕ್ಕಿಗೆಳು ಅಡಗುವ ಕ್ರಿಯೆಗೂ ತಂಗಾಳಿ ಸುಳಿಯುವ ಕ್ರಿಯೆಗೂ ಇರುವದಿಲ್ಲ; ಆದ್ದರಿಂದ ೧ನೇ ಚರಣದಲ್ಲಿ ಹರಿದು, ಎಂಬ ಭೂತನ್ಯೂನವು ಒಪ್ಪುವಂತೆ ಎರಡನೇ ಚರಣದಲ್ಲಿ 'ಅಡಗಿ' ಎಂಬ ಭೂತನ್ಯೂನವು ಒಪ್ಪಲಾರದು. ಹಾಗೂ ಮೇಲೆ ಹೇಳಿದಂತೆ ಆ ಚರಣದಲ್ಲಿ ಒಂದು ಮಾತ್ರೆಯು ಹೆಚ್ಚಾಗಿರುವದರಿಂದ ಅದನ್ನು ಹೊಸದಾಗಿ ರಚಿಸುವದು ಅವಶ್ಯ ತೋರಿದ್ದರಿಂದ ೧ನೇ ೩ನೇ ಚರಣಗಳನ್ನು ಸುಧಾರಿಸಿ ಕೆಳಗೆ ಬರೆದಂತೆ ಇಟ್ಟರೆ ದೋಷಗಳು ತಪ್ಪುವವೆಂದು ತಿಳಿಯುತ್ತೇನೆ.

ಕತ್ತಲೆಯು ತಾ ಹರಿದು ಸುತ್ತು ಬೆಳಕಾಯಿತ್ಯೆ |
ಇತ್ತ ತಂಗಾಳಿ ಜುಳುಜುಳು ಸುಳಿಯಿತಯ್ಯಾ ॥
ಎತ್ತ ಚಿಕ್ಕಿಗಳಡಗಿದವು ಜ್ಯೋತಿಬಿಳುಪಾಯ್ತು |
ಅತ್ತ ಮೂಡಲ ಕೆಂಪು ಒತ್ತಿ ಯೇರುವದು ॥ ೧ ॥

ಹೀಗೆ ಮಾಡುವದರಿಂದ 'ಮುತ್ತು ತಂಪಾಗಿಹವು, ಎಂಬದು ಲೋಸವಾಗುತ್ತದೆ. ಬೆಳಗಿನ ಹೊತ್ತಿಗೆ ಸುತ್ತಲಿನ ಅನೇಕ ಪದಾರ್ಥಗಳಿಗಿಂತ ಮುತ್ತು ವಿಶೇಷ ತಂಪಾದದ್ದು ಕಾಣುವದಿಲ್ಲ. ಹ್ಯಾಗೂ ಇರಲಿ, ಅದನ್ನು ಕದಿಮೆ ಮಾಡಿದರೆ ಕವಿತೆಯ ದೋಷಗಳು ತಪ್ಪುವವೆಂದು ಕಾಣುವದರಿಂದ ಬಾಧೆ ಬಂದೀತೆಂದು ತೋರುವದಿಲ್ಲ. ಈ ಪಾಠದ ಕವಿತೆಗಳು ಸುಲಭವೂ ಮನೋಹರವೂ ಆಗಿವೆ ಎಂಬದಕ್ಕೆ ಸಂದೇಹವಿಲ್ಲ.

೪೪ನೇ ಪಾಠದ ೨ನೇ ಪದದಲ್ಲಿ 'ಕೊರೆದು, ಎಂಬಲ್ಲಿ

'ಕೊರೆಯುತ, ಇಟ್ಟರೆ ನೆಟ್ಟಗಾಗುವದು. ಅಲ್ಲಿ ಒಂದು ಮಾತ್ರೆ ಕಡಿಮೆಯಾಗಿದೆ.

ಅದರಂತೆ ೩ನೇ ಪಾಠದ ೯ನೇ ಪದದಲ್ಲಿ ೧ ಮಾತ್ರೆ ಕಡಿಮೆ ಬಿದ್ದದರಿಂದ 'ಬಣವೆಯನ್ನೊಟ್ಟುತಿರುವರು' ಎಂಬಲ್ಲಿ 'ಬಣವೆಯನ್ನು ವೊಟ್ಟುತಿರುವರು, ಎಂದಿರಬೇಕು.

ಇದರಂತೆ ೫ನೇ ಪಾಠದ ೩ನೇ ಪದದಲ್ಲಿ 'ಅಲಸವನು, ಈ ಚರಣದಲ್ಲಿ ೧ ಮಾತ್ರೆ ಕಡಿಮೆಯಿದ್ದದರಿಂದಲೂ ಅಲಸವನ್ನು, ಎಂದಿಟ್ಟರೆ ೩ನೇ ಚರಣದ ಮೊದಲನೆಯ ಪ್ಪಕ್ಷರವು ಗುರುವಿದ್ದ ಮೂಲಕ ೧ನೇ ಚರಣದ ಮೊದಲನೆಯ ಪ್ಪಕ್ಷರವೂ ಗುರುವಿರಬೇಕಾದ್ದರಿಂದಲೂ 'ಅಲಸ್ಯವ, ಎಂದಿಡುವದು ಯೋಗ್ಯ ತೋರುತ್ತದೆ

ತಪ್ಪಿಂದು ನನಗೆ ತೋಚಿದ ಕೆಲವು ಕವಿತೆಯ ದೋಷಗ ನ್ನಷ್ಟೇ ತಿದ್ದಿ ಕಳುಹಿಂದ್ದೇನೆ ನನ್ನ ವ್ಯವಸಾಯ ಬಂಧುಗಳಾದ ಮಾನ್ತರ ಜನರು ತಮಗೆ ಸರಿ ಕಂಡ ಹಾಗೆ ಕಲಿಸುವದು. ಇದರೊಳಗೇನಾದರೂ ಹೆಚ್ಚು ಕಡಿಮೆ ತೋರಿದಲ್ಲಿ ಸುಜ್ಞರಿಂದ ತಿಳಿಸೋಣಾಗಬೇಕು. ಲೋಭವಿಲ.

ತಾ. ೮-೨-೧೯೧೬ } ಗಣಪಯ್ಯ ಬಾಬಪ್ಪ ಕಾಗಲಸ್ಕೂಲ್
ಮಾ. ಅಸನೋಟಿ
ಕಾನಡಾ

ಶಾಲಾಪತ್ರಕದ ಏಡೀಟರ ಮಹಾರಾಯರ ಚರಣ ಸನ್ನಿಧಿಗೆ.

ಕೆಳಗಿನ ನಾಲ್ಕು ಪಂಕ್ತಿಗಳಿಗಿಂಬು ಕೊಡಿವಿರೆಂದು ಪೂರಾ ನಂಬಿದ್ದೇನೆ.

ಬಬ್ಬಾನೊಬ್ಬ ಮನುಷ್ಯನು ಬಂದು ಪಾತ್ರೆಯಲ್ಲಿ ಬಿಂಬೇ ಬಾಯೊಳಗೆ ಮಜ್ಜಿಗೆಯನ್ನೂ, ಮೊಸರನ್ನೂ, ಬೆಣ್ಣೆಯನ್ನೂ ಹಾಕಿ ಕೆಲಹೊತ್ತು ಉರಿ ಹಬ್ಬಿ ಕೆಲವೇಳೆ ಆದ ನಂತರ ಬೇರೆ ಬೇರೆ ಮಾಡಿದೆನೆಂದು ಹೇಳಿದನು. ಅದನ್ನು ಆವನು ಹೇಗೆ ಮಾಡಿದನು. ಎಂಬುದನ್ನು ದೇಶಬಾಂಧವರಾದವರಿಗೆ ಅರುಹಿದರೆ ಅನೆಂದ ಹೊಂದುವೆನೆಂದು ಕೋರುವೆನು.

ತಾ. ೧-೩-೧೯೧೬ } ದೇವಾದ್ರಿಯವನಾದ
ಶಾಲಾಪಾತ್ರರ

ಕರ್ನಾಟಕ ವಿದ್ಯಾವರ್ಧಕ ಸಂಘದ ಪರೀಕ್ಷೆಯು ಮೇ ತಿಂಗಳ
ಕಾರ್ತಿಕ ದಿವಸ ಪರೀಕ್ಷೆ ಪ್ರಾರಂಭವಾಗುವದು. ಅದಕ್ಕೆ ಬರುವ ಅ
ಮೇದವಾರರ ಅರ್ಜಿಯನ್ನು ಇದೇ ತಿಂಗಳ ಅಖೈರಿನೊಳಗಾಗಿ
ಕಳುಹಿಸುವಂತೆ ಸೂಚಿಸಬೇಕಾಗಿ ಸದರ ಕಾರ್ಯದರ್ಶಿಯವರಿಂದ
ಬರೆದು ಬಂದಿದೆ.

ವಿದ್ಯಾಜಾತೆಯಿಂದ ಒಪ್ಪಿಗೆಯನ್ನು ಪಡೆದ ಹಿನ್ನೆ ಅವೃತ್ತಿ
ಯು ಹೊಲೀಕೃತ ಜಮಾಖರ್ಚಿನ ಪದ್ಧತಿ ೪೪ ನೇ ಭಾಗ ಅಂಕ
ಗಣಿತ ೪೧೦| ಹೊಸರೂಲ ಸಹಿತ ಸ್ಟೀಕಲ್ಯಾಂಡ ರೆವ್ಹಿನ್ಯೂ ಕೋ
ಡ ೩೪೪, ನೇ ಭಾಗ ಗಣಿತ ೨ ತಿಂಗಳಲ್ಲಿ ತಯಾರಾಗುವದು
ನಾವು ಹೊಸದಾಗಿ ಬುಕ್ಕಡಿಪೋ ತೆರೆಯುವವರಿದ್ದೇವೆ.

ಕನವೀರ ಫಕೀರಪ್ಪ ಧಾರವಾಡ.

ಸೌದಾಗರ್ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಖಾಸಗಿ, ಮಾರ್ಷಡನ್ ಇತಿಹಾಸವು, ಕಥೆಗಳೂ, ಪುರಾಣ ವಗೈರೆಪು. ಗಳು ಅಮೆ. ಆಫೀಸ ಕ್ಲಾಕಗಳು ಸಹ ಕೋಛೆಯುಳ್ಳ ಮಾಸಿಗಳ ಬೆಳವಣಿಗೆಯು ಜೈಲು. ಕಿಸೆಯಲ್ಲಿಡುವ ಫೆಡಿಯಾರಗಳು ಅವೆ. ಮಾರ್ಷಡನ್ ಇ. ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ | ಮಹಮ್ಮದ ವ. ಅಬ್ದುಲತ
ಮಾದ ಸಾ॥ ಸೌದಾಗರ.

ತ್ವರೆಮಾಡಿರಿ! ತ್ವರೆಮಾಡಿರಿ!

ಕ್ರಯಕಟನೆ.

ಪಟ್ಟು ಪರಿ ೧೫ನೆಯ ತಾರೀಖಿಗ ಮಾರಾಟಕ್ಕೆ ಸಿದ್ಧವಾಗುವದು.

ಈ ವರ್ಷ ಮುಲಕೀ ಪರೀಕ್ಷೆಗೆ ಜೈಮಿನಿಯ ರನೆಯ ಸಂಧಿಯ ಆರಂಭದಿಂದ ೫೦ ಶ್ಲೋಕಗಳ ಅರ್ಥ ಸಹಿತ ಟಾಯಿಪಾತ ಬರಕಕ್ಕದ್ದೆಂದು ನೇಮಿಸಿದೆಯಷ್ಟೆ. ನಾವು ಶಾಲಾಗ್ರಾಹಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಬೇಕೆಂದು ಸಂಬಂಧವಾದ ಮೊಳೆಯಕ್ಷರಗಳಿಂದ ಆ ೫೦ ಶ್ಲೋಕಗಳನ್ನೂ, ಅವುಗಳ ಅನ್ವಯಾರ್ಥವನ್ನೂ, ಸಮಾಸವಿಗ್ರಹಗಳನ್ನೂ, ವಿಶೇಷ ವ್ಯಾಕರಣ ಸಂಬಂಧದ ನೇಮುಗಳನ್ನೂ, ಸೇರಿಸಿ ಮುದ್ರಿಸಿರುತ್ತೇವೆ. ಬೆಲೆ ೪ ಆಣೆ. ಅಂಚೀವೆಚ್ಚ ಬೇರೆ.

ಪುಸ್ತಕಗಳು ದೊರೆಯುವ ವಿಳಾಸ:-

ವ್ಯವಸ್ಥಾಪಕರ.

ಗ್ರಂಥಾಧಿಕಾರಿ ಮುದ್ರಾಲಯ ವಿಜಾಪೂರ

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೪೨] ಮೇ ೧೯೦೬. [ಸಂಚಿಕೆ ೫.

ಅನುಕ್ರಮಣಿಕೆ.	ಪುಟ.
೧. ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು	೯೭-೯೯
೨. ಕೀಟಕಗಳು	೯೯-೧೦೫
೩. ಚಟವು	೧೦೫-೧೦೯
೪. ರಾಜಸ್ಥಾನದ ಇತಿಹಾಸವು	೧೦೯-೧೧೪
೫. ಪತ್ರವ್ಯವಹಾರ	೧೧೫-೧೧೬
೬. ನೋಟೀಸು.	೧೧೭-೧೧೮
೭. ಟ್ರೇ. ಕಾ. ಸರಟಿಫೀಕೇಟ ಪರೀಕ್ಷೆಯ ಪ್ರಶ್ನೆಗಳು	೧೧೮-೧೨೦

CONTENTS.

1. Educational Intelligence and Useful Notes	97-99
2. Insects	99-105
3. Habit	105-109
4. The History of Rajasthan	109-114
5. Correspondance	115-116
6. Departmental Notice.	117-118
7. Training College Terminal Examination	118-120

DHARWAR:

PRINTED AT THE KARNATIC BOOK DEPOT PRESS,

1906.

ಕನ್ನಡ ಶಾಲಾಪತ್ರಿಕೆಯ ವಾರ್ಷಿಕ ವರ್ಗಣಿ ಮುಂಗಡ ೧೫ ಆ.
ಒಂದು ಸಂಖ್ಯೆಗೆ ... . ೨ ಆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಪ್ಪರೆ — ೪ ಪಂಕ್ತಿಗಳವರೆಗೆ ೧ ರೂ.
ಮೂರುಸಾರೆ ಇಪ್ಪರೆ ೬ „ ೧ ರೂ
ಆರುಸಾರೆ ಇಪ್ಪರೆ ೪ „ ೧ ರೂ.

ಸೂಚನೆಗಳು.

೧ ಶಾಲಾಪತ್ರಿಕೆಯಲ್ಲಿ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವುದು.
೨ ಪಟಿನೀಲೋಹಿತಗಳು, ಅಷ್ಟೂ ಪಂಕ್ತಿಗೂ ಹೊಂದಾ ಪಂಕ್ತಿಯು ಹಾಗಲು ಬೇಕಾಗುವದು.
೩ ಫಲಾಫಲಾಂತರ ಪತ್ರಿಕೆ ಛಾಪಿಸುವಹಾಗೆ ಮೊಲಿನ ದಿನ ೧ ಮ್ಮಡಿ ಫೀ ಬೀಳುವದ
೪ ಪ್ರಕಟನೆಯಕೂಡ ಹಣ ಕಳುಹಲಿಕ್ಕೆ ಬೇಕು
೫ ಟಿಕೀಟು ಇಟ್ಟ ಹೊರತು ಉತ್ತರ ಶಿಗಲಾರದು

S. K. Kodda.
ಮ್ಯಾನೇಜರ ಕ. ಶಾಲಾಪತ್ರಿಕೆ

ಶಾಲಾಪತ್ರಿಕೆ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಳೆಯುಂಸಚ್ಛಿಷ್ಟಕೋಕ್ತಪ್ರಕಾರಾ
ಖಿಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಪಯದಿಂದಿತ್ತವೆವೋದುವರ್ಗಸುಗುಣಂ ತೋರಲ್ಕೆಕೈಕೊಂಮುದ್ಯೆ।
ಬಯಕೆಯಿಂದೋಷಪತಿದ್ದ ವೇಳ್ವುದುಮುಧರಜ್ಞಾನಾಭಿವೃದ್ಧಿಪ್ರಯತ್ನಂ

ಪುಸ್ತಕ ೪೨.]　　ಮೇ ೧೯೦೬.　　ಸಂಚಿಕೆ ೫.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಸಾರೆ ಮದ್ರಾಸ ಯುನಿವ್ಹರ್ಸಿಟಿಯವರು ಇಬ್ಬರು ವೈಷ್ಣವ ಬ್ರಾಹ್ಮಣರ ಸ್ತ್ರೀಯರಿಗೆ ಬಿ. ಎ. ಪದವಿಯನ್ನು ಕೊಟ್ಟರು. ಇವರು ಮೈಸೂರ ಸೀಮೆಯವರು. ಒಬ್ಬಳು ರುಕ್ಮಿಣಿಯಮ್ಮಾ ಎಂಬವಳು; ಮತ್ತೊಬ್ಬಳ ಹೆಸರು ಶ್ರೀರಂಗಮ್ಮಾ ಎಂದಿರುವದು. ಉಭಯರು ಸೌಭಾಗ್ಯವತಿಯರೂ ಮಕ್ಕಳೊಂದಿಗರೂ ಆಗಿರುವರು. ಇವರು ಪ್ರೌಢ ವಯಸ್ಸಿನಲ್ಲಿ ಪರಭಾಷೆಯನ್ನು ಕಲಿತು ಗಂಡಸರಿಗೆ ಸರಿಯಾಗಿ ವಿದ್ಯಾಪೀಠದ ಪದವಿಯನ್ನು ಪಡೆದದ್ದು ಬಹಳ ಹೆಚ್ಚಿನದೆಂದು ಹೇಳಬಹುದು. ಈ ವಿದುಷಿಯರಿಂದ ದೇಶಕಾರ್ಯವು ಸರಿಯಾಗಿ ಸಾಗಲೆಂದು ನಾವು ಮನಃಪೂರ್ವಕ ಹಾರೈಸುತ್ತೇವೆ.

ವಿಜಾಪುರದ ಡೆವೂಟ ಎಜ್ಯುಕೇಶನಲ್ ಇನೆಸ್ಪೇಕ್ಟರರಾದ ರಾವಸಾಹೇಬ ಗರ್ದೆ ಖಂಡೇರಾಯರು ಹೋದ ಎಪ್ರೀಲದಿಂದ ಪೆನ್‌ಶನ್ ತೆಗೆದುಕೊಂಡಿದ್ದರಿಂದ ಅವರ ಸ್ಥಳಕ್ಕೆ

ಕಾಲೇಜದ ವೈಸಪ್ರಿನ್ಸಿಪಾಲರಾದ ರಾವಸಾಹೇಬ ಬಿಂಡಿಗೇರಿ ಕೃಷ್ಣರಾಯರನ್ನು ನೇಮಿಸಿದರು.

ಗರ್ದೆ ಖಿಂಡೇರಾಯರು ಬ್ರಾಹ್ಮಣರು. ಮೊದಲು ಹುಬ್ಬಳ್ಳಿಯ ಇಂಗ್ಲೀಷ ಸಾಲೆಯಲ್ಲಿ ಅಧ್ಯಾಪಕರಾಗಿದ್ದರು. ಬಳಿಕ ಬಿಜಾಪುರದ ಅಸಿಸ್ಟಂಟ ಡಿಪ್ರುಟಿಗಳಾಗಿ ಹೋದರು. ತರುವಾಯ ಕಾರವಾರದ ಡಿಪ್ರೊಟಿ ಎಜ್ಯುಕೇಶನಲ್ ಇನ್ಸ್ಪೇಕ್ಟರರಾಗಿ ಕೆಲಸ ಮಾಡಿ ಹೋದ ವರ್ಷ ವಿಜಾಪುರಕ್ಕೆ ಬಂದಿದ್ದರು. ಇವರು ಸ್ವಭಾವದಿಂದ ಶಾಂತರೂ ಸದಾಚಾರಿಗಳೂ ವೇದಾಂತಕ್ಕೆ ಮೆಚ್ಚಿದವರೂ ಇದ್ದಾರೆ. ಇವರು ಹುಬ್ಬಳ್ಳಿಯಲ್ಲಿ ಇರುವಾಗಲೇ, ಶ್ರೀಮತ್ ವಿದ್ಯಾರಣ್ಯರಿಂದ ರಚಿಸಲ್ಪಟ್ಟ ಪಂಚದಶಿ ಎಂಬ ಗ್ರಂಥಕ್ಕೆ ಕನ್ನಡ ಅರ್ಥವನ್ನು ಬರೆದಿರುವರು. ಇದರಿಂದ ಇವರ ಸಂಸ್ಕೃತ ಜ್ಞಾನವೂ ವೇದಾಂತವಿಷಯಕ ನೈಪುಣ್ಯವೂ ವ್ಯಕ್ತವಾಗಿರುತ್ತದೆ. ಇವರ ಆಳಿಕೆಯಾದರೂ ಸೌಮ್ಯವಾಗಿಯೂ ನ್ಯಾಯದಾಯಕವಾಗಿಯೂ ಸಾಗಿತೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಖಿಂಡೇರಾಯರು ಇನ್ನು ಶೇಷಾಯುಷ್ಯವನ್ನು ಆತ್ಮಾನಾತ್ಮ ವಿಚಾರದಲ್ಲಿಯೇ ಕಳೆಯುವರೆಂಬದು ಸ್ಪಷ್ಟವೇ ಸರಿ.

ಧಾರವಾಡದ ಮೂರನೇ ಅಸಿಸ್ಟಂಟ ಡಿಪೂಟಿಯವರಾದ ಮಿ. ಬಿಚ್ಚು ದಾವೋದರರಾಯರೂ ಹೋದ ಎಕ್ಸೇಲದಿಂದ ಪೆನ್ಶನ್ ತೆಗೆದುಕೊಂಡದ್ದರಿಂದ ಆವರ ಸ್ಥಳಕ್ಕೆ ಹುಬ್ಬಳ್ಳಿಯ ಎರಡನೇ ನಂಬರ ಸಾಲೆಯ ಹೆಡ್‌ಮಾಸ್ತರರಾದ ಮಿ. ನಾಯ್ಕುರೆಯವರನ್ನು ನೇಮಿಸಿದರು.

ಮಿ. ಬಿಚ್ಚು ದಾವೋದರರಾಯರಾದರೂ ಅನುಭವಿಕರಾದ ಅಧ್ಯಾಪಕರೇ ಆಗಿದ್ದರಿಂದ ತಮ್ಮ ಕರ್ತವ್ಯವನ್ನು ಸರಿಯಾಗಿ ಜರುಗಿಸಿದರೆಂದು ಹೇಳಲಿಕ್ಕೆ ಆತಂಕವಿಲ್ಲ. ಇವರು ಶಾಂತರೂ, ಸಭ್ಯರೂ ಆಗಿದ್ದರು.

ಅಣ್ಣಿಗೇರಿಯ ಶಾಲಾಧ್ಯಾಪಕರಾದ ಮಿ. ವಿರೂಪಾಕ್ಷ ಪ್ಪಾ ಹೂಲಿ ಇವರು ಪೆನ್‌ಕನ್ ತೆಗೆದುಕೊಂಡದ್ದರಿಂದ ಇವರ ಸ್ಥಳಕ್ಕೆ ಬಿಜಾಪುರ ಶಾಲೆಯ ಮಾಸ್ತರರಾದ ರಾಣು ಬೀವಜಿ ಮೋರೆಯವರನ್ನು ನೇಮಿಸಿದರು.

INSECTS.

ಕೀಟಕಗಳು.

ಪ್ರಾಣಿಕೋಟಿಯಲ್ಲಿ ಕೀಟಕವರ್ಗವು, ದೊಡ್ಡದೂ ಪೆಟ್ಟ ಹತ್ತ್ವಾದದ್ದೂ ಇರುತ್ತದೆ. ಕೀಟಕಗಳಿಗೆ ವಿಖ್ಯಾವಾಗಿ ತಲೆ, ಎದೆ, ಹೊಟ್ಟೆ ಎಂಬ ಮೂರೇ ಅವಯವಗಳುಂಟು. ತಲೆಯು ಮೇಲೆ ಎರಡು ಕಣ್ಣುಗಳೂ ಎರಡು ವಿಾಸೆಗಳೂ ಇರುವವು. ಇವುಗಳ ಒಂದೊಂದು ಕಣ್ಣು ಅನೇಕ ನೇತ್ರಗಳಿಂದ ಸಂಯುಕ್ತವಾಗಿರುವಂತೆ ತೋರುವದು. ಸೂಕ್ಷ್ಮದರ್ಶಕ ಯಂತ್ರದಿಂದ ಇವುಗಳ ಕಣ್ಣನ್ನು ನೋಡಲು, ಅದು ಕೆತ್ತಿದ ಹರಳಿನಂತೆ ಏಣುಳ್ಳದ್ದಾಗಿ ತೋರುವದು. ಕಣ್ಣಿನ ಕೆಳಗಡೆಯಲ್ಲಿ ಬಾಯಿ ಇರುವದು. ಬಾಯಿಯು ಕೆಳಗೆ ಮಾತ್ರ ತೆರೆಯ ಬರುವದು. ಎದೆಗೆ ಹೊಂದಿ ಆರು ಕಾಲುಗಳಿರುವವು. ಎರಡೂ ಮಗ್ಗಲಿಗೆ ಪಕ್ಕಗಳಿರುವವು ನೊಣಗಳಂಥ ಹುಳಗಳಿಗೆ ಎರಡೇ ಪಕ್ಕಗಳಿರುವವು. ಪತಂಗದಂಥ ಕೀಟಕಗಳಿಗೆ ನಾಲ್ಕು ಪಕ್ಕಗಳಿರುವವು. ಕೀಟಕಗಳು ಬಾಯಿಂದ ಇಲ್ಲವೆ ಪುಪ್ಪುಸಗಳಿಂದ ಶ್ವಾಸೋಚ್ಛ್ವಾಸ ಕ್ರಿಯೆಯನ್ನು ನಡಿಸುವದಿಲ್ಲ. ಎದೆಯ ಬದಿಗಿರುವ ಸೂಕ್ಷ್ಮ ಛಿದ್ರಗಳಿಂದ ಅವು ಹವೆಯನ್ನು ತಕ್ಕೊಳ್ಳುವವು. ಈ ಹವೆಯು ಶರೀರದೊಳಗಿರುವ ಅತಿ ಸೂಕ್ಷ್ಮವಾದ ವಾಯು ವಾಹಿನಿಗಳಿಂದ ಮೈತುಂಬಾ ಹರಿದಾಡುವದು. ಕೀಟಕಗಳ ಶರೀರಕ್ಕೆ ಎಲುಬುಗಳ ಆಧಾರವಿಲ್ಲ. ಕೇವಲ ಚರ್ಮದಿಂದಲೇ ಅವುಗಳ ಶರೀರವು ರಕ್ಷಿಸಲ್ಪಡುವದು. ಚರ್ಮವೇ ಬೇರೆ ಬೇರೆ ಅವಯವಗಳನ್ನು ಜೋಡಿಸಿ ಶರೀರವನ್ನು ಸರಳವಾಗಿ ಸೆಟಸಿ ನಿಲ್ಲಿಸುತ್ತದೆ, ಕೀಟ

ಕಗಳ ಶರೀರವು ಕಂಕಣಾಕೃತಿಯಾದ ಬಿಲ್ಲಿಗಳು ಒಂದಕ್ಕೊಂದು ಕೂಡಿ ಆಗಿರುತ್ತದೆ.

ಕೀಟಕಗಳಿಗೆ ಮೂರು ಅವಸ್ಥೆಗಳುಂಟು. ಇವು ಮೊದಲು ತತ್ತಿಯಲ್ಲಿರುವವು. ಅಲ್ಲಿಂದ ಹೊರಬಿದ್ದಾಗ ಇವು ಕೇವಲ ಗುಣಿಯನ್ನು ಹೋಲುತ್ತಿರುವವು. ಈ ಅವಸ್ಥೆಯಲ್ಲಿ ಅವು ಅಳತೆಗೆಟ್ಟು ತಿನ್ನುವವು. ಅದರಿಂದ ಬಲು ಬೇಗ ಬೆಳೆಯುವವು. ರೇಶಿಮೇ ಹುಳವು ಮೂವತ್ತು ದಿವಸಗಳಲ್ಲಿ ತನ್ನ ಮೊಟ್ಟಲಿನ ತೂಕದ ಸಾವಿರ ಪಾಲನ್ನು ಸೊಕ್ಕುವದು. ಬೆಳಿಗೆಗೆ ಅನುವಾಗುವಂತೆ ಈ ಸ್ಥಿತಿಯಲ್ಲಿ ಹುಳಗಳು ನಾಲ್ಕು ಸಾರೆ ಪರಿ ಬಿಡುತ್ತವೆ.

ಈ ಅವಸ್ಥೆಯಲ್ಲಿ ಪೂರ್ಣ ಬೆಳಿಗೆಯನ್ನು ಹೊಂದಿದ ಬಳಿಕ ಕೀಟಕಗಳು ಕೋಶಾವಸ್ಥೆಯನ್ನು ಹೊಂದುತ್ತವೆ. ಈ ಅವಸ್ಥೆಯಲ್ಲಿ ಇವುಗಳ ತೊಗಲು ಗಟ್ಟಿಯಾಗಿಯೂ ದಪ್ಪಾಗಿಯೂ ಆಗುವದು. ಮತ್ತು ಈ ತರದ ತೊಗಲಿನ ಹೊದಿಕೆಯಿಂದ ಹುಳವು ಆಚ್ಛಾದಿಸಲ್ಪಡುವದು. ಹೊದಿಕೆಯನ್ನು ಹೊದ್ದುಕೊಂಡು ಅದು ಗಡದ್ದು ಮಲಗಿದಾಗ ಅದಕ್ಕೆ ಜೀವವಿದ್ದಂತೆ ಸಹ ತೋರುವದಿಲ್ಲ. ಇದೇ ಅವಸ್ಥೆಯಲ್ಲಿ ಕೀಟಕಗಳು ತಮಗಾಗಿ ತಂತುಮಯವಾಗಿ ಬಿಂದು ಆಚ್ಛಾದನವನ್ನು ನಿರ್ಮಿಸಿಕೊಂಡು ಅದರಲ್ಲಿ ಅಡಗಿ ಕೊಳ್ಳುವವು. ಇವು ಐದನೆಯ ಸಾರೆ ಪರಿ ಬಿಡುವಾಗ ಈ ಕೋಶಾವಸ್ಥೆಯು ಇವಕ್ಕೆ ಪ್ರಾಪ್ತವಾಗುವದು. ಈ ಅವಸ್ಥೆಯಲ್ಲಿಯೇ ಕೆಲವು ನಿಯಮಿತ ಕಾಲದವರೆಗೆ ಇವು ವಾಸ ಮಾಡಿಕೊಂಡು ಕಡೆಯಲ್ಲಿ ಆ ಆಚ್ಛಾದನವನ್ನು ಹರಿದು ಹೊರಬಿದ್ದು ಮೂರನೆಯ ಅವಸ್ಥೆಯಾದ ಪತಂಗ ಹುಳದ ಸ್ವರೂಪವನ್ನು ಪಡೆಯುವವು. ಆಗ ಅವುಗಳಿಗೆ ರೆಕ್ಕೆ ಮೊದಲಾದ ಅವಯವಗಳೆಲ್ಲ ಪ್ರಾಪ್ತವಾಗಿರುತ್ತವೆ. ವು ಹಾರಾಡಲು ಶಕ್ತವಾಗುತ್ತವೆ. ಮತ್ತು ತತ್ತಿಯನ್ನು ಇಡಲಿಕ್ಕೂ ಸಮರ್ಥವಾಗುತ್ತವೆ. ಈ ಅವಸ್ಥೆಯಲ್ಲಿ ಹುಳಗಳು ಬಹು ದಿವಸ ಬಾಳುವದಿಲ್ಲ. ಅವು ತತ್ತಿಯನ್ನು

ಇಟ್ಟ ಬಳಿಕ ತುಸು ದಿನಸಗಳಲ್ಲಿಯೇ ಸತ್ತು ಹೋಗುತ್ತವೆ. ಚಿಕ್ಕಾಡು, ತಗಣಿ ಮೊದಲಾದ ಕೆಲವು ಕೀಟಕಗಳು ವ್ಯಕ್ತವಾದ ಕೋಶಾವಸ್ಥೆಯನ್ನು ಪಡೆಯದೆ ಒಮ್ಮೆಲೇ ಮೊರನೆಯುದಾದ ಪತಂಗದ ಸ್ವರೂಪವನ್ನು ಹೊಂದುತ್ತವೆ. ಅಂದರೆ ಪೂರ್ಣಾವಸ್ಥೆಯನ್ನು ಪಡೆಯುತ್ತವೆ.

ಕೀಟಕಗಳು ಕ್ಷುದ್ರ ಜೀವಿಗಳಾದರೂ, ಅವುಗಳಿಂದ ಬಹಳ ಉಪಯೋಗವುಂಟು. ಇವು ಸಂಖ್ಯೆಯಿಂದ ಹೆಚ್ಚಾಗಿರುವದರಿಂದಲೂ, ಕೂಳನ್ನು ಬಹಳ ತಿನ್ನುವದರಿಂದಲೂ, ಸೃಷ್ಟಿ ನಿಯಮದಂತೆ ಭೂಪೃಷ್ಠದ ಮೇಲೆ ಕೊಳೆಯುವ ಪ್ರಾಣಿಜ, ಉದ್ಭಿಜ್ಜ ಪದಾರ್ಥಗಳನ್ನು ತಿಂದು ಬಿಡುತ್ತವೆ. ಇದಲ್ಲದೆ, ಜೇನ ಹುಳದಂಥ ಹುಳಗಳಿಂದ ಜೇನತುಪ್ಪದಂಥ ಖಾದ್ಯ ಪದಾರ್ಥವೂ, ಲೇಶಿನಿಯು ಹುಳಗಳಂಥಾ ಕೀಟಕಗಳಿಂದ ವಸ್ತ್ರಕ್ಕೆ ಉಪಯೋಗವಾದ ತಂತುಗಳೂ, ಬೇರೆ ಕೆಲವು ಹುಳಗಳಿಂದ ಕಿರಮಂಜಿ, ಅರಗು ಮುಂತಾದ ಬಣ್ಣದ ಹಾಗೂ ಔಷಧದ ಪದಾರ್ಥಗಳೂ, ಹುಟ್ಟುತ್ತವೆ. ಈ ತರದ ಕೀಟಕಗಳಲ್ಲಿ ಕಿರಮಂಜೀ ಬಣ್ಣವನ್ನೂ ಅರಗನ್ನೂ ಉಂಟು ಮಾಡುವ ಪ್ರಾಣಿಗಳನ್ನು ಇದರಡಿಯಲ್ಲಿ ವರ್ಣಿಸುತ್ತೇವೆ.

ಕಿರಮಂಜಿ

ಕಿರಮಂಜೀ ಬಣ್ಣವು ಪ್ರಾಣಿಜ ಕೋಟಿಯಿಂದ ಉಂಟಾಗಿರುವದು. ಮೆಕ್ಸಿಕೋ ದೇಶದೊಳಗೆ ಒಂದು ತರದ ಗಿಡಗಳುಂಟು. ಆ ಗಿಡಗಳ ಮೇಲೆ ಕಿರಮಂಜಿಯೆಂಬ ಹೆಸರಿನ ಅನೇಕ ಹುಳಗಳು ಹುಟ್ಟಿ ಬಾಳುತ್ತವೆ. ಆ ಕೀಟಕಗಳಿಂದ ಕಿರಮಂಜಿಯು ಕಾಳುಗಳನ್ನು ತಯಾರ ಮಾಡುತ್ತಾರೆ, ಇವು ವಾಸ್ತವಿಕವಾಗಿ ಕಾಳುಗಳಲ್ಲ. ಅವು ಆ ಕೀಟಕಗಳ ಶರೀರಗಳೆಂಬದು ಮುಂದಿನ ವಿವರದಿಂದ ತಿಳಿಯುವದು. ಇವು ತಮಗೆ ತಾವೇ ವಿಪುಲವಾಗಿ ಬೆಳೆಯುವವು. ಇದರ ವ್ಯಾಪಾರವು ಬೆಳೆ ಬೆಳೆದಂತೆ ಆ ದೇಶದ ಜನರು ಈ ಗಿಡಗಳ

ನ್ನು ಬೇಕೆಂದು ವಿಶೇಷವಾಗಿ ಬೆಳಿಸುತ್ತಿರುವರು. ಕಿರ ಮುಂಜೇ ಹುಳವು ಸಣ್ಣ ಬಟಗಡ್ಲಿಯಷ್ಟು ಇರುವದು. ಮು ಳೆಗಾಲ ತೀರಿದ ಬಳಿಕ ಹವೆಯಲ್ಲಿ ಉಷ್ಣತೆ ಉಂಟಾಗಲು ಈ ಹುಳಗಳು ಸಾವಿರಾರು ತತ್ತಿಗಳನ್ನು ಹಾಕುವವು. ಹುಟ್ಟಿದಾಗ ಈ ಹುಳಗಳು ಸೂಜಿಯ ತಲೆಯಷ್ಟು ಇರು ವವು. ಇವು ಆ ಗಿಡದ ತುಂಬ ಹರಿಬಿದ್ದು, ಗಿಡಕ್ಕೆ ಅಂಟಿ ಕೊಂಡಿರುತ್ತವೆ. ಇವುಗಳೊಳಗಿನ ಗಂಡು ಹೆಣ್ಣುಗಳು ಬಂದನ್ನೊಂದು ಹೋಲುವದಿಲ್ಲ. ಬಣ್ಣವುಂಟಾಗುವದು, ಮುಖ್ಯವಾಗಿ ಹೆಣ್ಣು ಹುಳದಿಂದಲೇ. ಸುಮಾರು ದೀಡನೂ ರು ಹೆಣ್ಣು ಹುಳಕ್ಕೆ ಒಂದು ಗಂಡು ಹುಳ ಇರುವದು. ಈ ಕೀಟಕವು ಅರ್ಧಅಂಡಾಕೃತಿಯಾಗಿಯೂ, ಅಥವಾ ಅರ್ಧ ಗೋಲಾಕೃತಿಯಾಗಿಯೂ, ಬಹು ಸೂಕ್ಷ್ಮವಾಗಿಯೂ, ಇರುವದು.

ಇದರ ತಲೆ, ಕಣ್ಣು, ಕೊರಳು, ಹೊಟ್ಟೆ ಮುಂತಾದ ಅವಯವಗಳು ಬರೆಗಣ್ಣಿಗೆ ಕಾಣಿಸುವದಿಲ್ಲ. ಅದರಿಂದ ಇ ವುಗಳನ್ನು ನೋಡಿದರೆ ಪ್ರಾಣಿಗಳೆಂಬಂತೆ ತೋರುವದಿಲ್ಲ. ಈ ಸ್ಥಿತಿಯಿಂದಲೇ ಇವು ಪ್ರಾಣಿಗಳಿದ್ದರೂ, ಇವುಗಳಿಗೆ ಕಿರಮುಂಜಿಯ ಕಾಳುಗಳೆಂದು ಅನ್ನುವ ಪರಿಪಾಠ ಉಂ ಟಾಗಿರುವದು. ಹೆಣ್ಣು ಹುಳವು ಗಿಡದ ಯಾವದೊಂದು ಭಾಗಕ್ಕೆ ಅಂಟಿಕೊಂಡಿತೆಂದರೆ ಕಡೆತನಕ ಅದನ್ನು ಬಿಟ್ಟು ಅತ್ತಿತ್ತ ಸರಿದಾಡುವದಿಲ್ಲ. ಗಂಡು ಮಾತ್ರ ನಾಲ್ಕೂ ಕಡೆ ಗೆ ಹರಿದಾಡುತ್ತದೆ. ಅದಕ್ಕೆ ರೆಕ್ಕೆಗಳೂ ಇರುವವು. ಹೆ ಣ್ಣು ಹುಳವು ತತ್ತೀ ಹಾಕಿದ ತುಸು ದಿವಸಗಳಲ್ಲಿಯೇ ಸಾಯುತ್ತದೆ. ತತ್ತಿಗಳು ಕವಚದಲ್ಲಿ ಆಶ್ರಯ ಮಾಡಿ ಕೊಂಡಿರುತ್ತವೆ. ಈ ಕೀಟಕಗಳು ಬಹುತರವಾಗಿ ಒಂ ದು ವರ್ಷ ಬಾಳುತ್ತವೆ. ಇವು ಪೂರ್ಣವಾಗಿ ಬೆಳೆದಾ ಗ ಅರ್ಧಗೋಲದಂತೆ ಕಾಣುವವು. ಇವು ಕೆಂಪು, ಕಿರ ಮುಂಜಿ ಕರೇ ಬಣ್ಣದವಿರುವವು. ಇವು ಗಿಡದ ತುಂಬಾ ಹಬ್ಬಿದ ಬಳಿಕ ನಾಲ್ಕೈದು ತಿಂಗಳಿಗೆ, ಮೊಂಡ ಹೂತಿ

ಯಿಂದಾಗಲಿ, ಕಸಬರಿಗೆಯಿಂದಾಗಲಿ, ಬ್ರಶ್ಶಿದಿಂದಾಗಲಿ ಇ
ವುಗಳನ್ನು ಬಳಿದು ಜಮೆ ಮಾಡುವರು. ಅನಂತರ ಎಸ
ರು ಬಂದ ನೀರಲ್ಲಿ ಹಾಕಿ ಅವುಗಳನ್ನು ಕೊಲ್ಲುವರು. ತ
ರುವಾಯ ಕಾದ ಹಂಚಿನ ಮೇಲೆ ಇಲ್ಲವೆ ಬಿಸಲಲ್ಲಿ ಹಾಕಿ
ಒಣಗಿಸುವರು. ಈ ಹುಳಗಳನ್ನು ಕುದಿಯುವ ನೀರಲ್ಲಿ
ಹಾಕಿ ಕುಚ್ಚಲು, ಇವುಗಳ ಮೈಮೇಲಿನ ಕೂದಲು ಮುಂ
ತಾದ್ದೆಲ್ಲ ಹೊರಟು ಹೋಗುವದರಿಂದ ಕೀಟಕಗಳ ಶರೀರ
ವೆಲ್ಲ ಕೆಂಪನ್ನ ಊದೀ ಬಣ್ಣದಿಂದ ಹೊಳೆಯ ತೊಡಗುತ್ತ
ದೆ. ಮೇಲೆ ಹೇಳಿದಂತೆ ಈ ಕೀಟಕಗಳನ್ನು ಕೊಂದು ಒ
ಣಗಿಸಿದ ಬಳಿಕ ಮಾರಾಟಕ್ಕೆ ಕಳಿಸುವರು. ಅವುಗಳನು
ಕೈಯಲ್ಲಿ ತಕ್ಕೊಳ್ಳಲು, ಕಾಳಿನಂತೆಯೇ ಕಾಣುವವು. ಆದ
ರೆ ಈ ಒಣಗಿದ ಪ್ರಾಣಿಗಳನ್ನು ಸುಡುವ ನೀರಲ್ಲಿ ಚಲ್ಲಲು
ಅವು ಮರಳಿ ತಮ್ಮ ಅರ್ಧಗೋಲಾಕೃತಿಯನ್ನು ಹೊಂ
ದುವವು ಹಾಗೂ ಅವುಗಳ ಅವಯವಗಳಾದ ಕಾಲು, ಕ
ಣ್ಣು, ತಲೆ ಮುಂತಾದವುಗಳು ಗೋಚರವಾಗುವವು. ನೆನೆ
ದು ಉಬ್ಬಿದ ಹುಳವನ್ನು ಚಿಮುಟಿಕೆಯಲ್ಲಿ ಹಿಡಿದು ಹಿಚ
ಕಲು, ಅದರ ಒಡಲೊಳಗಿಂದ ಅನೇಕ ಕೆಂಪನ್ನ ಕಣಗ
ಳು ಹೊರಬೀಳುವವು. ಇದೇ ರೀತಿಯಿಂದಲೇ ದೊಡ್ಡ
ಪ್ರಮಾಣದಿಂದ ಕಿರಮಂಜೀ ಬಣ್ಣವನ್ನು ತಯಾರ ಮಾ
ಡುವರು. ರೇಶಿಮೆ ನೂಲುಗಳನ್ನು ಈ ಬಣ್ಣದಲ್ಲಿ ಎದ್ದಿ
ಭೋತರ ಶೀರೆಗಳಲ್ಲಿ ಉಪಯೋಗಿಸುವದು ಸುಪ್ರಸಿದ್ಧವು.
ರುಮಾಲ, ಶಲ್ಲೆಗಳಿಗಾದರೂ ಕಿರಮಂಜೀ ಬಣ್ಣವನ್ನು ಎ
ದ್ಯುವ ರೂಢಿಯು ವಿಶೇಷವುಂಟು.

ಆದಗೆ.

ಇಷ್ಟಾದರೂ ಪ್ರಾಣಿಜ ಕೋಟೆಯಲ್ಲಿಯೇ ಸವಾವೇಕ
ವಾಗುತ್ತದೆ. ಆಲ, ಅರಳಿ, ಮುತ್ತಲ ಮುಂತಾದ ಗಿಡಗ
ಳಿಗೆ ಬಾದು ತರದ ಹುಳಗಳು ಮೆತ್ತಿಕೊಂಡದ್ದನ್ನು ಬಹು

ಜನರು ನೋಡಿರಬಹುದು. ಈ ಹುಳಗಳಿಂದಲೇ ಅರಗು ಸಿದ್ಧವಾಗುತ್ತದೆ. ಈ ಹುಳಗಳು ಗಿಡಗಳ ಸಣ್ಣ ಸಣ್ಣ ಟೊಂಗೆಗಳಿಗೆ ಅಂಟಿಕೊಂಡಿರುತ್ತವೆ. ಇವಾದರೂ ಸೂಜಿಯ ತಲೆಯಷ್ಟೇ ದೊಡ್ಡವಿರುವವು. ಈ ಹುಳಗಳು ಹೆಚ್ಚಾಗಿ ಬೆಳೆಯಲು, ಯಾವತ್ತೂ ಗಿಡವನ್ನು ತುಂಬಿ ಬಿಡುವವು. ಆದರೆ ಗಿಡದ ಟೊಂಗೆಯನ್ನೆಲ್ಲ ಒತ್ತಟ್ಟಿನಿಂದ ವ್ಯಾಪಿಸದೆ, ಕೆಲಕೆಲವು ಹುಳಗಳು ಕೂಡಿ ಕೊಂಬೆಯೊಳಗೆ ಅಲ್ಲಲ್ಲಿ ಅಂಟಿಕೊಂಡು, ಚತುಷ್ಕೋನ, ಪಟ್ಕೋನ ಅಷ್ಟಕೋನ ಮುಂತಾದ ಆಕೃತಿಗಳನ್ನು ಉಂಟು ಮಾಡುತ್ತವೆ. ಈ ಜಾತಿಯ ಹುಳಗಳ ಹೊಟ್ಟೆಯೊಳಗಿಂದ ಒಂದು ಬಗೆಯ ಜಿಗಟು ಪದಾರ್ಥವು ಹೊರಬಿದ್ದು ಇವುಗಳ ಶರೀರದ ಬಾಹ್ಯಪ್ರದೇಶಕ್ಕೆ ಮೆತ್ತಿಕೊಳ್ಳುವದು. ಈ ಮೆತ್ತಿಗೆಯು ಅರ್ಧನೊಲು, ನೊಲಿನಷ್ಟು ದಪ್ಪಾಗುವದು. ಇದೇ ಅರಗು. ಈ ಕವಚದಲ್ಲಿಯೇ ಈ ಹುಳಗಳು ತತ್ತೀ ಇಕ್ಕುತ್ತವೆ. ತತ್ತಿಗಳು ಪಕ್ವವಾಗಲು, ಮರಿಗಳು ಈ ಕವಚವನ್ನು ಒಡೆದು ಹೊರಬೀಳುವವು. ಈ ಹುಳಗಳು ಮೆತ್ತಿಕೊಂಡ ಟೊಂಗೆಗಳು ಕೆಂಪು ಕಾಣಿಸುವವು. ತತ್ತಿಗಳು ಪಕ್ವವಾಗುವದಕ್ಕಿಂತ ಮುಂಚೆ, ಅಥವಾ ಮರಿಗಳು ಹೊರಬೀಳುವದಕ್ಕಿಂತ ಮುಂಚೆ ಇಂಥ ಟೊಂಗೆಗಳನ್ನು ಕಡಿದು ಬಿಸಲಲ್ಲಿ ಒಣಗಿಸುವರು. ಇದರಿಂದ ತತ್ತಿಗಳೂ ಮರಿಗಳೂ ಸತ್ತು ಹೋಗುವವು. ಬಳಿಕ ಆ ಕೀಟ ಕಳೇಬರಗಳನ್ನೆಲ್ಲ ಸಾಧನಗಳಿಂದ ಬಳಿದುಕೊಳ್ಳುವರು. ಇದೇ ಕಡ್ಡಿಯ ಅರಗು. ಒಳ್ಳೇ ಕೆಂಪಾಗಿರುವ ಅರಗು ಬಣ್ಣಕ್ಕೆ ಬರುವದು. ತುಸು ಕಪ್ಪಿನ ಮೇಲಿರುವಂಥ ಛಿದ್ರಯುಕ್ತವಾಗಿರುವ ಅರಗು ವಾರ್ನಿಸಿಗೆ ಬರುವದು.

ಕಡ್ಡಿಅರಗನ್ನು ಪುಡಿ ಮಾಡಿ ಹಪ್ಪಳಕಾರದ ನೀರಲ್ಲಿ ಇಪ್ಪತ್ತುನಾಲ್ಕು ತಾಸು ನೆನೆಯಿಡುವರು. ಬಳಿಕ ಅದನ್ನು ಅರಿವೆಯಲ್ಲಿ ಹಾಕಿ ಹಿಂಡಿ ಬಣ್ಣವನ್ನು ತಕ್ಕೊಳ್ಳುವ

ಕು. ಇದೇ ಅರಗಿನ ಬಣ್ಣವೆಂದು ಬಾಜಾರದಲ್ಲಿ ಮಾರಾಟವಾಗುವದು. ಉಳಿದ ಚರಟವೇ ಚೋಪಡಿ ಅರಗೆಂದು ಹೇಳಲ್ಪಡುವದು. ಈ ಕಡ್ಡಿ ಅರಗನ್ನು ಉದ್ದನ್ನ ಚೀಲದಲ್ಲಿ ಹಾಕಿ ಬೆಂಕಿಯ ಮೇಲೆ ಹಿಡಿಯಲು ಕರಗುವದು. ಬಳಿಕ ಅದನ್ನು ಎಲೆಗಳ ಮೇಲೆ ಹಿಂಡಲು, ರಸವು ಆರಿ ತೆಳ್ಳನೆ ಹಲಹಿಗಳಾಗುವವು. ಇದಕ್ಕೇ ಪತ್ರಿಯು ಅರಗೆಂದು ಹೇಳುವರು.

ಅರಗಿನ ಉಪಯೋಗ ಬಹಳವುಂಟು. ಅರಗಿನೆ ಬಣ್ಣವನ್ನು ಕಟ್ಟಿಗೆಯ ಒಡಿಪೆಗಳಿಗೂ, ಉಣ್ಣೆಗೂ ಕೊಡುವರು. ಚೋಪಡೀ ಅರಗಿನಲ್ಲಿ ನಾಲ್ಕು ಪಾಲಲ್ಲಿ ಒಂದು ಪಾಲು ಟರಪೆಂಟಾಯಿನ್ ಎಣ್ಣೆಯನ್ನು ಮಿಶ್ರ ಮಾಡಿ ತುಸು ಇಂಗಳೀಕವನ್ನು ಹಾಕಲು, ಕೆಂಪು ಬಣ್ಣದ ಮುದ್ರೆಯು ಮಾಡುವ ಅರಗೂ ತುಸು ಕಾಡಿಗೆ ಹಾಕಲು, ಕಪ್ಪು ಬಣ್ಣದ ಮುದ್ರೆಯು ಮಾಡುವ ಅರಗೂ ಸಿದ್ಧವಾಗುತ್ತದೆ. ಪತ್ರೀ ಅರಗಿನಿಂದ ಮುಶಿ ಮಾಡುವರು.

ಕಡ್ಡಿ ಅರಗಿಗೆ ಒಂದು ತರದ ರಾಳವೆಂದರೂ ಸಲ್ಲುವೆಂತಿದೆ. ಇದನ್ನು ನಾಲಿಗೆಗೆ ಹಚ್ಚಿಕೊಂಡರೆ ನಾಲಿಗೆಯು ನೇರಿಲ ಬಣ್ಣಾದ್ಯಾಗುವದು. ತುಸು ಕಹಿ, ಒಗರು ರುಚಿಯಾಗಿ ಹತ್ತುವದು. ಇದು ನೀರಲ್ಲಿ ಕರಗುವದಿಲ್ಲ. ಆದರೂ ಇದರ ಸಂಪರ್ಕದಿಂದ ನೀರು ಕೆಂಪಾಗುತ್ತದೆ. ಸ್ಥಿರತೈಲಗಳಲ್ಲಿಯೂ ನೆಣದಲ್ಲಿಯೂ ಇದು ಅವಿದ್ರಾವ್ಯವಾಗಿರುವದು. ಆಲ್ಕ ಹೋಲದಲ್ಲಿ ಮಾತ್ರ ತುಸು ಮಟ್ಟಿಗೆ ಕರಗುವದು. ಟಂಕಣಖಾರದ ದ್ರವದಲ್ಲಿ ಸಂಪೂರ್ಣವಾಗಿ ಕರಗುವದು.

HABIT

ಚಟವು.

ಉದಾ—ನಾಯಿಗಿಂತ ತಾನು ಹೆಚ್ಚಿನವನೆಂದು ಅದರ ಕೊರಳಲ್ಲಿ ಹಗ್ಗ ಕಟ್ಟಿ ಓಡಿಸುವದಕ್ಕೆ ಒಡಿಗೆಯಿಂದ ಹೊಡೆ

ಸಿಯುವದೂ ಮಾಡುವನು. ಅಧಿಕಾರ ನಡಿಸುವಾಗ ಅಡ್ಡಿ ಮಾಡಿದರೆ ಕ್ರೂರತನವು ಹೆಚ್ಚಾಗುವದು. ಇಲ್ಲದಿದ್ದರೆ ಅಲ್ಲಿಗೇ ಮುಗಿಯುವದು. ಉದಾ—ಮಾಸ್ತರನು ಹುಡುಗರನ್ನು ಹೊಡೆದು ತಾನೇ ಕಷ್ಟ ಬಡುವನು ಹುಡುಗನು ಅಡ್ಡಿ ತಂದರೆ ಹೆಚ್ಚು ಕ್ರೂರತನ ಮಾಡುವಂತೆ ಹುಡುಗರಾದರೂ ಮಾಡುವರು.

೩. ಹುಡುಗರ ಕುತೂಹಲವು ತೃಪ್ತಿಹೊಂದುವದಿಲ್ಲ; ಅದನ್ನು ತೃಪ್ತಿಪಡಿಸಿಕೊಳ್ಳಲಿಕ್ಕೆ ಕ್ರೂರತನ ಮಾಡುವರು. ಉದಾ—ತೆರೆದ ಬುಕ್ಕಿನಲ್ಲಿ ನೊಣ ಕೂತ ಕೂಡಲೆ ಬುಕ್ಕು ಬಡೆದು ಮೂಡಿದ ಚಿತ್ರವನ್ನು ಕುತೂಹಲದಿಂದ ನೋಡುತ್ತಾರೆ. ಕ್ರೂರತನದಲ್ಲಿ ಗತಾಸದಾಯಕವಾದಂಥ ಮತ್ತು ನಾಶವಾಡುವಂಥ ಕ್ರೂರತನಗಳೆಂದು ಎರಡು ಭಾಗಗಳನ್ನು ಮಾಡಬಹುದು. ಇದನ್ನು ವಸ್ತುಶಿಕ್ಷಣದಿಂದ ಬಿಡಿಸಬಹುದು.

೪. ಹುಡುಗರು ಅಜ್ಞಾನದ ಮೂಲಕ ಕ್ರೂರಕೃತ್ಯಗಳನ್ನು ಮಾಡುವರು. ಕಾರಣ ಅಜ್ಞಾನವನ್ನು ಹೋಗಲಾಡಿಸಬೇಕು.

೫. ಅನುಕರಣದಿಂದ ಕ್ರೂರತನವು ಬೆಳೆಯುವದು. ಉದಾ—ಪಶುಗಳನ್ನು ಕ್ರೂರತನದಿಂದ ನಡಿಸಿಕೊಳ್ಳುವದು. ಹಣದಾಸೆಗಾಗಿ ಚಿಕ್ಕ ಮಕ್ಕಳನ್ನು ಕಾರಖಾನೆಗಳಲ್ಲಿ ಬಹಳ ದುಡಿಯ ಹಚ್ಚುವದೂ ಶಾಲೆಯಲ್ಲಿ ಬೈದಾಡುವದೂ, ಹೊಡೆಯುವದೂ ಇವೆಲ್ಲ ಅನುಕರಣದ ಕ್ರೂರತನಗಳು.

ಕ್ರೂರತನಗಳನ್ನು ಕಳೆಯುವ ಉಪಾಯಗಳು.

ಕ್ರೂರತನವು ಕಂಡ ಕೂಡಲೆ ಅದನ್ನು ಸಮೂಲನಾಶವಾಡಬೇಕು. ಕ್ರೂರತನ ಹುಟ್ಟಿದ ಬಳಿಕ ನಾಶ ಮಾಡುವದಕ್ಕಿಂತ ಮೊದಲೇ ಅದು ಹುಟ್ಟದ ಹಾಗೆ ಮಾಡುವದು ಒಳ್ಳೇದು. ಶಾಲೆಯಲ್ಲಿ ಹುಡುಗರ ಚಟುವಟಿಕೆಗಳು ದಣಿಯುವ ಹಾಗೆ ವಿದ್ಯಾವಿಕೆ ಅಭ್ಯಾಸಕ್ರಮಗಳಿರಬೇಕು.

ಅಧಿಕಾರ ಪ್ರೀತಿಯನ್ನು ಒಳ್ಳೇ ಮಾರ್ಗಕ್ಕೆ ಹಚ್ಚಬೇಕು. ಕುತೂಹಲವನ್ನು ತೃಪ್ತಿಮಾಡಿಕೊಡಬೇಕು. ಅಜ್ಞಾನವಿದ್ದಲ್ಲಿ ವಸ್ತುಪಾಠಗಳನ್ನು ಕಲಿಸಿ ಅವರ ಅಜ್ಞಾನ ತೆಗೆದುಹಾಕಬೇಕು. ಪರಸ್ಪರರಲ್ಲಿ ಸಾಮಾಜಿಕ ಪ್ರೀತಿಯನ್ನು ಬೆಳಿಸಬೇಕು. ದಯಹುಟ್ಟುವ ಸಂಗತಿಗಳನ್ನು ಅವರಿಂದ ಮಾಡಿಸಬೇಕು. ಕೆಲ ಹುಡುಗರು ಹುಟ್ಟಾ ಕ್ರೂರರು ಕೆಲ ಹುಡುಗರು ಅನುಕರಣದಿಂದ ಕ್ರೂರರೂ ಆಗಿರುತ್ತಾರೆ ಇದನ್ನರಿತು ತಕ್ಕಂತೆ ನಡಿಸಿಕೊಳ್ಳಬೇಕು. ತೀರ ಸಣ್ಣವರಿರುವಾಗಲೇ ಕ್ರೂರತನದ ಬಗ್ಗೆ ಅಸಹ್ಯ ಹುಟ್ಟುವಂತೆ ಯತ್ನಿಸಬೇಕು. ಯಾವ ಪದಾರ್ಥಗಳನ್ನು ಕೆಡಿಸಬಾರದು. ಕೆಡಿಸುವ ಪ್ರಸಂಗ ಇಂದರೆ ಕೆಡಿಸದೆ ಬಿಡುವದಕ್ಕಿಂತ ಕೆಡಿಸಿದರೆ ಹೆಚ್ಚು ಲಾಭವಾಗುವಂತೆ ಇದ್ದರೆ ಕೆಡಿಸಬೇಕೆಂಬ ಭಾವನೆ ಹುಡುಗರಲ್ಲಿ ಹುಟ್ಟಿಸಬೇಕು. ಶಾಲೆಯೊಳಗಿನ ತಿದ್ದುವಿಕೆ ಕ್ರೂರವೂ ಕಠಿಣವೂ ಇರಬಾರದು. ನ್ಯಾಯವಾದ ಅಂತಃಕರುಣದಿಂದ ಕೂಡಿರಬೇಕು. (ಮಿತಿಮೀರಿದ ಅಂತಃಕರುಣವು ಅಪರಾಧಕ್ಕೆ ಕಾರಣವಾಗುವದು). ಹುಡುಗರನ್ನು ಆಟಕ್ಕೆ ಹಚ್ಚಿ ಆಟದಲ್ಲಿ ಸ್ವಾಭಾವಿಕವಾಗಿ ಕ್ರೂರತನಗಳು ಹೊರಬಿದ್ದ ಕೂಡಲೆ ತಿಳಿಹೇಳಿಕೆಯಿಂದಲೂ ಶಿಕ್ಷೆಯಿಂದಲೂ ಪ್ರತಿಬಂಧಿಸಬೇಕು, ಧರ್ಮ ಸಂಬಂಧದ ಅನೇಕ ಕಥೆಗಳನ್ನು ಹೇಳಿ ನೀತಿಯನ್ನು ಹುಟ್ಟಿಸಿ ಅವರ ಕ್ರೂರತನವನ್ನು ತೆಗೆದುಹಾಕಬೇಕು,

ನಡತೆಯು

ಮನೋ ಇಚ್ಛೆಯಿಂದುಂಟಾಗುವ ಕೃತ್ಯಗಳೇ ನಡತೆಗಳೆನಿಸುತ್ತದೆ. ಆದರೆ ಹಾರೋಣ, ಓಡ್ಯಾಡೋಣ ಮುಂತಾದ ಕ್ರಿಯೆಗಳು ಮನೋಭಾವನೆಯಿಂದ ಹುಟ್ಟುತ್ತವೆ. ಆದರೆ ಇವು ನಡತೆಗಳಲ್ಲಿ ಬರುವದಿಲ್ಲ. ಈ ಕಾರ್ಯಗಳನ್ನು ಪಶುಗಳು ಕೂಡಾ ಮಾಡುತ್ತವೆ. ಆದ್ದರಿಂದ ಮನುಷ್ಯನ ಮನೋಇಚ್ಛೆಯಿಂದ ಉಂಟಾಗುವ ಕೃತ್ಯಗ

ಳಿಗೆ ನಡತೆ ಎನೆಬಒದಾಯಿತು. ಆದರೆ ಮನುಷ್ಯನೆ ವಸ್ತು ಚಲೋ ಸಂಗತಿಗಳ ಕಡೆಗೂ ಕೆಟ್ಟ ಸಂಗತಿಗಳ ಕಡೆಗೂ ಹೋಗುತ್ತದೆ. ಆದ್ದರಿಂದ ಮನುಷ್ಯನು ಕೆಟ್ಟ ಇಚ್ಛೆಯಿಂದಾಗಲಿ, ಚಲೋ ಇಚ್ಛೆಯಿಂದಾಗಲಿ ಮಾಡುವ ಕೃತ್ಯಗಳಿಗೆ ನಡತೆಯೆನ್ನುವ ಭಾಗ ಬಿದ್ದೀತು. ಆದರೆ ಹಾಗಲ್ಲ. ಮನುಷ್ಯನ ನೈತಿಕ ಮನೋಭಾವನೆಯಿಂದುಂಟಾಗುವ ಕೃತ್ಯಗಳೇ ನಡತೆಯೆಂದು ತಿಳಿಯುವದು. ಈ ನೈತಿಕ ಭಾವನೆಯೇ ನಮ್ಮ ಎಲ್ಲ ಚಟಗಳ ಮೂಲಾಧಾರವಾಗಿದೆ. ಆದ್ದರಿಂದ ನಮ್ಮ ಎಲ್ಲ ಚಟಗಳನ್ನು ಒಟ್ಟುಗೂಡಿಸಿ ಅದರ ನೈತಿಕ ಸರಾಸರಿ ತೆಗೆದರೆ ಬರುವಂಥ ಫಲಿತವೇ ನಡತೆ ಎನಿಸುತ್ತದೆ. ನೈತಿಕ ಭಾವನೆಯಿಲ್ಲದೆ ಬರೇ ಯಂತ್ರದಂತೆ ಕೆಲಸ ಮಾಡುವದಕ್ಕೆ ನಡತೆಯೆನಬಾರದು. ಕಾರಣ ಎಲ್ಲ ಚಟಗಳಲ್ಲಿ ನೈತಿಕ ಭಾವನೆಯು ಬೇಕು. ಆದ್ದರಿಂದ ಯಾವ ನೈತಿಕ ಕೃತ್ಯಗಳು ಮನೋ ಇಚ್ಛೆಯಾಗಿ ತಾನು ಸಾಧಿಸತಕ್ಕ ಹೇತುವನ್ನು ಸಾಧಿಸಲಿಕ್ಕೆ ಅನುಕೂಲವಾಗಿರುವವೋ ಅಂಥ ಕೃತ್ಯಗಳನ್ನು ಮಾಡೋಣವೇ ನಡತೆಯೆಂದು ಹೇಳಲ್ಪಡುವದು.

ಇಚ್ಛೆಯಿಂದ ಮಾಡುವ ಕೃತ್ಯಗಳು ಮನದಲ್ಲಿ ನಟ್ಟು ನೈತಿಕ ತತ್ವಗಳಿಗೆ ಸರಿಯಾಗಿದ್ದರೆ ತಾಳ್ಮೆಯಿಂದ (ಒಳ್ಳೇರೀತಿಯಿಂದ) ನಡೆದಂತೆ ಆಯಿತು. ಈ ತರದಿಂದ ನಡೆಯುವ ಚಟವನ್ನು ಹಚ್ಚಿಕೊಳ್ಳಬೇಕು. ಇದರಲ್ಲಿ ಎಲ್ಲ ಕಿರುಕಳ ತತ್ವಗಳು ಮುಖ್ಯ ತತ್ವಕ್ಕೆ ಅಧೀನವಾಗಿರಬೇಕು. ಹೀಗಾದರೆ ಇದಕ್ಕೆ ಹಚ್ಚಿಕೊಂಡ ಸ್ವಭಾವ ಅನ್ನುವರು. ಅತಿ ಮಹತ್ವವಾದ ತತ್ವಗಳನ್ನು ಮನದಲ್ಲಿಟ್ಟು ಇಚ್ಛೆಗೂ ಕೃತ್ಯಗಳಿಗೂ ಮೇಳು ಬೀಳುವಂತೆ ಕಿರುಕಳ ವ್ಯವಹಾರಿಕ ತತ್ವಗಳಿಗೆ ಲಕ್ಷ ಕೊಡದೆ ನಡೆಯುವದೇ ಶೀಲಸ್ವಭಾವವು.

ಚಲೋ ಮಾರ್ಗದಲ್ಲಿ ಸ್ವಭಾವವು ಸ್ಥಿರವಾಗಿ ಇರೋಣವೇ ಶೀಲಸ್ವಭಾವದ ಅವಶ್ಯವಾದ ಲಕ್ಷಣ (ದ್ರವ್ಯ) ವಾಗಿದೆ

ಶೀಲಸ್ವಭಾವ ಬೆಳೆಯುವ ಕ್ರಮ—ಸ್ವಭಾವದ ಬಾಲ್ಯಾವಸ್ಥೆಯ ಸ್ಥಿತಿಯಂದರೆ ಹುಡುಗರಲ್ಲಿ ಪರಂಪರೆಯಿಂದ ಬಂದಂಥ ಹುಟ್ಟುಬುದ್ಧಿಯೇ ಇರುವದು. ಇದೇ ಸ್ವಭಾವದ ಆದಿಯು ಬರಬರುತ್ತ ಇಚ್ಛಾ ಮತ್ತು ಬುದ್ಧಿ ಬೆಳೆಯುತ್ತ ಹೋದ ಹಾಗೆ ಇವುಗಳಿಂದ ಸ್ವಭಾವಕ್ಕೆ ಕಾರ್ಯ ಮಾಡುವಂಥ ಸ್ವತಂತ್ರತೆಯೂ ಸ್ಥಿರತ್ವವೂ ಹುಟ್ಟುವದು. ನಂತರ ಇಂಥ ಸ್ವಭಾವವೆಂದು ಹೆಸರಿಡಲಿಕ್ಕೆ ಯೋಗ್ಯವಾಗುವದು. ಕೆಲವರು ಪೂರ್ಣ ಇಚ್ಛೆಯು ಏಕಪ್ರಕಾರತ್ವವೂ ತ್ವ ಸ್ಥಿರತ್ವಕ್ಕೆ ಸ್ವಭಾವವೆಂದು ಅನ್ನುವರು; ಪೂರ್ಣ ಇಚ್ಛೆಯು ಏಕಪ್ರಕಾರವು ಒಂದೇ ಇದ್ದರೆ ಆದ್ಯ ಚಟಕ್ಕೆ ಸಂಬಂಧವಾಗುವದು. ಚಟದಿಂದ ಇಚ್ಛೆಯು ಪ್ರಾಬಲ್ಯವೂ ಕಡಿಮೆಯಾಗುವದು. ಕಾರಣ ಸ್ವಾಭಾವಿಕ ಹುಟ್ಟುಬುದ್ಧಿಯು ಹೊರ್ತಾಗಿ ಇಚ್ಛೆಯಿಂದ ಹಚ್ಚಿಕೊಂಡ ಚಟಗಳಿಂದ ಪ್ರೌಢ ವಿದ್ಯಾರ್ಥಿಗಳಲ್ಲಿ ಕೆಲವು ಹೊಸ ಸ್ವಭಾವ (ಗುಣಗಳು) ಗಳು ಬರುವವು. ಇವಕ್ಕೆ ಶೀಲಸ್ವಭಾವ ಅನ್ನುವರು. ಈ ಸ್ವಭಾವವೇ (ಚಟಗಳೇ) ನೈತಿಕ ಗುಣಗಳ ಸಂಪಾದನೆ ಇರುತ್ತದೆ. ಇವು ಮನೋನಿಗ್ರಹ ಮಾಡಿ ಬೊರಕಿಸಿದ್ದರಿಂದ ಸ್ಥಿರವಾಗುತ್ತವೆ.

THE HISTORY OF RAJASTHAN.

ರಾಜಾಸ್ಥಾನದ ಇತಿಹಾಸವು

ವಲ್ಲಭಿಪುರವನ್ನು ಮುತ್ತಿದ ಮ್ಲೇಂಛರು ನೌಷೇರಖಾನ ಈ ಅದಿಲ್ ಎಂಬ ಇರಾಣದ ಅರಸುಮಗನಾದ ನೌಷೀಜಾದ ಎಂಬವನಿಂದಲೇ ನಡಿಸಿಕೊಂಡು ಬಂದಿದ್ದರು. ಈ ದಾಳಿಯಲ್ಲಿ ಮುಸಲ್ಮಾನರು ಸಂಪೂರ್ಣವಾಗಿ ಪರಾಭವ ಪಟ್ಟರು. ಈ ದಾಳಿಯೆಲ್ಲಿ ನೌಷೀಜಾದನ ಸಂಗಡ ಬಂದಿದ್ದ ಅವನ ತಾಯಿ ಯಾದವಮಹಾಬಾನು ಎಂಬವಳನ್ನು ಶೀಲಾದಿತ್ಯನ ತಂದೆಯು ಮದುವೆ ಮಾಡಿಕೊಂಡನು, ಶೀಲಾದಿತ್ಯನು ಇವಳ ಹೊಟ್ಟೆ

ಯಿಂದಲೇ ಹುಟ್ಟಿದವನು, ಎಂದು ಗ್ರಂಥಕಾರರು ಬರೆಯುತ್ತಾರೆ. ಇಷ್ಟೇ ಅಲ್ಲ, ಉದೇಪುರದ ಅರಸರು ಇರಾಣದ ಅರಸನೆ ಕೂಡ ಶರೀರಸಂಬಂಧ ಮಾಡಿದ್ದರೆಂತಲೂ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇದೇ ಮಾತನ್ನೇ ಆಧಾರ ಮಾಡಿಕೊಂಡು ರಜಪೂತರು ಮುಸಲ್ಮಾನರ ಕೂಡ ಶರೀರಸಂಬಂಧ ಮಾಡಲಿಕ್ಕೆ ಪ್ರತಿಬಂಧವಿಲ್ಲೆಂದು ಎಷ್ಟೋ ಜನ ರಜಪೂತರು ಮೊಗಲರೊಡನೆ ಶರೀರಸಂಬಂಧ ಮಾಡಿದ್ದಲ್ಲದೆ ಮುಸಲ್ಮಾನರ ಕೂಡ ಶರೀರಸಂಬಂಧ ಮಾಡಲಿಕ್ಕಿಲ್ಲೆಂದು ಹಟ ಹಿಡಿದ ಉದೇಪುರದ ಅರಸನಿಗಾದರೂ ಈ ಮಾತನ್ನು ಬೋಧಿಸಿದರು. ಉದೇಪುರದ ನಿಷ್ಕಳಂಕ ಕ್ಷತ್ರಿಯ ರಾಜರು ಒಬ್ಬರೂ ಇದಕ್ಕೆ ಸಮ್ಮತಿಸಲಿಲ್ಲ. ಉದೇಪುರದ ಅರಸರ ಹೊರ್ತು ಮಿಕ್ಕ ರಜಪೂತರಾಜರು ದುರ್ಬಲರಾಗಲು, ತಮ್ಮ ಮನೆಯ ಹೆಣ್ಣನ್ನು ಮೊಗಲರಿಗೆ ಕೊಡಲೇ ಬೇಕಾಯಿತು. ಆಗ ತಮ್ಮ ದೌರ್ಬಲ್ಯವನ್ನು ಮುಚ್ಚಿಕೊಳ್ಳುವದಕ್ಕಾಗಿ ಇದೊಂದು ಬಲವಾದ ಪ್ರಮಾಣವೆಂದು ಕಟ್ಟುಕಥೆಯನ್ನು ಹುಟ್ಟಿಸಿರಬಹುದೆಂದು ನಮ್ಮ ಅನುಮಾನವದೆ. ವಸ್ತುತಃ ಇರಾಣದ ಅಥವಾ ಬೇರೊಂದು ದೇಶದ ಮುಸಲ್ಮಾನ ಅರಸರೊಡನೆ ಉದೇಪುರದ ಅರಸರು ಶರೀರಸಂಬಂಧವನ್ನು ಮಾಡಿದ್ದರೆಂಬ ಬಗ್ಗೆ ವಿಶ್ವಸನೀಯವಾದ ಆಧಾರಗಳು ಎಲ್ಲಿಯೂ ದೊರೆಯುವದಿಲ್ಲ.

ಎನೇ ಅಧ್ಯಾಯ.

ಚಿತೋಡದ ರಜಪೂತರಾಜರ ಪೂರ್ವಪೀಠಿಕೆಯನ್ನು ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿದೆವು. ಈ ಅಧ್ಯಾಯದಲ್ಲಿ ಈ ರಜಪೂತ ಅರಸರಿಗೆ ಮಿತಿಮೀರಿ ಯಾತನೆ ಬಡಿಸಿದ ಮುಸಲ್ಮಾನರ ಆರಂಭದ ಐತಿಹ್ಯವನ್ನು ಸಂಕ್ಷೇಪವಾಗಿ ಬರೆಯುವೆವು. ಅಂದರೆ ಯಾವತ್ತೂ ಇತಿಹಾಸದ ಸಂಗತಿಗಳ

ಪೂರ್ವಾಪರ ಸಂಬಂಧವನ್ನು ಅರಿತುಕೊಳ್ಳಲಿಕ್ಕೆ ಅನು ಕೂಲವಾಗುವದು.

ಮುಸಲ್ಮಾನರ ಧರ್ಮಸ್ಥಾಪಕನಾದ ಮಹಮ್ಮದ ನೈ ಗಂಬರನ ತರುವಾಯದಲ್ಲಿ ಆಳಿದ ಖಲೀಫ ಉಮರನು ತೈ ಗ್ರೀಸ ನದಿಯ ಮುಖದ ನೆರೆಯಲ್ಲಿ ಬಸೋರಾ ಎಂಬ ಬಂದರವನ್ನು ಕಟ್ಟಿಸಿದನು. ಹಿಂದುಸ್ಥಾನದ (ಗುಜರಾಥ ಸಿಂಧ ಪ್ರಾಂತಗಳ) ಸರಕುಗಳು ಹಡಗಗಳ ಮೇಲಿಂದ ಈ ಬಂದರಕ್ಕೆ ಬರುವವು. ಆಂದರೆ ಖಲೀಫಉಮರನಿಂದ ಹಿಂ ದುಸ್ಥಾನಕ್ಕೂ ತುರ್ಕಸ್ಥಾನಕ್ಕೂ ವ್ಯಾಪಾರದ ಸಂಬಂಧ ವುಂಟಾಯಿತೆಂಬ ಅರ್ಥವು. ಇದೇ ಸಂಧಿಯಲ್ಲಿಯೇ ತು ರ್ಕಸ್ಥಾನದ ಸರದಾರನಾದ ಅಬುಲಆಸ ಎಂಬವನು ಪಡೆ ಯೊಡನೆ ಗುಜರಾಥದವರೆಗೆ ಬಂದನು. ಆದರೆ ಹಿಂದೂ ಜನರು ಈ ದಂಡಿನೊಡನೆ ಆರೋಪ ಎಂಬಲ್ಲಿ ಘೆನಘೋರ ಸಂಗ್ರಾಮವನ್ನು ಮಾಡಿ ತಿರುಗಿ ಸುದ್ದಿ ಹೇಳಲಿಕ್ಕೆ ಕೂಡ ಒಬ್ಬನೂ ಉಳಿಯದಂತೆ ಎಲ್ಲ ಮ್ಲೇಂಛರನ್ನು ತುಂಡರಿಸಿ ಚಲ್ಲಿದರು. ಬಳಿಕ ಉಸ್ಮಾನನೆಂಬ ಖಲೀಫನು ಈ ಅಬು ಲಆಸನ ವೃತ್ತಾಂತವನ್ನು ಅರಿತುಕೊಳ್ಳಬೇಕೆಂದು ಕೆಲಜ ನರನ್ನು ಮುಂದೆ ಕಳಿಸಿ, ಹಿಂದಿನಿಂದ ತಾನೂ ಹೆಬ್ಬಲ ದೊಂದಿಗೆ ಹಿಂದುಸ್ಥಾನವನ್ನು ಒಳನುಗ್ಗ ಬೇಕೆಂದು ಸಾ ರಣೆ ನಡಿಸಿದನು ಆದರೆ ಖಲೀಫನ ಉದ್ದೇಶವು ಕೈಗೂಡ ಲಿಲ್ಲ. ಮುಂದೆ ಕೆಲವು ದಿವಸದ ಮೇಲೆ ಖಲೀಫಅಲ್ಲೀ ಎಂ ಬವನು ದಂಡಿನೊಡನೆ ಸಿಂಧ ಪ್ರಾಂತವನ್ನು ನುಗ್ಗಿ ಅದ ನ್ನು ಕೈವಶ ಮಾಡಿಕೊಂಡನು. ಆದರೆ ಆ ಪ್ರಾಂತವು ಮು ಸಲ್ಮಾನರ ಕೈಯಲ್ಲಿ ಬಹು ದಿವಸ ಉಳಿಯಲಿಲ್ಲ. ಅಲ್ಲಿಯು ಸತ್ತ ಕೂಡಲೆ ಆ ಪ್ರಾಂತವು ಹಿಂದೂ ಜನರ ಪಾಲಾಯಿತು ಮುಂದೆ ಕೆಲವು ದಿವಸಗಳ ತರುವಾಯ ಅಂದರೆ ಅಬ್ದುಲ್ ಮಲಿಖನೆಂಬ ಖಲೀಫನು ಆಳ್ವಿಕೆ ಮಾಡುತ್ತಿರುವಾಗ ಖುರಾಸಾನ ಪ್ರಾಂತದ ಎಜ್ಜೀದನೆಂಬ ಸರದಾರನು ದಂಡಿನೊಡನೆ ಹಿಂದು ಸ್ಥಾನಕ್ಕೆ ದಾಳಿ ಇಟ್ಟು ಹೇರಳವಾದ ಸುಲಿಗೆಯನ್ನು ತೆಗೆದು

ಯಿಂದಲೇ ಹುಟ್ಟಿದವನು, ಎಂದು ಗ್ರಂಥಕಾರರು ಬರೆಯುತ್ತಾರೆ. ಇಷ್ಟೇ ಅಲ್ಲ, ಉದೇಪುರದ ಅರಸರು ಇರಾಣದ ಅರಸನ ಕೂಡ ಶರೀರಸಂಬಂಧ ಮಾಡಿದ್ದರೆಂತಲೂ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇದೇ ಮಾತನ್ನೇ ಆಧಾರ ಮಾಡಿಕೊಂಡು ರಜಪೂತರು ಮುಸಲ್ಮಾನರ ಕೂಡ ಶರೀರಸಂಬಂಧ ಮಾಡಲಿಕ್ಕೆ ಪ್ರತಿಬಂಧವಿಲ್ಲೆಂದು ಎಷ್ಟೋ ಜನ ರಜಪೂತರು ಮೊಗಲರೊಡನೆ ಶರೀರಸಂಬಂಧ ಮಾಡಿದ್ದಲ್ಲದೆ ಮುಸಲ್ಮಾನರ ಕೂಡ ಶರೀರಸಂಬಂಧ ಮಾಡಲಿಕ್ಕಿಲ್ಲೆಂದು ಹಟ ಹಿಡಿದ ಉದೇಪುರದ ಅರಸನಿಗಾದರೂ ಈ ಮಾತನ್ನು ಬೋಧಿಸಿದರು. ಉದೇಪುರದ ನಿಷ್ಕಳಂಕ ಕ್ಷತ್ರಿಯ ರಾಜರು ಒಬ್ಬರೂ ಇದಕ್ಕೆ ಸಮ್ಮತಿಸಲಿಲ್ಲ. ಉದೇಪುರದ ಅರಸರ ಹೊರ್ತು ಮಿಕ್ಕ ರಜಪೂತರಾಜರು ದುರ್ಬಲರಾಗಲು, ತಮ್ಮ ಮನೆಯ ಹೆಣ್ಣನ್ನು ಮೊಗಲರಿಗೆ ಕೊಡಲೇ ಬೇಕಾಯಿತು. ಆಗ ತಮ್ಮ ದೌರ್ಬಲ್ಯವನ್ನು ಮುಚ್ಚಿಕೊಳ್ಳುವದಕ್ಕಾಗಿ ಇದೊಂದು ಬಲವಾದ ಪ್ರಮಾಣವೆಂದು ಕಟ್ಟುಕಥೆಯನ್ನು ಹುಟ್ಟಿಸಿರಬಹುದೆಂದು ನಮ್ಮ ಅನುಮಾನವದೆ. ವಸ್ತುತಃ ಇರಾಣದ ಅಥವಾ ಬೇರೊಂದು ದೇಶದ ಮುಸಲ್ಮಾನ ಅರಸರೊಡನೆ ಉದೇಪುರದ ಅರಸರು ಶರೀರಸಂಬಂಧವನ್ನು ಮಾಡಿದ್ದರೆಂಬ ಬಗ್ಗೆ ವಿಶ್ವಸನೀಯವಾದ ಆಧಾರಗಳು ಎಳ್ಳಿಯೂ ದೊರೆಯುವದಿಲ್ಲ.

ಎನೇ ಅಧ್ಯಾಯ.

ಚಿತೋಡದ ರಜಪೂತರಾಜರ ಪೂರ್ವಪೀಠಿಕೆಯನ್ನು ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿದೆವು. ಈ ಅಧ್ಯಾಯದಲ್ಲಿ ಈ ರಜಪೂತ ಅರಸರಿಗೆ ಮಿತಿಮೀರಿ ಯಾತನೆ ಬಡಿಸಿದ ಮುಸಲ್ಮಾನರ ಆರಂಭದ ಐತಿಹ್ಯವನ್ನು ಸಂಕ್ಷೇಪವಾಗಿ ಬರೆಯುವೆವು. ಅಂದರೆ ಯಾವತ್ತೂ ಇತಿಹಾಸದ ಸಂಗತಿಗಳ

ಪೂರ್ವಪರ ಸಂಬಂಧವನ್ನು ಅರಿತುಕೆವಳ್ಳಲಿಕ್ಕೆ ಅನು ಕೂಲವಾಗುವದು.

ಮುಸಲ್ಮಾನರ ಧರ್ಮಸ್ಥಾಪಕನಾದ ಮಹಮ್ಮದ ಸೈ ಗಂಬರನ ತರುವಾಯದಲ್ಲಿ ಆಳಿದ ಖಲೀಫ ಉಮರನು ಪೈ ಗ್ರೀಸ ನದಿಯ ಮುಖದ ನೆರೆಯಲ್ಲಿ ಬಸೋರಾ ಎಂಬ ಬಂದರವನ್ನು ಕಟ್ಟಿಸಿದನು. ಹಿಂದುಸ್ಥಾನದ (ಗುಜರಾಥ ಸಿಂಧ ಪ್ರಾಂತಗಳ) ಸಕಲರುಗಳು ಹಡಗಗಳ ಮೇಲಿಂದ ಈ ಬಂದರಕ್ಕೆ ಬರುವವು. ಅಂದರೆ ಖಲೀಫಉಮರನಿಂದ ಹಿಂ ದುಸ್ಥಾನಕ್ಕೂ ತುರ್ಕಸ್ಥಾನಕ್ಕೂ ವ್ಯಾಪಾರದ ಸಂಬಂಧ ವುಂಟಾಯಿತೆಂಬ ಅರ್ಥವು. ಇದೇ ಸಂಧಿಯಲ್ಲಿಯೇ ತು ರ್ಕಸ್ಥಾನದ ಸರದಾರನಾದ ಅಬುಲಅಸ ಎಂಬವನು ಪಡೆ ಯೊಡನೆ ಗುಜರಾಥದವರೆಗೆ ಬಂದನು. ಆದರೆ ಹಿಂದೂ ಜನರು ಈ ದಂಡಿನೊಡನೆ ಆರೋರ ಎಂಬಲ್ಲಿ ಘನಘೋರ ಸಂಗ್ರಾಮವನ್ನು ಮಾಡಿ ತಿರುಗಿ ಸುದ್ದಿ ಹೇಳಲಿಕ್ಕೆ ಕೂಡ ಒಬ್ಬನೂ ಉಳಿಯದಂತೆ ಎಲ್ಲ ಮ್ಲೇಂಛರನ್ನು ತುಂಡರಿಸಿ ಚಲ್ಲಿದರು. ಬಳಿಕ ಉಸ್ಮಾನನೆಂಬ ಖಲೀಫನು ಈ ಅಬು ಲಅಸನ ವೃತ್ತಾಂತವನ್ನು ಅರಿತುಕೊಳ್ಳಬೇಕೆಂದು ಕೆಲಜ ನರನ್ನು ಮುಂದೆ ಕಳಿಸಿ, ಹಿಂದಿನಿಂದ ತಾನೂ ಪೆಬ್ಬಲ ಬೊಂದಿಗೆ ಹಿಂದುಸ್ಥಾನವನ್ನು ಒಳನುಗ್ಗ ಬೇಕೆಂದು ಸಾ ರಣೆ ನಡಿಸಿದನು ಆದರೆ ಖಲೀಫನ ಉದ್ದೇಶವು ಕೈಗೂಡ ಲಿಲ್ಲ. ಮುಂದೆ ಕೆಲವು ದಿವಸದ ಮೇಲೆ ಖಲೀಫಅಲ್ಲೀ ಎಂ ಬವನು ದಂಡಿನೊಡನೆ ಸಿಂಧ ಪ್ರಾಂತವನ್ನು ನುಗ್ಗಿ ಅದ ನ್ನು ಕೈವಶ ಮಾಡಿಕೊಂಡನು. ಆದರೆ ಆ ಪ್ರಾಂತವು ಮು ಸಲ್ಮಾನರ ಕೈಯಲ್ಲಿ ಬಹು ದಿವಸ ಉಳಿಯಲಿಲ್ಲ. ಅಲ್ಲಿಯು ಸತ್ತ ಕೂಡಲೆ ಆ ಪ್ರಾಂತವು ಹಿಂದೂ ಜನರ ಪಾಲಾಯಿತು ಮುಂದೆ ಕೆಲವು ದಿವಸಗಳ ತರುವಾಯ ಅಬ್ದುಲ್ ಮಲಿಖನೆಂಬ ಖಲೀಫನು ಆಳ್ವುತ್ತಿರುವಾಗ ಖುರಾಸಾನ ಪ್ರಾಂತದ ಎಜ್ಜೀದನೆಂಬ ಸರದಾರನು ದಂಡಿನೊಡನೆ ಹಿಂದು ಸ್ಥಿನಕ್ಕೆ ದಾಳಿ ಇಟ್ಟು ಹೇರಳವಾದ ಸುಲಿಗೆಯನ್ನು ತೆಗೆದು

ಕೊಂಡು ಹೋದನು. ಇವನು ಕೆಲವೊಂದು ಪ್ರಾಂತವನ್ನು ವಶ ಪಡಿಸಿಕೊಳ್ಳಬೇಕೆಂಬ ಹವ್ಯಾಸಕ್ಕೆ ಬೀಳಲಿಲ್ಲ. ಆದರೆ ಸಿಂಧ ಪ್ರಾಂತದಲ್ಲಿ ಮುಸಲ್ಮಾನರ ಉಪಟಳವು ಮಿತಿಮೀರಿತೆಂದು ಹೇಳಬಹುದು. ಬಲಿ ಈದನೆಂಬ ತುರುಷ ಸರದಾರನು ಪುನಃ ಸಿಂಧಪ್ರಾಂತವನ್ನು ಕೈವಶ ಮಾಡಿಕೊಂಡನು. ಮುಹಮ್ಮದ ಕಾಸೀಮನೆಂಬ ಸರದಾರನು ೭೧೪ನೇ ಇಸವಿಯಲ್ಲಿ ಸಿಂಧಪ್ರಾಂತದ ಮೇಲೆ ದಾಂಡು ಮಾಡಿ ಅಲ್ಲಿ ಆಳುತ್ತಿದ್ದ ದಾಹೀರ ಜಾತಿಯ ಅರಸನ ಮಗಳನ್ನು ಹರಣವಾಡಿಕೊಂಡು ಖಲೀಫನಿಗೆ ಕಾಣಿಕೆಯಾಗಿ ಅರ್ಪಿಸಿದನೆಂದು ಐನಅಕಬರಿ ಎಂಬ ಗ್ರಂಥದಿಂದ ತಿಳಿಯುತ್ತದೆ. ಇದಾದ ಬಳಿಕ ಮುಹಮ್ಮದನೆಂಬ ಬೇರೊಬ್ಬ ಸರದಾರನು ಕನೋಜದ ಅರಸನಾದ ಹರಿಚಂದನ ಮೇಲೆ ದಂಡೆತ್ತಿ ಬಂದನು. ಮುಂದೆ ಅಲ್‌ಮನಸೂರನೆಂಬವನು ಸಿಂಧಪ್ರಾಂತವನ್ನು ಅಭಿಯೋಗಿಸಿದನು. ಇದೇ ಸಂಧಿಯಲ್ಲಿ ಖುರಾಸಾನ ಪ್ರಾಂತದ ಬಾದಶಹನಾದ ಎಜದನೆಂಬವನ ಮಗನು ಸಿಂಧಪ್ರಾಂತಕ್ಕೆ ಓಡಿ ಬಂದಿದ್ದನು. ಈ ಕಾಲದಲ್ಲಿಯೇ ಮುಸಲ್ಮಾನರು ಬಹು ದೂರದವರಿಗೆ ಹರಿಬಿದ್ದರು. ಇವರು ಫ್ರಾನ್ಸದೇಶದಲ್ಲಿ ಪ್ರವೇಶ ಮಾಡಿದರು. ಆದರೆ ಅಲ್ಲಿ ಅವರ ಬೇಳೆ ಬೆಯ್ಯಲಿಲ್ಲ. ಫ್ರೆಂಚರು ಇವರನ್ನು ಮೈಮುರಿ ಬಡಿದು ಹಿಂದಕ್ಕೆ ಅಟ್ಟಿದರು. ಅಲ್‌ಮನಸೂರನು ಸಿಂಧಪ್ರಾಂತದಲ್ಲಿ ಖಲೀಫಅಬ್ಬಾಸನ ಹೆಸರಿನಿಂದ ಬಹು ದಿವಸ ರಾಜ್ಯವನ್ನಾಳಿದನು. ಮನಸೋರಾ ನಗರವು ಇವನ ರಾಜಧಾನಿಯಾಗಿತ್ತು. ಈ ಪಟ್ಟಣಕ್ಕೆ ಮೊದಲು ಮಾನೆನಗರವೆನ್ನುತ್ತಿದ್ದರು. ಬಾಪ್ಪಾರಾವಳನು ಚಿತೋಡದಿಂದ ಹೊರಟು ಇರಾಣದವರೆಗೆ ದಿಗ್ವಿಜಯ ಮಾಡಿದ ಕಾಲವು ಇದೇ. ಹರೂನ ಅಲ್‌ರಶೀದನೆಂಬ ಅರಸನು ತನ್ನ ಸಾಮ್ರಾಜ್ಯವನ್ನು ವಿಭಾಗಿಸಿ ಬೇರೆ ಬೇರೆ ಅಧಿಕಾರಿಗಳ ಕೈಯಲ್ಲಿ ಕೊಡಲು ಅಲ್‌ಮಮೂನ ಎಂಬವನ ಪಾಲಿಗೆ ಸಿಂಧ ಪ್ರಾಂತವೂ ಹಿಂದುಸ್ತಾನವೂ ಬಂದವು. ಈ ಅಲ್‌ಮಾಮೂನನು

ಲಂಕಿರಲ್ಲಿ ತಾನೇ ಖಲೀಫನಾಗಿ ಚಿತೋಡಕ್ಕೆ ದಂಡೆತ್ತಿ ಬಂದನು. ಮುಂದೆ ಮುಸಲ್ಮಾನರಲ್ಲಿಯೇ ಒಳಜಗಳಗಳುಂಟಾಗಲು, ಅವರು ಹಿಂದುಸ್ಥಾನಕ್ಕೆ ದಂಡೆತ್ತಿ ಬರಲಿಕ್ಕೆ ಅಸಮರ್ಥರಾದರು.

ಮುಸಲ್ಮಾನ ಧರ್ಮದ ಜನರಲ್ಲಿ ಮುಖ್ಯವಾಗಿ ಅರಬರೂ, ತುರ್ಕರೂ, ಪಠಾಣರೂ ಸಿದ್ದೀಜನರೂ ಸಮಾವೇಶರಾಗುತ್ತಾರೆ. ಇವರು ತಮ್ಮ ಸ್ವಧರ್ಮ ಹಬ್ಬಿಸುವ ಉದ್ದೇಶದಿಂದಲೇ ಹಿಂದುಸ್ಥಾನವನ್ನು ಅಭಿಯೋಗಿಸಿದರೆಂಬದು ಸ್ಪಷ್ಟವದೆ. ಇವರು ಹೊಕ್ಕಲ್ಲಿ ಕೊಲೆಸುಲಿಗೆಗಳಿಂದ ಪ್ರಜೆಗಳನ್ನು ಬಹುಪರಿ ಪೀಡಿಸಿದರು. ಆ ಕಾಲದಲ್ಲಿ ಹಿಂದುಸ್ಥಾನದೊಳಗೆ ಕ್ಷತ್ರಿಯರೂ, ರಜಪೂತರೂ, ಮಾತ್ರ ಶೂರರೂ ಸ್ವಾಭಿಮಾನಿಗಳೂ ಆಗಿದ್ದರು. ಉಳಿದವರೆಲ್ಲ ಅಜ್ಞಾನಿಗಳೂ, ಪುಕ್ಕರೂ, ನಿರಭಿಮಾನಿಗಳೂ ಆಗಿದ್ದದರಿಂದ ಶತ್ರುಗಳಿಗೆದುರಾಗಿ ಶಿರಕಮಲವನ್ನು ಕೈಯಲ್ಲಿ ಹಿಡುಕೊಂಡು ಸ್ವದೇಶಾಭಿಮಾನದಿಂದಲೂ ಸ್ವಧರ್ಮಾಭಿಮಾನದಿಂದಲೂ, ಹೋರಾಡುವ ಹೊರೆಯು ಕ್ಷತ್ರಿಯ ವರ್ಗದ ಜನರ ಮೇಲೆಯೇ ಬೀಳುತ್ತಿತ್ತು. ಮುಸಲ್ಮಾನರು ತಮ್ಮ ದೇಶವನ್ನು ಬಿಟ್ಟು ಬಹು ದೂರ ಬಂದವರಾದ್ದರಿಂದ ರಣದಲ್ಲಿ ಅಪಜಯ ಹೊಂದಿದರೆ ತಮಗೆ ತಪ್ಪಿಸಿಕೊಳ್ಳಲಿಕ್ಕೆ ಅನುವಿಲ್ಲವೆಂದು ಕಾಳಗದಲ್ಲಿ ಜಯವನ್ನು ಪಡೆಯುವದೂ ಇಲ್ಲವೆ ಮಡಿದು ವೀರಸ್ವರ್ಗವನ್ನೈದುವದೂ ತಮ್ಮ ಕರ್ತವ್ಯವೆಂದು ನೆರೆನಂಬಿ ಜೀವದ ಹಂಗುದೊರೆದು ಕಾದುವರು. ಅದರಿಂದ ಅವರು ಕಾಳಗದಲ್ಲಿ ಅಸುದೊರೆಯುವರೇ ಹೊರತು ಹಿಮ್ಮೆಟ್ಟುತ್ತಿದ್ದಿಲ್ಲ. ಈ ಕಾರಣದಿಂದ ಆವೇಶಯುಕ್ತರಾದ ಮುಸಲ್ಮಾನರು ಹಿಂದೂ ಜನರ ದಂಡನ್ನು ಮುತ್ತಲು, ರಜಪೂತರ ಹೊರತು ಉಳಿದ ಹಿಂದೂ ಜನರೆಲ್ಲ ಪಲಾಯನ ಸೂಕ್ತವನ್ನು ಪಡಿಸ ತೊಡಗುವರು. ಬಳಿಕ ಕಾಳಗದ ಭಾರವೆಲ್ಲ ರಜಪೂತ ಕಲಿಗಳ ಮೇಲೆಯೇ

ಬೀಳುವದು. ಅವರು ತಮ್ಮ ಕುಲಧರ್ಮದಂತೆ ಪ್ರಾಣಾವ
ಸಾನ ಕಾಲದವರೆಗೆ ಶತ್ರುಗಳೊಡನೆ ಹೋರಾಡ ಬೇಕಾಗು
ವದು. ಇಂಥ ತುಮುಲ ಯುದ್ಧದಲ್ಲಿ ಜಯಸಿರಿಯು ಇಂಥವ
ರನ್ನು ವರಿಸುತ್ತಾಳೆಂದು ನಿರ್ಧರಿಸುವದು ಕೇವಲ ಅಸಾಧ್ಯ
ವೇ ಸರಿ. ದೈವವಶದಿಂದ ಇಲ್ಲವೇ ಪ್ರಮಾದಾಚಾತುರ್ಯ
ದಿಂದ ಇಲ್ಲವೆ ಮುಸಲ್ಮಾನ ಯೋಧರ ಸಂಖ್ಯಾ ಬಾಹುಲ್ಯ
ದಿಂದ ಹಿಂದೂ ಜನರ ಪರಾಭವವಾಗಲು, ಆ ಕಾಲದಲ್ಲಿ ಜಯ
ಶಾಲಿಗಳಾದ ಮುಸಲ್ಮಾನರು ಹಿಂದೂ ಜನರ ಬಗ್ಗೆ ತೋರಿಸಿದ
ಕ್ರೌರ್ಯವನ್ನು ವರ್ಣಿಸುವದು ಮಾನವನ ಕಲ್ಪನೆಗೆ ನಿಲು
ಕದ ಮಾತೇ ಸರಿ. ಇವರು ಸ್ವಭಾವತಃ ನಿರ್ದಯರೂ
ಕ್ರೂರರೂ, ಧರ್ಮಾಂಧರೂ ಆಗಿರುವದರಿಂದ ಕೊಲೆ ಸುಲಿ
ಗೆಗಳಿಗೆ ಎಳ್ಳನಿತು ಹೇಸರು. ಇವರು ದಾಳಿ ಇಟ್ಟ ಪ್ರ
ದೇಶವನ್ನು ಹೊಳ ಹೊಕ್ಕ ಕುರಿ ಹಿಂಡಿಗೂ ಬಿಕ್ಕು ಹೊ
ಕ್ಕ ಪೊರಿವಾಳದ ಗೂಡಿಗೂ ಹೋಲಿಸಬಹುದು. ರಾಮಾ
ಯಣ ಭಾರತ ಯುದ್ಧಗಳಲ್ಲಿ ನಡೆದ ಕ್ರೂರ ಕೆಲಸಗಳು ಇ
ವರಿಂದ ನಡಿಸಿದ ಕೆಲಸದ ಪಾಸಂಗಕ್ಕೆ ಸಹ ಬಾರವು ಭಾರ
ತ, ರಾಮಾಯಣ ಯುದ್ಧಗಳಲ್ಲಿ ಉಭಯ ಪಕ್ಷದವರು ಒಂ
ದೇ ಧರ್ಮದವರಿದ್ದದರಿಂದ ಇಷ್ಟು ಅತ್ಯಾಚಾರಗಳು ಘಟಿಸ
ಲಿಲ್ಲ. ಆದರೆ ಈ ಮುಸಲ್ಮಾನರ ಅಭಿಯೋಗದಲ್ಲಿ ಕ್ರೌರ್ಯ
ವು ಕಳಸವಿಟ್ಟತೆಂದು ಹೇಳಬಹುದು. ಈ ಕ್ರೂರ ಕರ್ಮ
ಗಳಲ್ಲಿ ಸ್ತ್ರೀಯರನ್ನು ಕಾಡುವದೂ ಅವರನ್ನು ಭ್ರಷ್ಟವಾ
ಡುವದೂ ಪರಮನಿಂದ್ಯವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ
ಈ ಕಾರಣದಿಂದಲೇ ಜೋಹಾರ, ಸಹಗಮನ ಮುಂತಾದ
ಭಯಂಕರ ನಡತೆಗಳು ಹಿಂದೂ ಜನರಲ್ಲಿ ನೆಲೆಗೊಂಡವೆಂದು
ತೋರುತ್ತದೆ

ಈ ಮುಸಲ್ಮಾನ ಪರಚಕ್ರದ ಪ್ರತೀಕಾರ ಭಾರವು ಕ್ಷ
ತ್ರಿಯರ ಮೇಲೆ ಬಿತ್ತೆಂದು ಮೇಲೆ ಹೇಳಿದ್ದೇವಷ್ಟೇ ಈ
ಘೋರ ಕಾರ್ಯದಲ್ಲಿ ಚಿತೋಡ ದಿಲ್ಲಿ, ಮಥುರಾ, ಕನೋಜ

CORRESPONDENCE

ಪತ್ರವ್ಯವಹಾರ

ಶ್ರೀ

ಮಹಾರಾಜ ದಯಾಸಾಗರ ರಾಜವಾನ್ಯರಾಜಶ್ರೀ ಶಾ
ಸ್ತ್ರಪತ್ರ ಕರ್ತ ಮಹಾರಾಯರ ಚರಣ ಸನ್ನಿಧಿಗೆ.

ವಿ. ವಿ. ಕೆಳಗಿನ ನಾಲ್ಕು ಪಂಕ್ತಿಗಳಿಗಿಂಬು ದೊರದೀ
ಂದು ತಮ್ಮ ಕಡೆಗೆ ಬಮ್ಮನಸಿನಿಂದ ಗಮ್ಮನೇ ಕಳಿಸಿ
ದ್ದೀನೆ. ನಾನು ಸುಮ್ಮನೇ ತಮ್ಮ ಎಡೆಗೆ ಹಂಮಿನಿಂದ
ಬಮ್ಮಿಹೂದರೂ ಬಂದವನಲ್ಲಾ. ಈ ನನ್ನ ದೇಶಬಾಂ
ಧವ ವಿದ್ವಜ್ಜನರಲ್ಯಾರಾದಕೂ ಇಂದಿನಗೆ ಬಂದ ಸಂದೇ
ಹಂಗಳಿಗೆ ಕುಂದನ್ನಿಡದೀ ಮುಂದಬಾಲನಗರು ಹಿ. ಸುಂ
ದರಾಂಗದಿಂದೊಪ್ಪುವ ಅಂದವಾದ ಮುಕಪತ್ರಿಕೆಯಲ್ಲಿ ಬಿಂ
ದೇ ರೂಪದೋಳ್ ತಿಳಿಸುವಿರೆಂದು ನೆರೆನಂಬಿದ್ದೇನೆ.
ಅಯ್ಯಾ ದೇಶಬಾಂಧವ ವಿದ್ವಜ್ಜನರೇ. ನಾನು ಬಿಂಡಾನೊಂ
ದು ದಿವಸ ಎರಡು ಕನ್ನಡಿಗಳನ್ನು ಎರಡೂ ಕೈಯಲ್ಲಿ ಬಿಂ
ದೊಂದಾಗಿ ತಕ್ಕೊಂಡು ಬಿಂದರ ಬಿಂಬವು ಮತ್ತೊಂದರೊ
ಳಗೆ ಕಾಣುವಂತೆ ನೋಡಿದೆನು (ಬಲಗೈಯೊಳಗಿನ ಕನ್ನ
ಡಿಯಬಲಗಡೆ ಕರ್ನದ ಹತ್ತರ ಎಡಗೈಯೊಳಗಿನ ಕನ್ನಡಿ
ಯನ್ನು ಎದಿಗೆ ಸವನಾಗಿ ಸ್ವಲ್ಪು ಅಂತರವಾಗಿ ಹಿಡಿದು)
ನೋಡುತ್ತ ನೋಡುತ್ತ ನನಗೆ ಬಹಳೇ ಆಶ್ಚರ್ಯ್ಯ ಕಾ
ಣಿಸಿತು. ಏನಂದರೆ ಎಡಗೈಯೊಳಗಿನ ಕನ್ನಡಿಯಲ್ಲಿ ಪ
ತ್ತು ಹನ್ನೆರಡು ಕನ್ನಡಿಗಳು ಸಾಲಾಗಿ ಕಾಣಿಸಿದವು. ಈ
ಕನ್ನಡಿಯ ನಾಲ್ಕೂ ಕಡಿಯ ಕಟ್ಟಿಗೆಯ ರೇಜಿಗಳಿಗೆ ನೋ
ನೇರಿಬಣ್ಣದ ಮೊಲಾಮು ಮಾಡಿದ್ದರಿಂದಲೂ ಮತ್ತು ಈ
ಕನ್ನಡಿಗಳು ಹನ್ನೆರಡು ಅಂಗುಲ ಉದ್ದ. ಎಂಟು ಅಂಗು
ಲ ಅಗಲಾದವು ಇದ್ದದರಿಂದ ಚಿನ್ನದಿಂದ ಮಾಡಿದ ಸಣ್ಣ
ಬಾಗಿಲುಗಳಂತೆ ಸಾಲುಗೊಂಡು ಕಂಗೊಳಿಸಿದವು. ಮತ್ತು
ಎಡಗೈಯೊಳಗಿನ ಮೊದಲನೇ ಕನ್ನಡಿಯಲ್ಲಿ ನನ್ನ ಮೋ

ರೆ ಕಾಣಿಸಿ ಎರಡನೇದರಲ್ಲಿ ಕಾಣಿಸಲಿಲ್ಲಾ. ಮೂರನೇದರ
ಲ್ಲಿ ಕಾಣಿಸಿ ನಾಲ್ಕನೇದರಲ್ಲಿ ಕಾಣಿಸದೆಹೋಯಿತು ಇದರಂ
ತೆ ಹತ್ತು ಹನ್ನೆರಡು ಕನ್ನಡಿಗಳವರೆಗೆ ಆಗುತ್ತಾ ಸೂಕ್ಷ್ಮದೃ
ಷ್ಟಿ ಆದ್ದರಿಂದ ಕಾಣಿಸದೇ ಹೋದವು. ಹೀಗೆ ಯಾಕೆ ಆಯಿ
ತು? ಕನ್ನಡಿಯು ಎದುರಿಗೆ ಯಾವದೊಂದು ಪದಾರ್ಥನ
ಹಿಡಿಯುಲು ಅದೊಂದೇ ಪದಾರ್ಥವು. ಅದರಲ್ಲಿ ಕಾಣಿಸ
ಬೇಕಲ್ಲದೆ ಅದರಂಥನೇ ಹತ್ತು ಹನ್ನೆರಡು ಕಾಣಿಸಲಿಕ್ಕೆ
ಕಾರಣವೇನು? ಸಾರದರ್ಶಕ ಪದಾರ್ಥಗಳಲ್ಲಾ. ಹೀಗೆ
ಆಗುವದು ಸಹಜವೋ? ಎಂಬುದ್ಯಾವದೂ ನನಗೆ ತಿಳಿಯು
ದ ಮೂಲಕ ತಮ್ಮೆಲ್ಲರ ಮುಂದೆ ಇರಿಸಿದ್ದೇನೆ. ಸರಿ
ದೋರಿದಲ್ಲಿ ನನ್ನ ಸಂದೇಹವನ್ನು ದೂರವಾಡುವಿರೆಂದು
ಆಶೈಯ್ಯುತ್ತೇನೆ. ಪತ್ರಕರ್ತ ಮಹಾರಾಯರೇ ತಮು
ಗೆ ನಾನು ಬಹಳೇ ಶ್ರಮಕೊಟ್ಟದ್ದರಿಂದ ಪತ್ರ ವಿಸ್ತಾರ
ಕ್ಕೆ ಕ್ಷಮೆಯನ್ನು ಬೇಡಿಕೊಂಡು ಲೇಖಣಿಕೆಯನ್ನು ಕೆಳ
ಗಿಡುತ್ತೇನೆ. ಇ. ವಿ. ವಿ.

ಅಹಾ! ಮಹರಾಯರೇ ಇನ್ನೊಂದು ವಿನಂತಿಯನ್ನು
ಮರತಿದ್ದೆನು. ಅವಶ್ಯವಾಗಿ ಮುದ್ರಿಸೋಣವಾಗಬೇಕು.
ಏನಂದರೆ, ಸೂರ್ಯನ ಕಿರಣಗಳಿಂದ ಭೂಮಿಯ ಮೇಲಿ
ನ ನೀರು ಉಗಿಯಾಗಿ ನೇಮ ಪ್ರಕಾರವಾಗಿ ವರ್ಷನು
ಗಟ್ಟಲೇ ಖರ್ಚಾಗುತ್ತಿದ್ದದ್ದು ಸ್ಪಷ್ಟವಪ್ಪೇ. ಆದರೆ ಅದೇ
ಉಗಿಯು ಆಕಾಶದಲ್ಲಿ ಜಮೆಯಾಗಿ ತಿರಗಿ ಮಳೆಯ
ರೂಪದಿಂದ ಭೂಮಿಯಮೇಲೆ ಬೀಳುವದಂತು ಸಹಜವೇ.
ಪ್ರತಿವರ್ಷ ಸೂರ್ಯನಿಂದ ನೀರು ಉಗಿಯಾಗಿ ಮಿತಿಯಿಂ
ದ ಹೋಗುತ್ತಿದ್ದು ಮಳೆಯು ವರ್ಷಾ ಮಿತಿಯಿಂದ ಪೃಥ್ವಿ
ಯ ಮೇಲೆ ಯಾಕೆ ಬೀಳಬಾರದು. ಇದನ್ಯಾರಾದರೂ
ವಿದ್ವಜ್ಜನರು ಈ ಬಡ ವಿದ್ಯಾರ್ಥಿಗರುಹಿಂದಲ್ಲಿ ಅಭಾರಿ
ಯಾಗುವೆನು.

ತಾ. ಕೋಡಜಿ. ಥಾರವಾಡ } ರುದ್ರಪ್ಪಾ ಸೋವುಪ್ಪಾ ಏಳು
ತಾ॥ ೦೫-೦೫-೦೬ ಇಸ್ವಿ } ಕೊಳಗದ ವಿದ್ಯಾರ್ಥಿ ಶಾಳಾ
ಮಡ್ಲೂರ

DEPARTMENTAL NOTICE.

ನೋಟೀಸು.

ಹೊಸದಾಗಿ ಸುಧಾರಿಸಲ್ಪಟ್ಟ ಕ್ರಮಿಕ ಮರಾಠಿ ೧ನೇ ಹಾಗೂ ೨ನೇ ಪುಸ್ತಕಗಳು ಛಾಪಿಸಿ ತಯಾರಾದ ನಂತರ ಕೆಲವರು ಅವುಗಳ ಸಂಬಂಧಿ ಶಬ್ದಾರ್ಥದ ಪುಸ್ತಕಗಳನ್ನು ಅಥವಾ ಟಪ್ಪಣಿಯು ಪುಸ್ತಕಗಳನ್ನು ಛಾಪಿಸಿ ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ ವಾರಾಟಕ್ಕೆ ಸಿದ್ಧಮಾಡಿದ್ದು. ಸರಕಾರದವರ ದೃಷ್ಟೋತ್ಪತ್ತಿಗೆ ಬಂದ ಮೂಲಕ ಈ ನೋಟೀಸಿನಿಂದ ತಿಳಿಯಪಡಿಸುವದೇನಂದರೆ ಇಲಾಖೆಯು ಸರಕಾರೀ ವಿದ್ಯಾಖಾತೆಯಿಂದ ಪ್ರಸಿದ್ಧ ಪಡಿಸಿದ ದೇಶಭಾಷೆಯೊಳಗಿನ ಕ್ರಮಿಕ ಪುಸ್ತಕಗಳ ಬಾಧ್ಯತೆಯು ಸದರೀ ಖಾತೆಯವರ ಸ್ವಾಧೀನವೇ ಸರ್ವಥಾ ಇರುವದು ಕಾರಣ ಕೆಳಗೆ ಸಹೀ ಮಾಡಿದವರ ಪರ್ವಾನಗಿ ಪಡಕೊಂಡ ವಿನಾ ಶಾಲೆಗಳಲ್ಲಿ ಇಂಥ ಶಬ್ದಾರ್ಥದ ಪುಸ್ತಕಗಳನ್ನು ಅಥವಾ ಟಪ್ಪಣಿಯ ಪುಸ್ತಕಗಳನ್ನು ಉಪಯೋಗಿಸ ಕೂಡದು.

೨. ಪ್ರಾಥಮಿಕ ಶಾಲೆಗಳಲ್ಲಿ ಇಂಥ ಪುಸ್ತಕಗಳ ಉಪಯೋಗವನ್ನು ಸರ್ವಥಾ ಮಾಡಕೂಡದು ಸರಕಾರದವರ ತಾಬೆಯಲ್ಲಿದ್ದ ಶಾಲೆಗಳ ಮಾಸ್ತರ ಜನರು ಇಂಥ ಪುಸ್ತಕಗಳನ್ನು ತಾವೇ ಉಪಯೋಗಿಸಿದರೆ ಅಥವಾ ವಿದ್ಯಾರ್ಥಿ ಜನರಿಗೆ ಅವುಗಳ ಉಪಯೋಗವನ್ನು ಶಾಲೆಯಲ್ಲಿ ಮಾಡಗೊಟ್ಟರೆ ಅಥವಾ ಅವುಗಳನ್ನು ಶಾಲೆಯಲ್ಲಿ ತರಗೊಟ್ಟರೆ ಬಹಳ ಭಯಂಕರವಾದ ಶಿಕ್ಷೆಗೆ ಪಾತ್ರರಾಗುವರು. ಸರಕಾರದವರಿಂದ ಗ್ರ್ಯಾಂಟು ದೊರೆಯುವಂಥ ಶಾಲೆಗಳ ವ್ಯವಸ್ಥಾಪಕರಿಗೂ ಈ ನೋಟೀಸಿನಿಂದ ತಿಳಿಸುವದೇನಂದರೆ, ಅವರು ಸದರೀ ಪುಸ್ತಕಗಳನ್ನು ಮಾಸ್ತರಿಗಾಗಲೀ ವಿದ್ಯಾರ್ಥಿಗಳಿಗಾಗಲೀ ಉಪಯೋಗಿಸಗೊಟ್ಟರೆ, ಸರಕಾರದವರ ಕಡೆಯಿಂದ ಅವರ ಶಾಲೆಗೆ ಶಿಗತಕ್ಕಂಥ ಗ್ರ್ಯಾಂಟನ್ನು ಕಳಕೊಳ್ಳಲಾದೀತು. ಸರಕಾರದವರ ಕಡೆಯಿಂದ ಗ್ರಾಂಟು ಇಲ್ಲದಂಥ ಪದಂತು ಶಾ

ಲಾಖಾತೆಯವರಿಂದ ನೊಂದಣೀ ಮಾಡಲ್ಪಟ್ಟ ಶಾಲೆಗಳ ವ ವಸ್ಥಾಪಕರು ಇಂಥ ಪುಸ್ತಕಗಳನ್ನು ತಮ್ಮ ಶಾಲೆಗಳಲ್ಲಿ ವಿದ್ಯಾರ್ಥಿ ಜನರಿಗಾಗಲೀ ಅಥವಾ ಮಾಸ್ತರ ಜನರಿಗಾಗಲೀ ಉಪಯೋಗಿಸಗೊಟ್ಟರೆ, ಅವರ ಶಾಲೆಗಳು ಸರಕಾರದ ವರ ಯಾದಿಯೊಳಗಿಂದ ತೆಗೆದು ಹಾಕಲ್ಪಡುವವು.

೩. ಈ ನಿಯಮವು ಯಾವತ್ತು ಮುನಸಿಪಲ ಶಾಲೆಗ ಳಿಗೂ ಲಾಗೂ ಅದೆ. ಯಾವತ್ತು ಮುನಸಿಪಾಲಿಟಗಳಿಗೆ ತಿಳಿಸುವದೇನಂದರೆ ಈ ನಿಯಮವು ಅಮಾನ್ಯ ಮಾಡಿ ದ್ದು ಕಂಡು ಬಂದರೆ ಅವರಿಗೆ ಸರಕಾರೀ ಫಂಡಿನೊಳಗಿಂ ದ ಶಿಗತಕ್ಕ ಹಣವ ಕಳಕೊಳ್ಳಬೇಕಾದೀತು.

೪. ಅದೇಪ್ರಕಾರ ಮೇಲೆ ಪ್ರಸಿದ್ಧಿ ಪಡಿಸಿದ ನಿಯಮು ವು ದಕ್ಷಿಣಭಾಗದಲ್ಲಿ ಕನ್ನಡ ಪುಸ್ತಕಗಳಿಗೂ ಲಾಗೂ ಗುಂಟು.

ಧಾರವಾಡ
ತಾ|| ೧೦-೪-೦೬ ಇಸ್ವಿ

(ಸಹಿ) ಬಿ. ಆರ್. ಸಹಸ್ರಬುದ್ಧೆ
ಎಜ್ಯುಕೇಶನಲ ಇನಸ್ಪೇಕ್ಟರ
ದ. ಭಾ.

DHARWAR TRAINING COLLEGE TERMINAL EXAMINATION.

೩ನೇ ವರ್ಷದ ವರ್ಗವು.

೧೯೦೬ನೇ ಎಪ್ರೆಲ್.

೩ ತಾಸು.

ಕರ್ನಾಟಕ ಭಾಷಾ ಗ್ರಂಥಗಳು.

ಉತ್ತರ ರಾಮಚರಿತ್ರದ ಮುತ್ತು ರಾಜಶೇಖರದ

ಮೂಲ ಗ್ರಂಥಗಳ ಕರ್ತೃಗಳ ಚರಿತ್ರೆಯನ್ನು ನಿಮಗೆ ತಿಳಿದಷ್ಟು ಬರೆಯಿರಿ.

೨. "ಕಾವ್ಯಗಳಲ್ಲಿ ಅತಿಶಯೋಕ್ತಿ ಮೊದಲಾದುವನ್ನು ಬಿಟ್ಟುಳಿದ ಭಾಗದಿಂದ, ಕವಿಯ ಅಥವಾ ಕಥಾನಾಯಕನ, ದೇಶ ಕಾಲದ ಜನರ, ನಡೆವಳಿಗಳು ಕೆಲವು ಮಟ್ಟಿಗೆ ತಿಳಿಯುವುವು" ಈ ಅರ್ಥವನ್ನು ನೀವು ಓದಿದ ಗ್ರಂಥಗಳಿಂದ ಸಮರ್ಥಿಸಿರಿ

೩. ಕವಿತೆಗೆ ಕಾರಣಗಳಾವುವು? ಪಡಪ್ಪೆರಿಯಲ್ಲಿ ಅವು ಇದ್ದವೆಂಬುವನ್ನು ಹೇಗೆ ಹೇಳುತ್ತೀರಿ?

೪ "ಅಜ್ಜಗನ್ನಡಂ ಬಿಗಿವೊಂದಿರೆ ಕಬ್ಬಿಗರಕಾವ ನೊಲವಿಂದೊರೆದೆಂ' ಎಂಡಯ್ಯನು ತನ್ನೀಪ್ಸಿತಜ್ಞೆಯನ್ನು ನೆರವೇರಿಸಿರುವನೇ? ಸಕಾರಣವಾದುತ್ತರವನ್ನು ಬರೆಯಿರಿ-

ಕೃತಪದ್ಮಾನಂದನಾಲಂಬಿತ ರುಚಿವಿಭವಂ ಮಂಡಲಂಗೊಂಡು ಧಾತ್ರೀ।
ಪತಿ ಮೂರ್ತಾಂಡಂ ಸುಗೋತ್ರಸ್ಥಿತನೆಸೆಯೆ ರಿಪು ಸ್ತ್ರೀಜನಾಪ್ಯತ್ಪಲಂ ದು ॥
ಸ್ಥಿತಿಯಿಂ ಸಂಕೋಚಮುಂ ತಾಳ್ದಿರೆ ಕಳೆದಿಳಿವಿಂದಿಂದಿರಂಬೊಲ್ವದಾಬ್ಜ ।
ಚ್ಯುತ ಮೊಪ್ಪಿತ್ತನ್ಯ ರಾಜಾಸ್ತಮಯದೊಳ್ಕಂಕಣಾಂಕ ಜಳಾಂಕಂ ॥

ಪಗೆಗಳುಮಂ ಕೆಂಡಿರುಮುಂ
ಮಿಗೆ ಸೋಲಿಪುವವನಬೀರಮುಂಗಾಡಿಯು ಮಾ।
ವಗ ಮಾಡಿಸಿತಾಗೆ ಕಣೆಯುಂ
ಮುಗುಳ್ಗಣೆಯುಂ ಮೊನೆಯೊಳಂ ಪೊಳಲ್ವೀವಿಯೊಳಂ ॥

ಮೇಗಣ ಪದ್ಯಗಳ ಅರ್ಥವನ್ನು ಸ್ಪಷ್ಟವಾಗಿ ಬರೆಯಿರಿ.

೬. ಭುವಭವನಜ ಮೆಸದುದು ಭೂಧವನ ಕೀರ್ತಿ ಕಮಲಾಕರದೊಳ್. ಈ ವಾಕ್ಯದಲ್ಲಿಯೂ, ಮೇಗಣ ಪದ್ಯ

ಗಳಲ್ಲಿಯೂ ತೋರುವ ಅರ್ಥಾಲಂಕಾರವನ್ನು ಲಕ್ಷಣ ಸಮನ್ವಯ ಮಾಡಿರಿ.

೭. ಉತ್ತರ ದಕ್ಷಿಣಾಯನಗಳುಂಟಾಗಲು ಕವಿಯು ಹೇಳಿದ ಕಾರಣವೇನು? ರಾಜಶೇಖರಕ್ಕೂ ಕಬ್ಬಿಗರ ಕಾವಕ್ಕೂ ಇರುವ ಸಾಮ್ಯ ವೈಷಮ್ಯಗಳೇನು?

೮. ರಾಜಶೇಖರನು, ಧೀರೋದಾತ್ತನಾಯಕನಹುದೇ? ಏಕೆ?

ಘನ ಸಮಯಾತ್ಮನಾಥ ... ... ಈ ಪದ್ಯದಿಂದ ಸೂಚಿತವಾಗುವ ನಾಯಕಿಯ ಲಕ್ಷಣವೇನು?

೯. ಉತ್ತರ ರಾಮಚರಿತ್ರೆಯಿಂದ ಭವಭೂತಿಯ ಕಾಲದಲ್ಲಿ ಯಾವ ಕಲೆಯು ಉತ್ತಮ ಸ್ಥಿತಿಯಲ್ಲಿತ್ತು ಎಂದು ತೋರುವದು? ಹೇಗೆ?

೧೦. ನಾಂದಿ, ಆಮುಖ, ಆಕಾಶ ಭಾಷಿತ, ಚೂಳಿಕೆ, ಎಂದರೇನು? ಉತ್ತರ ರಾಮಚರಿತ್ರದ ನಾಂದಿ ಪದ್ಯದ ಸೂಚ್ಯಾರ್ಥವಾವುದು?

೧೧ ಪೂರ್ವ ರಾಮಕಥೆಯನ್ನು ತಿಳಿಸಲು ಕವಿಯು ಮಾಡಿದ ಸಂವಿಧಾನದಿಂದ ಪ್ರಾಯಶಃ ಉತ್ತರ ರಾಮಚರಿತ್ರದ ಕಥೆಯು ಸೂಚಿತವಾಗುವದು. ಹೇಗೆ? ಕೆಲವನ್ನು ತೋರಿಸಿ.

೧೨. "ಅಲ್ಲಿ ಬರೆದಿರುವ ಊರ್ಮಿಳೆಯ ಚಿತ್ರವಂ ನೋಡಿ, ಈ ಮತ್ತೊಬ್ಬಳಾರು?"

"ಎಲೈ ಕಠಿನಚಿತ್ತಳೇ ಈ ಅರ್ಥವನ್ನೂ ನನಗೆ ಹೇಳಬೇಕೆ?"

ಈ ವಾಕ್ಯಗಳು ಯಾವ ಸಂದರ್ಭದಲ್ಲಿ ಯಾರಿಂದ ಹೇಳಲ್ಪಟ್ಟವೆ. ಇವುಗಳ ತಾತ್ಪರ್ಯವೇನು?

ನಗರ ನಿವಾಸಿಗಳು *

ಧಾರವಾಡ ಅಕ್ಟೋಬರ, ನವಂಬರ, ದಿಸಂಬರ ೧೯೦೫ ೧೬-೩-೯
" ಜನವರಿ, ಫೆಬ್ರುವರಿ ಮಾರ್ಚ ೧೯೦೬ ೧೬-೩-೯

ಬೆಳಗಾಂವ ಅಕ್ಟೋಬರ, ನವಂಬರ, ದಿಸಂಬರ ೧೯೦೫ ೧೯-೯-೯
" ಜನವರಿ, ಫೆಬ್ರುವರಿ ಮಾರ್ಚ ೧೯೦೬ ೧೯-೯-೯

ವಿಜಾಪೂರ ಅಕ್ಟೋಬರ, ನವಂಬರ, ದಿಸಂಬರ ೧೯೦೫ ೧೫-೯-೯
" ಜನವರಿ, ಫೆಬ್ರುವರಿ, ಮಾರ್ಚ ೧೯೦೬ ೧೫-೯-೯

ಕಾನಡಾ ಅಕ್ಟೋಬರ, ನವಂಬರ, ದಿಸಂಬರ ೧೯೦೫ ೨೩-೧೦-೦
" ಜನವರಿ, ಫೆಬ್ರುವರಿ, ಮಾರ್ಚ ೧೯೦೬ ೨೪-೧೦-೦

---

* ಇದರೊಳಗೆ ಏನಾದರೂ ತಪ್ಪು ಇದ್ದರೆ ಅದನ್ನು ದಯವಿಟ್ಟು ತಿಳಿಸಬೇಕು.

ಪ್ರಕಟಣೆ ನಂ. 19

ಸೌದಾಗರ್ ಬುಕ್‌ಡಿಪೋ.

ಎಲ್ಲ ಶಾಲೆಗಳ ಸೆರಕಾರಿ, ಖಾಸಗಿ, ಮಾರ್ಸ್‌ಡನ್ ಇತಿಹಾ
ಸಪ್ಲೈ, ನಕ್ಷೆಗಳೂ, ಪುರಾಣ ಪಠ್ಯೇರಪ್ಪು. ಗಳು ಅವೆ. ಆಫೀಸ
ಕ್ಲಾಜಗಳು ಸಹ ಶೋಭೆಯುಳ್ಳ ಮಾಸಿಗಳ ಬೆಳವಣಿಗೆಯ
ಪೈಲು, ಹಿನೆಯುಸ್ಲಿಡುವ ಫೈಡಿಯಾರಗಳು ಅವೆ. ಮಾರ್ಸ್‌ಡನ್
ಷಿ. ಹೊರ್ತಾಗಿ ಕಮಿಶನ್ ರು. ೧ ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ವ. ಅಬ್ದುಲ್‌ಖ
ಮಾಡ ಸಾ॥ ಸೌದಾಗರ

ವಿದ್ಯಾಖಾತೆಯಿಂದ ಒಪ್ಪಿಕೆಯನ್ನು ಪಡೆದ ಹಿನೇ ಆವೃತ್ತಿ
ಯ ಪರಿಷ್ಕೃತ ಪರಿಮಾರ್ಜಿಸ ಪದ್ಧತಿ ೫೪. ೧ನೇ ಭಾಗ ಅಂಕ
ಗಣಿತ ೧೧೦. ಕೊಸರೂಲ ಸಹಿತ ಸಟೀಕಲ್ಯಾಂಡ ರೆವ್ಹಿಸ್ಯೂಕೊ
ಪ ೧೫೪. ೨ನೇ ಭಾಗ ಗಣಿತ ೧೦ ತಿಂಗಳಲ್ಲಿ ತಯಾರಾಗುವದು.
ವಾಷ ಹೊಸದಾಗಿ ಬುಕ್‌ಡಿಪೋ ತೆಗೆಯುವದಿದ್ದೇವೆ.

ಜನವೀರ ಫಕೀರಪ್ಪ ಧಾರವಾ

ಕನ್ನಡ ಶಾಲಾ ಪತ್ರಿಕೆ.

KANARESE
SCHOOL PAPER.

ಪುಸ್ತಕ ೪೨] ಜೂನ ೧೯೦೬. [ಸಂಚಿಕೆ ೬.

ಅನುಕ್ರಮಣಿಕೆ.

೧. ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು ... ೧೨೧–೧೨೪
೨. ಪಟಪಟ ೧೨೪–೧೨೮
೩. ರಾಜಸ್ಥಾನದ ಚರಿತ್ರೆಯು ೧೨೮–೧೩೮
೪. ಪತ್ರವ್ಯವಹಾರ ೧೩೮–೧೪೨
೫. ನೋಟೀಸು. ೧೪೨
೬. ಟ್ರೇ ಕಾ. ಸರ್ಟಿಫೀಕೇಟ ಪರೀಕ್ಷೆಯ ಪ್ರಶ್ನೆಗಳು ... ೧೪೩–೧೪೪

CONTENTS.

1. Educational Intelligence and Useful Notes 121–124
2. Patapata 124–128
3. The History of Rajasthan 128–138
4. Correspondance 138–142
5. Departmental Notice 142
6. Training College Terminal Examination 143–144

DHARWAR:

PRINTED AT THE KARNATIC BOOK DEPOT PRESS.

1906.

DIGITIZED BY eGangotri

ಪ್ರತಿ ಪತ್ರಿಕೆಯ ವರ್ಷದ ಪರ್ಯಂತಕ್ಕೆ ಮುಂಗಡ ಸಂಖ್ಯೆ ಅ.

ಮಾಸಿಕ ಸಂಖ್ಯೆಗೆ ... . ೨ ಳ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಂದು ಇಚ್ಛೆಗೆ ೪ ಪಂಕ್ತಿಗಳವರೆಗೆ ೧ ರೂ.

ಎರಡು ಸಾರಿ ಇಚ್ಛೆಗೆ ೬ „ ೧ ರೂ

ಮೂರು ಸಾರಿ ಇಚ್ಛೆಗೆ ೮ „ ೧ ರೂ.

ಸೂಚನೆಗಳು.

೧ ಶಾಲಾಪತ್ರಿಕೆಗಳಿಗೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨ ಶಿಫಾರಸ್ಸುಗಳಿಗೂ, ಅಪೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿಗಳ ಹಾಸಲು ಬೀಳುವದು.

೩ ಛಾಪಾಖಾನೆಯವರ ಮೂಡಿ ಛಾಪಿಸುವವರಾದರೆ ಪೋಲಿಸ ವರೆಗೆ ೧ ಮ್ಯಾಡಿ ಫೀ ಬೀಳುವದು

೪ ಪ್ರಕಟನೆಯೆಕೂಡ ಹಣ ಕಳುಹಲಿಕ್ಕೆ ಬೇಕು

೫ ಟೀಕೀಸು ಇಟ್ಟ ಹೊರತು ಉತ್ತರ ಶಿಗಲಾರದು

S. K. Rodda.

ಮ್ಯಾನೇಜರ ಕ. ಶಾಲಾಪತ್ರಿಕ

ಶಾಲಾಪತ್ರಕೆ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಣ
ವಿಯಸುತ್ತಂ ಪ್ರತಿಪಾದನಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕೈಕೊಂಡುದೈ।
ಜಯಯಿಂದೋಪವತಿದ್ದ ವೇಳ್ವುದುಳಿದರ್ಜ್ಞಾನಾಭಿವೃದ್ಧಿಪ್ರಿಯರ್ಗಂ

ಪುಸ್ತಕ ೪೨.] ಜೂನ ೧೯೦೬. ಸಂಚಿಕೆ ೬.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಪ್ರಸ್ತುತದಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿಯ ಕೆಲ ಜನ ಸಾಹಸಿಗಳು, ಏಸಿಯಾ, ಯುರೋಪ, ಅಮೇರಿಕೆಗಳನ್ನು ಉಗೆಬಂಡಿಯಿಂದ ಕೂಡಿಸುವ ಆಲೋಚನೆಯನ್ನು ನಡಿಸಿರುವರು. ಇವರು ಸೈಬೇರಿಯಾದೊಳಗಿನ ಕಾನ್ಸ್ಕಪಟ್ಟಣದಿಂದ ಅಲಿಯಾಸ್ಕದವರಿಗೆ ಹಳಿಗಳನ್ನು ಹಾಕುವರು. ಮುಂದೆ ಬೆಹರಿಂಗ ಸಾಮುದ್ರ ಧುನಿಯಲ್ಲಿ ನೀರ ಬುಡದಲ್ಲಿ ಮಾರ್ಗವನ್ನು ಮಾಡಬೇಕೆನ್ನುವರು. ಈ ನೀರ ಬುಡದ ಮಾರ್ಗವು ಮುವ್ವತ್ತೆಂಟು ಮೈಲಾಗುವದು. ಇದಕ್ಕೆ ಒಟ್ಟಿಗೆ ಐದುಕೋಟಿ ಎಂಬತ್ತು ಲಕ್ಷ ಪೌಂಡುಗಳು ಹತ್ತುವವೆಂದು ಅಂದಾಜ ಮಾಡಿರುವರು. ಈ ಮಾರ್ಗವು ಪಾರೀಸ್, ಬರ್ಲಿನ್, ಮಾಸ್ಕೋ ಅಮಸ್ಕ, ಕಾನ್ಸ್ಕ, ಬೆಹರಿಂಗಗಳ ಮೇಲಿಂದ ಹೋಗುವದು. ಈ ಮಾರ್ಗದ ಎಡಬಲದಲ್ಲಿ ಇಪ್ಪತ್ತುನಾಲ್ಕು ಕಿಲೋಮಿಟರ ಪ್ರದೇಶವನ್ನು ತೆಗೆದುಕೊಂಡು ಅದರಲ್ಲಿ ಉದ್ಯೋಗವೃದ್ಧಿಯ ಕಾರಖಾನೆಗಳನ್ನು ನಡಿಸುವದುಂಟು. ಈ ಕಲ್ಪನೆಯನ್ನು ಹದಿನಾರುವರ್ಷದ ಮೊದಲು ಮೋನಿಯರ

ಲಾವೆಯೆಕಡಿ ಎಂಬವನೊಬ್ಬ ಶೋಧಕನು ಹುಡುಕಿ ತೆಗೆದನು. ಸನ್ ೧೯೦೬ರಲ್ಲಿ ಪಾರಿಸಪಟ್ಟಣದಲ್ಲಿ ಈ ವಿಷಯವನ್ನೇ ವಿವರಿಸಿರುವೆದೊಂದು ಪುಸ್ತಕವು ಪ್ರಕಟವಾಯಿತು. ಇಪ್ಪತ್ತನೇ ಶತಕದಲ್ಲಿ ಏನೇನು ಅಘಟಿತ ಕಾರ್ಯಗಳು ದೃಷ್ಟಿಗೋಚರವಾಗುವವೋ ದೇವರೇ ಬಲ್ಲ.

ಬ್ಲೀಚಿಂಗ ಪೌಡರ ಅಥವಾ ನಿರ್ಮಾಲವಾಡುವ ಪುಡಿಯು ದಿನದಿನಕ್ಕೆ ಹೊಸ ಶೋಧಗಳು ಪ್ರಕಟವಾಗುತ್ತಿರುವವು. ಇದಲ್ಲದೆ ಈ ವಿಸ್ತಾರವಾದ ಭೂಮಿಯಲ್ಲಿ ಒಂದೇ ಪ್ರದೇಶದೊಳಗೆ ಎಲ್ಲ ತರದ ಪದಾರ್ಥಗಳು ದೊರೆಯುವದಿಲ್ಲ. ಉಷ್ಣಕಟಿಬಂಧದಲ್ಲಿ ಬೆಳೆಯುವ ಮಸಾಲೆಯ ಸಾಮಾನುಗಳು ಅನ್ಯಪ್ರದೇಶದಲ್ಲಿ ಬೆಳೆಯುವದಿಲ್ಲೆಂಬದು ಸುಪ್ರಸಿದ್ಧವು. ಖನಿಜ ದ್ರವ್ಯದ ಹಾಡಾದರೂ ಇದೇ. ಆದ್ದರಿಂದ ಎಲ್ಲೆಲ್ಲಿ ಯಾವ ಯಾವ ಪದಾರ್ಥಗಳು ವಿಪುಲವಾಗಿಯೂ ನಿರಾಯಾಸವಾಗಿಯೂ ದೊರೆಯುವವೋ ಅಲ್ಲಲ್ಲಿಯ ಜನರು ಅವುಗಳಿಂದಲೇ ತಮ್ಮ ನಿರ್ವಾಹವನ್ನು ಸಾಗಿಸಿಕೊಳ್ಳುತ್ತಿದ್ದರು. ಆದರೆ ಅರ್ವಾಚೀನಕಾಲದಲ್ಲಿ ಭೂಮಿಯ ಮೇಲಿನ ಯಾವತ್ತೂ ಪ್ರದೇಶದ ಜನರಲ್ಲಿ ಬಳಿಕೆಯುಂಟಾಗಲಿಕ್ಕೆ ಅನುಕೂಲವಾದ ಉಗಿಬಂಡಿ ಉಗಿಹಡಗಗಳು ಪ್ರಚಾರದಲ್ಲಿ ಬಂದಂದಿನಿಂದ ಒಂದು ದೇಶದವರು ಭೂಮಿಯ ಯಾವತ್ತೂ ಭಾಗದೊಳಗಿನ ಸಾಮಾನುಗಳನ್ನು ಹೊಂದಲು ಸಮರ್ಥರಾಗಿರುತ್ತಾರೆ. ಉದಾಹರಣಾರ್ಥವಾಗಿ ಬಣ್ಣಗಳನ್ನು ನೋಡಿರಿ. ಯುರೋಪದ ಶಾಸ್ತ್ರಜ್ಞರು ರಸಾಯನ ಕ್ರಿಯೆಯಿಂದ ತರತರದ ಬಣ್ಣಗಳನ್ನು ಉಂಟು ಮಾಡಿ ಲೋಕದ ತುಂಬ ಹರವಿಬಿಟ್ಟಿದ್ದಾರೆ. ಇದೇ ಶೋಧಕರು ತಮ್ಮನಾಡಲ್ಲಿ ಅರವಿಯ ಮೈಲಿಗೆಯನ್ನು ಕಳಿಯುಲಿಕ್ಕೆ ಒಂದು ಬಗೆಯ ಪುಡಿಯನ್ನು ಸಿದ್ಧವಾಡುವರು ನಮ್ಮ ದೇಶದವರು ಸೌಳ್ಯ ಸುಣ್ಣ, ನೀಲಿ ಮುಂತಾದ ಪದಾರ್ಥಗಳನ್ನು ಉಪಯೋಗಿಸಿಕೊಂಡು ಅರಿವೆಯನ್ನು ಸ್ವಚ್ಛ ಮಾಡುತ್ತಾರೆ. ಆದರೆ ಯುರೋಪದವರು ಈ ಅರಿ

ವೆಯ ಗಂಜಿಗೆಂದು ಒಂದು ತರದ ಪುಡಿಯನ್ನು ಸಿದ್ಧಮಾಡಿ ಕೊಂಡಿರುವರು ಅದೇ ಬ್ಲೀಚಿಂಗ ಪೌಡರವ್ರು.

ಸುಮಾರು ನೂರು ವರ್ಷಗಳ ಮೊದಲು ಬರ್ಥೋಲೆಟ ಎಂಬವನು ಇದನ್ನು ಹುಡುಕಿ ತೆಗೆದನು. ಆ ಕಾಲದಲ್ಲಿ ಒಂದು ಟನ್ನು ಪುಡಿಗೆ ಸುಮಾರು ೧೪೦೦ ರೂಪಾಯಿಗಳು ಬೀಳುತ್ತಿದ್ದವು. ಸದ್ಯಕ್ಕೆ ಅಷ್ಟೇ ಪುಡಿಯ ಬೆಲೆಯು ೭೦ ರೂಪಾಯಿ ಆಗುವದು ಮನಗಾಣುವದಕ್ಕಾಗಿ ಅಲ್ಪ ಪ್ರಮಾಣದಿಂದ ಮನೆಯಲ್ಲಿ ಕೂಡಾ ಇದನ್ನು ತೆಗೆಯಬಹುದು ಆದರೆ ಅದರಿಂದ ಉಳಿತಾಯವಾಗದೆ ಶ್ರಮವೂ ವೆಚ್ಚವೂ ಹೆಚ್ಚು ಹತ್ತುವದು ಅದನ್ನೇ ದೊಡ್ಡ ಪ್ರಮಾಣದಿಂದ ತೆಗೆದರೆ ಲಾಭವು ಹಚ್ಚಾಗುತ್ತದೆಂಬದಕ್ಕೆ ಸಂದೇಹವಿಲ್ಲ.

ಸೋಸಿದ ಸುಣ್ಣದಲ್ಲಿ ಕ್ಲೋರಿನ್‌ವಾಯುವನ್ನು ಮಿಶ್ರ ಮಾಡಿದರೆ ಈ ಪುಡಿಯು ತಯಾರಾಗುತ್ತದೆ. ಉಪ್ಪಿನ ನೀರಿನಲ್ಲಿ ವಿದ್ಯುತ್ ಪ್ರವಾಹದ ಎರಡೂ ತಂತಿಗಳನ್ನು ಬಿಡಲು ಒಂದರಿಂದ ಕ್ಲೋರಿನ್‌ವಾಯುವು ಪ್ರಭವಿಸಲ್ಪಡುತ್ತದೆಂಬದು ನಿಮಗೆ ಗೊತ್ತುಂಟು. ಆದರೆ ಅದಕ್ಕೂ ಸುಲಭವಾದಂಥ ಬೇಕಾದಷ್ಟು ಕ್ಲೋರಿನ್‌ವಾಯುವನ್ನು ಹುಟ್ಟಿಸುವಂಥ ಬೇರೊಂದು ಕೃತಿ ಇರುವದು. ಅದು ಯಾವದಂದರೆ, ಒಂದು ಮಣ್ಣಿನ ಪಾತ್ರೆಯಲ್ಲಿ ಮ್ಯಾಂಗಾನೀಜ ಆಕ್ಸೈಡು ಎಂಬ ಕರಿಪುಡಿಯನ್ನು ಹೈಡ್ರೊಕ್ಲೋರಿಕ ಆಸಿಡ್ ಎಂಬ ಲವಣಾಮ್ಲವನ್ನು ಹಾಕಿ ತಕ್ಕಷ್ಟು ಸೆಕೆಯನ್ನು ಕೊಡಲು ಕ್ಲೋರಿನ್‌ವಾಯುವು ಹೊರಡಲಾರಂಭಿಸುತ್ತದೆ. ಬಳಿಕ ಆ ಪಾತ್ರೆಯು ಬಾಯಿಗಿರುವ ಕೊಳವಿಗೆ ರಬ್ಬರಿನ ಕೊಳವೆಯನ್ನು ಜೋಡಿಸಿ ಒಳಮಗ್ಗಲಿಗ ನೀಸದ ತಗಡಿನಿಂದ ಹೊದಿಸಲ್ಪಟ್ಟ ದೊಡ್ಡ ಕೋಣೆಯಲ್ಲಿ ಈ ವಾಯುವನ್ನು ಸಂಗ್ರಹಿಸುವರು. ಈ ಮನೆಯ ನೆಲದ ಮೇಲೆ ಸೋಸಿದ ಸುಣ್ಣದ ಪುಡಿಯನ್ನು ಹರವಿರುವರು. ಈ ತರವು ನಾಲ್ಕೈದು ಇಂಚು ದಪ್ಪಾಗಿರುವದು. ಅಥವಾ ಕೋಣೆಯ ಗೋ

ಡೆ ಗೋಡೆಗಳಲ್ಲಿ ಅಲ್ಲಲ್ಲಿಗೆ ಎರಡೆರಡು ಗೂಟಗಳನ್ನು ಬಡಿದು ಅವುಗಳ ಮೇಲೆ ಹಲಿಗೆಗಳನ್ನಿಟ್ಟು ಆ ಹಲಿಗೆಗಳ ಮೇಲೆ ಸುಣ್ಣದ ಪುಡಿಯನ್ನು ಹರವಿಟ್ಟಿರುವರು. ಈ ಹಲಿಗೆಗಳಿಗೆ ಸಣ್ಣ ಸಣ್ಣ ಛಿದ್ರಗಳಿರುವವು. ಪಾತ್ರೆಯು ಬಾಯಿಂದ ಹೊರಬೀಳುವ ಕ್ಲೋರಿನ್ ವಾಯುವು ರಬ್ಬರ ಕೊಳವಿಯ ಮಾರ್ಗವಾಗಿ ಕೋಣೆಯಲ್ಲಿ ಸೇರಿ ಸುಣ್ಣದ ಪುಡಿಯಲ್ಲಿ ಕೂಡಿಕೊಳ್ಳುತ್ತದೆ. ಆ ಪುಡಿಯಲ್ಲಿ ಕ್ಲೋರಿನ್‌ವಾಯುವು ಮಿಶ್ರವಾದ ಬಳಿಕ ಉಂಟಾಗುವ ಉಷ್ಣತೆಯು ಫಾರೆನ್‌ಹಾಯಿಟ್‌ದ ೧೮೦ ಅಂಶಕ್ಕಿಂತ ಹೆಚ್ಚಾಗದಂತೆ ಎಚ್ಚರಪಡುತ್ತಾರೆ. ಹೆಚ್ಚಾದರೆ ಬೇರೊಂದು ಪದಾರ್ಥವು ಸಿದ್ಧವಾಗುತ್ತದೆ. ಈ ಬಗೆಯಾಗಿ ಕ್ಲೋರಿನ್‌ವಾಯುವಿನ ಸಂಯೋಗ ಹೊಂದಿದ ಸುಣ್ಣವು ಬದಲಾಗುತ್ತದೆ. ತೂಕವು ಹೆಚ್ಚಾಗುತ್ತದೆ. ಹಸಿಯು ಬೆಳೆಯುತ್ತದೆ. ಈ ಪುಡಿಯನ್ನು ಬಟ್ಟೆಯನ್ನು ಒಗೆಯುವದಕ್ಕೆ ಉಪಯೋಗಿಸುವರು.

HABIT

ಚಟವು.

"ಸೆಲ್ಲೀ" ಎಂಬವನು ಭಾವನೆಗಳು ಮತ್ತು ಇಚ್ಛಾ ಜವುಗಳ ಉತ್ಪತ್ತಿಸ್ಥಳವೇ ಸೀಲಸ್ವಭಾವವೆಂದು ಹೇಳುತ್ತಾನೆ ಕಾರಣ ಎಲ್ಲಕ್ಕಿಂತಲೂ ಇಚ್ಛೆಯೇ ಪ್ರಾಧಾನ್ಯವಾಗಿರುವದು. ಯಾಕಂದರೆ ಇಚ್ಛೆಯಿಂದಲೇ ಸ್ವಭಾವವು ಪೂರ್ಣತ್ವವನ್ನು ಹೊಂದಿದಂಥ ಇಚ್ಛೆಗೆ ಸ್ವಭಾವ ಅನ್ನಬಹುದು. ಇಂಥ ಸ್ವಭಾವವುಳ್ಳ ಮನುಷ್ಯನೇ ಶೀಲಸ್ವಭಾವಿಯು. ಕೆಟ್ಟ ತತ್ವಗಳಿಂದ ತುಂಬದಂಥ ಸ್ವಭಾವದ ಮನುಷ್ಯನಿಗೆ ದುರ್ಗಡತೆ (ದುರ್ಗಣದ) ಯು ಮನುಷ್ಯನೆಂದಿನ್ನು ತ್ತೇವೆ. ಇವನನ್ನು ನಂಬಲಾಗದು.

ಸೀಲಸ್ವಭಾವ ಹುಟ್ಟಿಸುವ ಅನೇಕ ಮಾರ್ಗಗಳಲ್ಲಿ ಶಾಲೆಯು ಎಷ್ಟರ ಮಟ್ಟಿಗೆ, ಮನೆಯು ಎಷ್ಟರ ಮಟ್ಟಿಗೆ ಪರಿಣಾಮ ಮಾಡುವವು ನೋಡವಾ!

ಗೃಹ ಶಿಕ್ಷಣದ ಸರಾಸರಿ ತೆಗೆದರೆ ಹುಡುಗನ ಸ್ವಭಾವವು ಚಲೋದು ಇಲ್ಲವೆ ಕೆಟ್ಟದ್ದಾಗಿರಲಿಕ್ಕೆ ಬೇಕು. ಮನೆಯ ಶಿಕ್ಷಣ ಚಲೋದು ಇದ್ದರೆ ಸಾಲೆಯಲ್ಲಿ ಅವನಿಗೆ ಸುಲಭವಾಗುವದು. ಗೃಹ ಶಿಕ್ಷಣದಿಂದ ಹುಡುಗನಲ್ಲಿ ಕೆಟ್ಟ ಸ್ವಭಾವ ಹುಟ್ಟಿದ್ದರೆ ಶಿಕ್ಷಣದ ಕೆಲಸಕ್ಕೆ ಮಾಸ್ತರನಿಗೆ ಬಹಳೇ ಕಷ್ಟವಾಗುವದು. ಎಷ್ಟೋಜನ ತಂಟೆತಾಯಿಗಳು ತಮ್ಮ ಹುಡುಗರನ್ನು ತಿದ್ದುವ ಕೆಲಸಕ್ಕೆ ನಾಲಾಯಖರಿರುತ್ತಾರೆ. ಯಾಕಂದರೆ, ಅವರಿಗೆ ಅನೇಕಹವ್ಯಾಸ (ಕೆಲಸ) ಗಳು ಇದ್ದದರಿಂದ ಪುರಸೊತ್ತು ಆಗುವದಿಲ್ಲ. ಆದರೂ ಬೇಸರಿಕೆ ಬರುತ್ತದೆ. ಮತ್ತು ಕೆಲಸ ಮಾಡಿ ದಣಿದಿರುವದರಿಂದ ತ್ರಾಸವಾಗುತ್ತದೆ. ಕೆಲವರಿಗೆ ಅಜ್ಞಾನದಿಂದಲೂ ಆಗಿರುವದಿಲ್ಲ. ಒಂದುವೇಳೆ ಯಾವನಾದರೊಬ್ಬನು ಮಾಡುತ್ತೇನೆಂದರೆ ಅವನಿಂದ ಸರಿಯಾಗಿ ತಿದ್ದುವದು ಆಗುವದಿಲ್ಲ. ಇಪ್ಪೇ ಅಲ್ಲ. ಮನಸಿಗೆ ಬಂದಾಗ ವಿಚಾರವಿಲ್ಲದೆ ತನ್ನ ತಲೆಯಲ್ಲಿ ಹೊಕ್ಕಂತೆ ತಿದ್ದುತ್ತಾನೆ. ಈ ಕೆಟ್ಟ ತಿದ್ದುವಿಕೆಯಿಂದ ಹುಡುಗನಲ್ಲಿ ಕೆಟ್ಟ ಹೇತು (ಚಂಡಿತನವು) ಹುಟ್ಟುತ್ತದೆ. ಮುಂದೆ ಹುಡುಗನಿಂದ ಯಾವದೊಂದು ಕೆಲಸ ಮಾಡಬೇಕಾದರೆ ಲಂಚದಾಸೆ ಹಚ್ಚಿ ಮಾಡಿಸಹತ್ತಬೇಕಾಗುವದು. ಒಂದೊಂದು ವೇಳೆ ಅವಿಚಾರದಿಂದ ಭಯಂಕರ ಶಿಕ್ಷೆಮಾಡಲಿಕ್ಕೂ ಹಿಂದೆ ಮುಂದೆ ನೋಡುವದಿಲ್ಲ. ಈ ಪ್ರಕಾರ ವಿಶ್ರ ನೀತಿಯನ್ನು ಉಪಯೋಗಿಸುವದರಿಂದ ಹುಡುಗನು ತನಗೆ ಅದರಲ್ಲಿ ಲಾಭವಿದ್ದರೆ ಮಾತ್ರ, ಚಲೋದೆಂದು ತಿಳುಕೊಳ್ಳುತ್ತಾನೆ. ಕೆಲವರು ಉದ್ದೇಶವನ್ನೇ ಮರೆತು ಸದ್ಯದ ಲಾಭವಾಗುವ ಕೃತ್ಯಗಳನ್ನೇ ನೋಡುವರು. ಸಾಲೆಗೂ ಶೀಲಸ್ವಭಾವಕ್ಕೂ ಸಂಬಂಧ ಹುಡುಗರು ಶಾಲೆಗೆ ಬಂದಾಗ್ಗೆ ಅವರ ಮನೋವೃತ್ತಿಗಳು ಕೆಟ್ಟದ್ದರೆ ಕಡೆಗೆ ಪೂರ್ಣವಾಗಿ ಹೋಗಿರುವದಿಲ್ಲ. ಕಾರಣ ಅವರ ಸ್ವಭಾವವು ಹಾದಿಗೆ ಬರುವಂಥ (ತಿದ್ದುವಂಥ) ಸ್ಥಿತಿಯಲ್ಲಿರುತ್ತದೆ. ಹುಡುಗನನ್ನು ಲಗೂ ಶಾಲೆಗೆ ಹಾಕುವದರಲ್ಲಿ ಇದೊಂದು ಲಾಭವುಂಟು. ಆದ್ದರಿಂದ ಹುಡುಗರಿಗೆ ಶೀಲಸ್ವಭಾವದ

ಪಾಯವನ್ನು ಶಾಲೆಯಲ್ಲಿಯೇ ಹಾಕತಕ್ಕದ್ದೆಂಬದು ಸ್ಪಷ್ಟವದೆ. ಹುಡುಗರಲ್ಲಿ ಸೀಲಸ್ವಭಾವವು ತನ್ನಿಂದತಾನೇ ಉತ್ಪನ್ನವಾಗುತ್ತಿರುತ್ತದೆ. ಅದಕ್ಕೆ ಜಲೋ ಪಾಯವಾ ಗುವಂತೆ ಅವರಿಗೆ ಸಹಾಯ ಮಾಡುವದು ಮಾಸ್ತರನ ಕರ್ತವ್ಯವೆಂಬದನ್ನು ಮರೆಯಲಾಗದು ಹೊರ್ತು ಮಾಸ್ತರನೇ ಸೀಲಸ್ವಭಾವವನ್ನು ಹುಟ್ಟಿಸಲಾರನು. ಕಾರಣ ಹುಡುಗನಲ್ಲಿ ಸೀಲಸ್ವಭಾವದ ಪಾಯಾಹಾಕಬೇಕಾದರೆ ಅದರ ಮಹತ್ವ ತಿಳಿಸಿ ಹೇಳೋಣ (ಸ್ಪಷ್ಟೀಕರಣ), ಉಪದೇಶ ಮಾಡೋಣ, ಎಚ್ಚರಗೊಳಿಸೋಣ, ಉತ್ತೇಜನ ಕೊಡೋಣ, ಈ ನಾಲ್ಕು ಕೆಲಸವನ್ನು ಮಾಸ್ತರನು ಮಾಡಬೇಕಾಗುತ್ತದೆ. ಈ ಕೆಲಸ ಮಾಡಬೇಕಾದರೆ ಮಾಸ್ತರನು ಪ್ರತಿ ಒಬ್ಬ ಹುಡುಗನ ಸ್ವಭಾವ ತಿಳುಕೊಳ್ಳುವದು ಅವಶ್ಯ ಈ ಪ್ರಕಾರ ಹುಡುಗನ ಎಲ್ಲ ಸ್ವಭಾವದ ಸಂಗತಿಗಳು ಮಾಸ್ತರನಿಗೆ ಗೊತ್ತಿದ್ದರೆ ಅವನ ಯಾವ ಯಾವ ಸ್ವಭಾವಗಳನ್ನು ಒಟ್ಟಗೂಡಿಸಿದರೆ ಶೀಲಸ್ವಭಾವದ ಪಾಯಾಹಾಕಲಿಕ್ಕೆ ಅನುಕೂಲವಾಗುವದೆಂಬದು ತಿಳಿಯುವದು. ಈ ತರದ ತಿದ್ದುವಿಕೆಯು ಶಿಕ್ಷಣಕ್ಕಿಂತ ಕಠಿಣವದೆ. ಶೀಲಸ್ವಭಾವ ಹುಟ್ಟಿಸಲಿಕ್ಕೆ ತಿದ್ದುವಿಕೆಯೇ ಸಾಕಂತಲ್ಲ. ಶಿಕ್ಷಣವೂ ಬೇಕು ಯಾಕಂದರೆ, ಧರ್ಮ ಸಂಬಂಧಿ ನೀತಿಯ ಸಂಬಂಧಿ ಪಾಠಗಳನ್ನು ಓದಿಸಿ ಪ್ರಸಂಗ ಬಂದಾಗ್ಗೆ ವ್ಯವಹಾರದಲ್ಲಿ ಉಪಯೋಗ ಮಾಡಬೇಕು. ಇದರಿಂದ ಹುಡುಗನಲ್ಲಿ ನೀತಿಯು ನೆಲೆಗೊಳ್ಳುವದು. ಈ ನೀತಿಯಿಂದ ಸ್ವಭಾವವು ಶೀಲಸ್ವಭಾವವಾಗುವದು. ಶಾಲೆಯಲ್ಲಿ ಯಾವಾಗಲೂ ತಿದ್ದುವಿಕೆಯು ನಡೆದಿರುವದರಿಂದ ಯೋಗ್ಯ ಕೆಲಸಗಳನ್ನು ಯೋಗ್ಯ ವೇಳೆಯಲ್ಲಿ ಮಾಡಬೇಕೆಂಬ ಸ್ಥಿರತ್ವ ಹುಟ್ಟುವದು. ಹೀಗೆ ಮಾಡುವದರಿಂದ ಹುಡುಗರ ಶೀಲಸ್ವಭಾವವು ಸ್ಥಿರವುಳ್ಳದ್ದಾಗುವದು.

ಹುಡುಗರಲ್ಲಿ ಸೀಲಸ್ವಭಾವ ಬೆಳಿಸಲಿಕ್ಕೆ ಶಿಕ್ಷಣ, ತಿದ್ದುವಿಕೆ ಇವೆಗಳ ಹೊರ್ತು ಮಾಸ್ತರನ ಸಹಾನುಭೂತಿ, ಪ್ರತಿ

ಒಬ್ಬ ಹುಡುಗನ ಗುಣ ಸ್ವಭಾವಗಳ ಜ್ಞಾನ ಇವುಗಳು ಸಾಧನಗಳಾಗಿವೆ. ಕಾರಣ ಮಾಸ್ತರನು ಹುಡುಗರಿಗೆ ನೀತಿಯ ಚಟಗಳನ್ನು ಹಚ್ಚಬೇಕು. ಸದ್ಗುಣಗಳ ವರ್ಗೀಕರಣ ಮಾಡಬೇಕು. ಅವುಗಳ ಹೇತುಗಳ ಯಥಾರ್ಥಜ್ಞಾನ ಮಾಡಿಕೊಡಬೇಕು. ಯಾಕಂದರೆ ನೀತಿಯ ಕರ್ತವ್ಯಗಳಲ್ಲಿ ಉತ್ತಮ, ಮಧ್ಯಮ, ಕನಿಷ್ಠ ಎಂಬ ಮೂರು ಪ್ರಕಾರಗಳಿರುತ್ತವೆ. ಮತ್ತು ಇವುಗಳನ್ನು ವ್ಯವಹಾರದಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ಯೋಗ್ಯ ಉದಾಹರಣೆಗಳನ್ನು ಶಿಕ್ಷಿಷ್ಟ ಕೊಡುತ್ತಿರಬೇಕು. ಇಷ್ಟು ಮಾಡಿದರೂ ಎಲ್ಲರಲ್ಲಿ ಸೀಲಸ್ವಭಾವ ಹುಟ್ಟುವದಿಲ್ಲ. ಅವರವರ ಬುದ್ಧಿಸಾಮರ್ಥ್ಯ, ತಿಳುವಳಿಕೆ ಇವುಗಳಿಂದ ಹೆಚ್ಚು ಕಡಿಮೆಯಾಗುತ್ತದೆ ಹುಡುಗರು ಶಾಲೆಯಲ್ಲಿದ್ದಾಗ ಅವರ ಸೀಲಸ್ವಭಾವವು ತಿಳಿಯುವದಿಲ್ಲ. ಸ್ವತಂತ್ರದಿಂದ ಆಡಲಿಕ್ಕೆ ಬಿಟ್ಟಾಗ ತಿಳಿಯುವದು ಆಗ ಅವರಲ್ಲಿ ಏನಾದರೂ ದೋಷ ಕಂಡರೆ ಕೂಡಲೇ ಯೋಗ್ಯ ಉದಾಹರಣೆ ಕೊಟ್ಟು ಅವರನ್ನು ತಿದ್ದಬೇಕು ಸಾರಾಂಶ ಸೀಲಸ್ವಭಾವ ಹುಟ್ಟಿಸೋಣವೆಂದರೆ ಮನಸಿನ ಎಲ್ಲ ಶಕ್ತಿಗಳನ್ನು ಬೆಳಿಸುವದೇ ಇರುತ್ತದೆ.

ಸೀಲಸ್ವಭಾವಕ್ಕೂ ಚಟಕ್ಕೂ ಇರುವ ಸಂಬಂಧ ಮನುಷ್ಯನಿಗೆ ಸೀಲಸ್ವಭಾವ ಉಂಟಾಗಲಿಕ್ಕೆ ಚಟವೇ ಸಾಮಗ್ರಿಯಾಗಿರುವದು. ಒಳ್ಳೇ ಚಟಗಳನ್ನು ಮನೋ ಇಚ್ಛೆಯಾಗಿ ಹಚ್ಚಿಕೊಂಡಿದ್ದರೆ ಚಟಗಳನ್ನು ಬೆಳಿಸಿದಂತೆ ಆಯಿತು. ಈ ಬೆಳವಣಿಗೆಯು ಇವನ ಆರೋಗ್ಯ ಸದ್ಗುಣಗಳಲ್ಲಿ ಕಂಡು ಬರುವದು. ನಾವು ಹೆಚ್ಚೆಚ್ಚು ಕೃತ್ಯ ಮಾಡಿದಂತೆ ಅದು ಸ್ಥಿರವಾಗುವದು. ಚಲೋ ಕೆಲಸಗಳನ್ನು ಮಾಡಿದ್ದರ ಪರಿಣಾಮವೇ ಸೀಲಸ್ವಭಾವವೆನಿಸುವದು. ಶಾಲೆಯಲ್ಲಿ ಯಂತ್ರದಂತೆ ಕೆಲವು ಕೃತ್ಯಗಳು ನಡೆಯುತ್ತವೆ. ಇವು ಚಟ ಹುಟ್ಟಿಸಲಿಕ್ಕೆ ಕಾರಣಗಳಾಗಿರುತ್ತವೆ. ಶಾಲೆಯಲ್ಲಿ ಕೆಲವು ಕೃತ್ಯಗಳು ನಮ್ಮ ಕರ್ತವ್ಯವೆಂದು ಮಾಡಿಸಲ್ಪಡುತ್ತವೆ. ಇದರಿಂದ ಮಾಡುವ ಚಟಹತ್ತಿ ಸ್ವಾಭಾವಿಕವಾದ

ರೆ ಇದರಲ್ಲಿ ನೀಲಸ್ವಭಾವ ಕಂಡುಬರುವದು. ಸಾಲೆಯೊಳಗಿನ ಅಭ್ಯಾಸಕ್ರಮ, ತಿದ್ದುವಿಕೆ ಇವು ನಮ್ಮಲ್ಲಿ ಮನೋಇಚ್ಛಾ, ಭಾವನೆಗಳ ಜ್ಞಾನ ಇವುಗಳ ಚಟವನ್ನು ಹುಟ್ಟಿಸುತ್ತವೆ. ಈ ಚಟಗಳಿಂದ ನೀಲಸ್ವಭಾವ ಹುಟ್ಟಲಿಕ್ಕೆ ಕಾರಣವಾಗಿರುತ್ತವೆ.

THE HISTORY OF RAJASTHAN.

ರಾಜಾಸ್ಥಾನದ ಇತಿಹಾಸವು

ಲಾಹೋರ ಮುಂತಾದ ನಗರಗಳಲ್ಲಿ ಆಳುತ್ತಿದ್ದ ರಜಪೂತ ಅರಸರ ಕುಲವು ಮುಸಲ್ಮಾನರ ಅಮಾನುಷ ಕ್ರೂರ ಕೃತ್ಯಗಳಿಂದ ನಿರ್ಮೂಲವಾದವು. ಹಿಂದೂ ಜನರನ್ನು ಕೊಲ್ಲೋಣ ಅವರ ಸಿರಿಸಂಪತ್ತನ್ನು ಸುಲಿಯೋಣ ಅವರ ಸ್ತ್ರೀಯರನ್ನು ಅಪವಿತ್ರ ಮಾಡೋಣ ಅವರನ್ನು ಕುಲಗೆಡಿಸೋಣ ದೇವಸ್ಥಾನಗಳನ್ನು ನಿರ್ಮೂಲ ಮಾಡೋಣ ಮುಂತಾದ ಕಾರ್ಯಗಳೆಲ್ಲ ಮುಸಲ್ಮಾನ ಧರ್ಮದಲ್ಲಿ ಹುಟ್ಟಿದ ಮನುಷ್ಯರ ಕರ್ತವ್ಯ ಕರ್ಮಗಳಲ್ಲಿ ಸಮಾವೇಶವಾಗುತ್ತವೆಂದು ಆ ಕಾಲದ ಪ್ರತಿ ಒಬ್ಬ ಮುಸಲ್ಮಾನನು ನಂಬುತ್ತಿದ್ದನು.

ಹಿಂದು ಮುಂದಿನ ಸಂಗತಿಗಳನ್ನು ಹೊಂದಿಸಿ ತಿಳುಕೊಳ್ಳುವದಕ್ಕಾಗಿ ಮುಸಲ್ಮಾನ ಜನರ ಐತಿಹ್ಯವನ್ನು ಮೇಲೆ ವಿವರಿಸಿದಷ್ಟೇ ಸಾಕಾಗುವದೆಂದು ನಮ್ಮ ನಂಬುಗೆಯುಂಟು. ಪಠಾಣಾದಿನ ಹಾಗು ಪರಧರ್ಮದ ಜನರನ್ನು ಪೀಡಿಸುವದೂ ಅವರವಿತ್ತ ಜೀವಿತಗಳನ್ನು ಅಪಹರಿಸುವದೂ ಈ ಜನರ ಪ್ರೀತಿಯ ಕಾರ್ಯವಾಗಿದ್ದರಿಂದ ಇವರಿಂದ ಹಿಂದೂ ಜನರಿಗೆ ವಿಶೇಷ ತ್ರಾಸ ಒದಗಿತೆಂದು ಹೇಳುವ ಪ್ರಯೋಜನವಿಲ್ಲ. ಮೇಲೆ ಬರೆದಂತೆ ಘಾಜ್ನೀನ ಇಸವಿಯಲ್ಲಿ ಅಲ್‌ಮಾಮೂನನೆಂಬವನು ಖಲೀಫನ ಪಟ್ಟಕ್ಕೆ ಬಂದನು, ಅವನ ರಾಜ್ಯದೊಳಗೇ ಅಲ್ಲಲ್ಲಿ ಬಂಗೆಗಳೆದ್ದವು.

ಆದರಿಂದ ಮುಸಲ್ಮಾನರೆಲ್ಲರು ಆ ಅಂತಃಕಲಹದಲ್ಲಿಯೇ ತೊಡಗಿಕೊಂಡದ್ದರಿಂದ ಕೆಲವು ಕಾಲದವರೆಗೆ ಹಿಂದುಸ್ತಾನವು ಮುಸಲ್ಮಾನರ ಉಪದ್ರವದಿಂದ ಅಲಿಪ್ತವಾಗಿತ್ತೆಂಬುದು ನಿಜವು. ಆದರೂ ೯೭೫ನೇ ಇಸವಿಯಲ್ಲಿ ಖೋರಾಸಾನಾ ಪ್ರಾಂತದ ಸುಭೇದಾರನಾದ ಸಬಕ್ತಗೀನನು ಗಿಝನಿಯನ್ನು ವಶಮಾಡಿಕೊಂಡ ಬಳಿಕ ಹಿಂದುಸ್ತಾನವು ಮತ್ತೆ ಮುಸಲ್ಮಾನರ ಉಪಟಳಕ್ಕೆ ಗುರಿಯಾಯಿತು. ಇವನು ಇದೇ ವರುಷ ಹಿಂದುಸ್ತಾನಕ್ಕೆ ದಾಳಿಯಿಟ್ಟನು. ಈ ದಾಳಿಯಲ್ಲಿ ಇವನೊಡನೆ ಇವನ ಮಗನಾದ ಮಹಮ್ಮದನೂ ಇದ್ದನು. ಇವನೇ ಗಿಝನೀ ಮಹಮ್ಮದನೆಂಬ ಹೆಸರಿನಿಂದ ಹಿಂದುಸ್ತಾನದ ಇತಿಹಾಸದಲ್ಲಿ ಪ್ರಸಿದ್ಧನಾಗಿರುವನು. ಸಬಕ್ತಗೀನನು ಸ್ವಧರ್ಮಾಭಿಮಾನದಿಂದ ಹಿಂದೂ ಜನರನ್ನು ಕುಲಗೆಡಿಸುವಂಥಾ ಸುಲಿಯುವಂಥಾ ದುಷ್ಕೃತ್ಯಗಳನ್ನು ಯಥೇಚ್ಛವಾಗಿ ನಡಿಸಿದನು. ಆದರೆ ಇವನ ತರುವಾಯ ಇವನ ಮಗನು ನಡಿಸಿದ ಕ್ರೂರ ಕೃತ್ಯಗಳು ಸಬಕ್ತಗೀನನ ಕೃತ್ಯಗಳನ್ನು ಮರಿಸಿದವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ತಂದೆಯು ತನಗಿಂತ ತನ್ನ ಮಗನು ಪ್ರಸಿದ್ಧನಾಗಬೇಕೆಂದು ಬಯಸುವದು ಸ್ವಾಭಾವಿಕವು. ಆದರೂ ಈ ಬಯಕೆಯು ಕೈಗೂಡುವದು ಮಾತ್ರ ಸುಸಾಧ್ಯವಲ್ಲ. ಸತ್ಕೃತ್ಯದಿಂದಾಗಲಿ ದುಷ್ಕೃತ್ಯದಿಂದಾಗಲಿ ಜನರು ಖ್ಯಾತಿಯನ್ನು ಪಡೆಯುತ್ತಾರೆ. ಸತ್ಕೃತ್ಯದಿಂದ ಹೆಸರು ಪಡೆಯುವದು ಉತ್ತಮ ಮಾರ್ಗವೆಂಬದಕ್ಕೆ ಸಂದೇಹವಿಲ್ಲ. ಮಹಮ್ಮದನ ಕೃತ್ಯಗಳು ನಮಗೆ ಕ್ರೂರತನದವೆಂದೂ ಮನುಷ್ಯ ಪ್ರಾಣಿಗೆ ಹೊಲ್ಲದವೆಂದೂ ತೋರಿದರೂ ಅವನ ಧರ್ಮದಂತೆ ಅವನಿಗೆ ಅವು ಯೋಗ್ಯವಾದವುಗಳೆಂದು ತೋರಿದವು. ಅದರಿಂದ ಅವನು ಸ್ವಧರ್ಮಾಭಿಮಾನದಿಂದ ಅಂಧನಾಗಿ ಸಾರಾಸಾರ ವಿಚಾರವನ್ನು ಮರೆತು ಕೇವಲ ಧನದಾಶೆಯಿಂದ ಹಿಂದುಸ್ತಾನದಲ್ಲಿ ಅವನು ನಡಿಸಿದ ಕ್ರೂರ ಕೃತ್ಯಗಳು ತಂದೆಯ ಕ್ರೂರ ಕೃತ್ಯಗಳೆಂಬ ಇವಾರತಿಗೆ ಕಳಸ

ವಿಟ್ಟನೆಂದು ಹೇಳಬಹುದು. ಇವನು ೧೨೦ ಸಾರೆ ಹಿಂದು ಸ್ತಾನವನ್ನು ನುಗ್ಗಿ ಅಪರಿಮಿತ ಸಂಪತ್ತಿಯನ್ನು ಸುಲಿ ದುಯ್ದನು, ಸಾವಿರಾರು ಗುಡಿಗಳನ್ನು ನಿರ್ಮೂಲ ಮಾಡಿದನು. ಲಕ್ಷಾಧಿನಿರಪರಾಧಿ ಜನರನ್ನು ಹೇಸದೆ ಕೊಂದು ಬಿಟ್ಟನು. ಆ ಕಾಲದಲ್ಲಿ ಇವನ ದಾಳಿಯ ದಾವಾಗ್ನಿಗೆ ಸಿಕ್ಕ ಪ್ರದೇಶದಲ್ಲಿ ಎತ್ತ ನೋಡಿದತ್ತ ಶೋಕ ಧ್ವನಿಯೂ ದಾರಿದ್ರ್ಯರೂಪ ದೃಷ್ಟಿಗೆ ಬೀಳುತ್ತಿದ್ದವು. ಶ್ರೀರಾಮಚಂದ್ರನಿಂದ ಅಜಾತಶತ್ರುವಾದ ಯುಧಿಷ್ಠಿರನ ವರೆಗೆ ಭರತ ಖಂಡದೊಳಗೆ ಕೂಡಬಿದ್ದ ಸಂಪತ್ತಿಯನ್ನು ಇವನು ಬ ಹ್ವಂಶದಿಂದ ಸ್ವದೇಶಕ್ಕೆ ಸೆಳೆದುಕೊಂಡು ಹೋದನು. ಇ ವನ ದಾಳಿಯ ಆಘಾತದಿಂದ ನೊಂದು ಕಡುಗೊಂಡು ಬಿದ್ದ ಹಿಂದುಸ್ತಾನವು ಇಂದಿಗೂ ತನ್ನ ಮೊದಲಿನ ಅವಸ್ಥೆಯ ನ್ನು ಪಡೆಯುಲಸಮರ್ಥವಾಗಿರುತ್ತದೆ ಆಬೂ, ಗಿರನಾ ರ, ಚಿತೋಡು ಮುಂತಾದ ಪ್ರದೇಶಗಿಳಲ್ಲಿಯ ಭವ್ಯವಾದ ದೇವಾಲಯುಗಳೂ ಅರಮನೆಗಳೂ ಎಷ್ಟೋ ಪ್ರಸಿದ್ಧವಾ ದ ತುಂಬಿದ ನಗರಗಳೂ ಮಣ್ಣು ಪಾಲಾಗಿ ಹೋದವು.

ಮಹಮ್ಮದನ ದಾಳಿಯ ಕಾಲದಲ್ಲಿ ಚಿತೋಡದೊಳಗೆ ನರವರ್ಮ ಯಶೋವರ್ಮರೆಂಬ ಅರಸರು ಆಳುತ್ತಿದ್ದರು ಬರಬರುತ್ತ ಈ ಮುಸಲ್ಮಾನರು ತಮ್ಮ ಧರ್ಮ ಮತದ ಲ್ಲಿ ಅನೇಕ ಜನರನ್ನು ಎಳಕೊಂಡು ಸಂಘ ಶಕ್ತಿಯನ್ನು ಬೆಳಿಸಿಕೊಂಡರು ಮಹಮ್ಮದ ಪೈಗಂಬರನ ತರುವಾಯ ನೂರು ವರ್ಷದೊಳಗೆ ಅವರು ಅರಬಸ್ತಾನದಿಂದ ಹಿಂ ದುಸ್ತಾನದವರೆಗಿರುವ ಯಾವತ್ತು ಪ್ರದೇಶವನ್ನು ಕೈವ ಶ ಮಾಡಿಕೊಂಡದ್ದಲ್ಲದೆ ಸಾಕ್ಷಾತ್ ಹಿಂದುಸ್ತಾನದ ಪ ಶ್ಚಿಮ ಭಾಗವನ್ನು ಸಹ ಆಕ್ರಮಿಸಿದರು. ನೋಡಿರಿ! ಅವರ ಕತ್ತಿಯು ಎಷ್ಟು ಶೀಘ್ರಗಾಮಿಯಾಗಿರುವದು! ಅವ ರು ಕ್ರಿಸ್ತೀ, ಯಹೂದೀ, ಜನರನ್ನು ಸೋಲಿಸಿ ಅವರ ದೇ ಶಗಳನ್ನು ತೆಗೆದುಕೊಂಡದ್ದಲ್ಲದೆ ತುರ್ಕಸ್ತಾನ, ಇರಾಣ ಕಾಬೂಲ ಮುಂತಾದ ದೇಶಗಳಲಿ ಕೂಡ ತಮ್ಮ ಅಧಿಕಾರ

ನನ್ನು ನೆಲೆಗೊಳಿಸಿದರು. ಈ ಜನರಲ್ಲಿ ಸೇಖ ಸಯ್ಯ
ದ, ಮೊಗಲ, ಪಠಾಣ, ಎಂದು ನಾಲ್ಕು ಪಂಗಡಗಳಿರುವ
ಪ್ರ. ಅರಬರಲ್ಲಿ ಪ್ರತಿಪ್ಠಿತರಾದ ಜನರೇ ಸೇಖರೆಂಬ ಪಂ
ಗಡಕ್ಕೆ ಸೇರಿದವರು. ಪೈಗಂಬರರ ದೌಹಿತ್ರರ ವಂಶದವ
ರು ಸಯ್ಯದರೆಂಬ ವರ್ಗದಲ್ಲಿ ಸರ್ವಾಧೀಶರಾಗುತ್ತಾರೆ.
ಅಗ್ನಿಪೂಜಕರಾದ ಇರಾಣದ ಪಾರ್ಸೀ ಜನರು ಧರ್ಮಾಂ
ತರವನ್ನು ಹೊಂದಿ ಮುಸಲ್ಮಾನರಾಗಿ ಮೊಗಲ್ ಎಂಬ
ರಂಗಡದೊಳಗೆ ಎಣಿಸಲ್ಪಡುತ್ತಾರೆ. ಮುಸಲ್ಮಾನರ ಬ
ಶ್ತಾಯುದಿಂದ ಆ ಧರ್ಮವನ್ನು ಸ್ವೀಕರಿಸಿದ ಕಾಬೂಲ
ರ್ಪ್ರಾಂತದ ಕ್ಷತ್ರಿಯರು ಪಠಾಣರೊಳಗೆ ಬರುವರು. ಮು
ಸಲ್ಮಾನರು ರೂಮುಣಾಮ ಅಂದರೆ ಕಾನ್‌ಸ್ಟಾಂಟಿನೋ
ರಲ್, ಸೀರಿಯಾ ಮುಂತಾದ ಪ್ರಾಂತಗಳನ್ನು ವಶ ಮಾಡಿ
ಕೊಂಡು ಅಲ್ಲಿ ತಮ್ಮ ಧರ್ಮವನ್ನೂ ಅರಸೊತ್ತಿಗೆಯನ್ನೂ
ನೆಲೆಗೊಳಿಸಿದರು. ಪೂರ್ವದಲ್ಲಿ ಚೆತೋಡದವರೆಗೆ ಅವ
ರು ಬಂದಿದ್ದರು.

ಮುಸಲ್ಮಾನ ಇತಿಹಾಸ ಕರ್ತರಾಗಲಿ, ಸ್ವತಃ ರಾಜಕೀ
ಯ ಅಕ್ಬರನವೀಸರಾಗಲಿ ಕೇವಲ ನಿಷ್ಪಕ್ಷಪಾತದಿಂದ
ಐತಿಹ್ಯ ಸಂಗತಿಗಳನ್ನು ಬರೆದು ಇಟ್ಟಿಲ್ಲ. ಇವರು ಪ
ಕ್ಷಾಭಿಮಾನದಿಂದ ತಮ್ಮ ಜನರ ಕಾರ್ಯ, ನೀಚತ್ವಗಳ
ನ್ನು ಅಪಮಾನ ಪರಾಭವಗಳನ್ನು ಮುಚ್ಚಿಟ್ಟು ಹಿಂದೂ
ಜನರ ಸತ್ಕೃತ್ಯ ಜಯಗಳನ್ನು ಕೂಡ ಸವಿಸ್ತಾರವಾಗಿ
ಉಲ್ಲೇಖಿಸಿಲ್ಲ. ಒಮ್ಮೊಮ್ಮೆ ತ್ರಸ್ತರಾದ ಹಿಂದೂ ಜನರಿಂ
ದ ಮಾಡಲ್ಪಟ್ಟ ಚಿಕ್ಕ ಚಿಕ್ಕ ದುಷ್ಟ ಕೃತ್ಯಗಳನ್ನು ಅತಿ
ಕಯೋಕ್ತಿಯಿಂದ ವರ್ಣಿಸಿರುತ್ತಾರೆ. ಆದರೆ ಹಿಂದೂ
ಇತಿಹಾಸಕರ್ತರು ಈ ಬಗೆಯ ದೋಷಕ್ಕೆ ಒಳಗಾಗಿಲ್ಲ
ಅವರು ತಮ್ಮವರಿಂದಲೂ, ಮುಸಲ್ಮಾನರಿಂದಲೂ ನಡಿಸ
ಲ್ಪಟ್ಟ ಊಚ ನೀಚ ಕಾರ್ಯಗಳನ್ನೂ ತಮ್ಮವರಿಗೂ
ಮುಸಲ್ಮಾನರಿಗೂ ಒದಗಿದ ಜಯಾಪಜಯಗಳನ್ನೂ ಒಂ
ದೂ ಮುರಿಯದಂತೆ ಯಥಾರ್ಥವಾಗಿ ಉಲ್ಲೇಖಿಸಿದ್ದಾರೆ.

ಆದರೆ ಇವರಲ್ಲಿ ಭೂಗೋಲ ಜ್ಞಾನವಿಲ್ಲೆಂಬದೊಂದು ಮಹತ್ತಮ ದೋಷವಿತ್ತು. ತಮ್ಮ ಮೇಲೆ ಸಾಗಿ ಬರುವ ಮುಸಲ್ಮಾನರು ಎಲ್ಲಿಯವರು? ಯಾವ ಕಡೆಯಿಂದ ಬಂದರು? ಅವರಿಗೂ ತಮಗೂ ಎಷ್ಟು ಅಂತರವು! ಎಂಬ ದೊಂದೂ ಸಂಗತಿಯು ಇವರಿಗೆ ಗೊತ್ತಿದ್ದಿಲ್ಲ. ಅದರಿಂದ ಇವರು ಮುಸಲ್ಮಾನರ ಮೂಲಸ್ಥಾನದ ಬಗ್ಗೆ ತಮ್ಮ ಲೇಖದಲ್ಲಿ ಕೇವಲ ಅಸಂಗತ ಸಂಗತಿಗಳನ್ನು ಬರೆದಿರುವರು. ಕೆಲವರು ಮುಸಲ್ಮಾನರು ಸಿಂಧದಿಂದ ಬಂದರೆಂತಲೂ ಕೆಲವರು ಸಮುದ್ರದೊಳಗಿಂದ ಬಂದರೆಂತಲೂ ಕಲ್ಪಿಸಿ ಅವರಿಗೆ ರಾಕ್ಷಸರು, ಮ್ಲೇಂಛರು ಮಹಾಘಟ್ಟಾರಕರು, ಅವಲಿಯಾಗಳು ಎಂಬ ತರದ ಹೆಸರುಗಳಿಂದ ಸಂಬೋಧಿಸಿದರು.

ಹಿಂದುಸ್ತಾನದೊಳಗಿನ ಕ್ಷತ್ರಿಯ ವಂಶದವರ ಅರಸೊತ್ತಿಗೆಯು ಏಳನೂರಾಇಪ್ಪತ್ತುನಾಲ್ಕರಲ್ಲಿ (೭೨೪) ಮುಸಲ್ಮಾನರ ದಾಳಿಯ ವೇಗದಿಂದ ಹೊಯ್ದಾಡ ತೊಡಗಿತೆಂದು ಹೇಳಬಹುದು. ಇವರು ಮೊದಲು ಪಂಜಾಬದಿಂದ ಭಾಟೇ ಜಾತಿಯ ಕ್ಷತ್ರಿಯರನ್ನು ಜಡಿದೋಡಿಸಿದರು. ಬಳಿಕ ಘರೀದನೆಂಬ ಮುಸಲ್ಮಾನ ಸರದಾರನು ಅಜಮೀರದ ಮಾಣಿಕರಾಯನನ್ನು ಕೊಂದನು, ಇದರಿಂದ ಕ್ಷತ್ರಿಯರಲ್ಲಿ ಎತ್ತ ನೋಡಿದತ್ತ ಗೊಂದಲವೆದ್ದಿತು. ಈ ಭಯಂಕರರಾದ ಈ ಮುಸಲ್ಮಾನರ ಈ ಬಗೆಯ ಭೀತಿಪ್ರದ ಕೃತ್ಯಗಳಿಂದ ಚಹ್ವಾಣ, ಚಾವಡಾ, ಗೇಹಲೋಟ, ಭಾಟೇ ಮುಂತಾದ ಕ್ಷತ್ರಿಯ ವಂಶದ ರಾಜರು ಬೆದರಿ ದಿಕ್ಕಾಪಾಲಾಗಿ ಓಡಿ ಹೋದರು. ಯಾವತ್ತು ಹಿಂದೂ ಜನರ ಬಾಯಲ್ಲಿ ಅಸುರ, ಮ್ಲೇಂಛ, ಗನೀಮು ಎಂಬ ಶಬ್ದಗಳು ಎಡೆಗೊಂಡವು. ಆರಂಭದಲ್ಲಿ ಚಿತೋಡವನ್ನು ಮುತ್ತಿದವರಲ್ಲಿ ಅಂಗಟಸಿ ಎಂಬ ಹೂಣರಾಜನೂ ಉತ್ತರಾಧಿಪತಿಯಾದ ಬೂಸಾ ಎಂಬವನೂ ಶಿವನೆಂಬ ಜಾಡೇಜದ ರಾಜನೂ, ಜಾಂಗಲ ದೇಶಾಧಿಪತಿಯಾದ ಚೋಹಿಯಾ ಎಂಬ ಭೂಪಾಲನೂ ದಾಹೇರದ ನರಪತಿಯೂ ಪ್ರಮುಖ

ರಾಗಿದ್ದರೆಂದು ಇತಿಹಾಸದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ದಾಳಿಯನ್ನು ಬಾಪ್ಪ ರಾವಳನು ನಿವಾರಣ ಮಾಡಿದನೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದ್ದು ವಾಚಕರಿಗೆ ನೆನಪಿರಬಹುದು. ಈ ದಾಳಿಯಲ್ಲಿ ಬಂದ ಮುಸಲ್ಮಾನರು ಮರುಭೂಮಿಯಿಂದ ಕೆಳಗಿಳಿದು ಸಿಂಧ ಕಾಠೇವಾಡಗಳ ಮೇಲೆ ಹಾಯ್ದು ಹೋದರೆಂದು ತಿಳಿದದೆ. ಬಾಪ್ಪಾ ರಾವಳನು ಗಿಝನೀ ಪಟ್ಟಣವನ್ನು ಮೂಲತಃ ಕ್ಷತ್ರಿಯರದಾಗಿದ್ದರಿಂದ ಅದನ್ನು ಮುಸಲ್ಮಾನರ ಕೈಯಲ್ಲಿ ಇರಗೊಡುವದು ಸರಿಯಲ್ಲವೆಂದು ಬಗೆದು ಗಿಝನಿಯ ಮೇಲೆ ಸಾಗಿ ಹೋಗುವ ವಕ್ಕಾಗಿ ಅಣಿಯಾದನು. ಈ ಕಾಲದಲ್ಲಿ ಗಿಝನಿಯಲ್ಲಿ ಸೇಲೀವನೆಂಬ ಅರಸನು ಆಳುತ್ತಿದ್ದನು. ಬಾಪ್ಪಾ ರಾವಳನು ಗಿಝನಿಯನ್ನು ಮುತ್ತಿ ಸೇಲೀವನನ್ನು ಸೋಲಿಸಿ ಆ ಪಟ್ಟಣವನ್ನು ತೆಗದುಕೊಂಡದ್ದಲ್ಲದೆ ಅವನ ಮಗಳನ್ನು ಮದುವೆ ಮಾಡಿಕೊಂಡನು. ಕ್ಷತ್ರಿಯರು ಪೂರ್ವದಲ್ಲಿ ಬೇರಾದ ಜಾತಿಯ ಹೆಣ್ಣನ್ನು ಮದುವೆಯಾಗುತ್ತಿದ್ದರಂತೆ.

ಮುಂದೆ ೮೫೬ರಲ್ಲಿ ಚಿತೋಡ ನಗರದಲ್ಲಿ ಖುಮಾನನೆಂಬ ಕ್ಷತ್ರಿಯ ಭೂಪನು ರಾಜ್ಯಪರಿಪಾಲನೆಯಂಗೆಯ್ಯುತ್ತಿರಲು, ಮುಸಲ್ಮಾನರು ಮತ್ತೆ ಆ ನಗರವನ್ನು ಮುತ್ತಿದರು. ಆ ಪ್ರಸಂಗದಲ್ಲಿ ಭರತಖಂಡದಲ್ಲಿ ಆಳುತ್ತಿದ್ದ ಅನೇಕ ಕ್ಷತ್ರಿಯ ರಾಜರು ಒಮ್ಮನಸಿನಿಂದ ಖುಮಾನನಿಗೆ ನೆರವಾಗಿ ತಮ್ಮ ದೇಶದ ಮೇಲೆ ಸಾಗಿ ಬಂದ ಮುಸಲ್ಮಾನರನ್ನು ಓಲಿತಾಗಿ ಹಣಿದು ಅಟ್ಟಿಕೊಟ್ಟರು. ಖುಮಾನರಾಸಾ ಎಂಬ ಐತಿಹ್ಯ ಗ್ರಂಥದಲ್ಲಿ ಖುಮಾನನಿಗೆ ಸಹಾಯಕರಾಗಿ ಬಂದಿದ್ದ ಅರಸರ ಪಟ್ಟಿಯುಂಟು. ಅವರಲ್ಲಿ—

೧ ಗಿಝನಿಯ ಗೇಹಲೋಟ ವಂಶದ ಅರಸನೂ ೨ ಆಶೀರಗಡದ ಟೊಂಕ ಮನೆತನದ ರಾಜನೂ ೩ ನಾಂದೋಲದ ಚಹ್ವಾಣ ನರಪತಿಯೂ ೪ ರಾಹೀರಗಡದ ಚಾಲುಕ್ಯ ಭೂಪಾಲನೂ ೫ ಸೇತಬಂದರದ ಜೆರಳೇಡ ವಂಶದ ಧರಣೀಪನೂ ೬ ಮಂದೋಡದ ಖೈರಾವಿ ನರಾಧಿಪನೂ ೭ ಮಾ

ಗೆರೋಳದ ಮಳವಾಹನ ಕುಲದ ಕ್ಷಿತಿಪತಿಯೂ ೪ ಜೇತ
ಗೆಡದ ಜೋಡಿಯಾ ವಂಶದ ಪೊಡವಿಪನೂ ೯ ತಾರಾಗಡ
ದ ರೇವಡ ಮನೆತನದ ಓಡೆಯನೂ ೧೦ ನರವರದ ಳ
ಚ್ಛವಾಹ ನೃಪನೂ ೧೧ ಸಾಂಬೋರದ ಕಾಲಮು ದೇಶಾ
ಧಿಪತಿಯೂ ೧೨ ಜೋನಗಡದ ದಸಾನಾ ಕುಲದ ಕ್ಷಿತಿ
ಪಾಲನೂ ೧೩ ಅಜವಿಾರದ ಗೋರ ಮನೆತನದ ಅರಸನೂ
೧೪ ಲೋಹದರಗಡದ ಚಂದಾನಾ ವಂಶದ ಭೂಪತಿಯೂ
ಪ್ರಮುಖರಾಗಿದ್ದರು. ಇವರಲ್ಲದೆ ಕಾಸುಂದಿಯ ದೋ
ರ ವಂಶದ, ದಿಲ್ಲಿಯ ತೋರ ವಂಶದ, ಪಟ್ಟಣದ
ಚಾನಡಾ ಕುಲದ ಝಾಲೋರದ ಸೋನೀಗಡಾ ಮನೆ
ತನದ ಸಿರೋಹಿಯ ದೇಪಡಾ ವಂಶದ ಗಾಗರೋ
ನದ ಖಿಚೀ ವಂಶದ ಜುನಾಗಡದ ಜಾಧವ ಮನೆತನ
ಪಾತಿಯ ಝಾಲಾವಂಶದ ಕನೋಜದ ರಾಠೋಡ
ವಂಶದ ಛೋಟ್ಯಾಲ್ಯದ ಬಾಲಾ ವಂಶದ ಪೀರನ
ಗಡದ ಗೋಹೇಲ ವಂಶದ ಜಸಲಗಡ ಭಾಟೀ ಕುಲದ
ಲಾಹೋರದ ಭೂಸಾ ಕುಲದ ರೋನೇಜದ ಸಾಂ
ಖಳಾ ಕುಲದ ಖಿರಲೀಗಡ ಸಿಹಟ ಕುಲದ ಮುಂ
ಡಲಗಡದನಿಕುಂಪಾ ಮನೆತನದ ರಾಜೋರದ ವೀರಗು
ಜರ ಮನೆತನದ ಕೆರಣಗಡದ ಚಂದೇಲವಂಶದ
ಸಿಕರದ 'ಸಿಕರವಾಳ ಮನೆತನದ ಉಮರಗಡದ ಜೇ
ಠವಾ ಕುಲದ ಪಾಲಿಯಬೀರಗೋಲಾಮನೆತನದ
ಖಂತರಗಡ ಜಾಡೇಜ ಮನೆತನದ ಕಾಶ್ಮೀರದ ಪ
ರಿಹಾರ ಮನೆತನದ ಕ್ಷತ್ರಿಯ ಭೂಪರೂ ಬಂದಿದ್ದರು.
ಈ ಕುಲಗಳಲ್ಲಿ ಎಷ್ಟೋ ಅರಸು ಮನೆತನಗಳು ಮುಸ್ಲ
ಲ್ಮಾನರ ದಾಳಿಯಲ್ಲಿ ನಿರ್ಮೂಲವಾದವು. ಈ ಕಾಲದಲ್ಲಿ
ಲಾಹೋರದೊಳಗೆ ಜಯಪಾಲನೆಂಬ ಭೂಸಾ ವಂಶದ ಅ
ರಸನು ಆಳುತ್ತಿದ್ದನು. ಇವನ ಕೈಯಲ್ಲಿ ಕಾಶ್ಮೀರ, ಮು
ಲ್ತಾನ, ಸರಹಿಂದ ಮುಂತಾದ ಪ್ರಾಂತಗಳು ಇದ್ದವು. ಜ
ಯಪಾಲನು ಒಂದು ಲಕ್ಷ ಸೈನ್ಯದೊಂದಿಗೆ ಗಿಜನಿಯನ್ನು

ಮುತ್ತಿ ಸಬಳ್ಳಗೀನನನ್ನು ಬವ್ಮೆ ಸೋಲಿಸಿದನು. ಮುಂ
ದೆ ಸಬಕ್ತಗೀನನ ಮಗನಾದ ಮಹಮೂದನು ಜಯಪಾ
ಲನೊಡನೆ ಹೋರಾಡಿ ಜಯಪಾಲನನ್ನು ಸೋಲಿಸಿ ಸೆರೆ
ಹಿಡಿದನು. ಜಯಪಾಲನು ಸೆರೆಯಲ್ಲಿಯೇ ಸತ್ತನೆಂದು
ಜನವಾರ್ತೆಯುಂಟು. ಮುನಾಗಡದಲ್ಲಿ ಯಾದವ ಕುಲದ
ಖಿಂಗಾರನೆಂಬ ಅರಸನು ಈ ಕಾಲದಲ್ಲಿ ಆಳುತ್ತಿದ್ದನೆಂ
ದು ತಿಳಿಯುತ್ತದೆ. ಬಳ್ಳಿಗಾನನು ಮಹಾ ಪ
ರಾಕ್ರಮಿಯಾಗಿ ಮುಸಲ್ಮಾನರ ಕೂಡ ಎಷ್ಟೋ ಕಾಳಗಗಳ
ನ್ನು ಮಾಡಿದನೆಂದು ಇತಿಹಾಸದಿಂದ ತಿಳಿಯುವದು. ಕ
ಡೆಯಲ್ಲಿ ಇವನು ಬ್ರಾಹ್ಮಣರ ಹೇಳಿಕೆಯಿಂದ ತನ್ನ ಚಿ
ಕ್ಕ ಮಗನಾದ ಯೋಗಿರಾಜನಿಗೆ ರಾಜ್ಯವನ್ನೊಪ್ಪಿಸಿ ತಾ
ನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು. ಆದರೂ
ಇವನು ವಾನಪ್ರಸ್ಥಾಶ್ರಮಿಯಾಗಿ ವನದಲ್ಲಿರುವಾ
ಗ ಬವ್ಮೆಂದೊವ್ಮೆ ಮನಸು ತಿರುಗಿದವನಾಗಿ ಮುರಳಿ
ಸ್ವರಾಜ್ಯಕ್ಕೆ ಬಂದು ಮಗನಿಂದ ಯಾವತ್ತು ರಾಜ್ಯಕಾರ
ಭಾರವನ್ನು ಕಸುಕೊಂಡನು. ತನಗೆ ವಾನಪ್ರಸ್ಥಾಶ್ರ
ಮಯಾಗಲಿಕ್ಕೆ ಉಪದೇಶ ಮಾಡಿದ ಬ್ರಾಹ್ಮಣರನ್ನು ಬ
ಹುನಿಷ್ಠುರತನದಿಂದ ಅಪಮಾನಗೊಳಿಸಿದನು. ಆದರೆ ಇ
ವನು ಮುರಳಿ ಕೈಕೊಂಡ ಅರಸೊತ್ತಿಗೆಯು ಇವನಿಗೆ
ಸುಖಪ್ರದವಾಗಲಿಲ್ಲ. ಕಡೆಯಲ್ಲಿ ಇವನು ತನ್ನ ಮಗನಾ
ದ ಮಂಗಲನೆಂಬನಿಂದ ಕೊಲ್ಲಲ್ಪಟ್ಟನು. ಈ ಮಂಗಲ
ನಾದರೂ ಪಿತೃಹತ್ಯವೆಂಬ ಅಮಂಗಲ ಕೃತ್ಯದಿಂದ ತನ್ನ
ಸರದಾರರ ಕೋಪಕ್ಕೆ ಪಾತ್ರನಾಗಿ ಸ್ವದೇಶವನ್ನು ತ್ಯಾಗ
ಮಾಡಿ ದೇಶಾಂತರಕ್ಕೆ ಹೋದನು. ಕ್ಷತ್ರಿಯನಾದ ರಿಂದ
ಇವನು ಸ್ವರಾಜ್ಯದಿಂದ ಉತ್ತರಕ್ಕೆ ಹೋಗಿ ಲೋಪಡ
ಪ್ರಾಂತದಲ್ಲಿ ಮಾಂಗೋಲಿಯಾ ಗೇಹಲೋಟ ಎಂಬ ಹೆಸರಿ
ನ ಹೊಸ ರಾಜ್ಯವನ್ನು ಸ್ಥಾಪಿಸಿದನು.

ಅಜಮೀರದ ಚಹ್ವಾಣ ಮನೆತನದವರೂ, ಚಿತೋಡ್ಗ
ಡದ ಗೆಹಲೋಟ ಮನೆತನದವರೂ ಬವ್ಮೊವ್ಮೆ ಗೆಲೆಯ

ಗೆರೋಳದ ಮುಕವಾಹನ ಕುಲದ ಸ್ಥಿತಿಪತಿಯೂ ೪ ಜೀತ
ಗಡದ ಜೋಡಿಯಾ ವಂಶದ ಪೊಡವಿಪನೂ ೯ ತಾರಾಗಡ
ದ ರೇವಡ ಮನೆತನದ ಓಡೆಯನೂ ೧೦ ನರವರದ ಕ
ಚ್ಛವಾಹ ನೃಪನೂ ೧೧ ಸೊಂಕೋರದ ಕಾಲಮು ದೇಶಾ
ದಿಪತಿಯೂ ೧೨ ಜೋನೆಗಡದ ದಸಾನಾ ಕುಲದ ಕ್ಷತ್ರಿ
ಪಾಲನೂ ೧೩ ಅಜಮೀರದ ಗೋರ ಮನೆತನದ ಅರಸನೂ
೧೪ ಲೋಹದರಗಡದ ಚಂದಾನಾ ವಂಶದ ಭೂಪತಿಯೂ
ಪ್ರಮುಖರಾಗಿದ್ದರು. ಇವರಲ್ಲದೆ ಕಾಸುಂದಿಯ ದೋ
ರ ವಂಶದ, ದಿಲ್ಲಿಯ ತೋರ ವಂಶದ, ಪಟ್ಟಣದ
ಚೌನಡಾ ಕುಲದ ಝಾಲೋರದ ಸೋನೀಗಡಾ ಮನೆ
ತನದ ಸಿರೋಹಿಯ ದೇವಡಾ ವಂಶದ ಗಾಗರೋ
ನದ ಖಿಚೀ ವಂಶದ ಜುನಾಗಡದ ಜಾಧವ ಮನೆತನ
ಪಾತಿಯ ಝಾಲಾವಂಶದ ಈನೋಜದ ರಾಠೋಡ
ವಂಶದ ಛೋಟ್ಯಾಲ್ಯದ ಬಾಲಾ ವಂಶದ ಕೀರನ
ಗಡದ ಗೋಹೇಲ ವಂಶದ ಜಸಲಗಡ ಭಾಟೀ ಕುಲದ
ಲಾಹೋರದ ಭೂಸಾ ಕುಲದ ರೋನೇಜದ ಸೊಂ
ಖಿಳಾ ಕುಲದ ಖರಲೀಗಡ ಸಿಹಟ ಕುಲದ ಮುಂ
ಡಲಗಡದನಿಕುಂಪಾ ಮನೆತನದ ರಾಜೋರದ ವೀರಗು
ಜರ ಮನೆತನದ ಕೆರಣಾಗಡದ ಚಂದೇಲವಂಶದ
ಸಿಕರದ ಸಿಕರವಾಳ ಮನೆತನದ ಉಮರಗಡದ ಜೇ
ಠವಾ ಕುಲದ ಪಾಲಿಯಬೀರಗೋಲಾಮನೆತನದ
ಖಂತರಗಡ ಜಾಡೇಜ ಮನೆತನದ ಕಾಶ್ಮೀರದ ಪ
ರಿಹಾರ ಮನೆತನದ ಕ್ಷತ್ರಿಯ ಭೂಪರೂ ಬಂದಿದ್ದರು.
ಈ ಕುಲಗಳಲ್ಲಿ ಎಷ್ಟೋ ಅರಸು ಮನೆತನಗಳು ಮುಸ
ಲ್ಮಾನರ ದಾಳಿಯಲ್ಲಿ ನಿರ್ಮೂಲವಾದವು. ಈ ಕಾಲದಲ್ಲಿ
ಲಾಹೋರದೊಳಗೆ ಜಯಪಾಲನೆಂಬ ಭೂಸಾ ವಂಶದ ಅ
ರಸನು ಆಳುತ್ತಿದ್ದನು. ಇವನ ಕೈಯಲ್ಲಿ ಕಾಶ್ಮೀರ, ಮು
ಲ್ತಾನ, ಸರಹಿಂದ ಮುಂತಾದ ಪ್ರಾಂತಗಳು ಇದ್ದವು. ಜ
ಯಪಾಲನು ಬಂದು ಲಕ್ಷ ಸೈನ್ಯದೊಂದಿಗೆ ಗಿಝನಿಯನ್ನು

ಮುತ್ತಿ ಸಬಳ್ಳಾಗೀನನೆನ್ನು ಬವ್ಮೆ ಸೋಲಿಸಿದನು. ಮುಂದೆ ಸಬಳ್ಳಾಗೀನನ ಮಗನಾದ ಮಹಮೂದನು ಜಯಪಾಲನನ್ನೊಡನೆ ಹೋರಾಡಿ ಜಯಪಾಲನನ್ನು ಸೋಲಿಸಿ ಸೆರೆ ಹಿಡಿದನು. ಜಯಪಾಲನು ಸೆರೆಯಲ್ಲಿಯೇ ಸತ್ತನೆಂದು ಜನವಾತರಾಯುಂಟು ಹುನಾಗಢದಲ್ಲಿ ಯಾದವ ಕುಲದ ಖಿಂಗಾರನೆಂಬ ಅರಸನು ಈ ಕಾಲದಲ್ಲಿ ಆಳುತ್ತಿದ್ದನೆಂದು ತಿಳಿಯುವದು; ಖುವಾನೆನು ಮಹಾ ಪರಾಕ್ರಮಿಯಾಗಿ ಮುಸಲ್ಮಾನರ ಕೂಡ ಎಷ್ಟೋ ಕಾಳಗಗಳನ್ನು ಮಾಡಿದನೆಂದು ಇತಿಹಾಸದಿಂದ ತಿಳಿಯುವದು. ಕಡೆಯಲ್ಲಿ ಇವನು ಬ್ರಾಹ್ಮಣರ ಹೇಳಿಕೆಯಿಂದ ತನ್ನ ಚಿಕ್ಕ ಮಗನಾದ ಯೋಗಿ ರಾಜನಿಗೆ ರಾಜ್ಯವನ್ನೊಪ್ಪಿಸಿ ತಾನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು. ಆದರೂ ಇವನು ವಾನಪ್ರಸ್ಥಾಶ್ರಮಿಯಾಗಿ ವನದಲ್ಲಿರುವಾಗ ಒಮ್ಮೊಮ್ಮೆ ಮನಸು ತಿರುಗಿದವನಾಗಿ ಮರಳಿ ಸ್ವರಾಜ್ಯಕ್ಕೆ ಬಂದು ಮಗನಿಂದ ಯಾವತ್ತು ರಾಜ್ಯಕಾರಭಾರವನ್ನು ಕಸುಕೊಂಡನು ತನಗೆ ವಾನಪ್ರಸ್ಥಾಶ್ರಮಿಯಾಗಲಿಕ್ಕೆ ಉಪದೇಶ ಮಾಡಿದ ಬ್ರಾಹ್ಮಣರನ್ನು ಬಹುನಿಷ್ಠುರತನದಿಂದ ಅಪಮಾನಗೊಳಿಸಿದನು. ಆದರೆ ಇದನು ಮರಳಿ ಕೈಕೊಂಡ ಅರಸೊತ್ತಿಗೆಯು ಇವನಿಗೆ ಸುಖಪ್ರದವಾಗಲಿಲ್ಲ. ಕಡೆಯಲ್ಲಿ ಇವನು ತನ್ನ ಮಗನಾದ ಮಂಗಲನೆಂಬನಿಂದ ಕೊಲ್ಲಲ್ಪಟ್ಟನು. ಈ ಮಂಗಲನಾದರೂ ಪಿತೃಹತ್ಯವೆಂಬ ಅಮಂಗಲ ಕೃತ್ಯದಿಂದ ತನ್ನ ಸರದಾರರ ಕೋಪಕ್ಕೆ ಪಾತ್ರನಾಗಿ ಸ್ವದೇಶವನ್ನು ತ್ಯಾಗ ಮಾಡಿ ದೇಶಾಂತರಕ್ಕೆ ಹೋದನು. ಕ್ಷತ್ರಿಯನಾದರಿಂದ ಇವನು ಸ್ವರಾಜ್ಯದಿಂದ ಉತ್ತರಕ್ಕೆ ಹೋಗಿ ಲೋಧಪಡಿ ಪ್ರಾಂತದಲ್ಲಿ ಮಾಂಗೋಲಿಯಾ ಗೇಹಲೋಟ ಎಂಬ ಹೆಸರಿನ ಹೊಸ ರಾಜ್ಯವನ್ನು ಸ್ಥಾಪಿಸಿದನು.

ಆಜಮೀರದ ಚವ್ಹಾಣ ಮನೆತನದವರೂ, ಚಿತೋಡಗಡದ ಗೆಹಲೋಟ ಮನೆತನದವರೂ ಒಮ್ಮೊಮ್ಮೆ ಗೆಳೆಯ

ರಾಗಿರುವರು. ಒಮ್ಮೊಮ್ಮೆ ಶತ್ರುಗಳಾಗಿರುವರು. ವ
ರಶಿ ರಾವಳನು ದುರ್ಲಭಿ ಚಹ್ವಾಣನನ್ನು ಕೊಂದಿದ್ದನು
ಆದರೂ ದುರ್ಲಭನ ಮಗನಾದ ವೀಸಲದೇವನೂ ಚಿತೋ
ಡದ ರಾವಳನಾದ ತೇಜಶಿ ಎಂಬವನೂ ಜೋಡಾಗಿ ಮುಸ
ಲ್ಮಾನರ ಮೇಲೆ ಸಾಗಿ ಹೋಗಿದ್ದರು. ಖುಮಾನನಿಂದ ಸಾ
ಮರೇಶೀ ರಾಜನವರೆಗೆ ೧೫ ಮಂದಿ ಅರಸರಾದರು ಇವ
ರೆಲ್ಲರು ಬಹುತರ ನಿರಕ್ಷರ ಕುಕ್ಷಿಗಳಾಗಿದ್ದರೂ ಶೌರ್ಯಾ
ದ್ಯನೇಕ ಕ್ಷತ್ರಿಯೋಚಿತ ಗುಣಗಳಿಂದ ಮಂಡಿತರಾಗಿದ್ದ
ರು. ಇವರು ಯೌವನದಲ್ಲಿ ಕೊಲೆ ಸುಲಿಗೆಗಳನ್ನು ನಡಿ
ಸುವರು. ಕುದುರೇ ಹತ್ತೋಣ, ಬೇಟೇ ಆಡೋಣ ಪ
ಟ್ಟೇ ತಿರುವೋಣ ಮುಂತಾದ ಕ್ಷಾತ್ರ ಕಾರ್ಯಗಳಲ್ಲಿ ಮು
ಗ್ನರಾಗಿರುವರು. ಮುಪ್ಪಿನಲ್ಲಿ ಸ್ನಾನಸಂಧ್ಯಾ, ದೇವತಾ
ರ್ಚನ ಮುಂತಾದ ಪಾರಲೌಕಿಕ ಕಾರ್ಯಗಳಲ್ಲಿ ಆಸಕ್ತ
ರಾಗಿರುವರು. ಇವರು ಯುದ್ಧದಲ್ಲಿ ಬಲವಿದ್ದಾಗ ಶತ್ರುಗ
ಳು ಸಿಗದಿದ್ದರೆ ತಮ್ಮ ತಮ್ಮೊಳಗೆ ಬಡಿದಾಡಿ ತಮ್ಮ ತೋಳ
ತಿಂಡಿಯನ್ನು ಕಳಕೊಳ್ಳುವರು.

೩ನೇ ಅಧ್ಯಾಯ.

ವಲ್ಲಭೀಪುರವೂ ಸಾಮರಸೀ ರಾಣಾನೂ.

ಕ್ರಿಸ್ತಶಕದ ಎರಡನೇ ಶತಕದಲ್ಲಿ ಧರಸೇನನು ಆಗಿ
ಹೋದನು. ವಲ್ಲಭೀ ಪುರವನ್ನು ಕಟ್ಟಿಸಿದಂಥ ವಿಜಯ
ನೆಂಬ ಅರಸನು ೪ನೇ ಶತಕದಲ್ಲಿದ್ದನು. ಸಾಮರಸೀ ಅ
ಥವಾ ಸಮರಸಿಂಹ ಎಂಬವನು ೧೨ನೇ ಶತಕದಲ್ಲಿದ್ದನು.
ಇವನ ವಿಷಯವಾಗಿ ಭಾಟರು ಬರೆದ ಗ್ರಂಥಾದಾರದಿಂದ
ಉಪಲಬ್ಧವಾಗುವ ಇತಿಹಾಸವನ್ನು ಈ ಅಧ್ಯಾಯದಲ್ಲಿ
ವಿವರಿಸುವಾ.

ಸಾವುರಸಯು ಎಕ್ರಮಶಕದ ೧೬೦೬ರಲ್ಲಿ ಆಳುತ್ತಿದ್ದ
ನು. ಈ ಕಾಲದಲ್ಲಿ ಹಿಂದುಸ್ತಾನದ ಯಾವ ಯಾವ ಪ್ರ
ದೇಶದಲ್ಲಿ ಯಾವ ಯಾವ ಕುಲದ ಅರಸರು ಆಳುತ್ತಿದ್ದರೆಂ
ಬುದನ್ನು ಹಂದ ಭಾಟನು ತನ್ನ ಗ್ರಂಥದಲ್ಲಿ ಉಲ್ಲೇಖಿಸಿ
ದ್ದ ಹ್ಯಾಗಂದರೆ—

ಗುಜರಾಥದೊಳಗೆ ಪಟ್ಟಣವೆಂಬ ನಗರದಲ್ಲಿ ಚಾಲುಕ್ಯ
ವಂಶದ ಭೋಳಾಭೀಮದೇವನೆಂಬ ಬಲಿಷ್ಠನೂ ಮಹಾಪ
ರಾಕ್ರಮಿಯೂ ಆದ ಅರಸನು ಆಳುತ್ತಿದ್ದನು. ಅಬೂ ಪ್ರ
ದೇಶದಲ್ಲಿ ಜೇತಪ್ರಮಾರ ಎಂಬ ಹೆಸರಿನ ರಾಜನು ಆಳು
ತ್ತಿದ್ದನು. ಇವನು ಯುದ್ಧದಲ್ಲಿ ಧ್ರುವಸಂತೆ ಅಚಲನೂ
ಗಂಭೀರನೂ ಎಂದು ಹೆಸರಾಗಿದ್ದನು. ಮೇವಾಡದಲ್ಲಿ ಈ
ಅಧ್ಯಾಯದ ನಾಯಕನಾದ ಸಾವುರಸೀ ಅಥವಾ ಸವುರ
ಸಿಂಹ ಎಂಬ ಅರಸನು ಆಳುತ್ತಿದ್ದನು. ಇವನ ರಣಪರಾ
ಕ್ರಮವು ಇವನ ಹೆಸರನ್ನು ಸಾರ್ಥಕ್ಯಗೊಳಿಸುತ್ತಿದೆ.
ಮಂದೋಡದಲ್ಲಿ ನಾಹರರಾಯನೆಂಬ ಅರಸನು ಸಿಂಧದೇ
ಶದಿಂದ ಕಾಶಿಯವರೆಗಿರುವ ವಿಸ್ತೀರ್ಣ ಪ್ರದೇಶವನ್ನು
ನಿರಾತಂಕವಾಗಿ ಆಳುತ್ತ ದುರ್ಜಯನೆಂಬ ಪದವಿಯನ್ನು
ಪಡೆದಿದ್ದನು. ದಿಲ್ಲಿಯಲ್ಲಿ ಅನಂಗಪಾಲನೆಂಬ ರಾಜನು ಸಾ
ರ್ವಭೌಮಾಧಿಕಾರವನ್ನು ನಡಿಸುತ್ತಿದ್ದನು.

ಚಹ್ವಾಣ ವಂಶದವರೂ ರಾಠೋರ ವಂಶದವರೂ ಪರಸ್ಪ
ರ ಕಲಹ ನಡಿಸಿ ತಮ್ಮ ತಮ್ಮ ಹಾನಿಯನ್ನು ತಾವೇ ಮಾ
ಡಿಕೊಂಡರು. ಈ ಕೃತ್ಯ ಮೂಲ ಅರ್ಥಕ್ಕೆ ಕಾರಣವಾ
ದ ಸಂಗತಿಯು ಕೇವಲ ಕ್ಷುಲ್ಲಕವಾದದ್ದು. ಕನೋಜದ
ಅರಸನಾದ ಜಯಚಂದನ ತಂದೆಯಾದ ವಿಜಯಚಂದನು
ತುವರ ಕುಲದ ಹೆಣ್ಣನ್ನು ಮದುವೆಯಾಗಿದ್ದನು. ಇದೇ
ಹೆಣ್ಣನ್ನೇ ಪಟ್ಟಣದ ಸೋಮೇಶ್ವರನೂ ಕೇಳಿದ್ದನು. ಈ
ಹೆಣ್ಣೆಂಬ ಆಮಿಷದಿಂದಲೇ ಇವೆರಡು ಕುಲಗಳು ನಷ್ಟವಾ
ದವು. ಇಷ್ಟೇ ಅಲ. ಈ ಉಭಯ ರಾಜರ ಪಕ್ಷದಿಂ

ದ ಬೀರೆ ಎಷ್ಟೋ ಕ್ಷತ್ರಿಯ ರಾಜರು ರಣಯಜ್ಞಕ್ಕೆ ಆಹು
ತಿಯಾದರು ಈ ಕಾಲದಿಂದ ಕನೋಜ ಪಟ್ಟಣಗಳ ಅರ
ಸರು ತಮ್ಮ ದಂಡಿನಲ್ಲಿ ಮುಸಲ್ಮಾನರನ್ನು ಚಾಕರಿಗೆ ಇ
ಟ್ಟುಕೊಂಡರು ಇದೇ ಕೃತಿಯು ಇವರ ನಾಶಕ್ಕೆ ಮುಳ
ವಾಯಿತು. ಈ ದಂಡಿನ ಸಹಾಯದಿಂದಲೇ ಗಿಝನಿಯ
ಮಹಮ್ಮದನು ಹಿಂದೂ ರಾಜರನ್ನು ಬೊಗ್ಗ ಬಡಿದನು. ಇ
ರಲಿ. ಮೇಲೆ ಹೇಳಿದ ಈ ವಾದವು ಉಪಸ್ಥಿತವಾದ ಸಮ
ಯದಲ್ಲಿ ಚವ್ಹಾಣ ಕುಲದ ಪೃಥ್ವೀರಾಜನ ತಂಗಿಯನ್ನು
ಸಂಯುಕ್ತೆಯು ಮದುವೆಯಾದನು. ಅದರಿಂದ ಅವರಿಬ್ಬ
ರಲ್ಲಿ ಸ್ನೇಹ ಸಂಬಂಧವು ದೃಢವಾಗಲು ಉಭಯರು ಕೂ
ಡಿ ಪಟ್ಟಣದ ರಾಕ್ಷಸನ ಸೇಡು ತೀರಿಸಿಕೊಂಡರು. ರಾ
ಮಾಯಣ ಭಾರತಗಳ ಕಾಲದಿಂದ ಮೊನ್ನೆ ಮೊನ್ನೆ ಆಳಿ
ಹೋದ ಶೇಷನರ ವರೆಗಿನ ಇತಿಹಾಸವನ್ನು ಅವಲೋಕಿ
ಸುವವನಿಗೆ ಹಿಂದೂ ಜನರು ಅಂತಃಕಲಹದಲ್ಲಿಯೇ ಸ್ವ
ರಾಜ್ಯವನ್ನು ಸ್ವವೈಭವವನ್ನೂ ಸ್ವವಂಶವನ್ನೂ ನಷ್ಟ
ಪಡಿಸಿಕೊಂಡರೆಂದು ಸ್ಪಷ್ಟವಾಗಿ ತೋರದಿರದು. ಹಿಂದೂ
ಜನರಲ್ಲಿ ಪರೋತ್ಕರ್ಷಸಹಿಷ್ಣುತೆಯೆಂಬ ದುರ್ಗುಣವು
ಮನೆ ಮಾಡಿಕೊಂಡಿರುವದರಿಂದಲೇ ಇಂಥ ಅನಾಹೂತ
ಪ್ರಸಂಗಗಳು ಬದಗಿದವೆಂದು ಬಲ್ಲರ ಅಭಿಪ್ರಾಯವುಂಟು

CORRESPONDENCE

ಪತ್ರವ್ಯವಹಾರ

ಬಹ್ಮೀಸ ಸಮಾರಂಭ.

ಮಾ. ರಾ. ರಾ. ಕನ್ನಡ ಶಾಲಾಪತ್ರಿಕದ ಎಡಿಟರ ದೊರೆಗ
ಳ ಸನ್ನಿಧಿಗೆ. ಶಿರಸಾ. ನಮಸ್ಕಾರಗಳು. ವಿನಂತಿ ವಿಶೇ
ಷ ಕೆಳಗಿನ ಸಂಗತಿಗೆ ಇದೇ ಅಂಕದೊಳಗೆ ಸ್ಥಳಕೊಟ್ಟೇ
ರೆಂದು ನೆರೆನಂಬಿದ್ದೇನೆ.

ಇದೇ ತಿಂಗಳ ೧೩ನೆಯ ಕಾರೀಖು ಶನಿವಾರ ದಿವಸ ಈ ಊರ ಶಾಲೆಯೊಳಗೆ ವಿದ್ಯಾರ್ಥಿಗಳಿಗೆ ಬಹ್ಮೀಸು ಹಂಚುವ ದ್ವಿತೀಯ ಸಮಾರಂಭವು ಇಲ್ಲಿಯ ಶ್ರೀ. ಸರದೇಸಾಯಿಯವರಿಂದ ಬಹು ವಿಜೃಂಭಣಾ ಪೂರ್ವಕವಾಗಿ ಜರುಗಿತು. ಇದಕ್ಕಾಗಿ ಶಾಲಾಗೃಹವನ್ನು ಸುಶೋಭಿತ ಮಾಡಿ, ಕೂರ್ಚಾಸನಗಳಿಂದ ಸಜ್ಜುಗೊಳಿಸಿದ್ದರು. ಮೊದಲೇ ಗೊತ್ತಾದ ಕಾರ್ಯಕ್ರಮದ ಮೇರೆಗೆ ಹೊತ್ತಿಗೆ ಸರಿಯಾಗಿ ಮಧ್ಯಾಹ್ನದ ೨ ಘಂಟೆಗೆ ಊರೊಳಗಿನ ನೆಟ್ಟ ಸಾವುಕಾರರೂ ವ್ಯಾಪಾರಸ್ಥರೂ ಸ್ಕೂಲಕವಿಾಟಿಯವರೂ ಇನ್ನೂ ಬೇರೆ ಪ್ರಮುಖ ಗೃಹಸ್ಥರೂ ಬಂದು ಮಂದಿರವನ್ನು ಅಲಂಕರಿಸಿದರು. ಬಳಿಕ ೨½ ಘಂಟೆಗೆ ಶ್ರೀಮಂತರು ತಮ್ಮ ಕಾರ್ಯಭಾರಿಗಳೇ ಮೊದಲಾದವರಿಂದೊಡಗೂಡಿ ದಯಮಾಡಿಸಲು, ಮೊದಲೇ ಸಿದ್ಧರಾಗಿ ಶಾಲೆಯಂಗಳದೊಳಗೆ ನಿಂತಿದ್ದ ವಿದ್ಯಾರ್ಥಿಗಳು ಡ್ರಿಲ್ಲುಮಾಡಿ ವಂದನೆಯನ್ನು ಸಮರ್ಪಣೆಗೈದ ಮೇಲೆ, ಅವರು ಬಳಪೊಕ್ಕು ಉಚಿತಾಸನಗಳಲ್ಲಿ ಮುಹೂರ್ತಗೊಂಡರು. ಕೂಡಲೆ ಇಲ್ಲಿಯ ಕಾರ್ಯದಕ್ಷ ಹೆಡಮಾಸ್ತರರಾದ ಬಸಪ್ಪ ಚೆನ್ನಪ್ಪ ಪಟ್ಟೇದ ಇವರು, ಬಂದ ಜನರನ್ನು ಯೋಗ್ಯ ನುಡಿಗಳಿಂದ ಸ್ವಲ್ಪದರಲ್ಲಿ ಸತ್ಕರಿಸಿದರು. ಆ ಮೇಲೆ ಚಿಕ್ಕಬಾಲಕರು ದೇವತಾಸ್ತೋತ್ರವನ್ನು ಅಂದರು ಆದಾದ ಮೇಲೆ ೭ನೆಯ ಅಸಿಸ್ಟಂಟರಾದ ವಿಶ್ವನಾಥ ಶಾಸ್ತ್ರಿಗಳು, ಕಳೆದೆರಡು ವರ್ಷದ ಶಾಲೆಯ ರಿಪೋರ್ಟನ್ನು ಓದಿದರು ಅದರಿಂದ ಹಿಂದಿನ ಸಭೆಗಿಂತ ಈ ಸಾರೆ ೫೭ ಹುಡುಗರೂ ಹೆಚ್ಚಾಗಿ ಶಾಲೆಯು ಒಳ್ಳೇ ಉತ್ಕರ್ಷದ ಸ್ಥಿತಿಯಲ್ಲಿರುತ್ತದೆಂತಲೂ; ಈ ವರ್ಷ ಇಲ್ಲಿಂದ ಮುಲಕೀ ಪರೀಕ್ಷೆಗೆ ಹೊದ ಮೂವರೂ ವಿದ್ಯಾರ್ಥಿಗಳು ಪಾಸಾದದ್ದಲ್ಲದೆ, ಅವರಲ್ಲೊಬ್ಬನು ಜೆಳಗಾವ ಸೆಂಟರಿನಲ್ಲಿ ಮೊದಲನೆಯ ನಂಬರು ಪಡೆದಿರುತ್ತಾನೆಂತಲೂ ತಿಳಿಯಿತು. ಆ ಮೇಲೆ ೧ನೆಯ ಅಸಿಸ್ಟಂಟರಾದ ಶಿ. ಗು. ಕೊಟ್ಟಮಠ ಎಂಬವರು "ಕಿಂಡರಗಾರ್ಟನ್"

ಪದ್ಧತಿಯನ್ನು ಕುರಿತು ಜನರಿಗೆಲ್ಲ ಬೋಧವಾಗುವಂತೆ, ಸುಶ್ರಾವ್ಯವಾದ ಭಾಷಣವನ್ನು ಮಾಡಿ, ವಿದ್ಯಾರ್ಥಿಗಳ ಒಲವುಗಳನ್ನನುಸರಿಸಿ ಹೊಸ ಶಿಕ್ಷಣವು ಸಾಗಹತ್ತಿರುವದೆಂತಲೂ, ಅದರಿಂದ ಬಹು ಲಾಭವಾಗುವದಿರುವದರಿಂದ, ನಾವೆಲ್ಲರು ಸರಕಾರದವರನ್ನು ನೆನಿಸಬೇಕೆಂತಲೂ ಹೇಳಿದರು. ಮುಂದೆ ಶ್ರೀ ನೆಯ ಅಸಿ॥ ರಾದ ಗು. ಸೀ. ಕೊಡೋಲಿ ಎಂಬವರು "ಕನ್ನಡ ಶಾಲೆಯೊಳಗಿನ ಮರಾಠಿ ಶಿಕ್ಷಣ" ವೆಂಬ ವಿಷಯದ ಮೇಲೆ ಸಯುಕ್ತಿಕವಾಗಿ ಉಪನ್ಯಾಸ ಮಾಡಿದರು. ಅವರು, ಈ ಶಾಲೆಗಳೊಳಗೆ ಅವಶ್ಯವಿದ್ದ ಸ್ಥಳಗಳಲ್ಲಿ ಮರಾಠಿ ಭಾಷೆಯನ್ನಲ್ಲ, ಲಿಪಿಯನ್ನು ಮಾತ್ರ ಓದಲಿಕ್ಕೂ ಬರೆಯಲಿಕ್ಕೂ ಕಲಿಸುತ್ತಾರೆಂತಲೂ; ಹುಡುಗರು ದೊಡ್ಡವರಾಗಿ ಅವರಿಗೆ ಮರಾಠಿ ನುಡಿಯು ತಿಳಿಯುವಹತ್ತಿದ ಮೇಲೆ, ಅವರು ಕನ್ನಡಭಾಷೆಯ ದ್ವಾರದಿಂದ ಗಳಿಸಿದ ಜ್ಞಾನವನ್ನು, ಮರಾಠಿಯಲ್ಲಿಯೂ ಕೂಡ ಉಪಯೋಗಿಸುವರೆಂತಲೂ ಪ್ರತಿಪಾದಿಸಿದರು. ಬಳಿಕ ಇಲ್ಲಿಯ ಸುಶಿಕ್ಷಿತ ಗೃಹಸ್ಥರಾದ "ದ. ಗಂ. ಹಣಬರಹಟ್ಟಿ" ಎಂಬವರು ವ್ಯಾಯಾಮದ ಅವಶ್ಯಕತೆಯನ್ನು ವರ್ಣಿಸಿ, ಶಾಲೆಗೆ ಒಂದು ತಾಲೀಮುಖಾನೆಯನ್ನು ಜೋಡಿಸಬೇಕೆಂದು, ಜನರ ಮನಸ್ಸಿಗೆ ಬಿಂಬಿಸುವಂತೆ ಸರಸವಾಗಿ ಭಾಷಣ ಮಾಡಿದರು ಅದಕ್ಕೆ ಬೇರೆ ಜನರಿಂದರೂ ಪುಷ್ಟೀಕರಣ ಮಾಡಿ ಅನುಮೋದನವಿತ್ತರು. ಅದರ ಪರಿಣಾಮವು ಏನಾಗುವದೋ ನೋಡಬೇಕಾಗಿದೆ. ಇಷ್ಟಾದಮೇಲೆ ಶ್ರೀಮಂತ ದೊರೆಗಳವರು ಹನ್ನೊಂದು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನೂ, ಬಟ್ಟೆಕೆ ಹೆಣ್ಣುಮಗಳಿಗೆ ಕಣವನ್ನೂ ಕೊಟ್ಟು, ಉಳಿದ ಹುಡುಗರಿಗೆಲ್ಲ ಬತ್ತಾಸ ಮುಂತಾದ ಪಳಾರವನ್ನು ಹಂಚಿದರು. ಬಳಿಕ ಹೆ ಮಾ. ರು ನಮ್ಮ ಮೇಲೆ ಬ್ರಿಟಿಶರ ರಾಜ್ಯವಾದದ್ದರಿಂದ, ಊರೂರಿಗೆ ಶಾಲೆಗಳೂ ಇಂಥ ಸಮಾರಂಭಗಳೂ ಜನರ ದೃಷ್ಟಿಗೆ ಬೀಳಹತ್ತಿದವೆಂದು ಹೇಳಿದ ಮೇಲೆ, ಹುಡುಗರು ರಾಷ್ಟ್ರೀಯ (ಸಾರ್ವಭೌಮರ) ಗೀತವನ್ನು ಸರಸವಾಗಿ ಹಾಡಿದರು.

ಈ ದಿನವು ಮಕರ ಸಂಕ್ರಾಂತಿಯದಿರುವದರಿಂದ ಹೆಡ್ ಮಾಸ್ತರರು ಮಕರ ಸಂಕ್ರಾಂತಿಯ ಉತ್ಪತ್ತಿಯನ್ನು ಸಭಿಕರಿಗೆ ಸಪ್ರಯೋಗವಾಗಿ ತಿಳಿಸಿ ಹೇಳಿದರು. ಅದಕ್ಕಾಗಿ ಬೇಕಂತಲೆ ಚಂಡಿನ ಕೃತ್ರಿಯ ಭೂಗೋಲಗಳನ್ನು ಮಾಡಿ, ಅವುಗಳ ಮೇಲೆ ವಿಷುವ ಕ್ರಾಂತಿ ಅಯನ ಧ್ರುವ ವೃತ್ತಗಳನ್ನು ತೆಗೆದು ಕಕ್ಷೆಯ ನಾಲ್ಕು ಸ್ಥಳಗಳಲ್ಲಿ ಹೂಡಿಟ್ಟಿದ್ದರು. ಇವುಗಳಲ್ಲಿ ಮತ್ತೊಂದು ಸೂರ್ಯನೆಂಬ ಗೋಲವನ್ನು ಮಾಡಿ, ಅವರ ಲಂಬಕಿರಣಗಳು ಕೃತ್ರಿಮ ಭೂಗೋಲಗಳ ಮೇಲೆ, ಎರಡೂ ಸಂಪಾತ ಅಯನವೃತ್ತಗಳ ಮೇಲೆ ಬೀಳುವಂತೆ ಕಡ್ಡಿಗಳನ್ನು ಹೊಂದಿಸಿ ರಚಿಸಿದ್ದರು. ಇದರ ಯೋಗದಿಂದ ಸುಲಭವಾಗಿ ವಿಷಯ ಪ್ರತಿಪಾದನೆ ಮಾಡಿ; ಸಂಕ್ರಾಂತಿಯಲ್ಲಿ ಕಬ್ಬವನ್ನು ಯಾಕೆ ಮಾಡಬೇಕು, "ಪಟ್ಟಿಯೋಜನವಿಸ್ತೀರ್ಣಾ, ಲಂಬೋಷ್ಟೀ ದೀರ್ಘನಾಸಿಕಾ ॥ ಏಕ ವಕ್ತ್ರನವಭುಜಾ ! ಸಂಕ್ರಾಂತಿಃ ಪುರುಷಾಕೃತಿಃ ॥" ಎಂಬ ವರ್ಣನದ ಮರ್ಮವೇನು? ಈಗ ತಿಲಕರ್ಕರ ಬೀರುವದರ ಉದ್ದೇಶವೇನು? ಮುಂತಾದ್ದರ ಬಗ್ಗೆ ಪರ್ಯಾಲೋಚಿಸಿದರು. ಕಡೆಗೆ ಬಂದ ಜನರನ್ನು ಮತ್ತೊಮ್ಮೆ ಪರಾಂಬರಿಸಿದರು. ಹುಡುಗರು ಶ್ರೀಮಂತರ ವಂದನ ಪರಪದವನ್ನು ಹಾಡಿದರು. ಕೊನೆಗೆ ಪನ್ನೀರು, ಪರಿಪಳದ್ರವ್ಯ-ತಾಂಬೂಲ-ಪುಷ್ಪಾದಿಗಳನ್ನು ಸಮರ್ಪಿಸಿ ಸಮಾರಂಭವನ್ನು ಸಮಾಪ್ತಗೊಳಿಸಿದರು.

ಈಗಿನ ಹೆ. ಮಾ. ರಾದ ಬ. ಚೆ. ಪಟ್ಟೇದ ಇವರು ಇಲ್ಲಿ ಬಂದು ೫/೪ ವರ್ಷಗಳಾದವು. ಈ ಅವಧಿಯಲ್ಲಿ ಶಾಲೆಯ ಉನ್ನತಿಯು ಎಲ್ಲ ರೀತಿಯಿಂದ ಅಪೂರ್ವವಾಗಿ ಆಗುತ್ತದೆ; ಹಾಗೂ ಬಂದೇಸವನೆ ಅಭಿವೃದ್ಧಿ ಪಡೆಯುತ ನಡೆದದೆ. ಇದು ಅವರಿಗೂ ಅವರ ಶಿಷ್ಟಕರಿಗೂ ಬಹು ಭೂಷಣವಾಗಿರುತ್ತದೆ. ಈ ಮಾಸ್ತರರು ಇಲ್ಲಿ ಬಂದ ನಂತರ ಬಹೀಸ ಸಮಾರಂಭವು ಜನ್ಮಕ್ಕೆ ಬಂತು. ಶಾ

ಯುವೇಲೆ ಇಲ್ಲಿಯ ಶ್ರೀಮಂತರ ಲಕ್ಷವು ಪೂರ್ಣವಿರುವದರಿಂದ, ಅವರು ಬಾರಿಬಾರಿಗೆ ಶಾಲೆಯ ಕೆಲಸಕ್ಕೆ ಪ್ರೋತ್ಸಾಹನ ಕೊಡುತ್ತಾರೆ. ಈ ಸಮಾರಂಭವು ಅವರು ವಿದ್ಯಾರ್ಥಿಗಳಿಗೆ ಕೊಡತಕ್ಕ ವಾರ್ಷಿಕ ವೇತನದಿಂದಲೇ ಮಾಡಲ್ಪಡುತ್ತದೆ. ಹೀಗೆ ಎಲ್ಲ ಕಡೆಯಲ್ಲಿ ಮಾಸ್ತರರೂ ಗ್ರಾಮವಾಸಿಗಳೂ ತಮ್ಮ ತಮ್ಮ ಕರ್ತವ್ಯದಲ್ಲಿ ಜಾಗ್ರತರಾದರೆ, ಶಾಲೆಗಳು ಬೇಗನೆ ಊರ್ಜಿತ ಸ್ಥಿತಿಗೆ ಬರುವನೆಂಬದಕ್ಕೆ ಏನೂ ಸಂಶಯವಿಲ್ಲ.

ಆಯಾ ಪತ್ರಕರ್ತರಾಯರೇ, ಲೇಖವು ಬರೆಯಿತು ಪ್ರಸಿದ್ಧಿಮಾಡಬೇಕು. ಪ್ರಸಂಗಾನುಸಾರವಾಗಿ ಮತ್ತೂ ಬೆಟ್ಟು ಯಾಗುವದು. ಲೋಭವಿರಲಿ. ಇಂತೀಜಿನ್ನಹ.

ಮಂಟಮುರಿ ತಾ॥ ೨೩/೧೦೬ } ಸಮಾರಂಭಕ್ಕೆ ಹಾಜರಿದ್ದವನೋರ್ವ ಗ್ರಾಮ (ಚೆನ್ನಪ್ಪಾ ಸಂಗಪ್ಪಾ ಘವ.ರಿ)

DEPARTMENTAL NOTICE.

ನೋಟೀಸು.

ಈ ನೋಟೀಸಿನಿಂದ ತಿಳಿಯಪಡಿಸುವದೇನಂದರೆ ವಿ. ಜೀ. ಕೇ. ವೆಂಕಟ್ರಮಣ ಅಯ್ಯಂಗಾರ ಇವರಿಂದ ರಚಿಸಲ್ಲಟ್ಟ "ಸ್ತ್ರೀ ವಿದ್ಯಾಭ್ಯಾಸ" ಎಂಬ ಪುಸ್ತಕವು ಮೆಹರಬಾನ ಡಾಯರೆಕ್ಟರ ಆಫ಼ ಪಬ್ಲಿಕ ಇನ್ಸ್ಟ್ರಕ್ಶನ್ ಇವರಿಂದ ಲಾಯಬ್ರರೀ ಮತ್ತು ಬಕ್ಷೀಸಗಳ ಸಲುವಾಗಿ ಮಂಜೂರ ಮಾಡಲ್ಪಟ್ಟಿರುತ್ತದೆ. ತಿಳಿಯುವದು.

ಧಾರವಾಡ
ತಾ॥ ೨೪-೪-೦೬ ಇಸ್ವಿ } (ಸಹಿ) ಬಿ. ಆರ್. ಸಹಸ್ರಬುದ್ಧೆ ಎಜ್ಯುಕೇಶನಲ ಇನಸ್ಪೇಕ್ಟರ ನ. ಭಾ.

DHARWAR TRAINING COLLEGE TERMINAL EXAMINATION.

೨ನೇ ವರ್ಷದ ವರ್ಗವು.

೧೯೦೬ನೇ ಎಪ್ರೆಲ್.

೩ ತಾಸು.

ಕರ್ನಾಟಕ ಭಾಷಾ ಗ್ರಂಥಗಳು.

೧. ನಾಗವರ್ಮ, ಲಕ್ಷ್ಮೀಶ. ಇವರಿಬ್ಬರಲ್ಲಿ ಯಾರು ಮೊದಲಿನವರು ಹೇಗೆ? ಮತ್ತು ಇವರ ಗ್ರಂಥಗಳು ಯಾವ ಮೂಲ ಗ್ರಂಥಗಳ ಆಧಾರದಿಂದ ರಚಿತವಾಗಿವೆ. ಲಕ್ಷ್ಮೀಶನು ಈ ವಿಷಯವನ್ನೇಕೆ ಹೇಳಲಿಲ್ಲ.

೨. ಮಹಾ ಭಾರತವನ್ನು ವಚನರೂಪದಿಂದ ಕನ್ನಡಿಸಿದ ಕವಿಯ ವಿಷಯದಲ್ಲಿ ನೀವೇನು ಬಲ್ಲಿರಿ?

೩ ಹರಿಯ ಸೇವಕರ ಬರವಂ ಕಾಣುತಾ ವಿಂಧ್ಯ।
ಗಿರಿಯ ದುರ್ಮಾರ್ಗಮುಂ ಸನ್ಮಾರ್ಗಮಾಯ್ತು ದು
ರ್ಧರ ಹೃದಯವನಜಾಂಧಕಾರಮುಂ ಸುಪ್ರಕಾಶ
ತವಮಾಯ್ತು ವಿಕೃತಿಯಡಗಿ ॥
ಉರುತರ ಪ್ರಭಾವದಿ ವಿಮುಕ್ತ ಭಾವಿತವಾಯ್ತು।
ನಿರುಪಮಾಕಾ ಪ್ರತಿಜ್ಞಾನ ವಾಯ್ತಿರದೆ ಗೋ।
ಚರಮಾಯ್ತು ವಿಷ್ಣುಪದಮೆನೆ ನಡೆದುದಾ ಹಯಂ।
ಬೆಂಬಿಡದೆ ಸೇನೆ ಸಹಿತ
ಕಲಿಗಳುರಃ ಕವಾಟ ಕವಚಂಗಳ ಕಳ್ತಲೆಯೊಳ್।
ಕರೀಂದ್ರ ಸಂ।
ಕುಲ ಮದವಾರಿ ಧಾರೆಗಳ ಸೇರ್ದುಳಿಯೊಳ್ ರಣ
ಮೆಂಬ ರಾತ್ರಿಯೊಳ್॥
ಸತಿ ಬರುತಿರ್ಪಳೆಂದು ಮುಖಸಾರಿಕೆಯಂದದೆ ರಾಜ್ಯ
ಲಕ್ಷ್ಮಿ ತನ್ನೊ।

ಲವಿನೊಳೆಂದೊಡಾ ನೃಪನ ಪೌರುಷವೇಂ ಪೊಗ
ಳಲಕ್ಕೆ ವೇಳ್ಕುಮೇ॥

ಮೇಗಣ ಪದ್ಯಗಳ ಅರ್ಥವನ್ನು ಶುದ್ಧವಾಗಿಯೂ ಸ್ಪಷ್ಟವಾಗಿಯೂ ಇರುವಂತೆ ಹೊಸಗನ್ನಡ ವಾಕ್ಯಗಳಿಂದ ಬರೆಯಿರಿ. ಅಲಂಕಾರಗಳನ್ನು ಹೇಳಿರಿ.

೪ "ಸ್ತ್ರೀಯರ ಹೃದಯವು ವಜ್ರಕ್ಕಿಂತ ಕಠಿಣವಾದದ್ದು" ಎಂಬೀ ಅಭಿಪ್ರಾಯವನ್ನು ಒಂದು ದೃಷ್ಟಾಂತದಿಂದ ಸ್ಪಷ್ಟವಾಗುವಂತೆ ಸಮರ್ಥನೆ ಮಾಡಿರಿ.

೫. ತ್ರೈಜಗದೊಳಪವಾದಕಳಂಜದವರುಂಟೆ? ಯಾರು ಯಾವ ಅಪವಾದದಿಂದ ಅಂಜೆದರು. ಇದರಿಂದ ನಿಮಗೆ ತಿಳಿದ ನೀತಿಯೇನು?

೬. ಶೂದ್ರಕನ ವಿಕ್ರಮವನ್ನು ಅವನ ಶತ್ರು ಸ್ತ್ರೀಯರ ಸಂತಾಪ ತಾರಣವನ್ನೂ ಕವಿಯು ಹೇಗೆ ವರ್ಣಿಸಿರುವನು

೭. ಸ್ತೈಣ, ಬಾಣ, ರಾಘವ, ಭಾಗೀರಥಿ, ಹೈಮವತಿ, ಪೌರುಷಂ, ಇವುಗಳ ಅವಯವಾರ್ಥವನ್ನೂ, ವಾಯು ದಾಯ, ಗೋವ್ತಾರ, ಪರಿವರಿ, ಕಚರ್ಗ, ಮುತ್ತಿನ ಈ ಶಬ್ದಾರ್ಥಗಳನ್ನು ಹೇಳಿರಿ.

೮. ಪಾಂಡವರು ಅಜ್ಞಾತವಾಸವನ್ನು ಮತ್ಸ್ಯ ದೇಶದಲ್ಲಿಯೇ ಮಾಡಲು ಕಾರಣವೇನು? ಅವರಲ್ಲಿ ಯಾರು ಯಾರು ಯಾವ ಯಾವ ಹೆಸರಿನಿಂದ ಏನು ಏನು ಕಾರ್ಯವನ್ನು ಮಾಡಲು ಒಪ್ಪಿದ್ದರು.

೯. "ಛಂದಃಶಾಸ್ತ್ರದ ಕೆಲವು ನಿಯಮಗಳನ್ನು ಕೇಶವನು ದರ್ಪಣದಲ್ಲಿ ಹೇಳಿರುವನು. ಅವನ್ನು ಷಟ್ಪದಿಯ ಕವಿಗಳು ಅತಿಕ್ರಮಿಸಿರುವರು" ಎಂದು ಹೇಳುತ್ತಾರೆ. ಎಂಬೀ ಅಭಿಪ್ರಾಯವನ್ನು ಲಕ್ಷ್ಮೀಶನ ಕಾವ್ಯದಲ್ಲಿ ಕಾಣಬಹುದೇ? ಸಕಾರಣವಾದುತ್ತರವನ್ನು ಬರೆಯಿರಿ.

೧೦. ಕಾವ್ಯವೆಂದರೇನು? ನೀವು ಈ ವರುಷ ಓದುತ್ತಿರುವ ಕಾವ್ಯಗಳು. ಅದರಲ್ಲಿ ಯಾವ ಭೇದಕ್ಕೆ ಸೇರಿದುವು ಏಕೆ? ಅವೆರಡರಲ್ಲಿ ಯಾವದು ಸರ್ವರಿಗೂ ಮನೋರಂಜಕವಾದುದು. ಹೇಗೆ?

REGISTERED NO. D. 19

ಸೌದಾಗರ್ ಬುಕ್ ಡಿಪ್ಪೋ.

ಎಲ್ಲ ತಾಲೂಕಗಳ ಸರಕಾರಿ, ಖಾಸಗಿ, ಮಾರ್ಸ್‌ಡನ್ ಇತಿಹಾಸವೂ, ಕಥೆಗಳೂ, ಪುರಾಣ ವಗೈರೆ ಪು. ಗಳು ಅವೆ. ಆಫೀಸ ಕ್ಲಾಕಗಳು ಸಹ ಶೋಭೆಯುಳ್ಳ ವಿಾಸಿಗಳ ಬೆಳವಣಿಗೆಯು ತೈಲು. ಕಿಸೆಮುಲ್ಲಿಹುನೆ ಫೆಡಿಯಾರಗಳು ಅವೆ. ಮಾರ್ಸ್‌ಡನ್ ಕಂ. ಹೊರ್ತಾಗಿ ಕವಿಶನ್ ರು. ೧ ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್ಹ
ಮಾದ ಖಾನ್ ಸೌದಾಗರ್.

ವಿದ್ಯಾಭ್ಯಾಸಯುಂದೆ ಒಪ್ಪಿಗೆಯನ್ನು ಪಡೆವ ಮೊನೇ ಅವೃತ್ತಿಯು ಹೊಲೀಕೃತ ಜನಸಾಖರ್ಚಿನ ಪದ್ಧತಿ ೫೪. ೧ನೇ ಭಾಗ ಅಂಕಗಣಿತ ೧೧೨. ಜೊಸರೂಲ ಸಹಿತ ಸಟೀಕಲ್ಯಾಂಡ ರೆವಿನ್ಯೂ ಕೋಡ ೫೫೪. ೨ನೇ ಭಾಗ ಗಣಿತ ೨ ತಿಂಗಳಲ್ಲಿ ತಯಾರಾಗುವವು. ನಾವು ಹೊಸದಾಗಿ ಬುಕ್ಕಡಿಪ್ಪೋ ತೆಗೆಯುವವರಿದ್ದೇವೆ.

ಜನವೀರ ಫಕೀರಪ್ಪ ಧಾರವಾಡ.

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೪೨] ಜುಲೈ ೧೯೦೬. [ಸಂಚಿಕೆ ೭.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೧೪೫-೧೫೦
೨. ಮಲೇರಿಯಾ ಎಂಬ ಉರಿಯೂ, ಗುಂಗಣ್ಣಿಗಳೂ ೧೫೧-೧೫೫
೩. ಚಟ್ಟವು ೧೫೫-೧೫೭
೪. ರಾಜಸ್ಥಾನದ ಚರಿತ್ರೆಯು ೧೫೭-೧೬೩
೫. ನೋಟೀಸು. ೧೬೩-೧೬೮

CONTENTS

1. Educational Intelligence and Useful Notes 145–150
2. Malaria Fever and Mosquito 151–155
3. Habit 155–157
4. The History of Rajasthan 157–163
5. Departmental Notice. 163–168

DHARWAR:

PRINTED AT THE KARNATIC BOOK DEPOT PRESS,

1906.

ಕನ್ನಡ ಪತ್ರಿಕೆಯ ವರ್ಷದ ಮುಂಗಡ ಬೆಲೆ ಅಂ.
ಒಂದು ಸಂಚಿಕೆಗೆ ... . ೨ ಆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ ೪ ಪಂಕ್ತಿಗಳವರೆಗೆ ೧ ರೂ.
ಮೂರುಸಾರೆ ಇಟ್ಟರೆ ೬ ,, ೧ ರೂ
ಆರುಸಾರೆ ಇಟ್ಟರೆ ೪ ,, ೧ ರೂ.

ಸೂಚನೆಗಳು.

೧. ಪತ್ರಿಕೆಯಲ್ಲಿ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವುದು.
೨. ತಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರ್ತಿ ಪಂಕ್ತಿಯ ಜಾಗವು ಬೀಳುವದು.
೩. ಛಾಪಾಂತರ ಮಾಡಿ ಛಾಪಿಸುವಹಾದರೆ ಮೇಲಿನ ದರದ ಅರ್ಧ ಮತ್ತು ಹೆಚ್ಚು ಬೀಳುವದು
೪ ಪ್ರಕಟನೆಯೆಕೊಡುವ ಹಣ ಕಳುಹಲಿಕ್ಕೆ ಬೇಕು
೫ ಬರೀಟು ಇಟ್ಟ ಹೊರತು ಉತ್ತರ ಬಿಗಲಾರದು

S. K. Rodda.
ಮ್ಯಾನೇಜರ ಕ. ಶಾಲಾಪತ್ರಿಕೆ

ಶಾಲಾಪತ್ರಿಕೆ.

ಪದ್ಯ೦.

ಶ್ರೀಯುವಿದ್ಯಾಗುರುವರ್ಯರುನ್ನತಿಕೆಯುಂಸಚ್ಛಿಷ್ಟಜೋತ್ಕರ್ಷಣಾ
ಯಸುತ್ತಂ ಪ್ರತಿವಾಸದಾದಿಗೊಲವಿಂವೀಪತ್ರಮಂ ಮುದ್ರಿಸಿ ॥
ಯವಿಂದಿತ್ತವಪೋದುವರ್ಗಸುಗುಣಂ ತೋರಲ್ಕೆಕೈಕೊಂಡುದ್ಯೋ।
ಯಮುಂದೋಷವತಿದ್ದವೇಳ್ವುದುಮುದರ್ಜ್ಞಾನಾಭಿವೃದ್ಧಿಪ್ರಿಯರ್ಗಳ್

ಪುಸ್ತಕ ೪೨.] ಜುಲೈ ೧೯೦೬. ಸಂಚಿಕೆ ೭.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಎರಡು ಶಿಲಾಲೇಖಗಳು—ಗದಗಿನ ಶ್ರೀ ತ್ರಿಕೂಟೇಶ್ವರ ದೇವಾಲಯದಲ್ಲಿ ಅನೇಕ ಶಿಲಾಲೇಖಗಳುಂಟು. ಅವುಗಳಲ್ಲಿ ಎರಡರಿಂದ ತಿಳಿದ ಸಂಗತಿಗಳನ್ನು ಇದರಡಿಯಲ್ಲಿ ಬರೆದಿದ್ದೇವೆ. ಒಂದರ ಲಿಪಿಯೂ ಭಾಷೆಯೂ ಕನ್ನಡವೇ ಆಗಿರುವದು. ಮತ್ತೊಂದರ ಲಿಪಿಯು ಕನ್ನಡದಲ್ಲಿದ್ದರೂ ಭಾಷೆಯು ಸಂಸ್ಕೃತವಾಗಿರುವದು. ಕನ್ನಡ ಭಾಷೆಯ ಲಿಪಿಯು ಅಚ್ಯುತರಾಯನೆಂಬ ವಿಜಯನಗರದ ನರಪತಿಯ ದಾತೃತ್ವವನ್ನು ವರ್ಣಿಸಿರುವದು. ಅದರ ನಕಲು—

ಶುಭಮಸ್ತು ನಮಸ್ತುಂಗಶಿರಶ್ಚುಂಬಿ ಚಂದ್ರಶಾಲೆಯ ಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥೧॥ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲಯ ಮಹಾರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಅಚ್ಯುತರಾಯ ಮಹಾರಾಯನು ವಿಜಯನಗರನೆಲೆವೀಡಿನೊಳು ಸುಖಸಂತತ ವಿನೋದದಿಂದ ರಾಜ್ಯಂಗೆಯ್ಯೆ ಶಕವತ್ಸರ ೧೪೫೧ನೆಯ ವಿಕಾರಿ ಸಂವತ್ಸರದ ಭಾದ್ರಪದಶುದ್ಧ ಚತುರ್ದಶಿ ೧೫ ಮಂಗಳವಾರ ಪುಣ್ಯಕಾಲದೊಳ್ ಭಾಸ್ಕರಕ್ಷೇತ್ರ ತುಂಗಭದ್ರಾತೀರ ನಿರಾಲೇಶ್ವರನ ಸನ್ನಿಧಿಯಲ್ಲಿ

ಮಹಾಸಮರ್ಥನಾಗಿ ಆನಂದನಿಧಿಯೆಂಬ ದಾನವನು ಕೊಟ್ಟು ಸಮಸ್ತ ಭೂಸುರರನು ಸಂತೋಷಪಡಿಸಿದ ಪ್ರಶಸ್ತಿಯನು ಸಂಸ್ಕೃತ ಭಾಷಾ ಕವಿತ್ವದಲ್ಲಿ ಶಾರ್ದೂಲವಿಕ್ರೀಡಿತವೆಂಬ ವೃತ್ತಂಗಳನು ಗದಗಿನ ಶ್ರೀ ತ್ರಿಯಂಬಕ ದೇವರ ಸನ್ನಿಧಾನದಲ್ಲಿ ಶಿಲಾಶಾಸನವ ಬರಿಸಿದನು. ಇಂತೀ ಪ್ರಶಸ್ತಿಯ ವೃತ್ತಗಳ ಕ್ರಮವೆಂತೆಂದೊಡೆ— ವೃತ್ತ-ರಾಕಾ ಚಂದ್ರಮಸಾಮರೇಂದ್ರಗಣ.....ಇತ್ಯಾದಿ.

ಈ ವೃತ್ತಗಳ ಅಕ್ಷರಗಳು ಬಹಳವಾಗಿ ಕೆಟ್ಟಿವೆ. ಇದರೊಳಗಿನ ಅಭಿಪ್ರಾಯವು ಇವನ ಕೊಡಗೈತನವನ್ನು ಹೊಗಳಿರುತ್ತದೆ.

ಈ ಲೇಖದಿಂದ ಅಚ್ಯುತರಾಯನ ರಾಜ್ಯಪಾಲನೆಯ ಕಾಲನಿರ್ಣಯವು ಸ್ಪಷ್ಟವಾಗುತ್ತದೆ. ಔದಾರ್ಯವೂ ವ್ಯಕ್ತವಾಗುತ್ತದೆ. ಆದರೆ ಭಾಸ್ಕರ ಕ್ಷೇತ್ರವಾವುದು? ಎಂಬದು ಗೊತ್ತಾಗಲೊಲ್ಲದು. ಶ್ರೀ ತ್ರಿಕೂಟೇಶ್ವರನ ಗುಡಿಯ ಪ್ರಾಕಾರದಲ್ಲಿಯೇ ಶ್ರೀ ತ್ರಿಯಂಬಕ ದೇವರದೊಂದು ಗುಡಿಯುಂಟು. ಅದಕ್ಕೂ ಪೂಜಾದ್ಯುಪಚಾರಗಳು ಸಾಗುವಷ್ಟಕ್ಕಾಗಿ ಭೂಮಿಯುಂಟು.

ಎರಡನೇ ಶಿಲಾಲೇಖವು— ಇದು ಯಾದವ ವಂಶದ ಹೊಯ್ಸಳ ರಾಜರು ಬರಿಸಿದ್ದಿರುವದು. ಇದನ್ನಾದರೂ ಸಾಗ್ರ ಬರೆದುಕೊಂಡು ಬರಲಿಕ್ಕೆ ಅವಕಾಶವಾಗಲಿಲ್ಲ. ಮಾದರಿಗಾಗಿ ಕೆಲವು ಶ್ಲೋಕಗಳನ್ನು ಇದರಡಿಯಲ್ಲಿ ಬರೆಯುತ್ತೇವೆ.

